ಹುಬ್ಬಳ್ಳಿ
ಸೋಮವಾರ, 11 ಮೇ 2026
ಸಂಪುಟ 16, ಸಂಚಿಕೆ 47, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಯೋಗಿ ಸಚಿವ ಸಂಪುಟ ವಿಸ್ತರಣೆ | ೦೭ | ತೈಲ ಕಂಪನಿಗಳಿಗೆ ಲಕ್ಷ ಕೋಟಿ ನಷ್ಟ | ೦೭ | ಪಶ್ಚಿಮ ನೌಕಾ ಕಮಾಂಡ್ ಮುಖ್ಯಸ್ಥ ವಾತ್ಸಾಯನ್ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಶತಭಿಷೆ

ದಿನದ ಮಾತು

ಶೂರನು ಮಿತ ಭಾಷಿಯಾಗಿರಬೇಕು. ಶಕ್ತಿವಂತನು ಕ್ಷಮಾಶೀಲನಾಗಿರಬೇಕು .

▲ ಭರ್ತೃಹರಿ

ಕಾಳಿ ಮಾತೆ ಕೊನೆಗೂ ಕಣ್ಣು ತೆರೆದಳು

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ತೈಲೋತ್ಪನ್ನಗಳ ಬಳಕೆಗಿರಲಿ ಮಿತಿ: ಪ್ರಧಾನಿ ಮೋದಿ ಕರೆ

• **ಹೈದರಾಬಾದ್:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಮಿತವಾಗಿ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕರೆನೀಡಿದ್ದಾರೆ. ತೆಲಂಗಾಣದಲ್ಲಿ ವಿವಿಧ ಅಭಿವೃದ್ಧಿ ಯೋಜನೆ ಉದ್ಘಾಟಿಸಿ ಮಾತನಾಡಿದ ಅವರು, ವಿದೇಶಿ ವಿನಿಮಯ ಉಳಿಸಲು ಮತ್ತು ಜಾಗತಿಕ ಯುದ್ಧದ ಪರಿಣಾಮ ಕಡಿಮೆ ಮಾಡಲು ಆಮದು ಮಾಡಿಕೊಳ್ಳುವ ಪೆಟ್ರೋಲ್ ಮತ್ತು ಡೀಸೆಲ್‌ನ್ನು ಅಗತ್ಯವಿದ್ದಾಗ ಮಾತ್ರ ಬಳಸಬೇಕು. ಭಾರತದ ಇಂಧನ ಭದ್ರತೆಗಾಗಿ ಸೌರಶಕ್ತಿ, ಎಥೆನಾಲ್ ಮಿಶ್ರಣ, ಎಲ್‌ಪಿಜಿ ವ್ಯಾಪ್ತಿ ಮತ್ತು ಸಿಎನ್‌ಜಿ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

• ಪುಟ ೭

ದಿತ್ವಾ: ಲಂಕೆಗೆ ಭಾರತದ ನೆರವು ಕಾರ್ಯ ಚುರುಕು

• ಪುಟ ೭

ಇರಾನ್‌ಗೆ ರಷ್ಯಾದಿಂದ ಅತ್ಯಾಧುನಿಕ ಡ್ರೋನ್!

• ಪುಟ ೭

ಚಂದ್ರಬಾಬು, ಪವನ್ ಮನೆಗೆ ಮೋದಿ ಭೇಟಿ

• ಪುಟ ೭

ಪಾಕ್‌ನಲ್ಲಿ ಉಗ್ರರ ದಾಳಿ; 15 ಭದ್ರತಾ ಸಿಬ್ಬಂದಿ ಬಲಿ

• ಪುಟ ೭

ಡಾ.ನಾರಾಯಣ್ ಹೊಸ್ಮನೆ ಅಮೆರಿಕದ ಶ್ರೇಷ್ಠ ವಿಜ್ಞಾನಿ

• ಪುಟ ೫

ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ: ಡಿಕೆಶಿ

• ಪುಟ ೫



ಆರ್ಥಿಕ ಸಂಕಷ್ಟದ ಹಾದಿ

ತಮಿಳುನಾಡಿನ ಸಾಲದ ಪರಂಪರೆ ಮತ್ತು ವಿಜಯ್ ಜನಕಲ್ಯಾಣದ ಬರೆ

• ಪುಟ ೭

ಸುದ್ದಿ ಸಮಗ್ರ

ಕೈ ಆಡಳಿತದಲ್ಲಿ ಮುಗಿಯದ ಕುರ್ಚಿ ಕಿತ್ತಾಟ | ಬೆಂಗಳೂರಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಸನ್ಮಾನ

ಕಾಂಗ್ರೆಸ್‌ಗಿಲ್ಲ ನೈತಿಕತೆ: ಮೋದಿ

• **ಬೆಂಗಳೂರು:** ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಬಿಜೆಪಿ ಬಿಡುತ್ತಿಲ್ಲ ಎಂದು ಟೀಕಿಸುವ ಕಾಂಗ್ರೆಸ್‌ಗೆ ಕೇರಳದಲ್ಲಿ ಬಹುಮತ ಇದ್ದರೂ ಸರ್ಕಾರ ರಚನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ವಿರುದ್ಧ ನೇರ ವಾಗ್ದಾಳಿ ನಡೆಸಿದರು.

ಪಶ್ಚಿಮಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರಿಗೆ ಭಾನುವಾರ ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ ರಾಜ್ಯ ಬಿಜೆಪಿ ಸಲ್ಲಿಸಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ರಾಜ್ಯದಲ್ಲಿಯೂ ಸಿಎಂ ಕುರ್ಚಿಗಾಗಿ ಕಿತ್ತಾಟ ಆರಂಭವಾಗಿದೆ. ಕೇರಳದಲ್ಲಿಯೂ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದೆ. ಹೀಗಾಗಿ, ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ ಎಂದು ಹರಿಹಾಯ್ದರು. ➡ಪುಟ ೪





ಮೇ 10 ಸರ್ವಶ್ರೇಷ್ಠ ದಿನ

1857ರಲ್ಲಿ ಇದೇ ದಿನ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಸಮರ ನಡೆದಿತ್ತು. ಬಳಿಕ ಶೌರ್ಯ ಮತ್ತು ಸಾಮರ್ಥ್ಯದಿಂದ ದೇಶದ ಗುಲಾಮಿತನವನ್ನು ದೂರ ಮಾಡಲಾಯಿತು. ಆಪರೇಷನ್ ಸಿಂದೂರದ ವರ್ಷವನ್ನು ನೆನಪಿಸಿಕೊಳ್ಳಲಾಗಿದೆ. ಗುಜರಾತ್‌ನ ಸೋಮನಾಥ ಮಂದಿರದ ಪುನರ್ ನಿರ್ಮಾಣದ ಉತ್ಸವ ನಡೆಯಲಿದೆ. ಸೋಮವಾರ (ಮೇ 11) ಅಲ್ಲಿಗೆ ತೆರಳುವುದಾಗಿ ಹೇಳಿದರು. ಎಲ್ಲರ ಜತೆ ಎಲ್ಲರ ವಿಕಾಸವೇ ನಮ್ಮ ಮಂತ್ರ ಎಂದ ಅವರು, ಇದೇ ಕಾರಣಕ್ಕೆ ನಮಗೆ 3ನೇ ಬಾರಿ ದೇಶದಲ್ಲಿ ಆಡಳಿತದ ಅವಕಾಶ ಸಿಕ್ಕಿದೆ. ಕಾಂಗ್ರೆಸ್ ಹಾಗಲ್ಲ ಎಂದ ಅವರು, ಕಾಂಗ್ರೆಸ್ ಆಡಳಿತಕ್ಕೆ ಬಂದ ಕೆಲವೇ ಸಮಯದಲ್ಲಿ ವಿಶ್ವಾಸದ್ರೋಹದಿಂದ ಆಡಳಿತ ವಿರೋಧಿ ಅಲೆ ಆರಂಭವಾಗುತ್ತದೆ ಎಂದರು.

> ದೇಶದ ಜನರು ಸ್ಥಿರತೆಯ ಮಂತ್ರ ಜಪಿಸುತ್ತಿದ್ದಾರೆ. ಹಗರಣಗಳು ಬೇಡ; ಸಮಸ್ಯೆಗಳಿಗೆ ಪರಿಹಾರ ಬೇಕು. ರಾಷ್ಟ್ರವಾದದ ರಾಜನೀತಿಯನ್ನು ಜನತೆ ಬಯಸುತ್ತಿದ್ದಾರೆ. ಬಿಜೆಪಿಯ ರಾಷ್ಟ್ರನೀತಿಯೊಂದಿಗೆ ಜನತೆ ನಡೆಯುತ್ತಿದ್ದಾರೆ. ಕರ್ನಾಟಕವು ಬಿಜೆಪಿ ಆಡಳಿತ ಬಯಸುತ್ತಿದೆ.
> ■ ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಕೇರಳದಲ್ಲಿಯೂ ಅಧಿಕಾರಕ್ಕೆ ಬರುತ್ತೇವೆ: ಮೋದಿ ವಿಶ್ವಾಸ

ಪಶ್ಚಿಮ ಬಂಗಾಲದಲ್ಲಿ 10 ವರ್ಷದ ಹಿಂದೆ 3 ಶಾಸಕರಿದ್ದದ್ದು ಈಗ 200ಕ್ಕೂ ಹೆಚ್ಚಾಗಿದೆ. ಕೇರಳಂನಲ್ಲಿ 3 ಶಾಸಕರಿದ್ದಾರೆ. ಮುಂದೆ ಬಿಜೆಪಿ- ಎನ್‌ಡಿಎ ಶಾಸಕರ ಸಂಖ್ಯೆ ಮುಂದೆ ಬಹುಮತದತ್ತ ಮುನ್ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ವಿಕಾಸದ ಜತೆ ದೇಶದ ವಿಕಾಸವನ್ನು ನಾವು ಬಯಸುತ್ತೇವೆ. 40 ವರ್ಷದ ಹಿಂದೆ 400ಕ್ಕೂ ಹೆಚ್ಚು ಸಂಸದರಿದ್ದ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಕಾಣುತ್ತಿದೆ. ಆದರೂ, ಅವರ ಅಹಂಕಾರವು ಮಿತಿ ಮೀರಿದೆ. ಸಂವಿಧಾನ, ಪ್ರಜಾಪ್ರಭುತ್ವ, ಸಾಂವಿಧಾನಿಕ ಪ್ರಕ್ರಿಯೆಯನ್ನು ಕಡೆಗಣಿಸುತ್ತಾರೆ ಎಂದು ಪ್ರಧಾನಿ ಟೀಕಿಸಿದರು. ಕಾರ್ಯಕ್ರಮದಲ್ಲಿ ಮೋದಿಯವರಿಗೆ ಮೈಸೂರಿನ ಶಾಲು, ಮೈಸೂರು ಪೇಟ ಹಾಗೂ ಯಲಹಂಕ ಶಾಸಕ ವಿಶ್ವನಾಥ್ ವರು 13 ಕೆ.ಜಿ. ತೂಕದ ಮೋದಿಯವರ ಬೆಳ್ಳಿಯ ಪುತ್ಥಳಿ ನೀಡಿ ಗೌರವಿಸಲಾಯಿತು.

ಸಮಾಜ ಜಾಗೃತಿಗೊಳ್ಳಲಿ: ಪ್ರಧಾನಿ ಮೋದಿ

• ಪುಟ ೫

ಮಹಿಳೆಯರಿಗೆ ಕಾಂಗ್ರೆಸ್ ವಿಶ್ವಾಸದ್ರೋಹ

ತಮಿಳುನಾಡಿನಲ್ಲಿ ಡಿಎಂಕೆ ಜೊತೆಗೆ ಇದ್ದ ಕಾಂಗ್ರೆಸ್ ಪಕ್ಷವು ಇದೀಗ ಆಡಳಿತದ ಲಾಲಸೆಯಿಂದ ಡಿಎಂಕೆಯ ಮೈತ್ರಿ ತೊರೆದು ಟಿವಿಕೆ ಜತೆಗೂಡಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷವು ಮಹಿಳಾ ಮೀಸಲಾತಿ ವಿಚಾರದಲ್ಲಿ ತಾಯಂದಿರು, ಸೋದರಿಯರಿಗೆ ವಿಶ್ವಾಸದ್ರೋಹ ಮಾಡಿದೆ ಎಂದು ಆಕ್ಷೇಪಿಸಿದರು. ಕಾಂಗ್ರೆಸ್ ನಾರಿ ವಿರೋಧಿ ಪಕ್ಷವಾಗಿ ಹೊರಹೊಮ್ಮಿದೆ ಎಂದು ಟೀಕಿಸಿದರು. ಕಾಂಗ್ರೆಸ್ಸನ್ನು ಮಹಿಳೆಯರು ಎಂದೂ ಕ್ಷಮಿಸುವುದಿಲ್ಲ ಎಂದು ಪ್ರಧಾನಿ ಮೋದಿ ನುಡಿದರು. ಬಿಜೆಪಿಗೆ ದೇಶಹಿತವೇ ಸರ್ವಪ್ರಥಮ ಎಂದ ಅವರು, ಯುದ್ಧದಿಂದ ಭಾರತದ ಮೇಲೂ ಪರಿಣಾಮ ಆಗಿದೆ; ನಾವು ಸಂಯಮದಿಂದ ಕೆಲಸ ಮಾಡಬೇಕೆಂದು ಜನರಿಗೆ ಮನವಿ ಮಾಡಿದರು. ಕೋವಿಡ್ ಸಂದರ್ಭದಲ್ಲಿ ನಾವು ಸಂಯಮದಿಂದ ಇದ್ದೆವು. ಅದೇ ಮಾದರಿಯಲ್ಲಿ ನಾವು ಈ ಸಂಕಷ್ಟದಿಂದ ಹೊರಬರಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪

ಆತಂಕ ಮೂಡಿಸಿದ ಜಿಲೆಟಿನ್ ಕಡ್ಡಿ: ಓರ್ವ ಸೆರೆ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ ಭೇಟಿಯ ಹಿನ್ನೆಲೆಯಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದರೂ, ಅವರ ಸಂಚಾರದ ಮಾರ್ಗದಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ. ನಗರದ ಹೊರವಲಯದ ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಎಂಬಲ್ಲಿ ಈ ಸ್ಫೋಟಕ ವಸ್ತುಗಳು ಪತ್ತೆಯಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿ, ಓರ್ವ ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದಾರೆ. ➡ಪುಟ ೪

ಕೆಲಸ ಮಾಡಲು ನಾವು ಇರೋದು: ಪ್ರಧಾನಿ

• **ಬೆಂಗಳೂರು:** ಆರ್ಟ್ ಆಫ್ ಲಿವಿಂಗ್‌ನ ಭೇಟಿ ಸ್ಮೃತಿ ಪಟಲದಲ್ಲಿ ಸದಾ ಇರಲಿದೆ. ರವಿಶಂಕರ್ ಗುರೂಜೀ ಅವರು ನನ್ನ ಬಗ್ಗೆ ಬಹಳ ಹೇಳಿದ್ದಾರೆ. ಆದರೆ ನನಗೆ ಈ ಮೂಲಕ ಹೊಗಳಿದ್ದು ಎಂದೆನಿಸಬಹುದು, ಆದರೆ ಅದು ನನಗೆ ಕೆಲಸ ಹೇಳಿದ್ದು. ಕೆಲಸಕ್ಕೆ ನಾವು ಇರೋದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಧ್ಯಾನ ಕೇಂದ್ರ ಉದ್ಘಾಟನೆ ಹಾಗೂ ಆರ್ಟ್ ಆಫ್ ಲಿವಿಂಗ್‌ನ 40ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿಮಗಾಗಿ, ನಿಮ್ಮಿಂದ ಇದೆಲ್ಲಾ ಎಂದರು. ನಾನು ಮತ್ತೊಮ್ಮೆ ಇಲ್ಲಿಗೆ ಬರುತ್ತೇನೆ. ಸೇವಾಭಾವದಿಂದ ಕೆಲಸ ಮಾಡಿದರೆ ಖಂಡಿತ ಒಳ್ಳೆಯ ಪರಿಣಾಮ ತರಲಿದೆ. ನಾವೆಲ್ಲಾ ಕಮಲದ ಅಡಿಯಲ್ಲಿ ಇದ್ದೇವೆ. ಬೆಂಗಳೂರಿನ ವಾತಾವರಣ ಸ್ವಲ್ಪ ವಿಶೇಷವಾಗಿದೆ, ಸಾಂಸ್ಕೃತಿಕ, ಆಧ್ಯಾತ್ಮಿಕ ಚಿಂತನೆಗಳನ್ನು ಸಹ ಈ ನೆಲ ನೀಡಿದೆ ಎಂದರು

ಮುಖ್ಯಮಂತ್ರಿಯಾಗಿ ಜೋಸೆಫ್ ವಿಜಯ್ ಪ್ರಮಾಣವಚನ ಸ್ವೀಕಾರ

ತ.ನಾಡಲ್ಲಿ ವಿಜಯ ಯುಗ ಆರಂಭ

• **ಚೆನ್ನೈ:** ನಟನೆಯಿಂದ ರಾಜಕೀಯಕ್ಕೆ ಪ್ರವೇಶಿಸಿರುವ ಸಿ. ಜೋಸೆಫ್ ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅವರು ರಾಜ್ಯದಲ್ಲಿ ಜಾತ್ಯತೀತ ಮತ್ತು ಸಾಮಾಜಿಕ ನ್ಯಾಯದ ಹೊಸ ಯುಗವನ್ನು ಆರಂಭಿಸುವ ಭರವಸೆ ನೀಡಿದರು.ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ವಿಜಯ್ ಅವರಿಗೆ ಅಧಿಕಾರ ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ಈ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಿರಿಯ ರಾಜಕೀಯ ಮುಖಂಡರು ಮತ್ತು ವಿಜಯ್ ಅವರ ಲಕ್ಷಾಂತರ ಅಭಿಮಾನಿಗಳು ಭಾಗವಹಿಸಿದ್ದರು. ➡ಪುಟ ೪



9 ಶಾಸಕರು ಸಚಿವರಾಗಿ ಪ್ರಮಾಣ

ವಿಜಯ್ ಅವರೊಂದಿಗೆ ಅವರ ಆಪ್ತ ಬಳಗದ ಯುವ ಮತ್ತು ಅನುಭವಿ ನಾಯಕರ ಮಿಶ್ರಣವಿರುವ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಸಚಿವರಾಗಿ ಬಸ್ಸಿ ಎನ್. ಆನಂದ್, ಆದವ್ ಅರ್ಜುನ, ಕೆ.ಎ. ಸೆಂಗೋಟ್ಟಯನ್, ಕೆ.ಜಿ. ಅರುಣ್‌ರಾಜ್, ಪಿ. ವೆಂಕಟರಮಣನ್, ಸಿ.ಟಿ.ಆರ್. ನಿರ್ಮಲ್ ಕುಮಾರ್, ಎ. ರಾಜಮೋಹನ್, ಕೀರ್ತನಾ ಮತ್ತು ಕೆ.ಟಿ. ಪ್ರಭು ಪ್ರಮಾಣವಚನ ಸ್ವೀಕರಿಸಿದರು.

ವಿಜಯ್‌ಗೆ ಪ್ರಧಾನಿ ಮೋದಿ ಶುಭ ಹಾರೈಕೆ

• ಪುಟ ೪

ಶ್ವಾಸಕೋಶ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ಸುಧಾಕರ್

ಸಾಂಖ್ಯಿಕ ಸಚಿವ ಸುಧಾಕರ್ ಇನ್ನಿಲ್ಲ

• **ಬೆಂಗಳೂರು:** ತೀವ್ರ ಅನಾರೋಗ್ಯಕ್ಕೆ ಒಳಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಚಿವ ಡಿ. ಸುಧಾಕರ್ (62) ಅವರು ಭಾನುವಾರ ಬೆಳಗ್ಗೆ 3.15ರ ವೇಳೆಗೆ ವಿಧಿವಶರಾದರು. ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ ಅವರು ಕೆಲದಿನಗಳಿಂದ ಐಸಿಯುನಲ್ಲೇ ಇದ್ದರು. ಭಾನುವಾರ ಬೆಳಗ್ಗೆ ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು. ಮಂಡಿ ಚಿಪ್ಪು ಶಸ್ತ್ರಚಿಕಿತ್ಸೆಗಾಗಿ ಯಶವಂತಪುರದ ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದ ಅವರಿಗೆ ಶ್ವಾಸಕೋಶದ ಸೋಂಕು ತಗುಲಿತ್ತು. ಯಶವಂತಪುರ ಆಸ್ಪತ್ರೆಯಿಂದ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ಅವರನ್ನು ಸ್ಥಳಾಂತರಿಸಲಾಗಿತ್ತು. ತಜ್ಞ ವೈದ್ಯರ ಸತತ ಚಿಕಿತ್ಸೆ ನಂತರವೂ ಅವರು ಚೇತರಿಸಿಕೊಂಡಿರಲಿಲ್ಲ. ➡ಪುಟ ೪



ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ: ಸಿಎಂ ಸಿದ್ದರಾಮಯ್ಯ

• ಪುಟ ೪

ಇಂದು ಅಂತ್ಯಕ್ರಿಯೆ

ಸೋಮವಾರ ಮಧ್ಯಾಹ್ನ 12ರಿಂದ 2ರವರೆಗೆ ಹಿರಿಯೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದು, ಚಳ್ಳಕೆರೆಯ ಸ್ವಗೃಹದಲ್ಲಿ ಪೂಜೆ ವಿಧಿ-ವಿಧಾನಗಳನ್ನು ನಡೆಸಿದ ನಂತರ ಡಿ. ಸುಧಾಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ದರ್ಶನ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 3 ರಿಂದ 4 ಗಂಟೆವರೆಗೆ ಅಂತ್ಯಕ್ರಿಯೆ ವಿಧಿ-ವಿಧಾನಗಳು ನಡೆಯಲಿವೆ. ಅಂತಿಮ ಸಂಸ್ಕಾರದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗಿಯಾಗಲಿದ್ದಾರೆ. ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲು ಸರ್ಕಾರ ಆದೇಶಿಸಿದೆ.

ಗದ್ದುಗೆಯೇರಲು ಮತ್ತೆ ಎನ್ಡಿಎ ಸಜ್ಜು, ನಾಳೆ ಹಿಮಂತ ಪ್ರಮಾಣ

- ಅಸ್ಸಾಂನಲ್ಲಿ 3ನೇ ಬಾರಿ ಎನ್‌ಡಿಎ ಅಧಿಕಾರಕ್ಕೆ
- ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಹಿಮಂತ ಬಿಸ್ವಾ

• **ಗುವಾಹಟಿ:** ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಭರ್ಜರಿ ಜಯ ದೊರಕಿದ ಹಿನ್ನೆಲೆಯಲ್ಲಿ ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಹಿಮಂತ ಬಿಸ್ವಾ ಶರ್ಮಾ ಅವರಿಗೆ ಹೊಸ ಸರ್ಕಾರ ರಚಿಸಲು ಭಾನುವಾರ ಆಹ್ವಾನ ನೀಡಿದ್ದಾರೆ. ಇದರೊಂದಿಗೆ ಅಸ್ಸಾಂನಲ್ಲಿ ಎನ್‌ಡಿಎ ಸತತ ಮೂರನೇ ಬಾರಿ ಅಧಿಕಾರಕ್ಕೆ ಬರಲು ಸಜ್ಜಾಗಿದೆ. ➡ಪುಟ ೪

ಚಿರತೆ ದಾಳಿ: ಬಾಲಕ ಸಾವು

• **ಹನೂರು (ಚಾಮರಾಜನಗರ):** ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ತೆರಳುತ್ತಿದ್ದ ಬೆಂಗಳೂರು ಮೂಲದ ಬಾಲಕ ಚಿರತೆ ದಾಳಿಗೆ ಬಲಿಯಾಗಿದ್ದಾನೆ. ಹರ್ಷಿತ್ (10) ಮೃತಪಟ್ಟ ಬಾಲಕ. ನಾಗಮಲೆಗೆ ಹೋಗುತ್ತಿದ್ದ ಭಕ್ತರ ಗುಂಪಿನ ಮೇಲೆ ಭಾನುವಾರ ಬೆಳಗ್ಗೆ ಚಿರತೆ ದಾಳಿ ಮಾಡಿ ಬಾಲಕನನ್ನು ಪೊದೆಗೆ ಎಳೆದುಕೊಂಡು ಹೋಗಿದೆ. ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಮಾದಪ್ಪನ ದರ್ಶನ ಪಡೆದ ಬಾಲಕ ಪೋಷಕರೊಂದಿಗೆ ಸಾಗುತ್ತಿದ್ದಾಗ ಚಿರತೆ ದಾಳಿ ನಡೆಸಿದೆ.

• ಪುಟ ೪

ಕಿರುಸುದ್ದಿ

ಮೆಗಾ ಉದ್ಯೋಗ ಮೇಳ



◆ **ಹುಬ್ಬಳ್ಳಿ:** ನಗರದ ಚೇತನ ಬಿಸಿನೆಸ್ ಕಾಲೇಜ್ ಹಾಗೂ ಗುರ್ವೈನ್ ಹಳ್ಳಿಕೇರಿ ಕಾಲೇಜ್ ಸಹಯೋಗದಲ್ಲಿ ಹಾವೇರಿಯ ಕಾಲೇಜ್ ಆವರಣದಲ್ಲಿ ಏರ್ಪಡಿಸಿದ್ದ ಮೆಗಾ ಉದ್ಯೋಗ ಮೇಳ ಯಶಸ್ವಿಯಾಗಿ ನಡೆಯಿತು. ಹಾವೇರಿ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಸುಮಾರು 500 ವಿದ್ಯಾರ್ಥಿಗಳು ಹಾಗೂ ಉದ್ಯೋಗಾಕಾಂಕ್ಷಿಗಳು ಉತ್ಸಾಹದಿಂದ ಭಾಗವಹಿಸಿದರು. ಕಾರ್ಯಕ್ರಮವನ್ನು ಎಂ. ಸಿ. ಕೊಳ್ಳಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯರ ಪ್ರೊ. ಹೊಳ್ಳಿಯವರ ಉಪಸ್ಥಿತರಿದ್ದರು. ಡಾ. ವಿ. ಎಂ. ಕೊರವಿ ಹಾಗೂ ಅರುಣ್ ರಾಜಪೂತ್ ಎ.ಆರ್. ವಡಣ್ಣವರ ಮತ್ತು ಕೆ.ಸಿ. ಪಾಂಗಿ ಸಹ ಭಾಗವಹಿಸಿದ್ದರು. ವಿವಿಧ ಕ್ಷೇತ್ರಗಳ ಅನೇಕ ಪ್ರತಿಷ್ಠಿತ ಸಂಸ್ಥೆಗಳು ಭಾಗವಹಿಸಿದ್ದವು. ವಿದ್ಯಾರ್ಥಿಗಳು ಸಂದರ್ಶನ, ಉದ್ಯೋಗದಾತರೊಂದಿಗೆ ಸಂವಾದ ಹಾಗೂ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಈ ಉದ್ಯೋಗ ಮೇಳವು ಪದವೀಧರ ವಿದ್ಯಾರ್ಥಿಗಳನ್ನು ಪ್ರಮುಖ ಸಂಸ್ಥೆಗಳೊಂದಿಗೆ ಸಂಪರ್ಕಿಸುವ ಮಹತ್ವದ ವೇದಿಕೆಯಾಗಿದ್ದು, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳ ನಡುವಿನ ಸಹಕಾರವನ್ನು ಮತ್ತಷ್ಟು ಬಲಪಡಿಸಿತು. ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮತ್ತು ಕಂಪನಿಗಳಿಂದ ದೊರೆತ ಉತ್ತಮ ಪ್ರತಿಕ್ರಿಯೆಗೆ ಸಂಘಟಕರು ಸಂತೋಷ ವ್ಯಕ್ತಪಡಿಸಿ, ಇಂತಹ ಉದ್ಯೋಗ ಮೇಳಗಳ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿಯೂ ಮುಂದುವರಿಸುವ ಸಂಕಲ್ಪ ವ್ಯಕ್ತಪಡಿಸಿದರು.

ನೀರು ಪೂರೈಕೆಯಲ್ಲಿ ವ್ಯತ್ಯಯ

◆ **ಅಳ್ನಾವರ:** ಕರ್ನಾಟಕ ನೀರಾವರಿ ನಿಗಮದಿಂದ ಹಳಿಯಾಳ ತಾಲೂಕಿನ ಬಿದರೊಳ್ಳಿ ಗ್ರಾಮದ ಹತ್ತಿರ ಕೆರೆಗೆ ನೀರು ಸರಬರಾಜು ಯೋಜನೆ ಪೈಪ್‌ಲೈನ್ ದುರಸ್ತಿ ಕಾರ್ಯ ಕೈಗೊಳ್ಳಲಿರುವುದರಿಂದ ದಾಂಡೇಲಿ ಕಾಳಿ ನದಿಯಿಂದ ಅಳ್ನಾವರ ಪಟ್ಟಣಕ್ಕೆ ಸರಬರಾಜು ಆಗುವ ನೀರು ಪೂರೈಕೆಯಲ್ಲಿ ಮೇ11 ಮತ್ತು 12ರಂದು ಎರಡು ದಿನ ವ್ಯತ್ಯಯವಾಗಲಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಾಶ ಮುಗದುಮ ತಿಳಿಸಿದ್ದಾರೆ. ಕಾಳಿ ನದಿ ಮೂಲದಿಂದ ಪಟ್ಟಣಕ್ಕೆ ನಿತ್ಯ 24X7 ಯೋಜನೆ ನೀರು ಸರಬರಾಜು ಆಗುತ್ತಿದ್ದು, ತುರ್ತು ಕಾರ್ಯದ ನಿಮಿತ್ತ ನೀರು ಪೂರೈಕೆ ಇರದ ಕಾರಣ ಸಾರ್ವಜನಿಕರು ಮುಂಜಾಗ್ರತವಾಗಿ ತಮಗೆ ಅಗತ್ಯವಿರುವ ಎರಡು ದಿವಸಗಳಿಗಾಗುವಷ್ಟು ನೀರಿನ ಸಂಗ್ರಹಣೆ ಮಾಡಿಟ್ಟುಕೊಂಡು ಸಹಕರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆ **ಧಾರವಾಡ:** ಬೆಂಗಳೂರಿನ ಆರ್ಯ ಸೇವಾಶ್ರಮ ಟ್ರಸ್ಟ್ ರಾಜ್ಯದ ಯಾವುದೇ ಜಾತಿ, ಜನಾಂಗದ ಅನಾಥ ಮತ್ತು ಕಡುಬಡ ಬಾಲಕರ ವಿದ್ಯಾರ್ಜನೆಗಾಗಿ ಬೆಂಗಳೂರಿನ ರಾಜಾಜಿನಗರದ 1ನೇ ಕ್ರಾಸ್ ಎನ್ ಬ್ಲಾಕ್‌ದಲ್ಲಿ ಉಚಿತ ವಿದ್ಯಾರ್ಥಿ ನಿಲಯದ ಪ್ರವೇಶ ಅರ್ಜಿ ಆಹ್ವಾನಿಸಿದೆ. ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಬಟ್ಟೆ ವಿವಿಧ ಸೌಲಭ್ಯಗಳು ಒದಗಿಸಲಾಗುತ್ತದೆ. ಮಾಹಿತಿಗಾಗಿ ಮೊ:7411696057 ಅಥವಾ 9844516664ಕ್ಕೆ ಸಂಪರ್ಕಿಸಲು ಆರ್ಯ ಸೇವಾಶ್ರಮ ಟ್ರಸ್ಟ್ ಕಾರ್ಯದರ್ಶಿ ಚಂದ್ರಶೇಖರ ಬಾಬು ಮತ್ತು ವ್ಯವಸ್ಥಾಪಕ ಉದಯಕುಮಾರ ಕೊಳ್ಳಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.ಸುಧಾಕರ್ ನಿಧನಕ್ಕೆ ಸಂತಾಪ

◆ **ಕುಂದಗೋಳ:** ಚಳ್ಳಕೆರೆ ಕ್ಷೇತ್ರದ ಶಾಸಕ ಹಾಗೂ ಸಚಿವರಾಗಿದ್ದ ಡಿ ಸುಧಾಕರ್ ಅವರ ನಿಧನಕ್ಕೆ ತಾಲೂಕಿನ ಗುಡೇನಕಟ್ಟಿ ಗ್ರಾಮದ ಶ್ರೀ ದಿಗಂಬರ ಜೈನ ಸಮಾಜದ ವತಿಯಿಂದ ಸಂತಾಪ ವ್ಯಕ್ತಪಡಿಸಲಾಯಿತು.

ಡಿ. ಸುಧಾಕರ್ ಅವರು ಸಮಾಜಮುಖಿ ಕಾರ್ಯಗಳ ಜೊತೆಗೆ ಜೈನ ಧರ್ಮದ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿ ದಾನಧರ್ಮಗಳಲ್ಲಿ ತೊಡಗಿಸಿಕೊಂಡಿದ್ದರು. ಅವರ ಅಗಲಿಕೆ ಜೈನ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಮಾಜದ ಮುಖಂಡರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಜೈನ ಸಮಾಜದ ಅಧ್ಯಕ್ಷ ಬಾಹುಬಲಿ ಮಲ್ಲಿಗವಾಡ, ಬಸವರಾಜ ಯೋಗಪ್ಪನವರ, ಜೈಪಾಲ್ ಯೋಗಪ್ಪನವರ, ಶೀತಲ್ ನಾಗರಹಳ್ಳಿ ಸೇರಿದಂತೆ ಅನೇಕರು ಮೃತರ ಆತ್ಮಕ್ಕೆ ಶಾಂತಿ ಕೋರಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ನಿಧನ ಸುದ್ದಿ

ಸುನಂದಾ ಮುದರಡ್ಡಿ



◆ **ಹುಬ್ಬಳ್ಳಿ:** ಇಲ್ಲಿನ ಸಿದ್ಧಾರೂಢ ಮಠದ ಮುಖ್ಯರಸ್ತೆಯ ನಿವಾಸಿ ಸುನಂದಾ ಯಶವಂತ್ ಮುದರಡ್ಡಿ (76) ಶನಿವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.

ಮಹಾದೇವಪ್ಪ ಸವದತ್ತಿ



◆ **ಧಾರವಾಡ:** ಇಲ್ಲಿನ ಮದಿಹಾಳ ತೋಟಗೇರ ಓಣಿ ನಿವಾಸಿ ಮಹಾದೇವಪ್ಪ ಚನ್ನಬಸಪ್ಪ ಸವದತ್ತಿ (80) ಈಚೆಗೆ ನಿಧನರಾದರು. ಇವರಿಗೆ ಇಬ್ಬರು ಪುತ್ರರು, ಪುತ್ರಿ ಮತ್ತು ಅಪಾರ ಬಳಗವಿದೆ.



ಹುಬ್ಬಳ್ಳಿ: ಚಿತ್ರದುರ್ಗದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ ಐವತ್ತು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಬೃಹತ್ ಸಮಾವೇಶದಲ್ಲಿ ರಾಜ್ಯದ ಅನೇಕ ಮಠಾಧೀಶರು, ಮಾಜಿ ಮುಖ್ಯಮಂತ್ರಿಗಳು, ಶಾಸಕರು, ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು, ಹುಬ್ಬಳ್ಳಿಯಿಂದ ಮುಖಂಡರಾದ ಸಿದ್ದು ಮೊಗಲಿ ಶೆಟ್ಟರ್, ರವಿ ನಾಯಕ, ಪ್ರಶಾಂತ ಹಾವಣಗಿ, ರಘು ಧಾರವಾಡಕರ, ಎಸ್. ಕೊಟ್ರೇಶ್ ಮೊದಲಾದವರು ಪಾಲ್ಗೊಂಡರು.

ಪ್ರತ್ಯೇಕ ಪಾಲಿಕೆ: ದ್ವಂದ್ವ ನಿಲುವು ನಿಲ್ಲಿಸಿ

◆ **ಧಾರವಾಡ:** ಪ್ರತ್ಯೇಕ ಪಾಲಿಕೆ ವಿಷಯದಲ್ಲಿ ಬಿಜೆಪಿಗರ ದ್ವಂದ್ವ ನಿಲುವು ಖಂಡನೀಯ.



ಮೊದಲಿಂದ ಬಿಜೆಪಿ ನಾಯಕರಾದ ಪ್ರಹ್ಲಾದ್ ಜೋಶಿ ಮತ್ತು ಶಾಸಕ ಅರವಿಂದ ಬೆಲ್ಲದ ಧಾರವಾಡಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ರಾಜ್ಯ ಪ್ರಚಾರ ಸಮಿತಿ ಮುಖ್ಯ ಸಂಯೋಜಕ ಶರಣಪ್ಪ ಕೊಟಗಿ ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಪ್ರತ್ಯೇಕ ಮಹಾನಗರ ಪಾಲಿಕೆಯ ವಿಷಯದಲ್ಲಿ ಧಾರವಾಡಿಗರ ಬೆನ್ನಿಗೆ ಚೂರಿ ಹಾಕುವುದು ಬಿಡಬೇಕು. ವರ್ಷಗಳ ಹಿಂದೆ ಪಾಲಿಕೆಯಿಂದ ಪಾಸಾದ ಠರಾವು ಅನುಸಾರವೇ ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರಿಂದ ಅಂಕಿತ ಹಾಕಿಸಬೇಕು. ಬೃಹತ್ ಮಹಾನಗರ ಪಾಲಿಕೆ ಆಮಿಷ ತೋರಿಸಿ ಧಾರವಾಡಕ್ಕೆ ಬರಬೇಕಾಗಿದ್ದ ಪ್ರತ್ಯೇಕ ಪಾಲಿಕೆ, ಅನುದಾನ ಹಾಗೂ ಅಭಿವೃದ್ಧಿ ತಡೆಗಟ್ಟುವ ಹುನ್ನಾರ ಇದಾಗಿದೆ. ಪ್ರತ್ಯೇಕ ಪಾಲಿಕೆ ನಮ್ಮ ಹಕ್ಕು. ಹೋರಾಟದ ಮೂಲವಾಗಲಿ, ಇಲ್ಲವೇ ಕೋರ್ಟ್ ಮೂಲಕವಾಗಲಿ ಅದನ್ನು ಪಡೆದೇ ತೀರುತ್ತೇವೆ ಎಂದಿದ್ದಾರೆ. ಸ್ವತಃ ಪ್ರಹ್ಲಾದ್ ಜೋಶಿ ಅವರು, ನಗರಾಭಿವೃದ್ಧಿ ಸಚಿವರಿಗೆ ಪತ್ರ ಬರೆದಿದ್ದು, ಕೆಲ ಬಿಜೆಪಿ ಪಾಲಿಕೆ ಸದಸ್ಯರು ಪ್ರತ್ಯೇಕ ಪಾಲಿಕೆ ರಚಿಸದಿದ್ದರೆ ರಾಜೀನಾಮೆ ನೀಡುವ ಹೇಳಿಕೆಯೂ ಮತ್ತು ರಾಜ್ಯಪಾಲರು ಕೂಡ ದ್ವಂದ್ವ ನಿಲುವು ವ್ಯಕ್ತಪಡಿಸಿರುವುದು ಬೇಸರದ ಸಂಗತಿ ಎಂದಿದ್ದಾರೆ.



ಧಾರವಾಡ: ಭಾರತದಲ್ಲಿ ಪ್ರಸಾರ ಸೇವೆ ಆರಂಭಗೊಂಡ 90ನೇ ವರ್ಷಾಚರಣೆ ನಿಮಿತ್ತ ಆಕಾಶವಾಣಿ ಧಾರವಾಡ ಕೇಂದ್ರದಿಂದ ತನ್ನ ಆತ್ಮೀಯ ಶ್ರೋತೃಗಳೊಂದಿಗೆ, ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್ ಆಯೋಜಿಸಲಾಗಿತ್ತು. ಆಕಾಶವಾಣಿ ಧಾರವಾಡ ಕೇಂದ್ರದ ಅಭಿಯಾಂತ್ರಿಕ ವಿಭಾಗದ ಉಪಮಹಾನಿರ್ದೇಶಕ ಅರುಣ ಪ್ರಭಾಕರ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಮಂಜುಳಾ ಪುರಾಣಿಕ, ಆಕಾಶವಾಣಿ ಧಾರವಾಡ ಕೇಂದ್ರದ ಆವರಣದಲ್ಲಿ, ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್‌ಗೆ ಚಾಲನೆ ನೀಡಿದರು.

ವಿವಿಧ ಕಟ್ಟಡಗಳ ಲೋಕಾರ್ಪಣೆ | ಎಫ್.ಎಚ್.ಜಕ್ಕಪ್ಪನವರ ಅಭಿಮತ

ಶಿಕ್ಷಣದಲ್ಲಿ ಮರಾಠ ಮಂಡಳ ಕ್ರಾಂತಿ

◆ **ಧಾರವಾಡ:** ನಗರದ ಮರಾಠ ವಿದ್ಯಾಪ್ರಸಾರಕ ಮಂಡಳ ಆವರಣದಲ್ಲಿ ಭಾನುವಾರ ಐಟಿಐ ಕಾಲೇಜು ಮತ್ತು ವಸತಿ ನಿಲಯದ ಶಂಕು ಸ್ಥಾಪನೆಯೊಂದಿಗೆ ಆಡಳಿತ ಮಂಡಳಿ ಕಚೇರಿ, ಪಿಯು ವಿಜ್ಞಾನ ಮತ್ತು ಬಿಎಸ್ಸಿ ಪದವಿ ಕಾಲೇಜಿನ ಕಟ್ಟಡಗಳು ಲೋಕಾರ್ಪಣೆಗೊಂಡವು.

ಕಟ್ಟಡ ಲೋಕಾರ್ಪಣೆಗೊಳಿಸಿದ ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ, ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೆಜ್ಜೆ ಇರಿಸಿದ ಮರಾಠ ಮಂಡಳ ಕ್ರಾಂತಿ ಮಾಡಿದೆ. ಗ್ರಾಮೀಣ ಸರ್ವ ಜನಾಂಗದ ಮಕ್ಕಳ ಭವಿಷ್ಯ ನಿರ್ಮಿಸುವ ಕಾರ್ಯ ಶ್ಲಾಘಿಸಿದರು.

ಕೇವಲ ಪದವಿಗಳು ನೀಡುವುದು ಶಿಕ್ಷಣವಲ್ಲ, ಬದಲಿಗೆ ವಿದ್ಯಾರ್ಥಿಗಳಲ್ಲಿ ಕೌಶಲ್ಯ ಬೆಳೆಸುವುದು ಶಿಕ್ಷಣ. ನೂತನ ಐಟಿಐ ಕಾಲೇಜು ಮರಾಠ ಸಮಾಜದ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಒದಗಿಸುವಲ್ಲಿ ಬಹಳಷ್ಟು ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಉದ್ಘಾಟಿಸಿದ ಹು-ಧಾ ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಯಾವುದೇ ಸಮಾಜವು ಮುಖ್ಯವಾಹಿನಿಗೆ ಬರಲು ಶಿಕ್ಷಣ ಅಡಿಪಾಯ. ಮರಾಠಾ ಮಂಡಳ ಜಾತೀಯತೆ ಮರೆತು ಸರ್ವ ಜನಾಂಗದ ವಿದ್ಯಾರ್ಥಿಗಳ ಬೆಳವಣಿಗೆಗೆ ಶ್ರಮಿಸುವುದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು.

ಒಂದೇ ಸೂರಿನಡಿ ಕೆಜಿಯಿಂದ ಪಿಜಿವರೆಗೂ ಶಿಕ್ಷಣ ನೀಡುವ ಎಂ.ಎನ್.ಮೋರೆ ಅವರ ನೇತೃತ್ವದ ತಂಡ ಮರಾಠ ಮಂಡಳ ಕಾರ್ಯ ಅಭಿನಂದಿಸಿದ ಮೇಯರ್, ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೂ ಸಹ ರೂ.5 ಲಕ್ಷ ಅನುದಾನ ನೀಡುವ ವಾಗ್ದಾನ ಮಾಡಿದರು.



> ಮರಾಠ ಮಾನವೀಯ ಸಾಮ್ರಾಜ್ಯ ಕಟ್ಟಿದ ಭಾರತದ ಸಮಾಜ. ಯಾವುದೇ ಜಾತಿ ಮತ್ತು ಧರ್ಮಕ್ಕೆ ಸೀಮಿತವಾಗಿಲ್ಲ. ದೇಶಕ್ಕೆ ಪ್ರಾಣ ನೀಡುವ ಈ ಸಮಾಜವು ಪುನಃ ತಲೆ ಎತ್ತಬೇಕು. ಈ ಸಮಾಜದ ಅಭ್ಯುದೇಯಕ್ಕೆ ಪ್ರಾಧಿಕಾರದ ರಚಿಸಿದ ಕೀರ್ತಿ ಸಿದ್ದರಾಮಯ್ಯ ಸರ್ಕಾರಕ್ಕೆ ಸಲ್ಲುತ್ತದೆ. ಕಾಲೇಜು ಕಟ್ಟಡಕ್ಕೆ ರೂ.10 ಲಕ್ಷ ಅನುದಾನ ನೀಡುವೆ.
>
> ■ **ಎಫ್.ಎಚ್.ಜಕ್ಕಪ್ಪನವರ,** ವಿಧಾನ ಪರಿಷತ್ ಸದಸ್ಯ

ಪ್ರಾಸ್ತಾವಿಕ ಮಾತನಾಡಿದ ಗೌರವ ಕಾರ್ಯದರ್ಶಿ ರಾಜು ಬಿರಜೆನವರ, ಸಮಾಜದ ಮಕ್ಕಳಿಗೆ ಕೆಜಿಯಿಂದ ಎಸ್ಸೆಸ್ಸೆಲ್ಸಿವರೆಗೆ ಉಚಿತ ಶಿಕ್ಷಣ ನೀಡುತ್ತಿದೆ. ಎಸ್ಸೆಸ್ಸೆಲ್ಸಿ ಬಳಿಕ ಸಮಾಜದ, ಬಡ ಮಕ್ಕಳಿಗೆ ಶೇ.50ರ ರಿಯಾಯತಿ ದರದಲ್ಲಿ ಶಿಕ್ಷಣ ನೀಡುತ್ತಿದೆ ಎಂದರು.

ಮನೋಹರ ಮೋರೆ ನೇತೃತ್ವದ ತಂಡ ಮರಾಠ ಸಮಾಜದ ಅಭಿವೃದ್ಧಿಗೆ ನಿತ್ಯ ಶ್ರಮಿಸುತ್ತಿದೆ. 14 ಗುಂಟೆ ಜಾಗೆಯಲ್ಲಿ ಐಟಿಐ ಕಾಲೇಜು, ವಸತಿ ನಿಲಯ ಕಟ್ಟಡ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿದ್ದು, ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ ಎಂದರು.

ಮಂಡಳದ ಅಧ್ಯಕ್ಷ ಎಂ.ಎನ್.ಮೋರೆ ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ಸುನಿಲ ಮೋರೆ, ಯಲ್ಲಪ್ಪ ಚವ್ಹಾಣ, ರಾಜು ಕಾಳೆ, ಶಿವಾಜಿ ಸೂರ್ಯವಂಶಿ, ಪುರುಷೋತ್ತಮ ಜಾದವ, ಸುಭಾಷ ಶಿಂಧೆ, ಪ್ರಸಾದ ಹಂಗಳಕಿ, ಮಹೇಶ ಶಿಂಧೆ, ನಿರ್ದೇಶಕರಾದ ಈಶ್ವರ ಪಾಟೀಲ, ಸುಭಾಷ ಪವಾರ ಹಾಗೂ ಮಲ್ಲೇಶಪ್ಪ ಶಿಂಧೆ, ಪಾಲಿಕೆ ಸದಸ್ಯರಾದ ಶಂಕರ ಶೇಳಕೆ, ಪ್ರಕಾಶ ಘಾಟಕೆ, ಡಾ. ಮಯೂರ ಮೋರೆ ಸೇರಿದಂತೆ ಐದು ಅಂಗ ಸಂಸ್ಥೆಗಳ ಶಿಕ್ಷಕರು, ಸಿಬ್ಬಂದಿ ಪಾಲ್ಗೊಂಡಿದ್ದರು.

ಅರಿವು ನೀಡುವ, ಸಂಸ್ಕಾರಯುತ ಶಿಕ್ಷಣ ಅವಶ್ಯ

◆ **ಅಳ್ನಾವರ:** ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರುವ ಬಹಳಷ್ಟು ಕೊರತೆಗಳ ಪೈಕಿ ಅರಿವು ಮತ್ತು ಸಂಸ್ಕಾರಯುತ ಶಿಕ್ಷಣದ ಕೊರತೆ ಮುಖ್ಯವಾಗಿದೆ ಎಂದು ಖಾನಾಪೂರ ತಾಲೂಕಿನ ಬಿಳಕಿ-ಅವರೊಳ್ಳಿ ರುದ್ರಸ್ವಾಮಿ ಮಠದ ಚನ್ನಬಸವದೇವರು ಹೇಳಿದರು.

ಸಮೀಪದ ಕಕ್ಕೇರಿ ಗ್ರಾಮದಲ್ಲಿ ಶ್ರೀ ಬಿಷ್ಟಾದೇವಿ ಪ್ರೌಢಶಾಲೆಯಲ್ಲಿ 1992ನೇ ಸಾಲಿನಲ್ಲಿ ಕಲಿತ ಹತ್ತನೇ ತರಗತಿಯ ಕಲಿಕಾರ್ಥಿಗಳು ಏರ್ಪಡಿಸಿದ್ದ ಗುರುವಂದನೆ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಅಕ್ಷರಕ್ಕಿಂತ ಬುದ್ಧಿ ಎತ್ತರಕ್ಕಿದೆ. ಈ ಹಿಂದೆ ಸೌಲಭ್ಯಗಳಿಲ್ಲದ ಶಿಕ್ಷಣ ವ್ಯವಸ್ಥೆಯಿತ್ತು. ಆದರೆ ಇಂದು ನೀಡಲಾಗುತ್ತಿರುವ ಸೌಲಭ್ಯಗಳಲ್ಲಿ ಶಿಕ್ಷಣ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದು ವ್ಯಾಪಾರಿಕರಣದತ್ತ ಸಾಗಿರುವ ಶಿಕ್ಷಣ ಕ್ಷೇತ್ರದಿಂದ ನಿರೀಕ್ಷಿತ ಸುಸಂಸ್ಕೃತ ಶಿಕ್ಷಣ ದೊರೆಯದಿರುವುದು ಕ್ಷೇತ್ರಕ್ಕೆ ಅಂಟಿರುವ ದೊಡ್ಡ ಕಳಂಕ ಎಂದರು.

ಕಕ್ಕಯ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಶೋಕ ಉಳ್ಳಾಗಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲಾ ಕೊಠಡಿಯಲ್ಲಿ ಈಶ್ವರ ಸಂಪಗಾವಿ ಮತ್ತು ಬಿ.ಬಿ.ಕಿಲಾರಿ ಅವರು ಪಾಠ ಬೋಧನೆ ಮಾಡುವ ಮೂಲಕ ಶಾಲಾ ಅವಧಿಯನ್ನು ನೆನಪಿಸಿದರು. ಕಲಿಸಿದ ಗುರು ಬಳಗಕ್ಕೆ ಗೌರವಿಸಿ ವಂದನೆ ಸಲ್ಲಿಸಿದ ಅಂದಿನ ವಿದ್ಯಾರ್ಥಿಗಳು ತಮ್ಮ ಶಾಲಾ ಅವಧಿಯನ್ನು ಮೆಲಕು ಹಾಕಿ ಬೋಧನೆಯಲ್ಲಿದ್ದ ಆತ್ಮೀಯತೆ, ಕಾಳಜಿಯನ್ನು ನೆನಪಿಸಿಕೊಂಡರು. ಶಿಕ್ಷಕರಾದ ಈಶ್ವರ ಸಂಪಗಾವಿ, ಬಿ.ಬಿ.ಕಿಲಾರಿ, ಎ.ಎಸ್.ಪಾಟೀಲ, ವಿ.ಡಿ. ಮಾಂಡವಿ, ಪಿ.ಕೆ.ಪಿರೋಜಿ, ಡಿ.ಎ.ಶಹಾಪೂರಮಠ, ಆರ್.ವೈ.ಬೆನ್ನೂರ, ಪ್ರಭು ಪ್ರಭುಣ್ಣವರ, ಗಂಗವ್ವ ಹುಲಮನಿ, ಮೀನಾಕ್ಷಿ ಹೊಸಕೋಟಿ, ಸರೋಜಾ ಜಾಧವ, ಪರಶುರಾಮ ಸಡೇಕರ, ರುದ್ರವ್ವ ಮಾದರ, ಈರನಗೌಡ ಪಾಟೀಲ ಇದ್ದರು. ವಿದ್ಯಾರ್ಥಿಗಳಾದ ಸತೀಶ ಪಾನೇರಿ, ಲೀಲಾಧರ ಪಾಟೀಲ, ಪಾಂಡುರಂಗ ಮೀಟಗಾರ, ರಮೇಶ ಗೋದೊಳ್ಳಿ, ಮಹ್ಮದಲಿ ಮಕಾನದಾರ, ಇಲಾರ ಡಿಸೋಜಾ, ಭಾಗ್ಯಶ್ರೀ ಪಾಟೀಲ, ಸುವರ್ಣಾ ಕುಠಾಳೆ, ರಾಜು ಲಾವಗಿ,ಬಸವರಾಜ ಕುಬಸದ, ಸುನಂದಾ ಹಲಗಿ, ಮಂಜುಳಾ ಡೊಳ್ಳಿನ, ಸುರೇಖಾ ಮಾದರ, ಬಂಗಾರಿ ಕೆಸರೇಕರ ಇತರರಿದ್ದರು.




ಪೀಠಾಧಿಕಾರ ಮಹೋತ್ಸವ: ಧರ್ಮದ ಬುತ್ತಿ ಜಾಥಾ

◆ **ನವಲಗುಂದ:** ಒಂದೇ ಕಟುಂಬದವರು ಜೊತೆಗಿ ಕುಳಿತು ಊಟ ಮಾಡಲು ಪುರುಸೊತ್ತಿಲ್ಲದ ಈ ದಿನಗಳಲ್ಲಿ ತಾಲೂಕಿನ ಭಕ್ತ ಸಮೂಹವೆಲ್ಲ ಸೇರಿ ಧರ್ಮದ ಬುತ್ತಿ ಹೆಸರಿನಲ್ಲಿ ಜಾತಿ, ಮತಗಳನ್ನು ಮೀರಿ ಎಲ್ಲರೂ ಒಂದಾಗಿ ಹಿರೇಮಠಕ್ಕೆ ಬುತ್ತಿಯನ್ನು ಹೊತ್ತು ತರುವ ಮೂಲಕ ಸಾಮರಸ್ಯಕ್ಕೆ ಸಾಕ್ಷಿಯಾಗಿದ್ದೀರಿ ಎಂದು ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಭಾನುವಾರ ಪಂಚಗ್ರಹ ಹಿರೇಮಠದ ನೂತನ ಪೀಠಾಧಿಕಾರ ಹಾಗೂ ಗುರು ಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ಧರ್ಮದ ಬುತ್ತಿ ಜಾಥಾ ಉದ್ಘಾಟಿಸಿ ಮಾತನಾಡಿದ ಅವರು, ಹಿರೇಮಠದ ನೂತನ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ತಾಲೂಕಿನ ಸಾವಿರಾರು ಮಹಿಳೆಯರು ರಾತ್ರಿ ಪೂರ್ತಿ ಶೇಂಗಾ ಹೋಳಿಗೆ, ರೊಟ್ಟಿ ಬುತ್ತಿ ಮಾಡಿಕೊಂಡು ಬಿಸಿಲನ್ನು ಲೆಕ್ಕಿಸದೇ ಬೃಹತ್ ಜಾಥಾದಲ್ಲಿ ಪಾಲ್ಗೊಳ್ಳುವ ಮೂಲಕ ಆಧ್ಯಾತ್ಮ ಚಿಂತನೆಗೆ ಆದ್ಯತೆ ನೀಡಿರುವುದು ನವಲಗುಂದದ ಹೆಮ್ಮೆಯಾಗಿದೆ ಎಂದರು.

ಗವಿಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಈ ಹಿಂದೆ ನಡೆದ ಎಲ್ಲ ಮಠಗಳ ಪಟ್ಟಾಧಿಕಾರ ಮಹೋತ್ಸವಗಳನ್ನೂ ಮೀರಿಸುವಂತಹ ಧಾರ್ಮಿಕ ಕಾರ್ಯಗಳು ತಾಲೂಕಿನ ಎಲ್ಲ ಭಕ್ತರ ಸಹಕಾರದಿಂದ ಹಿರೇಮಠದಲ್ಲಿ ನಡೆದಿದೆ ಎಂದರು.

ಶಾಸಕ ಎನ್.ಎಚ್.ಕೋನರಡ್ಡಿ ಹಾಗೂ ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಮಾತನಾಡಿ, ಸಾವಿರಾರು ಮಹಿಳೆಯರು ಧರ್ಮದ ಬುತ್ತಿಯನ್ನು ಹೊತ್ತು ಶ್ರೀಮಠಕ್ಕೆ ಮೆರವಣಿಗೆ ಮೂಲಕ ಬಂದು ಸಾವಿರಾರು ಭಕ್ತರಿಗೆ ಪ್ರಸಾದ ರೂಪದಲ್ಲಿ ಬುತ್ತಿಯನ್ನು ನೀಡಿದ ಕಾರ್ಯ ಶ್ಲಾಘನೀಯ ಎಂದರು. ಶ್ರೀ ಶಂಕರ ಕಾಲೇಜು ಮೈದಾನದಲ್ಲಿ ಧರ್ಮದ ಬುತ್ತಿ ಜಾಥಾವನ್ನು ಪಂಚಗ್ರಹ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಣಕವಾಡ ಗವಿಮಠದ ಬಸವಲಿಂಗ ಸ್ವಾಮೀಜಿ, ನರಗುಂದ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ನಿಯೋಜಿತ ಪೀಠಾಧಿಕಾರಿ ವೀರಬಸವ ಸ್ವಾಮೀಜಿ, ಶಾಸಕ ಎನ್. ಎಚ್.ಕೋನರಡ್ಡಿ, ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಚಾಲನೆ ನೀಡಿದರು. ಅಣ್ಣಪ್ಪ ಬಾಗಿ, ಪಾಂಡಪ್ಪ ಕೋನರಡ್ಡಿ, ಸಿದ್ದಲಿಂಗಯ್ಯ ಹಿರೇಮಠ,ಶಿವಾಜಿ ಕಲಾಲ,ಯಲ್ಲಪ್ಪ ಭೋವಿ, ಮಹೇಶ ಹಳ್ಳದ, ಬಾಬು ಹಳ್ಳದ,ಅಡಿವೆಪ್ಪ ಶಿರಸಂಗಿ ಇದ್ದರು. ಧರ್ಮದ ಬುತ್ತಿ ಜಾಥಾದಲ್ಲಿ 5 ಸಾವಿರಕ್ಕೂ ಹೆಚ್ಚು ಮಹಿಳೆಯರು, ಮಕ್ಕಳು ಸಾಂಪ್ರದಾಯಿಕ ಉಡುಗಡೆಗಳನ್ನು ತೊಟ್ಟು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಧ್ವಜ ಹೋಲುವ ಕೇಸರಿ,ಬಿಳಿ, ಹಸಿರು ಬಟ್ಟೆಗಳನ್ನು ಬುತ್ತಿ ಬುಟ್ಟಿಗೆ ಕಟ್ಟಿಕೊಂಡು ಪಾಲ್ಗೊಂಡರು.



ದುಂದು ವೆಚ್ಚಗಳಿಗೆ ಕಡಿವಾಣ: ಟೆಂಗಿನಕಾಯಿ



◆ **ಹುಬ್ಬಳ್ಳಿ:** ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪ್ರೇರಿತ ಸಮತಾ ಸೇವಾ ಸಂಸ್ಥೆ ಹಾಗೂ ಹುಬ್ಬಳ್ಳಿಯ ಕೃಷ್ಣ ಗಂಡಗಾಳೇಕರ್ ನೇತೃತ್ವದ ನವಯುಗ ಸಂಘಟನೆ ಹುಬ್ಬಳ್ಳಿಯಲ್ಲಿ ಕಳೆದ 24 ವರ್ಷಗಳಿಂದ ಸರ್ವಧರ್ಮ ಉಪನಯನ ಹಾಗೂ ಸಾಮೂಹಿಕ ವಿವಾಹಗಳನ್ನು ನಡೆಸುತ್ತಾ ಬಂದಿದ್ದು, ಹುಬ್ಬಳ್ಳಿಯ ಗೋಕುಲ್ ರಸ್ತೆಯ ಅಕ್ಷಯ್ ಪಾರ್ಕ್ ಸಂತೆ ಮೈದಾನದಲ್ಲಿ 36 ಉಪನಯನಗಳು ಹಾಗೂ 17 ವಿವಾಹಗಳು ಹುಬ್ಬಳ್ಳಿಯ ಎರಡೆತ್ತಿನ ಮಠದ ಸ್ವಾಮಿಗಳ ಸಮ್ಮುಖದಲ್ಲಿ ನಡೆದವು .

ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಕೃಷ್ಣ ಗಂಡ ಗಳೇಕರ್ ನೇತೃತ್ವದಲ್ಲಿ ಪ್ರತಿವರ್ಷ ಉಪನಯನ ಹಾಗೂ ಮದುವೆಗಳು ಅಚ್ಚುಕಟ್ಟಾಗಿ ನಡೆಯುತ್ತಾ ಬಂದಿದೆ. ಇಂತಹ ಸಮಾಜಮುಖಿ ಕೆಲಸ ಮಾಡುವುದರ ಮೂಲಕ ಎಲ್ಲರ ಬಾಳಲ್ಲಿ ಬೆಳಕುನ್ನು ಚೆಲ್ಲಿದ್ದಾರೆ. ದುಂದು ವೆಚ್ಚಗಳಿಗೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮಾತನಾಡಿ, ನವಯುಗ ನವಯುಗ ಸಂಘಟನೆ ಕೃಷ್ಣ ಗಂಡ ಗಾಳಿಕರ್ ಮುಂದಾಳತ್ವದಲ್ಲಿ ಇಂತಹ ಜನಪರ ಒಳ್ಳೆಯ ಕೆಲಸ ಮಾಡಿದ್ದು ಶ್ಲಾಘನೀಯ ಎಂದರು. ಬಿಜೆಪಿ ಮುಖಂಡ ಲಿಂಗರಾಜ್ ಪಾಟೀಲ್, ಜಯತೀರ್ಥ ಕಟ್ಟಿ ಸಿದ್ದು , ಮೊಗಲಿ ಶೆಟ್ಟರ್, ಸುಭಾಸ್ ಸಿಂಗ್ ಜಮಾದಾರ್, ಆನಂದ್ ಗುರುಸ್ವಾಮಿ, ಸುಬ್ರಮಣ್ಯಂ ಶಿರಕೋಳ , ಪ್ರಕಾಶ ಬಾಪನಾ ತೋಟಪ್ಪ ನಿಡಗುಂದಿ, ರವಿ ನಾಯಕ, ಸೀಮಾ ರಮೇಶ್ ಮಾದಪ್ಪನವರ್, ರಾಜು ಕಾಳಿ, ಸಂತೋಷ ವರ್ಣೇಕರ್, ನಾಗರಾಜ ಕಲಾಲ್, ಮುಕುಂದ ಗುಗ್ಗರಿ, ರವಿ ಬಂಕಾಪುರ್, ನಾರಾಯಣ ಗಂಡಗಾಳಿಕರ್, ರವೀಂದ್ರ ಎಲಕಾನ, ಭೀಮಣ್ಣ ಗಂಡ ಗಾಳಿ ಕರ್, ಸಂಗೀತ ಬದ್ದಿ, ರೇಖಾ ಸರ್ಜನ್, ಅನುರಾಧ ಚಿಲ್ಲಾಳ, ಪ್ರವೀಣ ಪವಾರ್, ಪ್ರಶಾಂತ ಹಾವಣಗಿ ಪಾಟೀಲ್ ಮೊದಲಾದವರಿದ್ದರು.

ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ

◆ **ನವಲಗುಂದ:** ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವವನ್ನು ತಾಲೂಕು ಆಡಳಿತ ನವಲಗುಂದ ವತಿಯಿಂದ ಭಾನುವಾರ ಜರುಗಿತು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಸುಧೀರ ಸಾವಕಾರ ಅವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಮಹಾಸಾಧ್ವಿ ಮಲ್ಲಮ್ಮ ನವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸುಖಿ ಕುಟುಂಬಿಗಳಾದಾಗ ಮಾತ್ರ ಜಯಂತಿ ಅರ್ಥಪೂರ್ಣವಾಗುತ್ತದೆ. ಪೂಜ್ಯನೀಯ ಸ್ಥಾನವನ್ನು ಹೊಂದಿದ ಶಿವಶರಣೆ ಮಲ್ಲಮ್ಮನವರ ಸರ್ವ ಸಮಾಜದ ಮಾರ್ಗದರ್ಶಕಿಯಾಗಿದ್ದಾರೆ ಎಂದರು.

ರಡ್ಡಿ ಸಮಾಜದ ಅಧ್ಯಕ್ಷ ಗೋವಿಂದರಡ್ಡಿ ವೆಂಕರಡ್ಡಿ ನಡುವಿನಮನಿ ಮಾತನಾಡಿ, ಹೇಮರೆಡ್ಡಿ ಮಲ್ಲಮ್ಮ ಜಾತಿಗಳನ್ನು ಮೀರಿದ ಸಾಧ್ವಿ, ಹೆಣ್ಣುಕುಲದ ಶಕ್ತಿ. ಮಾದರಿ ಮಹಿಳೆ. ಜೀವನದ ಮೇಲಿನ ಅವಳ ಶ್ರದ್ಧೆ ಸಾಮಾಜಿಕ ಕಳಕಳಿ, ಭಕ್ತಿಯನ್ನು ಕಂಡು ಸಾಕ್ಷಾತ್ ಶಿವನೇ ಮರಳಾಗಿದ್ದುಂಟು. ಹೀಗಾಗಿ ಮಲ್ಲಮ್ಮನನ್ನು ಒಂದು ಜಾತಿಗೆ, ಧರ್ಮಕ್ಕೆ ಸೀಮಿತವಾಗಿಲ್ಲ. ಎಲ್ಲ ಜಾತಿ-ಧರ್ಮಿಯರ ಆದರ್ಶ ವಿಶೇಷವಾಗಿ ಹೆಣ್ಣು ಸಂಕುಲಕ್ಕೆ ದಾರಿದೀಪ, ಜೀವನದಲ್ಲಿ ಹೇಳಿಕೊಳ್ಳಲೂ ಆಗದಷ್ಟು ಕಷ್ಟಗಳನ್ನು ಅನುಭವಿಸಿದರೂ ಅವುಗಳನ್ನು ಸಂತೋಷದಿಂದ ಸ್ವೀಕರಿಸಿ ಸಮಾಜಕ್ಕೆ ಮಾದರಿಯಾಗಿ ಜೀವನ ನಡೆಸಿದರು ಅವರ ಆದರ್ಶಗಳು ಸರ್ವಕಾಲಿಕ ಎಂದರು.

ಈ ವೇಳೆ ಜಿಲ್ಲಾ ಕೆಡಿಪಿ ಸದಸ್ಯ ಆರ್.ಎಚ್. ಕೋನರಡ್ಡಿ, ಪಿ.ವಿ. ಚವಣ್ಣವರ, ಎಚ್. ಎನ್. ನಿಂಗರಡ್ಡಿ, ಶಿವಾನಂದ ಚಿಕ್ಕನರಗುಂದ, ಬಾಲರಡ್ಡಿ ಕರಮಳ್ಳಿ, ಎಂ.ಡಿ. ಕರಮಳ್ಳಿ,

ಸಮಾಜದ ಪದಾಧಿಕಾರಿಗಳು, ಸರ್ವ ಸದಸ್ಯರು, ಸಮಾಜದ ಪ್ರಮುಖರು, ತಾಲೂಕು ಮಟ್ಟದ ಅಧಿಕಾರಿಗಳು, ತಹಶೀಲ್ದಾರ್ ಕಾರ್ಯಾಲಯದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಹಾಗೂ ಮಾಧ್ಯಮ ಮಿತ್ರರು ಉಪಸ್ಥಿತರಿದ್ದರು.



ತಾಯಿಯೇ ನಮ್ಮ ನೈಜ ದೇವರು



◆ **ಧಾರವಾಡ:** ಪ್ರತಿಯೊಬ್ಬರಿಗೂ ತಾಯಿಯೇ ನೈಜ ದೇವರು. ಅವಳ ನಿಸ್ವಾರ್ಥ ಜೀವನ, ತೋರುವ ಪ್ರೀತಿ, ತ್ಯಾಗಕ್ಕೆ ಬೆಲೆಕಟ್ಟಲು ಅಸಾಧ್ಯ ಎಂದು ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಕಲಾಶಕ್ತಿ ಫೌಂಡೇಶನ್ ನಗರದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಸಭಾಂಗಣದಲ್ಲಿ ಹಮ್ಮಿಕೊಂಡ ವಿಶ್ವ ತಾಯಂದಿರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಅವರು, ತಾಯಿಗೆ ಗೌರವ ಕೊಡಬೇಕು. ಮಕ್ಕಳಿಗೆ ಸಂಸ್ಕಾರ ನೀಡಬೇಕು. ಈ ಕೆಲಸ ಕಲಾಶಕ್ತಿ ಫೌಂಡೇಶನ್ ಮಾಡುತ್ತಿದೆ. ಮಕ್ಕಳಿಗೆ ಬೇಸಿಗೆ ಶಿಬಿರ ಕೇವಲ ಪಠ್ಯ ಮಾತ್ರವಲ್ಲ ಚಿತ್ರಕಲೆ, ಸಂಗೀತದ ಜತೆ ವ್ಯಕ್ತಿತ್ವ ರೂಪಿಸಿಲಿದೆ. ಮಕ್ಕಳಿಗೆ ಮೊಬೈಲ್ ಚಟ ಬಿಡಿಸಲು ಹೇಳಿದರು.

ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಮಕ್ಕಳ ಮನಸು ತುಂಬಾ ಮೃದು. ಚಿಕ್ಕ ವಯಸ್ಸಿನಲ್ಲಿ ಉತ್ತಮ ಹವ್ಯಾಸ ಕಲಿಸಬೇಕು. ಮನೆಯೇ ಮೊದಲ ಪಾಠ ಶಾಲೆ. ಹೀಗಾಗಿ ಮಕ್ಕಳಿಗೆ ಸಂಸ್ಕಾರ ಕಲಿಸಬೇಕು ಎಂದರು. ಸಾಹಿತಿ ಮಾರ್ತಂಡಪ್ಪ ಕತ್ತಿ ಅಧ್ಯಕ್ಷತೆ ವಹಿಸಿದ್ದರು. ಶೀಲಾ ಅಂಚಟಗೇರಿ, ಅನ್ನಪೂರ್ಣ ಪಾಟೀಲ, ಮಲ್ಲನಗೌಡ ಪಾಟೀಲ, ಶ್ರೀನಿವಾಸ ಇಂಚೂರ, ಅಮೃತಾ ಪಾಟೀಲ, ರತ್ನಾ ಪಾಟೀಲ ಸೇರಿದಂತೆ ಅನೇಕರು ಇದ್ದರು.

ಚಕ್ಕಡಿ ರಸ್ತೆಗಳ ಕಾಮಗಾರಿ ವೀಕ್ಷಣೆ

◆ **ನವಲಗುಂದ:** ತಾಲೂಕಿನ ಶಿರೂರ ಗ್ರಾಮದ ರೈತರು ಮತ್ತು ಗ್ರಾಮಸ್ಥರ ಬಹುದಿನಗಳ ಕನಸಾಗಿದ್ದ ಶಿರೂರ - ಉಳ್ಳಿಗೇರಿ, ಶಿರೂರ - ಸವದತ್ತಿ ಹಾಗೂ ಶಿರೂರ - ಹಂಚಿನಾಳ ಚಕ್ಕಡಿ ರಸ್ತೆಗಳ ಕಾಮಗಾರಿಯನ್ನು ಶಾಸಕ ಎನ್. ಎಚ್. ಕೋನರಡ್ಡಿ ಶನಿವಾರ ಗ್ರಾಮಸ್ಥರೊಂದಿಗೆ ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮೀಣ ಭಾಗದ ಅಭಿವೃದ್ಧಿಗೆ ರಸ್ತೆ ಸಂಪರ್ಕವೇ ಜೀವನಾಡಿ. ವಿಶೇಷವಾಗಿ ರೈತರ ಸಂಚಾರ, ಕೃಷಿ ಚಟುವಟಿಕೆಗಳು ಹಾಗೂ ಗ್ರಾಮಗಳ ನಡುವೆ ಸುಗಮ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಈ ರಸ್ತೆಗಳು ಮಹತ್ವದ ಪಾತ್ರ ವಹಿಸಲಿವೆ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ರೈತ ಮುಖಂಡರಾದ ಮಲ್ಲಿಕಾರ್ಜುನಗೌಡ ಬಾಳನಗೌಡ್ರ, ಅರ್ಜುನಗೌಡ ಬಾಳನಗೌಡ್ರ, ಮೈಲಾರಗೌಡ ಬಾಳನಗೌಡ್ರ, ಮಾಂತೇಶಗೌಡ ಬಾಳನಗೌಡ್ರ, ಶಂಕರಗೌಡ ರಾಯನಗೌಡ್ರ, ಬಸಯ್ಯ ಶಿರಹಟ್ಟಿಮಠ, ದ್ಯಾಮಣ್ಣ ಮಡಿವಾಳರ, ಪಕೀರಪ್ಪ ಲದ್ದಿಗಟ್ಟಿ, ಪ್ರಕಾಶ್ ಕೆಂಗೇರಿ ಸೇರಿದಂತೆ ಗ್ರಾಮದ ಹಿರಿಯರು, ಯುವ ಮಿತ್ರರು ಉಪಸ್ಥಿತರಿದ್ದರು.



ಸಾಹಿತ್ಯದಲ್ಲಿ ವಚನ ಪರಂಪರೆ ವಿಶೇಷ



◆ **ಧಾರವಾಡ:** ನಗರದ ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಶನಿವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಂಶೋಧಕ ಡಾ. ವೀರಣ್ಣ ರಾಜೂರ ಅವರಿಗೆ 2026ನೇ ಸಾಲಿನ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ನಿರ್ದೇಶಕ ಪ್ರೊ. ಬಸವರಾಜ ಕಲ್ಗುಡಿ ಮಾತನಾಡಿ, ವಚನ ಪರಂಪರೆ ಕನ್ನಡ ಸಾಹಿತ್ಯದಲ್ಲಿ ವಿಶೇಷತೆ ಪಡೆದಿದೆ ಎಂದರು.

ಪ್ರಶಸ್ತಿ ಸ್ವೀಕರಿಸಿದ ಡಾ.ವೀರಣ್ಣ ರಾಜೂರ ಮಾತನಾಡಿ, ಬಸವಶ್ರೀ ಪ್ರಶಸ್ತಿಯು ಬಯಸದೆ ಬಂದ ಭಾಗ್ಯ. ಕವಿವಿಯ ಅರಿವು ಗುರು ಮತ್ತು ಬಸವಶ್ರೀ ಪ್ರಶಸ್ತಿ ಬರಲು ಡಾ.ಎಂ.ಎಂ.ಕಲಬುರ್ಗಿ, ಡಾ.ಆರ್.ಸಿ.ಹಿರೇಮಠ ಕೃಪಾಶೀರ್ವಾದ ಕಾರಣ ಎಂದರು. ಸಾನ್ನಿಧ್ಯ ವಹಿಸಿದ್ದ ಮುರುಘಾಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಬಸವೇಶ್ವರರು ಸಕಲ ಜ್ಞಾನಿಗಳು. ಇಂತಹ ಮಹಾನ್ ಮಾನವತಾವಾದಿ ಹೆಸರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಬಸವಶ್ರೀ ಪ್ರಶಸ್ತಿ ನೀಡುತ್ತಿರುವುದಕ್ಕೆ ಅಭಿಮಾನ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ. ಎಂ.ಎಂ.ಖಾನ್ ಮಾತನಾಡಿ, ಬಸವೇಶ್ವರರ ತತ್ವಗಳ ಆಧಾರದ ಮೇಲೆ ಸಮಾಜಮುಖಿ ಕೆಲಸ ಮಾಡಲು ಪಣ ತೊಡಬೇಕು. ಬಸವೇಶ್ವರರ ವಿಚಾರಧಾರೆ ಚರ್ಚೆ ಕವಿವಿ ಆಚೆಗೂ ನಡೆಯಬೇಕು ಎಂದರು. ಕವಿವಿ ಪ್ರಭಾರ ಕುಲಪತಿ ಪ್ರೊ. ಎ.ಎಚ್.ಅಗಡಿ, ಬಸವ ಪೀಠದ ಸಂಯೋಜಕ ಡಾ.ನಿಜಲಿಂಗಪ್ಪ ಮಟ್ಟಿಹಾಳ, ಪ್ರೊ. ಸಿ.ಎಂ.ಕುಂದಗೋಳ, ಸಿಂಡಿಕೇಟ್ ಸದಸ್ಯ ರಾಬರ್ಟ ದದ್ದಾಪುರಿ, ಶ್ಯಾಮ ಮಲ್ಲನಗೌಡರ, ಮಹೇಶ ಹುಲ್ಲಣ್ಣವರ ಅನೇಕರು ಇದ್ದರು.

ಹುದ್ದೆಗಳ ಭರ್ತಿಗೆ ಆಗ್ರಹಿಸಿ ಮನವಿ


◆ **ಧಾರವಾಡ:** 56 ಸಾವಿರ ಹುದ್ದೆಗಳ ಭರ್ತಿಗೆ ತಕ್ಷಣವೇ ಅಧಿಸೂಚನೆ ಹೊರಡಿಸಲು ಮತ್ತು ಕೆಪಿಎಸ್‌ಸಿ ಸ್ವಚ್ಛತೆಗಾಗಿ ಪಿ.ಸಿ.ಹೋಟಾ ಸಮಿತಿ ವರದಿ ಜಾರಿಗೆ ಆಗ್ರಹಿಸಿ ಉದ್ಯೋಗಾಕಾಂಕ್ಷಿ ಹೋರಾಟ ಸಮಿತಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಪಾರದರ್ಶಕ ನೇಮಕಾತಿಗೆ ಹೋರಾಟ ನಡೆಸುತ್ತ ಬಂದರೂ ಈ ಸರ್ಕಾರಗಳು ಮಾತ್ರ ಜಾಣ ಕುರುಡತನ ಪ್ರದರ್ಶನ ಮಾಡುತ್ತಿವೆ ಎಂದು ಹೋರಾಟ ಸಮಿತಿ ಆರೋಪ ಮಾಡಿದೆ. ಐದು ತಿಂಗಳು ಕಳೆದರೂ ನೇಮಕ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿಲ್ಲ ಎಂದು ದೂರಲಾಗಿದೆ. ಇಷ್ಟು ದಿನಗಳು ಪರಿಶಿಷ್ಟ ಜಾತಿ ಮೀಸಲಾತಿ ಸಮಸ್ಯೆ ನೆಪದಡಿ ಈ ನೇಮಕಾತಿ ಮುಂದೂಡುತ್ತಿದ್ದ ಸರ್ಕಾರಗಳು, ಇದೀಗ ಸಮಸ್ಯೆ ಇತ್ಯರ್ಥಗೊಂಡರೂ ತಮ್ಮ ಬೇಡಿಕೆ ಈಡೇರಿಸುತ್ತಿಲ್ಲ. ಹೀಗಾಗಿ ಸರ್ಕಾರ ಪುನಃ ವಿಶ್ವಾಸ ಕಳೆದುಕೊಂಡಿವೆ ಎಂದು ಆಪಾದಿಸಿದೆ.

ಉದ್ಯೋಗಾಕಾಂಕ್ಷಿಗಳು ಪುನಃ ಬೀದಿಗೆ ಇಳುವ ಮುನ್ನ 56 ಸಾವಿರ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಬೇಕು. ಕೆಪಿಎಸ್‌ಇಯಲ್ಲಿ ನಡೆಯುವ ವ್ಯಾಪಕ ಭ್ರಷ್ಟಾಚಾರದ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿವೆ.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ರಾಜ್ಯ ಸಹ ಸಂಚಾಲಕ ಭವಾನಿ ಶಂಕರ ಗೌಡ, ಜಿಲ್ಲಾ ಸಂಚಾಲಕ ವೀರೇಶ ನರೇಗಲ್ಲ, ಅಮೃತ ಕೊಂಡಿಕೊಪ್ಪ, ಹನುಮನಗೌಡ ದಾಸಿಗೌಡರ, ಯಲ್ಲಪ್ಪ ದೊರೆ, ಹನುಮಂತ ಅನೇಕರು ಇದ್ದರು.





ರಫೇಲ್ ಝೇಂಕಾರ, ಪಾಕ್‌ನಲ್ಲಿ ನಡುಕ

ಸಿಂದೂರ ಪ್ರತಿದಾಳಿಯಲ್ಲಿ ದಸ್ಸಾಲ್ಟ್ ರಾಫೆಲ್ ಯುದ್ಧ ವಿಮಾನವು ಪ್ರಮುಖ ಪಾತ್ರ ವಹಿಸಿತ್ತು. 2020ರಲ್ಲಿ ಫ್ರಾನ್ಸ್‌ನಿಂದ ಭಾರತ ಮೊದಲ ಹಂತದಲ್ಲಿ 36 ರಾಫೆಲ್ ಯುದ್ಧ ವಿಮಾನಗಳನ್ನು ಖರೀದಿಸಿತ್ತು. ಇದರಿಂದಾಗಿ ರಾಫೆಲ್ ಫೈಟರ್ ಜೆಟ್‌ಗಳು ನಿರ್ಣಾಯಕ ಪಾತ್ರ ವಹಿಸಿದ್ದವು. ರಾಫೆಲ್ ಖರೀದಿಸುವ ಕೇಂದ್ರ ಸರ್ಕಾರದ ಸಮಯೋಚಿತ ನಿರ್ಧಾರದಿಂದಾಗಿ ಪಾಕಿಸ್ತಾನಕ್ಕೆ ಪಾಠ ಕಲಿಸಲು ಸಾಧ್ಯವಾಯಿತು. 2025ರ ಏ.28ರಂದು ಭಾರತ ಇನ್ನೊಂದು ಒಪ್ಪಂದ ಮಾಡಿಕೊಂಡಿದ್ದು, ಭಾರತೀಯ ಯುದ್ಧನೌಕೆಗಳಲ್ಲಿ ನಿಯೋಜಿಸಲು 26 ರಾಫೆಲ್-ಮರೈನ್ ಯುದ್ಧ ವಿಮಾನಗಳನ್ನು ಖರೀದಿಸಲಿದೆ. 2027ರ ವೇಳೆಗೆ ಭಾರತದ ರಾಫೆಲ್‌ಗಳ ಸಂಖ್ಯೆ 62ಕ್ಕೇರಲಿದೆ.

- ನಿಖರ ದಾಳಿಗಾಗಿ ಸ್ಕಾಲ್ಪ್, ಹ್ಯಾಮರ್ ಕ್ಷಿಪಣಿ ಬಳಕೆ
- ಒಂದೇ ಸಮಯದಲ್ಲಿ ವಾಯು ಮತ್ತು ಭೂಪ್ರದೇಶದಲ್ಲಿ ಯುದ್ಧ ಸಾಮರ್ಥ್ಯ
- ಅತ್ಯಾಧುನಿಕ ಎಇಎಸ್ಎ ರಡಾರ್‌ನಿಂದ ದೂರದಿಂದಲೇ ಶತ್ರುವಿನ ಪತ್ತೆ
- ಹಲವು ಗುರಿಗಳನ್ನು ಪತ್ತೆಹಚ್ಚಿ ಖಚಿತ ಹೊಡೆಯಬಲ್ಲ ಶಕ್ತಿ
- ಶತ್ರು ರಡಾರ್‌ಗಳಿಗೆ ಜ್ಯಾಮಿಂಗ್ ಮೂಲಕ ಹುಚ್ಚು ಹಿಡಿಸಬಲ್ಲ ಸ್ಪೆಕ್ಟ್ರಾ ತಂತ್ರಜ್ಞಾನ
- ಸ್ವಯಂ ಸಂರಕ್ಷಣಾ ಸಾಮರ್ಥ್ಯ
- ಸೂಪರ್‌ಸೋನಿಕ್ ವೇಗದಲ್ಲಿ ಝೇಂಕರಿಸುತ್ತ ಸಂಚಾರ

ರಕ್ತ ಸಿಂದೂರ: ದೇಶದ ಆಧುನಿಕ ಶಸ್ತ್ರಾಭ್ಯಾಸ!

ದೇಶದ ಮೊದಲ ರಕ್ಷಣಾ ಕವಚ ವಾಯು ರಕ್ಷಣಾ ವ್ಯವಸ್ಥೆ ಅತ್ಯಾಧುನಿಕ ಯುದ್ಧ ವಿಮಾನ, ಡ್ರೋನ್, ಕ್ಷಿಪಣಿಗಳ ಬಳಕೆ

ಸಿಂದೂರ ದಾಳಿಗೆ ಇಲಿಗಳಂತೆ ಬಿಲ ಸೇರಿದ್ದ ಪಾಕ್ ಉಗ್ರರು

100ಕ್ಕೂ ಅಧಿಕ ಉಗ್ರರು, 64 ಪಾಕ್ ಸೈನಿಕರು ಸಾವು



ಮುರಲಿ ಕೃಷ್ಣ ಭಟ್

ಭಾರತೀಯ ಸೈನ್ಯವು 2025ರ ಮೇ 7ರಂದು ಮಧ್ಯರಾತ್ರಿ ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿತು. 2025ರ ಏ.22ರಂದು ನಡೆದ ಪಹಲ್ಗಾಮ್ ಹತ್ಯಾಕಾಂಡವು ಈ ಧೈರ್ಯಶಾಲಿ ಕ್ರಮಕ್ಕೆ ಪ್ರೇರಣೆಯಾಯಿತು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಆಯ್ದ 9 ಪ್ರದೇಶಗಳಲ್ಲಿನ ಭಯೋತ್ಪಾದಕ ಅಡಗುದಾಣಗಳ ಮೇಲೆ ಭಾರತೀಯ ವಾಯುಪಡೆಯು ನಿರಂತರ ವೈಮಾನಿಕ ದಾಳಿಗಳನ್ನು ನಡೆಸಿದ್ದು, 100ಕ್ಕೂ ಅಧಿಕ ಉಗ್ರರು ಹತರಾಗಿದ್ದರು. ಇಂತಹ ಪರಿಣಾಮಕಾರಿ ದಾಳಿಗಳನ್ನು ನಡೆಸಲು ಹೇಗೆ ಸಾಧ್ಯವಾಯಿತು?

ಭಾರತೀಯ ಸಶಸ್ತ್ರಪಡೆಗಳು ತಮ್ಮ ಆಧುನಿಕ ಯುದ್ಧ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸಿದ್ದು, ವಿವಿಧ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿದವು. ಭಾರತೀಯ ವಾಯುಪಡೆಯು ರಫೇಲ್ ಯುದ್ಧವಿಮಾನಗಳಿಂದ ಹಾರಿಸಲಾದ ಸ್ಕಾಲ್ಪ್ ಕ್ಷಿಪಣಿಗಳು ಮತ್ತು ಹ್ಯಾಮರ್ ನಂತಹ ಅತಿ ತೀವ್ರತೆಯ ಬಾಂಬ್ ಗಳನ್ನು ಬಳಸಿತು. ಹೆಚ್ಚು ದೂರವ್ಯಾಪ್ತಿಯ ಡ್ರೋನ್‌ಗಳು ಮತ್ತು ನಾಗಾಸ್ತ್ರ-1ನಂತಹ ಗುರಿಯ ಮೇಲೆ ತಂಗಿ (ಲೊಯಿಟರಿಂಗ್ ಮ್ಯೂನಿಷನ್‌ಗಳು) ನಿಖರ ದಾಳಿಗಳಿಗೆ ಮತ್ತು ಆಧುನಿಕ ಯುದ್ಧಕ್ಕೆ ನೆರವಾದವು. ಭಾರತೀಯ ಭೂಪಡೆಯು ಮೀಡಿಯಂ ಮಶೀನ್ ಗನ್‌ಗಳು, ಟ್ಯಾಂಕ್ ನಿರೋಧಕ ಗನ್‌ಗಳು ಮತ್ತು ಮಾರ್ಟಾರ್ ಗನ್‌ಗಳನ್ನು ಬಳಸಿದ್ದು, ಆಕಾಶದೀಪ್ ರಡಾರ್ ವಾಯು ರಕ್ಷಣಾ ವ್ಯವಸ್ಥೆಗೆ ಬೆಂಬಲ ನೀಡಿತ್ತು. ಭಾರತೀಯ ನೌಕಾಪಡೆಯು ಐಎನ್‌ಎಸ್ ವಿಕ್ರಾಂತ್ ನೇತೃತ್ವದ ಕ್ಯಾರಿಯರ್ ಯುದ್ಧನೌಕೆಗಳ ಗುಂಪಿನ ಮೂಲಕ ಸಮುದ್ರ ಪ್ರದೇಶಗಳನ್ನು ರಕ್ಷಿಸಿತು. ಐಎನ್‌ಎಸ್ ವಿಕ್ರಾಂತ್‌ನಿಂದ ಮಿಗ್-29ಕೆ ಯುದ್ಧವಿಮಾನಗಳನ್ನು ಹಾರಿಸಲಾಯಿತು, ವಿಶಾಖಪಟ್ಟಣಂ ವರ್ಗದ ಡೆಸ್ಟ್ರಾಯರ್ ಮತ್ತು ತಲ್ವಾರ್ ವರ್ಗದ ಫ್ರಿಗೇಟ್ ಯುದ್ಧ ನೌಕೆಗಳು ಸಿಂದೂರ ಕಾರ್ಯಾಚರಣೆಯಲ್ಲಿ ಸೇನೆಗೆ ಸಹಾಯ ಮಾಡಿದ್ದವು.

ಆಪರೇಷನ್ ಸಿಂದೂರದಲ್ಲಿ ಸಶಸ್ತ್ರಪಡೆಗಳು ನಾಶಗೈದ 9 ಭಯೋತ್ಪಾದಕ ಶಿಬಿರಗಳಲ್ಲಿ, ಲೀಪಾ ಕಣಿವೆಯ ಪಾಕಿಸ್ತಾನಿ ಸೇನಾ ಮೂಲಸೌಕರ್ಯವೂ ಸೇರಿದೆ. ಭಾರತದ ಅಧಿಕಾರಿಗಳ ಅಂದಾಜಿನ ಪ್ರಕಾರ, ಹಾನಿಗೊಳಗಾದ ಪ್ರದೇಶಗಳಲ್ಲಿ ಮರುನಿರ್ಮಾಣಕ್ಕೆ ಪಾಕ್ 8ರಿಂದ 12 ತಿಂಗಳುಗಳ ಸಮಯ ತೆಗೆದುಕೊಂಡಿದೆ. ಅಷ್ಟೊಂದು ಘಾತಕ ದಾಳಿಯನ್ನು ಭಾರತೀಯ ಸಶಸ್ತ್ರಪಡೆಗಳು ನಡೆಸಿವೆ. ನಾಲ್ಕು ದಶಕಗಳಿಂದ ಪಾಕ್ ಗಡಿಯಾಚೆಗಿನ ಭಯೋತ್ಪಾದನೆ ಮೂಲಕ ಭಾರತವನ್ನು ಕೆಣಕುತ್ತಲೇ ಇದ್ದರೂ ನರೇಂದ್ರ ಮೋದಿ ಪ್ರಧಾನಿ ಆಗುವವರೆಗೆ ಭಾರತವು ಇಂತಹದ್ದೊಂದು ಪ್ರತಿದಾಳಿ ನೀಡಿರಲಿಲ್ಲ. ಹಾಗಾಗಿ ಪಾಕ್ ನಡೆಸುತ್ತಲೇ ಬಂದ ಗಡಿಯಾಚೆಗಿನ ಭಯೋತ್ಪಾದನೆಗೆ ಸರಿಯಾದ ಸಿಂಹಸ್ವಪ್ನ ಪ್ರತಿಕ್ರಿಯೆ ನೀಡಲೇಬೇಕು ಎಂಬ ಮನೋಭಾವ ಪ್ರಧಾನಿ, ಸೈನಿಕರಷ್ಟೇ ಅಲ್ಲದೆ ಪ್ರತಿಯೊಬ್ಬ ಭಾರತೀಯ ಬೇಡಿಕೆಯಾಗಿತ್ತು. ಅಲ್ಲದೆ, ಪಹಲ್ಗಾಮ್ ದಾಳಿ ಬಳಿಕ ಪ್ರತಿಯೊಬ್ಬ ಭಾರತೀಯನ ರಕ್ತ ಕೊತ ಕೊತ ಕುದಿದಿದ್ದು, ಪ್ರತೀಕಾರದ ಕೂಗು ಹೆಚ್ಚಾಗಿತ್ತು. ಇದರಿಂದ ಗಡಿಯಾಚೆಗಿನ ಭಯೋತ್ಪಾದನೆಗೊಂದು ವಿರಾಮ ಹಾಕಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಮಹತ್ವದ ಸಿಂದೂರ ಕಾರ್ಯಾಚರಣೆ ನಡೆಸಿತ್ತು. ಇದು ಮಾನಸಿಕವಾಗಿ ಪಾಕ್ ಭಯೋತ್ಪಾದಕರನ್ನು ಕುಗ್ಗಿಸಿದ್ದು, ಅವರು ಬೆಕ್ಕು-ಇಲಿ ಆಟದಂತೆ ಮರೆಯಲ್ಲಿ ಇದ್ದುಕೊಂಡು ದಾಳಿಗೆ ಪ್ರಯತ್ನಿಸುತ್ತಿದ್ದರು. ಆದರೆ ಸಶಸ್ತ್ರಪಡೆಗಳ ನಿಖರ ದಾಳಿಗೆ ಉಗ್ರರ ಅಡಗುದಾಣಗಳೇ ಧ್ವಂಸಗೊಂಡವು. ಪಾಕ್ ಸರ್ಕಾರವು ಭಯೋತ್ಪಾದಕರ ಅಂತ್ಯ ಸಂಸ್ಕಾರವನ್ನೂ ನಡೆಸಿತ್ತು.

ಸಿಂದೂರದಲ್ಲಿ ಬ್ರಹ್ಮೋಸ್ ಪಾತ್ರ

ಸಿಂದೂರ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಸೇನಾನೆಲೆಗಳು, ವಾಯುನೆಲೆಗಳ ಮೇಲೆ ಭಾರತದಿಂದಲೇ ದೂರದ ನಿಖರ ಅತಿ ವೇಗದ ದಾಳಿ ನಡೆಸಲು ಇಂಡೋ-ರಷ್ಯಾ ಜಂಟಿ ಉತ್ಪಾದನೆಯ ಬ್ರಹ್ಮೋಸ್ ಕ್ಷಿಪಣಿಗಳನ್ನು ಬಳಸಲಾಗಿತ್ತು. ಪಾಕಿಸ್ತಾನದ 12 ವಾಯುನೆಲೆ ಮೇಲೆ ಬ್ರಹ್ಮೋಸ್ ಸೂಪರ್‌ಸೋನಿಕ್ ವೇಗದಲ್ಲಿ ದಾಳಿ ನಡೆಸಿದ್ದು, ಅವುಗಳು ಸಂಪೂರ್ಣ ಧ್ವಂಸಗೊಂಡಿದ್ದವು. ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದೊಳಗಿನ ಭಯೋತ್ಪಾದಕ ಅಡಗುದಾಣಗಳ ಮೇಲೆ ಬ್ರಹ್ಮೋಸ್ ದಾಳಿ ನಡೆಸಲಾಗಿತ್ತು. ಅಂತಾರಾಷ್ಟ್ರೀಯ ಗಡಿಯನ್ನು ದಾಟದೆಯೇ ಭಯೋತ್ಪಾದಕ ಮೂಲಸೌಕರ್ಯಗಳನ್ನು ಧ್ವಂಸಗೊಳಿಸಲಾಗಿತ್ತು.

ಬ್ರಹ್ಮೋಸ್ ವಿಶೇಷತೆಗಳು

- ಇದು ಶಬ್ದಕ್ಕಿಂತಲೂ ವೇಗದಲ್ಲಿ ದಾಳಿ ಮಾಡಬಲ್ಲ ಕ್ಷಿಪಣಿ
- ಪ್ರತಿ ಗಂಟೆಗೆ 3,430ರಿಂದ 3,675 ಕಿ.ಮೀ. ಸೂಪರ್ ಸೋನಿಕ್ ದಾಳಿ
- ದೂರವ್ಯಾಪ್ತಿ 290ರಿಂದ, 400-500 ಕಿ.ಮೀ. ಸಾಮರ್ಥ್ಯ
- ಸ್ಫೋಟಕದ ಭಾರ 200ರಿಂದ 300 ಕೆ.ಜಿ.
- ಯುದ್ಧನೌಕೆಗಳಲ್ಲೂ ಬ್ರಹ್ಮೋಸ್ ಬಳಕೆ



ಸ್ಕಾಲ್ಪ್ ಕ್ಷಿಪಣಿ

ಇದೊಂದು ಕ್ರೂಸ್ ಕ್ಷಿಪಣಿಯಾಗಿದೆ. ಅಂದರೆ ಫೈಟರ್‌ಜೆಟ್ ಗಳಲ್ಲಿ ಬಳಸಲಾಗುವ ಸಣ್ಣ ಕ್ಷಿಪಣಿಯಾಗಿದ್ದು, 250ರಿಂದ 500 ಕಿ.ಮೀ. ದೂರವ್ಯಾಪ್ತಿಯನ್ನು ಹೊಂದಿದೆ. ಅತ್ಯಂತ ನಿಖರ ದಾಳಿ ದೂರದಿಂದಲೇ ದಾಳಿ ಮಾಡಬಲ್ಲದು. ಹೆಚ್ಚು ದೂರದ ಗುರಿಗಳಿಗಾಗಿ ಇದನ್ನು ಬಳಕೆ ಮಾಡಲಾಗುತ್ತದೆ.

ಹ್ಯಾಮರ್ ಬಾಂಬ್

ಇದು ಕ್ಷಿಪಣಿಯೋ ಅಥವಾ ಸಾಮಾನ್ಯ ಬಾಂಬ್‌ನಂತಲ್ಲ, ಇದೊಂದು ಮಾರ್ಗದರ್ಶನ ಆಧಾರಿತ ಬಾಂಬ್ ಆಗಿದೆ. ಜಿಪಿಎಸ್-ಐಎನ್‌ಎಸ್ ತಂತ್ರಜ್ಞಾನದಿಂದ ಮಾರ್ಗದರ್ಶನ ಪಡೆದುಕೊಂಡು ದಾಳಿ ನಡೆಸುತ್ತದೆ. 250ರಿಂದ 500 ಕೆ.ಜಿ. ಭಾರ ಇರುತ್ತದೆ. ಇದರ ದಾಳಿ ದೂರವ್ಯಾಪ್ತಿ 50ರಿಂದ 70 ಕಿ.ಮೀ. ಆಗಿದೆ.

ವಾಯು ರಕ್ಷಣಾ ಸಾಮರ್ಥ್ಯ: ತಂತ್ರಜ್ಞಾನವೇ ಮೊದಲ ರಕ್ಷಾಕವಚ!

ರಡಾರ್‌ಗಳು, ನಿಯಂತ್ರಣ ಕೇಂದ್ರಗಳು, ತೋಪುದಳ (ಆರ್ಟಿಲರಿ) ಹಾಗೂ ವಿಮಾನ ಅಥವಾ ಡ್ರೋನ್ ಆಧಾರಿತ ಮತ್ತು ಭೂ-ಆಧಾರಿತ ಕ್ಷಿಪಣಿಗಳ ಸಂಪರ್ಕಜಾಲದಿಂದ ಕಣ್ಗಾವಲು ನಡೆಸುವ ಮೂಲಕ ವಾಯು ರಕ್ಷಣಾ ವ್ಯವಸ್ಥೆಯು ಅಪಾಯಗಳನ್ನು ಪತ್ತೆಹಚ್ಚಿ ಅವುಗಳನ್ನು ನಿಷ್ಕ್ರಿಯಗೊಳಿಸುತ್ತವೆ. ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆ ಸಂಪನ್ಮೂಲಗಳನ್ನು ಒಗ್ಗೂಡಿಸಿ ಅತ್ಯುತ್ತಮ ಸಮನ್ವಯದಿಂದ ವಾಯು ರಕ್ಷಣಾ ವ್ಯವಸ್ಥೆಗಳು ಸೇವೆ ಸಲ್ಲಿಸಿವೆ. ಈ ವ್ಯವಸ್ಥೆಗಳು ದಾಟಲಾಗದ ಭದ್ರತಾ ಗೋಡೆಯಂತೆ ಕಾರ್ಯನಿರ್ವಹಿಸಿ, ಪಾಕಿಸ್ತಾನದ ಪ್ರತಿದಾಳಿ ಪ್ರಯತ್ನಗಳನ್ನು ವಿಫಲಗೊಳಿಸಿವೆ. ಭಾರತೀಯ ವಾಯುಪಡೆಯ ಏಕೀಕೃತ ವಾಯು ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ (ಐಎಸಿಸಿಎಸ್) ಈ ಎಲ್ಲಾ ಘಟಕಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿ, ಆಧುನಿಕ ಯುದ್ಧಕ್ಕೆ ಅಗತ್ಯವಾದ ನೆಟ್-ಸೆಂಟ್ರಿಕ್ ಕಾರ್ಯಾಚರಣಾ ಸಾಮರ್ಥ್ಯವನ್ನು ಒದಗಿಸಿತು.

ಸಿಂದೂರದಲ್ಲಿ ಬಳಕೆಯಾದ ವಾಯು ರಕ್ಷಣಾ ವ್ಯವಸ್ಥೆ ಸಂಪನ್ಮೂಲಗಳು





1. ಆಕಾಶ್‌ದೀಪ್ ವಾಯು ರಕ್ಷಣಾ ವ್ಯವಸ್ಥೆ

- ವರ್ಗ: ಮಧ್ಯಮ ದೂರದ ನೆಲದಿಂದ-ಆಕಾಶ ಕ್ಷಿಪಣಿ ವ್ಯವಸ್ಥೆ (ಎಸ್‌ಎಎಂ)

ವಿಶೇಷತೆಗಳು

- ಶತ್ರು ಯುದ್ಧ ವಿಮಾನ, ಡ್ರೋನ್ ಮತ್ತು ಕ್ಷಿಪಣಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ
- ರಡಾರ್ ಆಧಾರಿತ ಕಣ್ಗಾವಲು ಮತ್ತು ಗುರಿ ಮೇಲಿನ ಹಿಡಿತ ಸಾಧಿಸುವ ಸಾಮರ್ಥ್ಯ
- ವೇಗವಾದ ನಿಯೋಜನೆ ಮತ್ತು ನಿಖರ ದಾಳಿ
- ಆಕಾಶ್ ಕ್ಷಿಪಣಿಗಳ ದಾಳಿ ದೂರವ್ಯಾಪ್ತಿ 25-30 ಕಿ.ಮೀ.
- ಆಕಾಶ್-ಎನ್‌ಜಿ ಕ್ಷಿಪಣಿಗಳ ದಾಳಿ ದೂರವ್ಯಾಪ್ತಿ 40-70 ಕಿ.ಮೀ.
- ಎಲೆಕ್ಟ್ರಾನಿಕ್ ಸ್ಕ್ಯಾನಿಂಗ್ ಮಾಡಬಲ್ಲ ರಾಜೇಂದ್ರ-3ಡಿ ರಡಾರ್

2. ಸಮಗ್ರ ವಾಯು ನಿಯಂತ್ರಣ ವ್ಯವಸ್ಥೆ (ಐಎಸಿಸಿಎಸ್)

- ವರ್ಗ: ಕಮಾಂಡ್, ನಿಯಂತ್ರಣ ಜಾಲ ವ್ಯವಸ್ಥೆ

ವಿಶೇಷತೆಗಳು

- ಎಲ್ಲಾ ವಾಯು ರಕ್ಷಣಾ ಘಟಕಗಳಿಗೂ ಒಂದೇ ಸಂಪರ್ಕಜಾಲ
- ನೈಜ-ಸಮಯದ ಚಿತ್ರಣ ಹಂಚಿಕೆ ಮತ್ತು ಸ್ವತಃ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ
- ನೆಟ್-ಕೇಂದ್ರೀಕೃತ ಯುದ್ಧಕ್ಕೆ ಮುಖ್ಯ ಆಧಾರ
- ಆಕಾಶ್, ಎಸ್-400 (ಸುದರ್ಶನ ಚಕ್ರ), ಬರಾಕ್-8 ಕ್ಷಿಪಣಿಗಳ ಬಳಕೆ

3. ರಡಾರ್‌ಗಳು

- ವರ್ಗ: ಪತ್ತೆಹಚ್ಚುವ ಮತ್ತು ಕಣ್ಗಾವಲು ವ್ಯವಸ್ಥೆ

ವಿಶೇಷತೆಗಳು

- ದೂರದಲ್ಲಿರುವ ಗುರಿಗಳನ್ನು ಪತ್ತೆಹಚ್ಚುವುದು
- ಡ್ರೋನ್‌ಗಳು, ಕ್ಷಿಪಣಿಗಳು ಅಥವಾ ಯುದ್ಧ ವಿಮಾನಗಳ ಕಣ್ಗಾವಲು ಸಾಮರ್ಥ್ಯ
- ಬಹು-ಪದರದ ರಕ್ಷಣೆಗೆ ಮೂಲಭೂತ ತಂತ್ರಜ್ಞಾನ

4. ಭೂ-ಆಧಾರಿತ ವಾಯು ರಕ್ಷಣಾ ಕ್ಷಿಪಣಿಗಳು

- ವರ್ಗ: ಎಸ್‌ಎಎಂ ವ್ಯವಸ್ಥೆ

ವಿಶೇಷತೆಗಳು

- ವಿವಿಧ ದೂರವ್ಯಾಪ್ತಿಯಲ್ಲಿ ಗುರಿ ಹೊಡೆದುರುಳಿಸುವ ಸಾಮರ್ಥ್ಯ
- ಕ್ಷಿಪಣಿ ಮತ್ತು ವಿಮಾನ ದಾಳಿಗಳನ್ನು ತಡೆಯುವ ಸಾಮರ್ಥ್ಯ
- ಹಲವು ಗುರಿಗಳನ್ನು ಒಂದೇ ಸಮಯದಲ್ಲಿ ನಿಷ್ಕ್ರಿಯಗೊಳಿಸುವ ಸಾಮರ್ಥ್ಯ
- ಆಕಾಶ್, ಎಸ್-400 ಟ್ರಯಂಫ್, ಬರಾಕ್-8, ಸ್ಪೈಡರ್, ಕ್ಯೂಆರ್‌ಎಸ್‌ಎಎಂ ಕ್ಷಿಪಣಿಗಳು

5. ವಿಮಾನ ಆಧಾರಿತ ವಾಯು ರಕ್ಷಣಾ ವ್ಯವಸ್ಥೆ

- ವರ್ಗ: ಯುದ್ಧ ವಿಮಾನಗಳ ಮೂಲಕ ರಕ್ಷಣಾ ಕಾರ್ಯ

ವಿಶೇಷತೆಗಳು

- ಶತ್ರು ವಿಮಾನಗಳನ್ನು ಮಧ್ಯದಲ್ಲೇ ತಡೆಯುವುದು (ಇಂಟರ್‌ಸೆಪ್ಷನ್)
- ವಾಯು ಪ್ರದೇಶದ ಪ್ರಾಬಲ್ಯ ಕಾಪಾಡುವುದು
- ವೇಗವಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯ
- ಅಸ್ತ್ರ, ಮಿಟಿಯೋರ್, ಎಂಐಸಿಎ, ಆರ್-73, ಆರ್-77 ಕ್ಷಿಪಣಿಗಳು
- ಅಸ್ತ್ರ ಕ್ಷಿಪಣಿಯ ದಾಳಿ ದೂರವ್ಯಾಪ್ತಿ 80ರಿಂದ 110 ಕಿ.ಮೀ.

6. ಸ್ಪೈಡರ್ ವಾಯು ರಕ್ಷಣಾ ವ್ಯವಸ್ಥೆ

ಇಸ್ರೇಲಿ ತಂತ್ರಜ್ಞಾನದ ಸಣ್ಣ ಮತ್ತು ಮಧ್ಯಮ ದೂರವ್ಯಾಪ್ತಿಗೆ ವೇಗವಾಗಿ ದಾಳಿ ನಡೆಸಬಲ್ಲ ವಾಯು ರಕ್ಷಣಾ ವ್ಯವಸ್ಥೆ ಇದಾಗಿದೆ. ಸ್ಪೈಡರ್ ಉಡಾವಣಾ ವಾಹನದಿಂದ ಪೈಥಾನ್-5 ಮತ್ತು ಡರ್ಬಿ ಖಂಡಾಂತರ ಕ್ಷಿಪಣಿಗಳನ್ನು ಬಳಸಿಕೊಂಡು ದಾಳಿ ನಡೆಸಲಾಗುತ್ತದೆ. ಎಲ್ಲಾ ಹವಾಮಾನದಲ್ಲಿ, ವೇಗದ ಪ್ರತಿಕ್ರಿಯೆ ನೀಡಬಲ್ಲ ಸ್ಪೈಡರ್‌ನಲ್ಲಿ ಎರಡು ವಿಧಗಳಿವೆ. ಸಣ್ಣ ದೂರವ್ಯಾಪ್ತಿಗೆ ಸ್ಪೈಡರ್-ಎಸ್‌ಆರ್ ಮತ್ತು ಮಧ್ಯಮ ದೂರವ್ಯಾಪ್ತಿಗೆ ಸ್ಪೈಡರ್-ಎಂಆರ್ ವಾಯು ರಕ್ಷಣಾ ವ್ಯವಸ್ಥೆಗಳನ್ನು ಬಳಸಲಾಗುತ್ತವೆ.

ಕ್ಷಿಪಣಿಗಳು: ಪೈಥಾನ್-5, ಡರ್ಬಿ

ದೂರವ್ಯಾಪ್ತಿ: ಪೈಥಾನ್ - 5.2 ಕಿ.ಮೀ., ಡರ್ಬಿ 50 ಕಿ.ಮೀ.

7. ಬರಾಕ್-8 ವಾಯು ರಕ್ಷಣಾ ಕ್ಷಿಪಣಿ

ಇದೊಂದು ಇಂಡೋ-ಇಸ್ರೇಲಿ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯಾಗಿದೆ. ಯಾವುದೇ ರೀತಿಯ ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳು, ಯುದ್ಧನೌಕೆ ನಿರೋಧಕ ಕ್ಷಿಪಣಿಗಳು ಅಥವಾ ಡ್ರೋನ್‌ಗಳು, ಖಂಡಾಂತರ ಮತ್ತು ಕ್ರೂಸ್ ಕ್ಷಿಪಣಿಗಳ ವಿರುದ್ಧ ವಾಯು ಪ್ರದೇಶ ಸುರಕ್ಷತೆಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿದೆ. 360 ಡಿಗ್ರಿ ಕಣ್ಗಾವಲು ಇದರ ಜತೆಗಿರಲಿದೆ.

ದೂರವ್ಯಾಪ್ತಿ: 0.5ರಿಂದ 100 ಕಿ.ಮೀ.

9. ಪೃಥ್ವಿ ವಾಯು ರಕ್ಷಣಾ ವ್ಯವಸ್ಥೆ

ವಾಯು ಪ್ರದೇಶದಲ್ಲಿ ಬರುವ ಯಾವುದೇ ಅಪಾಯಕಾರಿ ಖಂಡಾಂತರ ಕ್ಷಿಪಣಿಗಳನ್ನು ಹೊಡೆದು ಉರುಳಿಸಬಲ್ಲ ಸಾಮರ್ಥ್ಯ ಹೊಂದಿರುವ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆ ಇದಾಗಿದೆ. ಇದು 600 ಕಿ.ಮೀ. ದೂರದಿಂದಲೇ ಸುಮಾರು 200 ಗುರಿಗಳನ್ನು ಪತ್ತೆಹಚ್ಚುವ ಸಾಮರ್ಥ್ಯದೊಂದಿಗೆ ವಿನ್ಯಾಸಗೊಂಡಿದೆ.

ದೂರವ್ಯಾಪ್ತಿ: 300ರಿಂದ 2,000 ಕಿ.ಮೀ.

8. ತ್ವರಿತ ಪ್ರತಿಕ್ರಿಯೆ ವಾಯು ಕ್ಷಿಪಣಿ ವ್ಯವಸ್ಥೆ (ಕ್ಯೂಆರ್‌ಎಸ್‌ಎಎಂ)

ಇದು ಭಾರತ್ ಎಲೆಕ್ಟ್ರಾನಿಕ್ಸ್ ಲಿ. ಮತ್ತು ಭಾರತ್ ಡೈನಾಮಿಕ್ಸ್ ಲಿ. ರಕ್ಷಣಾ ಕಂಪನಿಗಳು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಜತೆಗೂಡಿ ಅಭಿವೃದ್ಧಿಪಡಿಸಿದ ತ್ವರಿತ ವೇಗದ ಪ್ರತಿಕ್ರಿಯೆ ನೀಡಬಲ್ಲ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯಾಗಿದೆ. ಶತ್ರು ದಾಳಿ ಪತ್ತೆಹಚ್ಚಬಲ್ಲ ಸಾಮರ್ಥ್ಯ, 360 ಡಿಗ್ರಿ ಕಣ್ಗಾವಲು ಮತ್ತು ಸ್ವಯಂಚಾಲಿತ ನಿಯಂತ್ರಣವನ್ನು ಹೊಂದಿದೆ.

ದೂರವ್ಯಾಪ್ತಿ: 3ರಿಂದ 30 ಕಿ.ಮೀ.

10. ಎಸ್-400 ಟ್ರಯಂಫ್ (ಸುದರ್ಶನ ಚಕ್ರ)

ಇದೊಂದು ಅತ್ಯಾಧುನಿಕ, ದೀರ್ಘ ದೂರವ್ಯಾಪ್ತಿ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಿದ ವಾಯು ರಕ್ಷಣಾ ವ್ಯವಸ್ಥೆಯಾಗಿದೆ. ರಷ್ಯಾದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸಿಂದೂರದಲ್ಲಿ ಬಳಕೆಯಾದ ಪ್ರಮುಖ ಯುದ್ಧೋಪಕರಣಗಳಲ್ಲಿ ಒಂದಾಗಿದೆ. ಒಂದೇ ಸಮಯದಲ್ಲಿ ನಾಲ್ಕು ವಿಧದ ಕ್ಷಿಪಣಿಗಳನ್ನು ಪ್ರಯೋಗಿಸಬಲ್ಲ ಸಾಮರ್ಥ್ಯವೇ ಇದರ ಪ್ರಮುಖ ವಿಶೇಷತೆಯಾಗಿದೆ. ಇದೇ ಕಾರಣದಿಂದ ಇದನ್ನು ಸುದರ್ಶನ ಚಕ್ರವೆಂಬ ಹೆಸರಿನಿಂದ ಕರೆಯಲಾಗುತ್ತದೆ.



ಸುದರ್ಶನ ಚಕ್ರದ ನಾಲ್ಕು ಕ್ಷಿಪಣಿಗಳು

- 40ಎನ್6 - ಅತ್ಯಂತ ದೂರದ ಗುರಿಗಳಿಗಾಗಿ ಬಳಕೆ, ಇದರ ದೂರವ್ಯಾಪ್ತಿ 400 ಕಿ.ಮೀ.
- 48ಎನ್6 - ವಿಮಾನಗಳು ಮತ್ತು ಕ್ರೂಸ್ ಕ್ಷಿಪಣಿಗಳನ್ನು ತಡೆಯಲು ಬಳಕೆ, ಇದರ ದೂರವ್ಯಾಪ್ತಿ 250 ಕಿ.ಮೀ.
- 9ಎಂ96ಇ2 ಹೆಚ್ಚು ನಿಖರ ಮತ್ತು ಚುರುಕು ಗುರಿಗಳಿಗೆ ಬಳಕೆ, ದೂರವ್ಯಾಪ್ತಿ 120 ಕಿ.ಮೀ.
- 9ಎಂ96ಇ ಕಡಿಮೆ ದೂರದ ಗುರಿಗಳ ಮೇಲೆ ಪ್ರಯೋಗ, ದೂರವ್ಯಾಪ್ತಿ 40-60 ಕಿ.ಮೀ.

ಎಸ್-400 ಒಂದೇ ಸಮಯದಲ್ಲಿ 100ಕ್ಕೂ ಹೆಚ್ಚು ಗುರಿಗಳನ್ನು ಪತ್ತೆಹಚ್ಚಬಲ್ಲ ವ್ಯವಸ್ಥೆಯಾಗಿದ್ದು, 30ಕ್ಕೂ ಅಧಿಕ ಗುರಿಗಳ ಮೇಲೆ ಒಮ್ಮೆಯೇ ನಿಖರ ದಾಳಿಯನ್ನು ನಡೆಸಬಲ್ಲದು. ಸ್ಪಷ್ಟವಾಗಿ ಗೋಚರಿಸದ ಗುರಿಗಳನ್ನು ಇದು ಪತ್ತೆಹಚ್ಚುತ್ತದೆ. ಭಾರತದ ವಾಯು ರಕ್ಷಣಾ ವ್ಯವಸ್ಥೆಯಲ್ಲಿ ಇದೊಂದು ಗೇಮ್ ಚೇಂಜರ್ ಆಗಿದ್ದು, ಇನ್ನೂ 6 ಇಂತಹ ಸುದರ್ಶನ ಚಕ್ರಗಳನ್ನು ರಷ್ಯಾದಿಂದ ಖರೀದಿಸಲು ಭಾರತ ಒಪ್ಪಂದ ಮಾಡಿದೆ.

ಸಿಂದೂರದಲ್ಲಿ ಬಳಕೆಯಾದ ಡ್ರೋನ್

1. **ನಾಗಾಸ್ತ್ರ-1:** ಟರ್ಕಿ ನಿರ್ಮಿತ ಕಮಿಕಾಝಿ ಡ್ರೋನ್‌ಗಳಿದ್ದಂತೆ ಇದು ಸ್ವದೇಶಿ ಕಮಿಕಾಝಿ ಡ್ರೋನ್ ಎನ್ನಬಹುದು. ಇದು ಗುರಿಯ ಮೇಲೆ ಇಳಿದು ಬಳಿಕ ನಿಖರ ದಾಳಿ ನಡೆಸುತ್ತದೆ. ಈ ಡ್ರೋನ್‌ನಲ್ಲಿ ಶೇ.75ಕ್ಕೂ ಹೆಚ್ಚು ಸ್ವದೇಶಿ ತಂತ್ರಜ್ಞಾನವನ್ನೇ ಬಳಸಲಾಗಿದೆ.
2. **ಹರೋಪ್ ಡ್ರೋನ್:** ಇದು ಇಸ್ರೇಲ್ ಅಭಿವೃದ್ಧಿಪಡಿಸಿದ ಕಮಿಕಾಝಿ ಮಾದರಿಯ ಇನ್ನೊಂದು ಡ್ರೋನ್. ಇದೂ ಸಹ ಗುರಿಯನ್ನು ಪತ್ತೆಹಚ್ಚಿ ಅದರ ಮೇಲೆ ತಂಗಿ ನಿಖರವಾಗಿ ಹೊಡೆಯುತ್ತದೆ. ಹೆಚ್ಚಾಗಿ ಶತ್ರು ರಡಾರ್‌ಗಳನ್ನು ಹೊಡೆದುರುಳಿಸಲು ಇದನ್ನು ಬಳಕೆ ಮಾಡಲಾಗುತ್ತದೆ.

ಮಿಂಚಿದ ಬೆಂಗಳೂರು ಡ್ರೋನ್

ಭಾರತದ ಅತ್ಯಾಧುನಿಕ ಯುದ್ಧ ಕಾರ್ಯಾಚರಣೆ ಸಿಂದೂರದಲ್ಲಿ ಬೆಂಗಳೂರಿನಲ್ಲಿ ನಿರ್ಮಾಣವಾದ ಸ್ಕೈಸ್ಟ್ರೈಕರ್ ಡ್ರೋನ್ ಬಳಸಲಾಗಿದೆ. ಬೆಂಗಳೂರಿನ ಆಲ್ಫಾ ವಿನ್ಯಾಸ ತಂತ್ರಜ್ಞಾನ ರಕ್ಷಣಾ ಕಂಪನಿ ಮತ್ತು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಜಂಟಿಯಾಗಿ ಅಭಿವೃದ್ಧಿಪಡಿಸಿದ ಈ ಡ್ರೋನ್ ಯಾವುದೇ ಶಬ್ದವಿಲ್ಲದೆ ಗುರಿಯನ್ನು ಹೊಡೆಯುತ್ತದೆ. ಇದು 5ರಿಂದ 10 ಕೆ.ಜಿ. ವಾರ್‌ಹೆಡ್ ಸಾಮರ್ಥ್ಯ ಹೊಂದಿದೆ.

ಡ್ರೋನ್: ಸ್ಕೈಸ್ಟ್ರೈಕರ್, ದೂರವ್ಯಾಪ್ತಿ: 100 ಕಿ.ಮೀ.




ವಿಶೇಷತೆಗಳು

- ಗುರಿ ಇರುವ ವಾಯು ಪ್ರದೇಶದಲ್ಲಿ ಸುಮಾರು 2 ಗಂಟೆಗಳ ಕಾಲ ಗಾಳಿಯಲ್ಲೇ ನಿಲ್ಲುವ ಸಾಮರ್ಥ್ಯ
- ಎಲೆಕ್ಟ್ರಿಕ್ ಪ್ರಪಲ್ಷನ್ ಕಾರಣಗಳಿಂದ ಶಬ್ದ ಕಡಿಮೆ
- ಅತ್ಯಾಧುನಿಕ ಕ್ಯಾಮೆರಾ ಮತ್ತು ನೈಜ-ಸಮಯದ ನಿಯಂತ್ರಣ ಮೂಲಕ ಅತ್ಯಂತ ನಿಖರ ದಾಳಿ
- ಆಪರೇಟರ್ ನೇರ ಗುರಿ ಆಯ್ಕೆ ಮಾಡಿ ಕಳುಹಿಸಬಹುದು

ಯುದ್ಧನೌಕೆಗಳ ನಿಯೋಜನೆ

ಒಂದೆಡೆ ಭಾರತ-ಪಾಕ್ ಸಂಘರ್ಷ ನಡೆಯುತ್ತಿದ್ದರೆ ಸಮುದ್ರ ಪ್ರದೇಶಗಳಲ್ಲಿ ಭಾರತೀಯ ನೌಕಾಪಡೆ ತನ್ನ ಪ್ರಮುಖ ಯುದ್ಧನೌಕೆಗಳನ್ನು ನಿಯೋಜಿಸಿತ್ತು. ಯುದ್ಧ ವಿಮಾನಗಳಿಂದ ಕೂಡಿದ ಐಎನ್‌ಎಸ್ ವಿಕ್ರಾಂತ್ ಜತೆ ಇನ್ನೂ 8ರಿಂದ 10 ಯುದ್ಧನೌಕೆಗಳ ನಿಯೋಜನೆ ಮಾಡಲಾಗಿತ್ತು. ಇವುಗಳಲ್ಲದೆ, 7 ಫ್ರಿಗೇಟ್ ಶಿವಾಲಿಕ್ ,ನೀಲಗಿರಿ ವರ್ಗದ ಯುದ್ಧನೌಕೆ ನಿಯೋಜನೆ ಆಗಿದ್ದವು. ಬ್ರಹ್ಮೋಸ್ ಕ್ಷಿಪಣಿ ಸಜ್ಜಿತ ಡೆಸ್ಟ್ರಾಯರ್‌ಗಳು ಮತ್ತು ಸುಮಾರು 6 ಜಲಾಂತರ್ಗಾಮಿ (ಸಬ್‌ಮರೀನ್)ಗಳಿದ್ದವು. ಒಟ್ಟಾರೆ 30ರಿಂದ 36 ಯುದ್ಧನೌಕೆ ಹಾಗೂ ಸಬ್‌ಮರೀನ್‌ಗಳನ್ನು ನೌಕಾಪಡೆ ನಿಯೋಜಿಸಿತ್ತು.

ರಾಮಬಾಣ



ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರ: ವಿಜಯೇಂದ್ರ

ಬೆಂಗಳೂರು: ಕರ್ನಾಟಕ ರಾಜ್ಯದಲ್ಲಿ ನಾವೆಲ್ಲ ಒಟ್ಟಾಗಿ, ಒಂದುಗೂಡಿ ಮುಂದಿನ ದಿನಗಳಲ್ಲಿ ಈ ಹಿಂದೂವಿರೋಧಿ-ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾಂಗ್ರೆಸ್ ಸರಕಾರವನ್ನು ಬುಡಸಮೇತ ಕಿತ್ತು ಹಾಕುವ ಕೆಲಸ ಮಾಡಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿದ ನರೇಂದ್ರ ಮೋದಿ ಅವರನ್ನು ಹೆಚ್‌ಎಎಲ್ ವಿಮಾನ ನಿಲ್ದಾಣದ ಬಳಿ ಅಭಿನಂದಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿಗೆ ಪಶ್ಚಿಮ ಬಂಗಾಲದಲ್ಲಿ ಮೊದಲ ಬಾರಿಗೆ ಐತಿಹಾಸಿಕ ಗೆಲುವು ಲಭಿಸಿದೆ. ಇದಕ್ಕಾಗಿ ಮೋದಿಜೀ ಅವರಿಗೆ ಅಭಿನಂದನೆಗಳು ಎಂದು ತಿಳಿಸಿದರು. ಪಶ್ಚಿಮ ಬಂಗಾಲದ ಮಾದರಿಯಲ್ಲಿ ಕರ್ನಾಟಕದಲ್ಲಿ ಪ್ರಧಾನಿಯವರ ಅವರ ಮಾರ್ಗದರ್ಶನದಲ್ಲಿ ಬಿಜೆಪಿಯನ್ನು ಬಹುಮತದೊಂದಿಗೆ ಅಧಿಕಾರಕ್ಕೆ ತರುವುದಾಗಿ ಅವರು ಮೋದಿಯವರಿಗೆ ವಾಗ್ದಾನ ಮಾಡಿದರು. ಪಶ್ಚಿಮ ಬಂಗಾಲದ ಜಯದ ರೂವಾರಿ ಮೋದಿಜೀ ಅವರನ್ನು ಅಭಿನಂದಿಸಿದರು.



> ಮೋದಿ ಅವರ ಆಡಳಿತದಲ್ಲಿ ಹಿಂದೂತ್ವಕ್ಕೆ ಹೆಚ್ಚಿನ ಬೆಲೆ ಬಂದಿದೆ. ಅವರ ಪರಿಶ್ರಮಕ್ಕೆ ನಾವೆಲ್ಲ ಋಣಿಯಾಗಿರಬೇಕು. ದೇಶ ಎಂದೂ ಕಾಣದ ಬಿಕ್ಕಟ್ಟನ್ನು ಇಂದು ಕಾಣ್ತಾ ಇದ್ದೇವೆ. ಇಂತಹುದರಲ್ಲಿ ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.
>
> ■ ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ

ರಾಜ್ಯದಲ್ಲಿ ಬಾಂಗ್ಲಾದವರು: ಆರ್.ಅಶೋಕ ಆರೋಪ



ಬೆಂಗಳೂರು: ಪಶ್ಚಿಮ ಬಂಗಾಲವು ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿತ್ತು. ಆ ಹೆಬ್ಬಾಗಿಲನ್ನು ಒಡೆದು ದೇಶವನ್ನು ರಕ್ಷಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಂಗಾಲವನ್ನು ಬಾಂಗ್ಲಾದೇಶದವರು ಗೇಟ್ ವೇ ಆಫ್ ಇಂಡಿಯಾ ರೀತಿ ಬಳಸುತ್ತಿದ್ದರು. ಪಶ್ಚಿಮ ಬಂಗಾಳಕ್ಕೆ ಬಂದು ದೇಶದ ವಿವಿಧೆಡೆ ಹರಡುತ್ತಿದ್ದರು. ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್ ನೀಡುತ್ತಿದ್ದ ಮಮತಾ ಬ್ಯಾನರ್ಜಿ ಅವರು, ಎಲ್ಲಾದರೂ ಹೋಗಿ ಎನ್ನುತ್ತಿದ್ದರು. ಕರ್ನಾಟಕದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಬಾಂಗ್ಲಾದವರಿದ್ದಾರೆ. ಬೆಂಗಳೂರಿನಲ್ಲಿ ಸಾಕಷ್ಟು ಬಾಂಗ್ಲಾ ಕ್ಯಾಂಪ್ ಗಳಿವೆ. ಇಲ್ಲಿನ ಕಾಂಗ್ರೆಸ್ ಸರ್ಕಾರಕ್ಕೆ ಬಾಂಗ್ಲಾದವರು ಬೇಕು. ಅವರು ಇವರಿಗೆ ನೆಂಟರ ರೀತಿ ಆಗಿದ್ದಾರೆ. ಯಾಕೆ ಎಂದರೆ ಅವರ ಓಟು ಬೇಕು. ಈ ಸರ್ಕಾರ ಓಟಿಗಾಗಿ ಕಣ್ಣು ಮುಚ್ಚಿಕೊಂಡು ಕೂತಿದೆ ಎಂದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

0 ಜಗತ್ತಿಗೆ ಈಗ ಬೇಕಿರುವುದು ಯುದ್ಧವಲ್ಲ, ಬುದ್ಧ - ಮಲ್ಲಿಕಾರ್ಜುನ ಖರ್ಗೆ

- ಇದು ಬುದ್ಧನ ಕಾಲವಲ್ಲ, ಯುದ್ಧದ ಕಾಲ. ಬುದ್ಧನಿರುತ್ತಿದ್ದರೂ ಆತನನ್ನು ಉಳಿಸಲು ಯುದ್ಧ ಮಾಡಬೇಕಾಗುತ್ತಿತ್ತು!

ದಿನ ಭವಿಷ್ಯ

ಮೇಷ ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಬೇರೆ ವಿಷಯದಲ್ಲಿ ಮನಸ್ಸು ತೊಡಗದು. ಅಪಥ್ಯ ಆಹಾರ ಸೇವಿಸಿ ಹೊಟ್ಟೆ ಕೆಡುವ ಸಾಧ್ಯತೆ.

ವೃಷಭ ಆಪ್ತ ಬಳಗದ ಜತೆ ಕಾಲ ಕಳೆಯುವ ಅವಕಾಶ. ಮಾತಿನಲ್ಲಿ ಕಟುಮಾತು ನುಸುಳದಂತೆ ನೋಡಿಕೊಳ್ಳಿ. ಸಂಬಂಧ ಕೆಡದಂತೆ ಎಚ್ಚರವಿರಲಿ.

ಮಿಥುನ ನೀವು ಇಚ್ಚಿಸದ ಬೆಳವಣಿಗೆ ನಡೆದೀತು. ಬೇಸರ ಪಡುತ್ತಾ ಕೂರದಿರಿ. ಪರಿಸ್ಥಿತಿಗೆ ಒಗ್ಗಿಕೊಳ್ಳುವುದು ಮುಖ್ಯ. ಧನವ್ಯಯ ಹೆಚ್ಚಲಿದೆ.

ಕಟಕ ದೈಹಿಕ ಕ್ಷಮತೆ ಕಾಯ್ದುಕೊಳ್ಳಿ. ಹೆಚ್ಚುವರಿ ಆದಾಯದ ದಾರಿ ಹೊಳೆಯಲಿದೆ. ಕೌಟುಂಬಿಕ ಉದ್ವಿಗ್ನತೆ ಶಮನಕ್ಕೆ ಗಮನ ಕೊಡಿ.

ಸಿಂಹ ಸಂಗಾತಿ ಜತೆ ಸಂಘರ್ಷ ನಡೆದೀತು. ಪರಸ್ಪರ ಗೌರವವಿದ್ದರೆ ಪ್ರೀತಿ ಬೆಳೆಯುವುದು. ಉದ್ಯೋಗದ ಅವಕಾಶ ಹೆಚ್ಚಲಿದೆ. ಧನವ್ಯಯ.

ಕನ್ಯಾ ಸಂಗಾತಿ ಜತೆ ಅಹಂ ಬಿಡಿ. ನಿಮ್ಮದೇ ನಿಲುವು ಹೇರಬೇಡಿ. ಸಂಬಂಧ ಕೆಡಬಹುದು. ಹಣ ಗಳಿಕೆ ಹೆಚ್ಚಳವಾಗದು. ಇದ್ದುದರಲ್ಲಿ ತೃಪ್ತಿಯಿರಲಿ.

ತುಲಾ ಬಿಡುವಿಲ್ಲದ ಕೆಲಸ, ಒತ್ತಡ, ಹೊಣೆ ಹೆಚ್ಚಳ. ನಿಮ್ಮ ಆಕಾಂಕ್ಷೆ ಈಡೇರಿಸಲು ಹೆಚ್ಚು ಪ್ರಯತ್ನ ಅಗತ್ಯ. ಕೌಟುಂಬಿಕ ಸಾಮರಸ್ಯ.

ವೃಶ್ಚಿಕ ಕುಟುಂಬದ ಜತೆ ಪ್ರಯಾಣ ಸಾಧ್ಯತೆ. ವೃತ್ತಿ ಕೆಲಸ ಮುಗಿಸಿರಿ. ನಿಮ್ಮ ಕಟು ಮಾತಿನಿಂದ ಆಪ್ತರು ದೂರವಾದಾರು. ಹೆಚ್ಚು ಹಣ ಗಳಿಕೆ ಅವಕಾಶ.

ಧನು ನಿಮ್ಮ ಮನಸ್ಥಿತಿ. ಇತರರ ಜತೆ ಹಂಚಿಕೊಳ್ಳಲು ಬಯಸುವಿರಿ. ಆದರೆ ಸೂಕ್ತ ಸ್ಪಂದನೆ ದೊರಕದು. ದಂಪತಿ ಮಧ್ಯೆ ವಿರಸ ಮೂಡೀತು. ಹೊಂದಾಣಿಕೆಯಿರಲಿ.

ಮಕರ ಇಂದು ಪ್ರಮುಖ ಬೆಳವಣಿಗೆ ಸಂಭವ. ಅನವಶ್ಯ ವಾಗ್ವಾದದಿಂದ ಆದಷ್ಟು ದೂರವಿರಿ. ಪ್ರತಿ ವಿಷಯದಲ್ಲಿ ಸಂಯಮ ಅತ್ಯವಶ್ಯ.

ಕುಂಭ ವೃತ್ತಿಯ ಒತ್ತಡ ಎಂದಿಗಿಂತ ಹೆಚ್ಚು. ಏಕಾಗ್ರತೆ ಕಳಕೊಳ್ಳದಿರಿ. ವೈವಾಹಿಕ ಬದುಕಲ್ಲಿ ಒಡಕು ಮೂಡದಂತೆ ಎಚ್ಚರಿಕೆ ವಹಿಸಿರಿ.

ಮೀನ ಏಕತಾನತೆಯ ಕೆಲಸ ನಿಮ್ಮ ಉತ್ಸಾಹ ಕುಗ್ಗಿಸುವುದು. ಮನಸ್ಸು ಉಲ್ಲಸಿತಗೊಳಿಸುವ ಹವ್ಯಾಸ ಬೆಳೆಸಿಕೊಳ್ಳಿ. ಬಂಧುಗಳ ಸಹಕಾರ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 3,7,5,2

ಜನಸೇವೆಯಲ್ಲಿ ಅಪಾರ ಕಾಳಜಿ ಮತ್ತು ಬದ್ಧತೆಯಿದ್ದ ವ್ಯಕ್ತಿ ಸುಧಾಕರ್
ಹುಟ್ಟೂರಲ್ಲಿ ಅಂತ್ಯಕ್ರಿಯೆ

ಚಿತ್ರದುರ್ಗ: ರಾಜ್ಯದ ಯೋಜನೆ ಮತ್ತು ಸಾಂಖಿಕ ಇಲಾಖೆ ಸಚಿವ ಡಿ. ಸುಧಾಕರ್ (65 ವರ್ಷ) ಅವರು ಭಾನುವಾರ ಬೆಳಗ್ಗೆ 3.15 ಕ್ಕೆ ನಿಧನರಾಗಿದ್ದಾರೆ. ಮೃತರು ಪತ್ನಿ ಹರ್ಷಿಣಿ ಸುಧಾಕರ್, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿ ದ್ದರು. ಆದರೆ ಚಿಕಿತ್ಸೆ ಫಲಿಸದೆ ಭಾನುವಾರ ನಿಧನರಾಗಿದ್ದಾರೆ.

ಹಿರಿಯೂರು ಕ್ಷೇತ್ರದ ಶಾಸಕರಾಗಿದ್ದು, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಆಗಿದ್ದರು. ಮೊಣಕಾಲು ಶಸ್ತ್ರಚಿಕಿತ್ಸೆಗೆಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು. ಬಳಿಕ ಅವರನ್ನು ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಐಸಿಯುನಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದ ಅವರ ಸುದೀರ್ಘ ಚಿಕಿತ್ಸೆಯ ಬಳಿಕವೂ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ.

ಅಂತ್ಯಕ್ರಿಯೆ: ಸಚಿವ ಸುಧಾಕರ್ ಅವರ ಪಾರ್ಥಿವ ಶರೀರವನ್ನು ಸೋಮವಾರ ಮಧ್ಯಾಹ್ನ 12 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಹಿರಿಯೂರಿನ ನೆಹರೂ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಚಳ್ಳಕೆರೆ ಯ ಸ್ವಗೃಹದಲ್ಲಿ ಪೂಜೆ ವಿಧಿ-ವಿಧಾನಗಳನ್ನು ನೆರವೇರಿಸಿ ಡಿ. ಸುಧಾಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಸೋಮವಾರ ಮೇ. 11 ರಂದು ಮಧ್ಯಾಹ್ನ 3ರಿಂದ 4 ಗಂಟೆಗೆ ಅಂತ್ಯಕ್ರಿಯೆ ವಿಧಿ-ವಿಧಾನಗಳು ನಡೆಯಲಿವೆ.

ಡಿ.ಸುಧಾಕರ್ ಅವರ ರಾಜಕೀಯ ಹಾದಿ



1961ರ ಮಾರ್ಚ್ 28ರಂದು ಜನಿಸಿದ ಡಿ.ಸುಧಾಕರ್ ಸಾಮಾನ್ಯ ಕುಟುಂಬ ಹಿನ್ನೆಲೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಂದವರು. ಸಹಕಾರ ಕ್ಷೇತ್ರದ ಮೂಲಕ ಜನಸೇವೆ ಆರಂಭಿಸಿದ ಅವರು, ಬಳಿಕ ಚಿತ್ರದುರ್ಗ ಜಿಲ್ಲೆಯ ಪ್ರಭಾವಿ ನಾಯಕರಾಗಿ ಬೆಳೆದರು. ಕಳೆದ ಎರಡು ದಶಕಗಳ ಕಾಲ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (DCC Bank) ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸಾವಿರಾರು ರೈತರು, ಮಹಿಳಾ ಸಂಘಗಳು ಹಾಗೂ ಬಡ ಕುಟುಂಬಗಳಿಗೆ ನೆರವಾದರು. ಸಹಕಾರ ಕ್ಷೇತ್ರದಲ್ಲಿ ಕಟ್ಟಿಕೊಂಡ ಜನಬೆಂಬಲವೇ ಅವರನ್ನು ಚುನಾವಣಾ ರಾಜಕೀಯಕ್ಕೆ ಕರೆತಂದಿತು. 2004ರಲ್ಲಿ ಕಾಂಗ್ರೆಸ್ ಪಕ್ಷದಿಂದ ಚಳ್ಳಕೆರೆ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ವಿಧಾನಸಭೆಗೆ ಪ್ರವೇಶಿಸಿದರು. ನಂತರ ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾದ ಕಾರಣ 2008ರಲ್ಲಿ ಹಿರಿಯೂರು ಕ್ಷೇತ್ರದ ಪಕ್ಷೇತರ ಶಾಸಕರಾಗಿ ಆಯ್ಕೆಯಾದರು. ಬಿಜೆಪಿ ನೇತೃತ್ವದ ಬಿಎಸ್‌ವೈ ಸಂಪುಟದಲ್ಲಿ ಸಮಾಜ ಕಲ್ಯಾಣ, ಮುಜರಾಯಿ ಇಲಾಖೆಯ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಬಂಧಿಖಾನೆ, ಯುವಜನಸೇವೆಯ ಸಚಿವರಾಗಿದ್ದರು. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. 2013ರಲ್ಲಿ ಪುನಃ ಕಾಂಗ್ರೆಸ್ ಪಕ್ಷಕ್ಕೆ ಮರಳಿ, ಹಿರಿಯೂರು ಕ್ಷೇತ್ರದಿಂದ ಜೆಡಿಎಸ್‌ನ ಎ. ಕೃಷ್ಣಪ್ಪ ವಿರುದ್ಧ ಗೆಲುವು ಸಾಧಿಸಿದ್ದರು. 2018ರಲ್ಲಿ ಹಿರಿಯೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಸೋಲು ಕಂಡಿದ್ದರು. 2023ರಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ, ಈಗ ಸಚಿವರಾಗಿ ಚಿತ್ರದುರ್ಗ ಜಿಲ್ಲಾ ಉಸ್ತುವಾರಿಯಾಗಿದ್ದರು. ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಬಿಜೆಪಿ ನಾಯಕರ ಸಂತಾಪ

ಬೆಂಗಳೂರು: ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್ ಅವರ ನಿಧನಕ್ಕೆ ಬಿಜೆಪಿ ನಾಯಕರು ಸಂತಾಪ ವ್ಯಕ್ತಪಡಿಸಿದ್ದಾರೆ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸುಧಾಕರ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ. ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸುಧಾಕರ್ ಅವರು ಗುಣಮುಖರಾಗುತ್ತಾರೆಂಬ ಪ್ರಾರ್ಥನೆ ಫಲಿಸಲಿಲ್ಲ. ಸಾರ್ವಜನಿಕ ಜೀವನದಲ್ಲಿ ಜನಪರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮದೇ ಆದ ಪ್ರಭಾವ ಬೆಳೆಸಿಕೊಂಡಿದ್ದರು. ಅವರ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಕರುಣಿಸಲಿ, ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸಾಂಖ್ಯಿಕ ಸಚಿವ ಸುಧಾಕರ್ ಇನ್ನಿಲ್ಲ

ಪುಟ ೧ರಿಂದ→ ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿದ್ದ ಸುಧಾಕರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಸಚಿವ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿಯಾಗಿದ್ದರು. ಮೃತ ಸುಧಾಕರ್ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಡಿ. ಸುಧಾಕರ್ ಗೌರವಾರ್ಥವಾಗಿ ಸೋಮವಾರ ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಕಚೇರಿಗಳಿಗೆ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೆ (ಅನುದಾನ ಪಡೆಯುವ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಸೇರಿದಂತೆ) ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳು ಒಳಗೊಂಡಂತೆ ಸಾರ್ವಜನಿಕ ರಜೆ ಘೋಷಿಸಿದ್ದು, ರಾಜ್ಯಾದ್ಯಂತ 3 ದಿನ ಶೋಕಾಚರಣೆ ಇರಲಿದೆ.

ಗಣ್ಯರ ಸಂತಾಪ

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಸೇರಿದಂತೆ ಸಚಿವರು, ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕರು ಸುಧಾಕರ್ ಅವರನ್ನು ಸ್ಮರಿಸಿ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟ: ಸಿದ್ದರಾಮಯ್ಯ

ಬೆಂಗಳೂರು: ಸಚಿವ ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ದೊಡ್ಡ ನಷ್ಟವುಂಟಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸದಾಶಿವ ನಗರದಲ್ಲಿರುವ ಸಚಿವ ಸುಧಾಕರ್ ಅವರ ನಿವಾಸದಲ್ಲಿ ಭಾನುವಾರ ಅಂತಿಮ ದರ್ಶನ ಪಡೆದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸುಧಾಕರ್ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಕುಟುಂಬದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು. ಎರಡನೇ ಬಾರಿಗೆ ಮಂತ್ರಿಯಾಗಿದ್ದ ಸುಧಾಕರ್ ಅವರು ಅತ್ಯಂತ ಜನಪ್ರಿಯ ವ್ಯಕ್ತಿ. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆ ನೀಡಿರುವ ಅವರು ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡ ಶಾಸಕರಾಗಿದ್ದರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದರು. ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾದ್ದರಿಂದ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು. ರೈತರ ಹಾಗೂ ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಜನಪ್ರಿಯ ವ್ಯಕ್ತಿಯಾಗಿದ್ದರು ಎಂದು ಸಿಎಂ ಹೇಳಿದರು.



ಗದ್ದುಗೆಯೇರಲು ಮತ್ತೆ ಎನ್ಡಿಎ ಸಜ್ಜು, ನಾಳೆ ಹಿಮಂತ ಪ್ರಮಾಣ

ಪುಟ ೧ರಿಂದ→ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧ ಆಯ್ಕೆಯಾದ ಬಳಿಕ ಹಿಮಂತ ಬಿಸ್ವಾ ಶರ್ಮಾ ಅವರು ಮೈತ್ರಿಕೂಟದ ನಾಯಕರೊಂದಿಗೆ ಲೋಕಭವನಕ್ಕೆ ತೆರಳಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಬಳಿಕ ರಾಜ್ಯಪಾಲರು ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಿದರು ಎಂದು ಲೋಕಭವನ ಪ್ರಕಟಣೆ ತಿಳಿಸಿದೆ.

ಮೇ 12ರಂದು ಗುವಾಹಟಿಯ ಖಾನಾಪಾರದಲ್ಲಿರುವ ವೆಟರ್ನರಿ ಕಾಲೇಜು ಮೈದಾನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವ ಸಾಧ್ಯತೆಯಿದೆ.

126 ಸದಸ್ಯರ ಅಸ್ಸಾಂ ವಿಧಾನಸಭೆಯಲ್ಲಿ ಬಿಜೆಪಿ 82 ಸ್ಥಾನಗಳನ್ನು ಗೆದ್ದಿದ್ದು, ಮೈತ್ರಿಕೂಟದ ಅಂಗಪಕ್ಷಗಳಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಸ್ಥಾನಗಳಲ್ಲಿ ಜಯ ಗಳಿಸಿವೆ. ಒಟ್ಟಾರೆ ಎನ್‌ಡಿಎ 102 ಸ್ಥಾನಗಳನ್ನು ಪಡೆದು ಭಾರೀ ಬಹುಮತ ಸಾಧಿಸಿದೆ.

2021ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾದ ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂನಲ್ಲಿ ಸತತ ಎರಡು ಅವಧಿಗೆ ಮುಖ್ಯಮಂತ್ರಿಯಾಗುತ್ತಿರುವ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಮಾತನಾಡಿ, ಪ್ರಧಾನಿ ಮೋದಿ ಅವರ ಅಭಿವೃದ್ಧಿ ಕಾರ್ಯಗಳಿಗೆ ಜನರು ಮತ್ತೊಮ್ಮೆ ಬೆಂಬಲ ಸೂಚಿಸಿರುವುದೇ ಈ ಫಲಿತಾಂಶ ಎಂದು ಹೇಳಿದರು. ಮುಂದಿನ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಅಸ್ಸಾಂನಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಚಿರತೆ ದಾಳಿ: ಬಾಲಕ ಸಾವು

ಪುಟ ೧ರಿಂದ→ ಭಾನುವಾರ ಬೆಳಗ್ಗೆ ನಾಗಮಲೆಗೆ ತೆರಳುವ ವೇಳೆ ಈ ಘಟನೆ ನಡೆದಿದೆ. ಚಿರತೆ ಬಾಲಕನ ಮೇಲೆ ಎರಗಿ ಬಹಳ ದೂರ ಎಳೆದೊಯ್ದಿದೆ. ಸುಮಾರು ಅರ್ಧ ತಾಸಿನ ಬಳಿಕ ಬಾಲಕನ ಮೃತದೇಹ ಕಾಡಿನೊಳಗೆ ಬಂಡೆಯ ಸಿಕ್ಕಲಿನಲ್ಲಿ ಪತ್ತೆಯಾಗಿದೆ. ಸುದ್ದಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಈ ಮೊದಲು ಭಕ್ತರು ನಾಗಮಲೆಗೆ ತೆರಳಲು ಅರಣ್ಯ ಇಲಾಖೆಯವರು ಬೆಳಗ್ಗೆ 7 ಗಂಟೆ ನಂತರ ಪ್ರವೇಶ ರಸೀತಿ ನೀಡುತ್ತಿದ್ದರು. ಆದರೆ ಭಾನುವಾರ 6 ಗಂಟೆಗೆ ರಸೀದಿ ನೀಡಿರುವುದೇ ಈ ದುರ್ಘಟನೆಗೆ ಕಾರಣವಾಗಿದೆ. ಬಾಲಕನ ಸಾವಿಗೆ ಅರಣ್ಯ ಇಲಾಖೆಯವರೇ ನೇರ ಹೊಣೆ ಎಂದು ಸಾರ್ವಜನಿಕರು ದೂರಿದ್ದಾರೆ.

ಕಾಮೆಡ್-ಕೆ ಪರೀಕ್ಷೆ ಸುಗಮ

ಬೆಂಗಳೂರು: ಕಾಮೆಡ್ -ಕೆ ಪರೀಕ್ಷೆಯು ಕರ್ನಾಟಕದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಪ್ರಮುಖ ಪ್ರವೇಶ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ. ಎರಡೂ ಪರೀಕ್ಷೆಗಳನ್ನು ಪ್ರತ್ಯೇಕ ಮೆರಿಟ್ ಪಟ್ಟಿಗಳೊಂದಿಗೆ ಒಂದೇ ಪರೀಕ್ಷೆಯ ರೂಪದಲ್ಲಿ ನಡೆಸಲಾಗಿದೆ. ಶೇ.85ರಷ್ಟು ಹಾಜರಾತಿ ದಾಖಲಾಗಿದೆ.

ಕರ್ನಾಟಕದ 150ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸುಮಾರು 20 ಸಾವಿರ ಸೀಟುಗಳಿಗೆ ಪ್ರವೇಶ ಪಡೆಯಲು ನಡೆಸಲಾಗುವ ಕಾಮೆಡ್ ಕೆ ಯುಜಿಇಟಿ -2026 ಹಾಗೂ ಯುನಿ ಗೇಜ್-2026 ಪ್ರವೇಶ ಪರೀಕ್ಷೆ, ಎರಡು ಅವಧಿಗಳಲ್ಲಿ ನಡೆದ ಈ ಪರೀಕ್ಷೆಯಲ್ಲಿ ದೇಶದ ವಿವಿಧ ಭಾಗದಿಂದ ಅಭ್ಯರ್ಥಿಗಳು ಭಾಗವಹಿಸಿದ್ದರು. ಒಟ್ಟು ಎರಡು ಅವಧಿಗಳಲ್ಲಿ ನಡೆದ ಈ ಆನ್‌ಲೈನ್ ಪರೀಕ್ಷೆಯು ಅತ್ಯಂತ ವ್ಯವಸ್ಥಿತವಾಗಿ ನಡೆದಿದ್ದು, ಮೊದಲ ಅಧಿವೇಶನದಲ್ಲಿ ದೇಶಾದ್ಯಂತ ಶೇ.84.47 ಹಾಜರಾತಿ ಮತ್ತು ಎರಡನೇ ಅಧಿವೇಶನದಲ್ಲಿ ದೇಶಾದ್ಯಂತ ಶೇ. 85.20 ಹಾಜರಾತಿ ದಾಖಲಾಗಿದೆ. ಉಳಿದಂತೆ ಮೊದಲ ಅಧಿವೇಶನದಲ್ಲಿ ಕರ್ನಾಟಕದಲ್ಲಿ ಶೇ.87.72, ಬೆಂಗಳೂರಿನಲ್ಲಿ ಶೇ.89.71, ಎರಡನೇ ಅಧಿವೇಶನದಲ್ಲಿ ಕರ್ನಾಟಕದಲ್ಲಿ ಶೇ.88.27 ಮತ್ತು ಬೆಂಗಳೂರಿನಲ್ಲಿ ಶೇ.89.46 ಹಾಜರಾತಿ ದಾಖಲಾಗಿದೆ.

ನಾಳೆ ಜಿಕೆವಿಕೆ ಘಟಿಕೋತ್ಸವ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯ 60ನೇ ಘಟಿಕೋತ್ಸವವನ್ನು ಮೇ 12ರಂದು ಬೆಳಗ್ಗೆ 11.30ಕ್ಕೆ ಜಿಕೆವಿಕೆ ಆವರಣ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೃಷಿ ಸಚಿವ ಚೆಲುವರಾಯಸ್ವಾಮಿ, ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾಜಿ ಅಧ್ಯಕ್ಷ ಡಾ.ಎಂ. ಜಗದೀಶ್ ಕುಮಾರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ: ಈ ಘಟಿಕೋತ್ಸವದಲ್ಲಿ ಒಟ್ಟು 1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದ್ದು, 2024-25ನೇ ಶೈಕ್ಷಣಿಕ ವರ್ಷದಲ್ಲಿ 747 ಪದವಿ, 260 ಸ್ನಾತಕೋತ್ತರ ಹಾಗೂ 108 ಡಾಕ್ಟರೇಟ್ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದಾರೆ. ಶೈಕ್ಷಣಿಕ ಸಾಧನೆಯಲ್ಲಿ ಮಿಂಚಿದ 55 ವಿದ್ಯಾರ್ಥಿಗಳಿಗೆ ಒಟ್ಟು 140 ಚಿನ್ನದ ಪದಕಗಳು ಮತ್ತು ಪ್ರಶಸ್ತಿ ಪತ್ರಗಳನ್ನು ಪ್ರದಾನ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಗೌರವ ಡಾಕ್ಟರೇಟ್

ಕೃಷಿ ಕ್ಷೇತ್ರದಲ್ಲಿ ಸೇವೆಗೈದ ಜಿ.ವಿ.ಕೆ ನಾಯ್ಡು, ಶ್ರೀಕಂಠ, ಎಚ್.ಕೆ ಹಾಗೂ ಅರವಿಂದ್ ಟಿ.ಎಂ. ರವರಿಗೆ ಕೃಷಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಲಾಗುವುದು.

ಸ್ನಾತಕೋತ್ತರ ಪದವಿ

ಸ್ನಾತಕೋತ್ತರ ವಿಭಾಗದಲ್ಲಿ ಒಟ್ಟು 68 ವಿದ್ಯಾರ್ಥಿಗಳು ತೇರ್ಗಡೆಹೊಂದಿದ್ದು, ಅತ್ಯುತ್ತಮ ಸಾಧನೆ ತೋರಿದ್ದಾರೆ. ಕೃಷಿ ಅರ್ಥಶಾಸ್ತ್ರ ವಿಭಾಗದ ಕೃಷ್ಣಪ್ರಿಯಾ ಆರ್. ಶೇ.96.11 ಅಂಕಗಳೊಂದಿಗೆ 8 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದು, ಕೃಷಿ ಸಂಶೋಧನೆ ಮತ್ತು ಆಡಳಿತ ಕ್ಷೇತ್ರದಲ್ಲಿ ಮುಂದಿನ ಸಾಧನೆಗೆ ಭರವಸೆ ಮೂಡಿಸಿದ್ದಾರೆ. ಪ್ರೇಮ್ ಕುಮಾರ್ ಕೆ.ಎಫ್ ಅವರಿಗೆ 15 ಚಿನ್ನದ ಪದಕ. (ಫೋಟೊ ಇದೆ- ಪ್ರೇಮ್ ಜಿಕೆವಿಕೆ) ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಪ್ರೇಮ್ ಕುಮಾರ್ ಕೆ.ಎಫ್. ಅವರು ಜಿಕೆವಿಕೆಯಲ್ಲಿ ಬಿಎಸ್‌ಸಿ (ಆನರ್ಸ್) ಕೃಷಿ ವಿಭಾಗದಲ್ಲಿ ಶೇ.91.02 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದು 15 ಚಿನ್ನದ ಪದಕಗಳನ್ನು ತನ್ನದಾಗಿಸಿಕೊಂಡಿದ್ದಾರೆ.

ಕಾಂಗ್ರೆಸ್‌ಗಿಲ್ಲ ನೈತಿಕತೆ: ಮೋದಿ

ಪುಟ ೧ರಿಂದ→ ಕೇರಳದಲ್ಲೂ ಆಡಳಿತದ ವಿಚಾರದಲ್ಲಿ ಸಮಸ್ಯೆ ಇದೆ ಎಂದ ಅವರು, ಹಿಮಾಚಲ ಪ್ರದೇಶದಲ್ಲಿ ಸರಕಾರಿ ನೌಕರರರಿಗೆ ವೇತನ ಕೊಡಲೂ ಸಾಧ್ಯವಾಗುತ್ತಿಲ್ಲ, ತೆಲಂಗಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಕಾಂಗ್ರೆಸ್ ಆಡಳಿತದಲ್ಲಿ ಖಜಾನೆ ಲೂಟಿ ಆಗುತ್ತಿದೆ. ಕಾಂಗ್ರೆಸ್ ಪ್ರಾದೇಶಿಕ ಪಕ್ಷವಾಗುತ್ತಿದೆ ಎಂದು ವಾಗ್ದಾಳಿ ಮಾಡಿದರು.

ಮಹಿಳೆಯರಿಗೆ ಕಾಂಗ್ರೆಸ್ ವಿಶ್ವಾಸದ್ರೋಹ

ಪುಟ ೧ರಿಂದ→ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗರ್‌ವಾಲ್, ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಶಾಸಕಿ ಮಂಜುಳಾ ಇದ್ದರು.

ಆತಂಕ ಮೂಡಿಸಿದ ಜಿಲೆಟಿನ್ ಕಡ್ಡಿ: ಓರ್ವ ಸೆರೆ

ಪುಟ ೧ರಿಂದ→ ಭಾನುವಾರ ಬೆಳಗ್ಗೆ ಪ್ರಧಾನಿ ಮೋದಿ ಎಚ್‌ಎಎಲ್ ಕಾರ್ಯಕ್ರಮ ಮುಗಿಸಿ, ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ತೆರಳುವ ಕಾರ್ಯಕ್ರಮವಿತ್ತು. ಈ ಮಾರ್ಗದ ಸಮೀಪದಲ್ಲೇ ಇರುವ ತಾತಗುಣಿ ಬಳಿ ರಸ್ತೆಯಿಂದ ಸುಮಾರು 40 ರಿಂದ 50 ಮೀಟರ್ ದೂರದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು.

ಬೆದರಿಕೆ ಕರೆಮಾಡಿದ್ದ ಆರೋಪಿಯ ವಶ: ಈ ಸ್ಫೋಟಕಗಳ ಪತ್ತೆಗೂ ಮುನ್ನ ಕೋರಮಂಗಲ ಪೊಲೀಸರಿಗೆ ಬೆದರಿಕೆ ಕರೆಯೊಂದು ಬಂದಿತ್ತು. ಎಚ್‌ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್ ಬಳಿ ಸ್ಫೋಟ ನಡೆಸುವುದಾಗಿ ವ್ಯಕ್ತಿಯೊಬ್ಬ ಎಚ್ಚರಿಕೆ ನೀಡಿದ್ದನು. ತಕ್ಷಣ ಕಾರ್ಯಾಚರಣೆ ನಡೆಸಿದ ಪೊಲೀಸರು, ಕರೆ ಮಾಡಿದ ಸುಮಾರು 40 ವರ್ಷ ವಯಸ್ಸಿನ ಕೋರಮಂಗಲ ನಿವಾಸಿ ಎನ್ನಲಾದ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಈತನೇ ಸ್ಫೋಟಕಗಳನ್ನು ಅಲ್ಲಿಟ್ಟಿದ್ದನೇ ಅಥವಾ ಕೇವಲ ಮಾಹಿತಿ ನೀಡಿದ್ದನೇ ಎಂಬ ಬಗ್ಗೆ ವಿಚಾರಣೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕನ್ನಡದಲ್ಲಿಯೇ ಭಾಷಣ ಆರಂಭಿಸಿದ ಮೋದಿ

ನಿಮಗೆಲ್ಲ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿದ ಪ್ರಧಾನಿಯವರು, ನಾನು ಕರ್ನಾಟಕಕ್ಕೆ ಬಹಳ ಬಾರಿ ಬಂದಿದ್ದೇನೆ. ವಿಮಾನನಿಲ್ದಾಣದಲ್ಲಿ ಆಯೋಜಿಸಿದ ದೊಡ್ಡ ಕಾರ್ಯಕ್ರಮವಿದು ಎಂದು ಮೆಚ್ಚುಗೆ ಸೂಚಿಸಿದರು. ಇಲ್ಲಿ ಕೇಸರಿಯಷ್ಟೇ ಕಾಣುತ್ತಿದೆ. ಬಿಜೆಪಿ ಕಾರ್ಯಕರ್ತರಷ್ಟೇ ಇಷ್ಟು ಬೇಗ ಇಂಥ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಬರಲು ಸಾಧ್ಯ ಎಂದರು. ಮಾತೆ ಅಣ್ಣಮ್ಮನಿಗೆ ಪ್ರಣಾಮಗಳು. ಕೆಂಪೇಗೌಡರಿಗೆ ನಮನಗಳು ಎಂದು ತಿಳಿಸಿದ ಅವರು, ಬಂಗಾಲದ ಬಿಜೆಪಿ ಗೆಲುವು ಕಾರ್ಯಕರ್ತರ ಶ್ರಮದ ಪರಿಣಾಮ ಎಂದು ವಿಶ್ಲೇಷಿಸಿದರು. ಬಂಗಾಲದಲ್ಲಿ ಮೊದಲ ಬಾರಿ ಬಿಜೆಪಿಗೆ ಇಷ್ಟು ದೊಡ್ಡ ಆಶೀರ್ವಾದ ಲಭಿಸಿದೆ. ಗುಜರಾತ್‌ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ದಾಖಲೆ ಗೆಲುವು ಲಭಿಸಿದೆ ಎಂದು ವಿವರಿಸಿದರು. ಇದು ಹೊಸ ಇತಿಹಾಸ ಬರೆಯುವ ಘಟನೆಗಳು ಎಂದು ಪ್ರಧಾನಿ ಮೋದಿಯವರು ವಿಶ್ಲೇಷಿಸಿದರು.

> ತಾತಗುಣಿ ಬಳಿ ಜಿಲೆಟಿನ್ ಕಡ್ಡಿಗಳು ಸಿಕ್ಕಿರುವುದು ದೃಢಪಟ್ಟಿದೆ. ಬಂಧಿತ ಆರೋಪಿಯೇ ಈ ಕೃತ್ಯ ಎಸಗಿದ್ದಾನೆಯೇ ಅಥವಾ ಇದರ ಹಿಂದೆ ಬೇರೆ ಜಾಲವಿದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಪ್ರಧಾನಿಯವರ ಕಾರ್ಯಕ್ರಮದ ಹಾದಿಯಲ್ಲಿ ಇಂತಹ ವಸ್ತುಗಳು ಪತ್ತೆಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.
>
> ■ ಎಸ್. ಗಿರೀಶ್, ಡಿಐಜಿ (ಕೇಂದ್ರ ವಲಯ)

> ಪ್ರಧಾನಮಂತ್ರಿ, ನರೇಂದ್ರ ಮೋದಿ ಜೀ ಅವರ ಶಬ್ದಕೋಶದಲ್ಲಿ ಅಸಾಧ್ಯ ಎಂಬ ಮಾತೇ ಇಲ್ಲ. ಪ್ರಧಾನಿ ಮೋದಿ ಅವರು ಪ್ರಚಾರಕ್ಕಾಗಿ ತೆರಳುವ ಸ್ಥಳದಲ್ಲಿ ಗೆಲುವು ಶತಸ್ಸಿದ್ಧ ಎಂಬುದು ದೇಶಕ್ಕೇ ಗೊತ್ತಾಗಿದೆ.
>
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ತ.ನಾಡಲ್ಲಿ ವಿಜಯ ಯುಗ ಆರಂಭ

ಪುಟ ೧ರಿಂದ→ 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಬಹುಮತಕ್ಕೆ ಅಗತ್ಯ ಸ್ಥಾನ ಗಳಿಸದಿದ್ದರೂ, ಕಾಂಗ್ರೆಸ್, ವಿಸಿಕೆ, ಸಿಪಿಐ, ಸಿಪಿಐ (ಎಂ) ಮತ್ತು ಐಯುಎಂಎಲ್ ಪಕ್ಷಗಳ ಬೆಂಬಲದೊಂದಿಗೆ ಒಟ್ಟು 120 ಶಾಸಕರ ಬಲದೊಂದಿಗೆ ಮ್ಯಾಜಿಕ್ ನಂಬರ್(118) ಪಡೆದಿದೆ.

ಮೊದಲ 3 ಆದೇಶ

ಅಧಿಕಾರ ವಹಿಸಿಕೊಂಡ ತಕ್ಷಣ ಮುಖ್ಯಮಂತ್ರಿ ವಿಜಯ್ ಮೂರು ಪ್ರಮುಖ ಆದೇಶಗಳಿಗೆ ಸಹಿ ಹಾಕಿದ್ದಾರೆ. ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವುದು, ಮಹಿಳೆಯರ ಸುರಕ್ಷತೆಗಾಗಿ ವಿಶೇಷ ಕಾರ್ಯಪಡೆ ರಚನೆ ಮತ್ತು ಮಾದಕದ್ರವ್ಯ ಪಿಡುಗು ತಡೆಗಟ್ಟಲು ಕಾರ್ಯಪಡೆ ರಚಿಸಲು ಮೊದಲ ಆದ್ಯತೆ ನೀಡಿದ್ದಾರೆ.

ರಾಷ್ಟ್ರೀಯ ಪಕ್ಷಗಳಿಗೆ ಸವಾಲು

ಆರು ದಶಕಗಳ ನಂತರ ಕಾಂಗ್ರೆಸ್ ಪಕ್ಷ ತಮಿಳುನಾಡಿನಲ್ಲಿ ಸರ್ಕಾರದ ಭಾಗವಾಗಿರುವುದು ಈ ಬಾರಿಯ ವಿಶೇಷ. ನಿರ್ಗಮಿತ ಡಿಎಂಕೆ ಸರ್ಕಾರ ರಾಜ್ಯದ ಮೇಲೆ 10 ಲಕ್ಷ ಕೋಟಿ ರೂ.ಗಳ ಸಾಲದ ಹೊರೆ ಹೊರಿಸಿದೆ ಎಂದು ವಿಜಯ್ ಆರೋಪಿಸಿದ್ದಾರೆ. ವಿಜಯ್ ಅವರ ಈ ರಾಜಕೀಯ ಏಳಿಗೆ, 2029ರ ಲೋಕಸಭಾ ಚುನಾವಣೆಯ ಮುನ್ನ ರಾಷ್ಟ್ರೀಯ ಪಕ್ಷಗಳ ಮೇಲೆ ಮಹತ್ವದ ಪ್ರಭಾವ ಬೀರುವ ನಿರೀಕ್ಷೆಯಿದೆ.

ವಿಜಯ್‌ಗೆ ಮೋದಿ ಶುಭ ಹಾರೈಕೆ

ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ತಿರು ಸಿ. ಜೋಸೆಫ್ ವಿಜಯ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಅವರ ಈ ಅಧಿಕಾರಾವಧಿಯು ಅತ್ಯುತ್ತಮವಾಗಿರಲಿ ಹಾಗೂ ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತೇನೆ. ತಮಿಳುನಾಡಿನ ಜನರ ಜೀವನಮಟ್ಟವನ್ನು ಸುಧಾರಿಸಲು ಮತ್ತು ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ತಮಿಳುನಾಡು ಸರ್ಕಾರದೊಂದಿಗೆ ನಿರಂತರವಾಗಿ ಪಾಲುದಾರಿಕೆಯಲ್ಲಿ ಕೆಲಸ ಮಾಡಲಿದೆ ಎಂದು ಪ್ರಧಾನಿ ಮೋದಿಯವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಬೇಕಾದಂತೆ ಬರೆಸಿದ ಸಾಹಿತ್ಯವೂ ಇದೆ



ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಚಿಂತಕರ ಅಭಿಮತ

ಶಿವಮೊಗ್ಗ: ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಸಾಹಿತ್ಯ ಇದ್ದಂತೆ ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವ ಸಾಹಿತ್ಯವೂ ಇತಿಹಾಸದಲ್ಲಿ ದಾಖಲಾಗಿದೆ ಎಂದು ಚಿಂತಕ ಹಾಗೂ ಅಂಕಣಕಾರ ರೋಹಿತ್ ಚಕ್ರತೀರ್ಥ ಹೇಳಿದರು.

ಅಭಿವ್ಯಕ್ತಿ ಟ್ರಸ್ಟ್ ನಗರದ ಕರ್ನಾಟಕ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಕಲೆ ಮತ್ತು ಸಾಹಿತ್ಯದಿಂದ ಸಾಮಾಜಿಕ ಸ್ವಾಸ್ಥ್ಯ ಕುರಿತು ಮಾತನಾಡಿ, ಸಾಹಿತ್ಯವನ್ನು ಹೀಗೆಯೇ ಬರೆಯಬೇಕೆಂದು ಬರಹಗಾರರ ಮೇಲೆ ಒತ್ತಡ ಹಾಕಿ ಬರೆಸುತ್ತಿದ್ದ ಕಾಲವೂ ಇತ್ತು. ಇದಕ್ಕೆ ಸಾಕಷ್ಟು ನಿದರ್ಶನಗಳು ನಮ್ಮ ಮುಂದಿವೆ ಎಂದರು.

1829ರಿಂದ ಚರ್ಚ್ ಮಿಷನರಿಗಳು ಭಾರತದಲ್ಲಿ ಆರಂಭವಾದವು. ಆಗಿನಿಂದಲೂ ಸಾಕಷ್ಟು ಸಾಹಿತ್ಯವನ್ನು ಬೇಕಾದಂತೆ ಬರೆಸಿಕೊಂಡು ಬರಲಾಗಿದೆ. ಅದಕ್ಕೆ ನಿದರ್ಶನವೆಂದರೆ 1829ರಲ್ಲಿ ಮಲಯಾಳಿಯಲ್ಲಿ ಬಂದ ಸರಸ್ವತಿ ವಿಜಯಂ ಕಾದಂಬರಿ. ಅದರಲ್ಲಿ ಮಹಿಳೆಯನ್ನು ತುಂಬಾ ಕಷ್ಟಪಡುವುದನ್ನು ಚಿತ್ರಿಸಲಾಗಿದೆ. ಆಕೆ ಮತಾಂತರವಾದ ಮೇಲೆ ಸುಖವಾಗಿದ್ದಳೆಂದು ಕೊನೆಯಲ್ಲಿ ಚಿತ್ರಿಸಲಾಗಿದೆ. ಇದು ದುಡ್ಡು ಕೊಟ್ಟು ಬರೆಸಿದ್ದ ಕಾದಂಬರಿ ಎಂದರು. ರಷ್ಯಾ, ಚೀನಾದಲ್ಲಿನ ಮಾರ್ಕ್ಸ್ ವಾದದ ಸಾಹಿತ್ಯ, ಭಾರತದಲ್ಲಿನ ನಕ್ಸಲಿಯರ ಸಾಹಿತ್ಯ, ಜರ್ಮನಿಯಲ್ಲಿ ಯಹೂದಿಗಳ ವಿರುದ್ಧ ಬಂದ ಸಾಹಿತ್ಯ, ಹೀಗೆ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಒಂದು ಸಿದ್ಧಾಂತರ ಪರವಾಗಿ ಬಂದ ಸಾಹಿತ್ಯ ಸಾಮಾಜಿಕ ಸ್ವಾಸ್ಥ್ಯ ಕೆಡಿಸಿವೆ ಎಂದರು.

ಸಹನಾ ವಿಜಯಕುಮಾರ್ ಮಾತನಾಡಿ, ಸ್ವಾಸ್ಥ್ಯ ಎನ್ನುವುದು ಆನಂದದ ಕಲ್ಪನೆಯಾಗಿದೆ. ಸಮಾಜ ಆನಂದವಾಗಿದ್ದಾಗ ಸ್ವಾಸ್ಥ್ಯವಾಗಿದೆ ಎನ್ನಲಾಗುತ್ತದೆ. ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಅಲೆಕ್ಸಾಂಡರ್ ಮೊದಲಾದವರ ಸಾಹಿತ್ಯದಲ್ಲಿಯೂ ಸ್ವಾಸ್ಥ್ಯದ ಕಲ್ಪನೆ ಬೇರೆಯಾಗಿತ್ತು ಎಂದರು.

ಸ್ವಾಸ್ಥ್ಯದಲ್ಲಿ ಆನಂದದ ಕಲ್ಪನೆ ಇಂದು ಹೋಗಿದೆ. ಕಾನೂನು ಪಾಲನೆ ಮಾಡಿದರೆ ಸಮಾಜದ ಸ್ವಾಸ್ಥ್ಯವಾಗಿರುತ್ತದೆ ಎಂಬ ಮನಸ್ಥಿತಿಗೆ ಬಂದಿದ್ದೇವೆ. ಹೀಗಾಗಿ ಕಾನೂನು ಪಾಲನೆಯಲ್ಲಿ ಸಮಾಜದ ಸ್ವಾಸ್ಥ್ಯವಿದೆ ಎಂದರು. ಎಂ.ಆರ್. ದತ್ತಾತ್ರಿ ಮಾತನಾಡಿ, ಮನುಷ್ಯ ಮನುಷ್ಯನನ್ನು ಕೊಲ್ಲದ ಸಮಾಜ ಹೆಚ್ಚು ಸ್ವಾಸ್ಥ್ಯವಾಗಿರುತ್ತದೆ. ಇದನ್ನು ಶಿಲಾಯುಗದಲ್ಲಿ ನಾವು ಕಾಣುತ್ತೇವೆ. ಆದರೆ ಅಕ್ಷರ ಕಲಿತಂತೆಲ್ಲಾ ಮನುಷ್ಯ ರಾಕ್ಷಸನಾಗಿರುವುದನ್ನು ಕಾಣುತ್ತೇವೆ. ನಮ್ಮ ಅಗತ್ಯಗಳು ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತಾ ಹೋದಂತಲ್ಲ ಸ್ವಾಸ್ಥ್ಯದ ಕಲ್ಪನೆಯೂ ಬೇರೆಯಾಗಿರುವುದನ್ನು ಗುರುತಿಸಬಹುದಾಗಿದೆ ಎಂದರು.

ಹಿರಿಯ ವಿದ್ವಾಂಸ ಡಾ. ಶಾಂತರಾಮ ಪ್ರಭು ಅವರಿಗೆ ಶಿವಮೊಗ್ಗ ಲಿಟ್‌ಫೆಸ್ಟ್ ವಾರ್ಷಿಕ ಪುರಸ್ಕಾರ ನೀಡಲಾಯಿತು. ಡಾ. ಅಜಕ್ಕಳ ಗಿರೀಶ್ ಭಟ್ ಸಮನ್ವಯಕಾರರಾಗಿದ್ದರು.

ಕುವೆಂಪು ಅವರದ್ದು ವರ್ಣನಾತ್ಮಕ ಕಾದಂಬರಿ



ಶಿವಮೊಗ್ಗ: ಕುವೆಂಪು ಅವರದ್ದು ವರ್ಣನಾತ್ಮಕ ಕಾದಂಬರಿ. ಕಲಾತ್ಮಕ, ವಿಚಾರ ಸೇರಿದ ಕಾದಂಬರಿ ಭೈರಪ್ಪನವರದ್ದು. ಅನಕೃ, ಕಾರಂತರ ಇಬ್ಬರ ಕಾದಂಬರಿಗಳಲ್ಲಿ ರಸ ಕಡಿಮೆ ಅಂತ ಭೈರಪ್ಪನವರ ಅಭಿಪ್ರಾಯ. ರಸ ಪ್ರಧಾನವಾದದ್ದು ಕಡಿಮೆಯಾಗುತ್ತಿತ್ತು ಎನ್ನಬಹುದೇನೋ ಎಂದು ಕಾದಂಬರಿಕಾರ ಡಾ. ಅಜಕ್ಕಳ ಗಿರೀಶ್ ಭಟ್ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಅಭಿವ್ಯಕ್ತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಶಿವಮೊಗ್ಗ ಸಾಹಿತ್ಯ ಹಬ್ಬದಲ್ಲಿ ಭಾನುವಾರ ಭೈರಪ್ಪನವರ ಸಾಹಿತ್ಯ ಕನ್ನಡ ಓದುಗ ವಲಯವನ್ನು ಉಳಿಸಿ ಬೆಳೆಸಿದ ಪರಿ ಕುರಿತು ಮಾತನಾಡಿದರು.

50ರ ಕೊನೆ 60ರ ದಶಕದ ಆರಂಭ ಭೈರಪ್ಪನವರು ಬರೆಯಲು ಆರಂಭಿಸಿದ್ದು, ಪ್ರಗತಿಶೀಲ ಚಳವಳಿಯ ಕಾಲ. ಅದು ಹೆಚ್ಚು ಕಾಲ ಉಳಿಯಲಿಲ್ಲ, ನಂತರದ್ದು ನವ್ಯ ಕಾಲಘಟ್ಟ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಬರವಣಿಗೆಗಳು ಕಂಡು ಬಂದಿತು. ಇದು ಸಾಮಾನ್ಯರ ಮೇಲೆ ಹೆಚ್ಚು ಪ್ರಭಾವ ಮಾಡಲಿಲ್ಲ. ಪಬ್ಲಿಕ್ ಲೈಬ್ರರಿಯಿಂದ ತಂದು ಕಾದಂಬರಿ ಓದುವ ಕಾಲವದು. ಈ ರೀತಿ ಜನರನ್ನು ಭೈರಪ್ಪನವರ ಕಾದಂಬರಿಗಳು ತಲುಪಿದ್ದವು. ಭಾವದೊಂದಿಗೆ ವಿಚಾರಗಳನ್ನು ಬೆರೆಸಿದ ಕಾದಂಬರಿಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ಭೈರಪ್ಪನವರದ್ದು. ಸಂಸ್ಕಾರ ಮತ್ತು ವಂಶವೃಕ್ಷ ಒಂದೇ ಸಮಯಕ್ಕೆ ಬಂದು ಜನಪ್ರಿಯವಾದವು ಎಂದರು.

ಆದಿತ್ಯವಾರದ ದಿನಪತ್ರಿಕೆಯ ಭೈರಪ್ಪನವರ ವಿಮರ್ಶೆ ಓದುಗರನ್ನು ಸೃಷ್ಟಿಸುತ್ತಿತ್ತು. ವಿಚಾರವನ್ನು ಕಲಾತ್ಮಕವಾಗಿ ಹೇಳಿದರೆ ಜನರಿಗೆ ತಲುಪುತ್ತದೆ. ಭೈರಪ್ಪನವರ ಕಾದಂಬರಿಯಲ್ಲಿ ಸಮಷ್ಟಿಯ ದೃಷ್ಟಿ ಇದ್ದವು. ಒಬ್ಬ ರಚನಾತ್ಮಕ ಕಾದಂಬರಿಕಾರನಾಗಿ ತಮ್ಮ ಸ್ವಾತಂತ್ರ್ಯವನ್ನೂ ಉಳಿಸಿಕೊಂಡರು. 4 ತಲೆಮಾರುಗಳು ಇವರ ಕಾದಂಬರಿಗಳನ್ನು ಓದಿದ್ದಾರೆ ಎಂದು ಹೇಳಿದರು.

ಕಾದಂಬರಿಕಾರ ಎಮ್.ಆರ್. ದತ್ತಾತ್ರಿ ಮಾತನಾಡಿ, ಕತೆ ಬರೆಯಲು ಹೇಳಿಕೊಟ್ಟಿದ್ದು ಮಾಸ್ತಿಯವರು, ಇದಕ್ಕೆ ಖಾರ ಸೇರಿಸಿದ್ದು ಕಾರಂತರು. ಪಾತ್ರದ ಆಳಕ್ಕೆ ಇಳಿಯುವುದು ಯಶವಂತ ಚಿತ್ತಾಲರು. ಇವು ಮೂರೂ ಸೇರಿದ್ದು ಭೈರಪ್ಪನವರದ್ದು. 50 ರಿಂದ 80ರ ಕಾಲಘಟ್ಟವು ಸ್ಥಿತ್ಯಂತರ ಕಾಲಘಟ್ಟ. ಆ ಕಾಲದಲ್ಲಿ ಧೀರ ಸಾಹಿತ್ಯ ರಚನೆ ಭೈರಪ್ಪನವರದ್ದು ಎಂದರು. ಬಹಳಷ್ಟು ಸಿಕ್ಕುಗಳಿದ್ದ ತಲೆಮಾರು. ಓದುಗರ ಸಂಖ್ಯೆ ಜಾಸ್ತಿಯಾದುದು 80ರ ದಶಕ. 90ರ ದಶಕ ಎಂಜಿನಿಯರ್‌ಗಳನ್ನು ತಯಾರು ಮಾಡಿತು. ಯಾವುದೂ ಬಲವಂತವಾಗಿ ಹೇರಿದ್ದಲ್ಲ, ಯೂನಿವರ್ಸಿಟಿಗಳಿಂದ ಬಂದ ಓದುಗರಲ್ಲ, ಯಾವ ಕೃತಿ ಶುದ್ಧವಾಗಿ ಮನುಷ್ಯ ಭಾವಗಳನ್ನು ಕೇಂದ್ರದಲ್ಲಿಟ್ಟುಕೊಳ್ಳುತ್ತದೆಯೋ ಅಂತ ಕೃತಿ ಯಾವತ್ತಿಗೂ ಜನರನ್ನು ಮುಟ್ಟುತ್ತೆ, ಇನ್ನೂ ಬಹುಕಾಲವೂ ಇರುತ್ತೆ ಎಂದು ತಿಳಿಸಿದರು.

ಸಮನ್ವಯಕಾರರಾದ ಸಹನಾ ವಿಜಯ್ ಕುಮಾರ್ ಇದ್ದರು.

ಕಿರುಸುದ್ದಿ

ಹೊಸ್ಮನೆ ಅಮೆರಿಕದ ಶ್ರೇಷ್ಠ ವಿಜ್ಞಾನಿ

ಗೋಕರ್ಣ: ಇಲ್ಲಿನ ರಥಬೀದಿ ನಿವಾಸಿಯಾಗಿದ್ದ ಹಾಲಿ ಅಮೆರಿಕದಲ್ಲಿರುವ ಖ್ಯಾತ ವಿಜ್ಞಾನಿ ಡಾ.ನಾರಾಯಣ ಹೊಸ್ಮನೆಯವರು ಅಮೆರಿಕದ ಶ್ರೇಷ್ಠ ವಿಜ್ಞಾನಿ ಎಂದು ಘೋಷಿಸಲಾಗಿದೆ. ಎಂಭತ್ತರ ದಶಕದಲ್ಲಿ ಅಮೆರಿಕಕ್ಕೆ ತೆರಳಿದ ಇವರು ಕ್ಯಾನ್ಸರ್ ರೋಗಕ್ಕೆ ಪ್ರತಿಬಂಧಕವಾಗಿ ಬೋರಾನ್ (ರಸಾಯನ ಶಾಸ್ತ್ರ) ಬಳಕೆ ಕುರಿತಾದ ಸಂಶೋಧನೆ ನಡೆಸಿ ಯಶಸ್ವಿಯಾಗಿದ್ದು, ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಈಗಾಗಲೇ ವಿಶ್ವಮಟ್ಟದ ಹಲವು ಗೌರವು ದೊರೆತಿದೆ. ಹಾಲಿ ಉತ್ತರ ಇಲಿಯಾನ ವಿಶ್ವವಿದ್ಯಾಲಯದಲ್ಲಿ 50 ವರ್ಷಗಳಿಂದ ವಿಶೇಷ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ಅಕಾಡೆಮಿಕ್ ಫ್ಲಾಟ್ ಫಾರ್ಮ ಫಾರ್ ರಿಸರ್ಚ(ಅಮೆರಿಕಾದ ಸಂಶೋಧಕರ ಅಕಾಡೆಮಿ)ನವರು ಬಿಡುಗಡೆ ಮಾಡಿದ 2026 ರ‍್ಯಾಂಕಿಂಗ್ ಪಟ್ಟಿಯಲ್ಲಿ ರಸಾಯನ ಶಾಸ್ತ್ರ ವಿಭಾಗದ ವಿಜ್ಞಾನಿಯಾಗಿ ಮಾಡಿದ ಸಂಶೋಧನಾ ಸಾಧನೆಗೆ ಈ ಗೌರವ ದೊರೆತಿದೆ. ಇಲ್ಲಿನ ಹೊಸ್ಮನೆ ವೈದಿಕ ಮನೆತನದಲ್ಲಿ ಜನಿಸಿದ ನಾರಾಯಣವರಿಗೆ ಚಾಮಿ ಎಂದೇ ಆತ್ಮೀಯವಾಗಿ ಕರೆಯುತ್ತಾರೆ. ಇವರು ಕಲಿತ ಇಲ್ಲಿನ ಕೆನರಾ ಪ್ರಸಾರಕ ಮಂಡಳಿಯ ಭದ್ರಕಾಳಿ ಪೌಢಶಾಲೆಯ ಅಭಿವೃದ್ಧಿಗೆ ಶ್ರೀ ಚಾಮೀ ವಿದ್ಯಾವಾಹಿನಿ ಟ್ರಸ್ಟ್ ರಚಿಸಿ ಕೊಡುಗೆ ನೀಡುತ್ತಿರುವುದನ್ನ ಇಲ್ಲಿ ಸ್ಮರಿಸಬಹುದಾಗಿದ್ದು, ತೀರ ಬಡತನದಲ್ಲಿ ಕಷ್ಟದಿಂದ ವಿದ್ಯಭ್ಯಾಸ ಮಾಡಿ ಜಗತ್ತು ಗುರುತಿಸುವ ಮಟ್ಟಕ್ಕೆ ಬೆಳೆದು ಪುಣ್ಯ ಕ್ಷೇತ್ರದ ಹಿರಿಮೆ ಹೆಚ್ಚಿಸಿದ ಡಾ. ನಾರಾಯಣ ಹೊಸ್ಮನೆಯವರಿಗೆ ಶ್ರೀಚಾಮಿ ವಿದ್ಯಾವಾಹಿನಿ ಟ್ರಸ್ಟ್‌ನ ಪದಾಧಿಕಾರಿಗಳು ಸದಸ್ಯರು ಸೇರಿದಂತೆ ಅನೇಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ: ಡಿಕೆಶಿ

ಮಸ್ಕಿ: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ತಿರುಗೇಟು ನೀಡಿದ್ದಾರೆ. ಮಸ್ಕಿ ಸಮೀಪದ ಮುದಗಲ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿಯವರ ಕಣ್ಣಿಗೆ ಏನೇನು ಕಾಣುತ್ತಿದೆಯೋ ನಮಗೆ ಗೊತ್ತಿಲ್ಲ, ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ, ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ ಎಂದು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಸಚಿವ ಡಿ.ಸುಧಾಕರ್ ಅವರ ಅಕಾಲಿಕ ನಿಧನಕ್ಕೆ ಡಿ.ಕೆ.ಶಿವಕುಮಾರ್ ಅವರು ತೀವ್ರ ಸಂತಾಪ ಸೂಚಿಸಿದರು. ಸುಧಾಕರ್ ಅವರು ಮಂಡಿ ನೋವಿನ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳಬೇಕಿತ್ತು. ಆದರೆ, ಲಂಗ್ಸ್ ಇನ್ಫೆಕ್ಷನ್‌ನಿಂದಾಗಿ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಸುಧಾಕರ್ ಅವರು ನನಗೆ ವೈಯಕ್ತಿಕವಾಗಿ ಬಹಳ ಆತ್ಮೀಯರು. ಸಹಕಾರ ಕ್ಷೇತ್ರದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಅಪ್ಪರ್ ಭದ್ರಾ ಯೋಜನೆ ಜಾರಿಗೆ ತರುವಲ್ಲಿ ಎಲ್ಲಾ ಶಾಸಕರನ್ನು ಒಗ್ಗೂಡಿಸಿ ಕೆಲಸ ಮಾಡಿದ್ದರು. ಅವರೊಬ್ಬ ದೊಡ್ಡ ಹೃದಯವಂತ ನಾಯಕ. ರಾಮಲಿಂಗಾರೆಡ್ಡಿ ಅವರಿಗಾಗಿ ಒಂದು ಖಾತೆಯನ್ನು ಬಿಟ್ಟುಕೊಟ್ಟು ತ್ಯಾಗ ಮಾಡಿದ್ದರು.

ಇಂದು ತಂತ್ರಜ್ಞಾನ, ಆರ್ಥಿಕತೆಯಲ್ಲಿ ಬದಲಾವಣೆ: ಪ್ರಧಾನಿ ಮೋದಿ

ಸಮಾಜ ಜಾಗೃತಿಗೊಳ್ಳಲಿ

ಬೆಂಗಳೂರು: ಭಾರತದ ಹಲವು ಧಾರ್ಮಿಕ ಆಂದೋಲನಗಳು ಮಾನವಸೇವೆಯನ್ನು ಪುರಸ್ಕರಿಸಿದೆ. ಯಾವುದೇ ಅಭಿಯಾನಗಳು ಸಫಲವಾಗಲು ಸಮಾಜವನ್ನು ಜಾಗೃತಿ ಮಾಡುವುದು ಅಗತ್ಯ. ಇಂದು ಯುವಶಕ್ತಿಯ ಬಗ್ಗೆ ಹೆಚ್ಚು ಗಮನ ಹರಿಸುವ ಅಗತ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.



ನೂತನ ಶಿಕ್ಷಣ ನೀತಿ ತಂದು ಪರಿವರ್ತನೆ ತರಲಾಗಿದೆ. ಪರೀಕ್ಷಾ ಪೇ ಚರ್ಚೆ ಮಾಡಿ ತಂದೆ ತಾಯಿಗಿಂತ ಹೆಚ್ಚು ಕಾಳಜಿ ಮಾಡಿದ್ದೀರಾ ನಿಮ್ಮ ನೇತೃತ್ವದಲ್ಲಿ ದೇಶ ಮುಂದುವರಿಯಲಿ.
■ ಶ್ರೀಶ್ರೀ ರವಿಶಂಕರ್ ಗುರೂಜಿ, ಆರ್ಟ್ ಆಫ್ ಲೀವಿಂಗ್ ಸಂಸ್ಥಾಪಕರು

ನಗರದ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲೀವಿಂಗ್‌ನಲ್ಲಿ ನಡೆದ ಧ್ಯಾನ ಕೇಂದ್ರ ಉದ್ಘಾಟನೆ ಹಾಗೂ ಆರ್ಟ್ ಆಫ್ ಲೀವಿಂಗ್‌ನ 40ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ತಂತ್ರಜ್ಞಾನ ಮತ್ತು ಆರ್ಥಿಕತೆಯಲ್ಲಿ ಬದಲಾವಣೆ ಆಗುತ್ತಿದೆ. ಭಾರತವು ಬದಲಾವಣೆಯಲ್ಲಿ ಭಾಗಿ ಮಾತ್ರ ಆಗಿಲ್ಲ, ಬಲವಾದ ನಾಯಕತ್ವವನ್ನು ಹೊಂದಿದೆ. ನಮ್ಮ ಬದಲಾವಣೆಗೆ ಯುವಶಕ್ತಿ ಮತ್ತು ಆರ್ಟ್ ಆಫ್ ಲೀವಿಂಗ್ ನಂತಹ ಸಂಸ್ಥೆ ಕಾರಣ ಎಂದರು. ಯುವ ಶಕ್ತಿ ಮಾನಸಿಕವಾಗಿ ಶಾಂತವಾಗಿರಬೇಕು. ಸಾಮಾಜಿಕವಾಗಿ ಜವಾಬ್ದಾರಿ ಇರಬೇಕು. ಈ ಧ್ಯಾನ ಕೇಂದ್ರ ಶಾಂತಿ ನೀಡುವ ಕೇಂದ್ರ ಆಗಲಿದೆ.

ಜಲಸಂರಕ್ಷಣೆಯ ಮಹತ್ವ ಅರಿಯಬೇಕು: ಮೋದಿ ಕರೆ: ಭಾರತದ ಭೂಮಿಯನ್ನು ರಾಸಾಯನಿಕದಿಂದ ರಕ್ಷಿಸಬೇಕಿದೆ. ನೀರಿನ ರಕ್ಷಣೆ ಮತ್ತು ಉಪಯೋಗ ತಿಳಿಸಬೇಕಾಗಿದೆ. ಜಲಸಂರಕ್ಷಣೆಗೆ ಇದು ಸೂಕ್ತ ಕಾಲ. ಪ್ರಕೃತಿಯೊಂದಿಗೆ ಸಹಭಾಗಿತ್ವದಲ್ಲಿ ಸಾಗಬೇಕಿದೆ. ದೇಶದ ಸಮಗ್ರ ಅಭಿವೃದ್ಧಿಗೆ ಸಾಮೂಹಿಕ ಭಾಗಿತ್ವ ಇರಬೇಕು ಎಂದರು ಕರೆನೀಡಿದರು.

ದೂರದಲ್ಲಿ ನೆಲೆಸಿರುವ ವ್ಯಕ್ತಿಗಳನ್ನು ತಕ್ಷಣವೇ ಸಂಪರ್ಕಿಸುವ ತಂತ್ರಜ್ಞಾನದ ಶಕ್ತಿಯನ್ನು ಶ್ಲಾಘಿಸಿದ ಪ್ರಧಾನಮಂತ್ರಿಯವರು, ಇದರೊಂದಿಗೆ ಜನರು ತಮ್ಮನ್ನು ತಾವು ಅರಿತುಕೊಳ್ಳುವ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳುವುದೂ ಅಷ್ಟೇ ಅಗತ್ಯ ಎಂದು ಅವರು ಒತ್ತಿಹೇಳಿದರು.

ನೂತನವಾಗಿ ಉದ್ಘಾಟನೆಗೊಂಡ ಧ್ಯಾನಮಂದಿರವು ಸಾವಿರಾರು ಜನರಿಗೆ ಶಾಂತಿ ಮತ್ತು ಸಾಂತ್ವನದ ತಾಣವಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಮಂತ್ರಿಯವರು, ಸಮಾಜವು ಈಗಾಗಲೇ ರಾಷ್ಟ್ರದ ಬಗ್ಗೆ ತನ್ನ ಕರ್ತವ್ಯಗಳನ್ನು ಶ್ಲಾಘನೀಯವಾಗಿ ನಿರ್ವಹಿಸುತ್ತಿದೆ ಎಂದು ಒಪ್ಪಿಕೊಂಡರು. ಇದರೊಂದಿಗೆ ಸಮಗ್ರ ರಾಷ್ಟ್ರೀಯ ಅಭಿವೃದ್ಧಿಗಾಗಿ ಕೆಲವು ಪ್ರಮುಖ ಮನವಿಗಳನ್ನು ಅವರ ಮುಂದಿಡಲು ಬಯಸುವುದಾಗಿ ತಿಳಿಸಿದರು.

ತಾಯಿಯ ಹೆಸರಲ್ಲಿ ಒಂದು ಗಿಡ ನೆಡಿ: ಮೋದಿ ಕರೆ: ಏಕ್ ಪೇಡ್ ಮಾ ಕೆ ನಾಮ್ (ತಾಯಿಯ ಹೆಸರಲ್ಲಿ ಒಂದು ಗಿಡ) ಅಭಿಯಾನವನ್ನು ವ್ಯಾಪಕವಾಗಿ ವಿಸ್ತರಿಸಲು ಪ್ರೋತ್ಸಾಹಿಸಿದ ಪ್ರಧಾನಮಂತ್ರಿಯವರು, ಪರಿಸರ ಸಂರಕ್ಷಣೆಯನ್ನು ಉತ್ತಮ ಜೀವನದ ತತ್ವಕ್ಕೆ ನೇರವಾಗಿ ಜೋಡಿಸಿದರು.

ಸ್ವಚ್ಛತೆಗೆ ಒತ್ತು ನೀಡಿದ್ದು ಮೋದಿ: ರವಿಶಂಕರ್ ಗುರೂಜಿ

ಬೆಂಗಳೂರು: ಈ ದೇಶಕ್ಕೆ ಸ್ವಚ್ಛ ಸುರಕ್ಷಿತ ದೇಶಕ್ಕೆ ಪರಿಕಲ್ಪನೆ ನೀಡಿದ್ದು ಪ್ರಧಾನಿ ನರೇಮದ್ರ ಮೋದಿಯವರು, ಹಿಂಸಾ ಮುಕ್ತ ದೇಶಕ್ಕೆ ತಾವು ಆದ್ಯತೆ ನೀಡಿದ್ದೀರಿ ಎಮದು ಆರ್ಟ್ ಆಫ್ ಲೀವಿಂಗ್‌ನ ಶ್ರೀ ರವಿಶಂಕರ್ ಗುರೂಜಿ ಹೇಳಿದರು. ಪ್ರಧಾನಿ ಮೋದಿಯವರ ಜತೆಗೆ ಧ್ಯಾನ ಕೇಂದ್ರ, ಉದ್ಘಾಟನೆ, ಹಾಗೂ ಆರ್ಟ್ ಆಫ್ ಲೀವಿಂಗ್‌ನ 40ನೇ ವರ್ಷಾಚರನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತವೂ ಯಾವತ್ತೂ ಬದಲಾಗಲ್ಲ ಎಂಬ ಭಾವನೆ ಇತ್ತು ಎಂದರು.

ಎಸ್‌ಐಆರ್ ಬಗ್ಗೆ ಕಾಂಗ್ರೆಸ್ ಎಚ್ಚರಿಕೆ

ಬೆಂಗಳೂರು: ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ದೇಶದಾದ್ಯಂತ ಗೊಂದಲವಿದ್ದು, ಮತಪಟ್ಟಿ ಪರಿಷ್ಕರಣೆ ವೇಳೆ ಕೆಲ ಸಮುದಾಯಗಳ ಮತಗಳನ್ನು ಉದ್ದೇಶ ಪೂರ್ವಕವಾಗಿ ತೆಗೆದುಹಾಕುವ ಆರೋಪ ಗಳ ಬಗ್ಗೆ ಕಾಂಗ್ರೆಸ್ ಎಚ್ಚರಿಕೆಯಿಂದ ಕೆಲಸ ಮಾಡಲಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಣಬಲ, ತೋಳ್ಬಲ ಅಥವಾ ತಿರುಚಿದ ಕ್ರಮಗಳಿಂದ ಜನರ ತೀರ್ಪು ಬದಲಾಗಬಾರದು ಈ ಬಾರಿ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ವಿಶೇಷ ಎಚ್ಚರಿಕೆ ವಹಿಸಲಿದೆ ಎಂದು ಸಚಿವರು, ಮಮತಾ ಬ್ಯಾನರ್ಜಿ ಅವರನ್ನು ಉಲ್ಲೇಖಿಸಿದ, ಲಕ್ಷಾಂತರ ಮತಗಳನ್ನು ಮತಪಟ್ಟಿಯಿಂದ ತೆಗೆದು ಹಾಕುವಂತಹ ಘಟನೆಗಳು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು.

ಕೇರಳದಲ್ಲಿ ಶೇ.100ರಷ್ಟು ಶಿಕ್ಷಣ ಪ್ರಮಾಣ ಇರುವುದರಿಂದ ಅಲ್ಲಿ ಇಂತಹ ಅಕ್ರಮಗಳಿಗೆ ಅವಕಾಶ ಕಡಿಮೆ. ರಾಜ್ಯದ ಜನರು ಅತ್ಯಂತ ವಿದ್ಯಾವಂತರಾಗಿದ್ದು, ಸಾಮಾನ್ಯ ಕಾರ್ಮಿಕರೂ ಉನ್ನತ ಶಿಕ್ಷಣ ಪಡೆದವರಾಗಿರುವುದರಿಂದ ಮತದಾರರ ಹಕ್ಕುಗಳ ಬಗ್ಗೆ ಹೆಚ್ಚಿನ ಜಾಗೃತಿ ಇದೆ ಎಂದು ಹೇಳಿದರು.

ಮುಂದಿನ ತಿಂಗಳಿನಿಂದ ಆಹಾರ ಕಿಟ್



ಮುಂದಿನ ತಿಂಗಳಿನಿಂದ ಆಹಾರ ಕಿಟ್ ನೀಡಲಾಗುವುದು ಕಿಟ್‌ನಲ್ಲಿ ಬೇಳೆ, ಎಣ್ಣೆ, ಸಕ್ಕರೆ ಸೇರಿ ಇತರೆ ಪದಾರ್ಥಗಳು ಇರಲಿವೆ. 5 ಅಕ್ಕಿ ಬೆಲೆ ಎಷ್ಟಾಗುತ್ತದೆ ಅಷ್ಟು ಮೊತ್ತದಲ್ಲಿ ಆಹಾರ ಕಿಟ್ ನೀಡಲಾಗುವುದು. ಪ್ರೋಟಿನ್ ನೀಡುವುದರಿಂದ ಮನೆಯವರಿಗೂ ಅನಕೂಲ ಆಗಲಿದೆ ಎಂದು ಹೇಳಿದರು. ವಾಣಿಜ್ಯ ಗ್ಯಾಸ್‌ಗಳ ಸ್ವಲ್ಪ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರ ಮುಂದಾಲೋಚನೆ ವಹಿಸಬೇಕಿತ್ತು. ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಿತ್ತು. ಕೇಂದ್ರ ಇದರಲ್ಲಿ ವಿಫಲವಾಗಿದೆ.

ಜನತೆಗೆ ಕೃತಜ್ಞತೆ ಸಮರ್ಪಿಸುವೆ

ಬೆಂಗಳೂರು: ಚಿತ್ರದುರ್ಗದಲ್ಲಿ ನಡೆದ ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಹರಿದು ಬಂದ ಜನಸಾಗರ ಯಡಿಯೂರಪ್ಪ ಅವರ ಬಗೆಗಿರುವ ಅಭಿಮಾನದ ಅಲೆಯ ಸದ್ದು ಮೊಳಗಿಸಿ ಚಾರಿತ್ರಿಕ ನೆನಪಿಗೆ ಸಾಕ್ಷಿಯಾಯಿತು. ಅಭಿಮಾನದ ಜನತೆಗೆ ಹೃದಯತುಂಬಿ ಸಾಷ್ಟಾಂಗ ನಮನದ ಕೃತಜ್ಞತೆ ಸಮರ್ಪಿಸುವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಕಾರ್ಯಕ್ರಮದ ಯಶಸ್ಸಿಗೆ ಕಾರಣೀಕರ್ತರಾದ ಜನತೆ, ನಾಯಕರು ಮತ್ತು ಕಾರ್ಯಕರ್ತರಿಗೆ ಕೃತಜ್ಞತಾ ಪತ್ರ ಬರೆದಿರುವ ಅವರು, ಬಿರುಬಿಸಿಲನ್ನು ಲೆಕ್ಕಿಸದೆ ನಾಡಿನ ಮೂಲೆ ಮೂಲೆಗಳಿಂದ ಧಾವಿಸಿ ಬಂದು ಯಡಿಯೂರಪ್ಪ ಅವರನ್ನು ತಮ್ಮ ಆದರಾಭಿಮಾನಗಳ ಮಡಿಲಲ್ಲಿ ತೋಯಿಸಿದ ಜನರ ಪ್ರೀತಿಗೆ ಬೆಲೆ ಕಟ್ಟಲಾಗದು ಎಂದಿದ್ದಾರೆ. ಅಭಿಮಾನೋತ್ಸವ ಹಬ್ಬಕ್ಕೆ ಸಾಕ್ಷಿಯಾಗಲು ಬಂದು ಯಡಿಯೂರಪ್ಪ ಅವರಿಗೆ ಆತ್ಮೀಯ ಶುಭಹಾರೈಕೆಗಳನ್ನು ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸಿದ ದೇಶ ಕಂಡ ದಿಟ್ಟೆದೆಯ ಗೃಹ ಸಚಿವ ಹಾಗೂ ಪಕ್ಷ ಸಂಘಟನೆಗೆ ನಿತ್ಯ ಚೈತನ್ಯ ಶಕ್ತಿಯಾಗಿರುವ ಅಮಿತ್ ಶಾ ಅವರಿಗೆ ಕೃತಜ್ಞತಾಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.



ಯಡಿಯೂರಪ್ಪ ಅವರಿಗೆ ಗೌರವಾಭಿಮಾನದ ಹಾರೈಕೆಯ ಮಾತುಗಳನ್ನಾಡಿ ತಮ್ಮ ಒಡನಾಟದ ದಿನಗಳನ್ನು ನೆನಪಿಸಿಕೊಂಡು ಅವರೊಬ್ಬ ಶಕ್ತಿ ಎಂದು ಹಾರೈಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ ಅವರ ಆದಿಯಾಗಿ ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಸಂಸದರು, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ ಸೇರಿದಂತೆ ಭಾಗವಹಿಸಿದ ಎಲ್ಲ ಶಾಸಕರು, ಮಾಜಿ ಶಾಸಕರು ಹಾಗೂ ಪ್ರಮುಖರೂ ಸೇರಿದಂತೆ ಇತರ ಎಲ್ಲಾ ಗಣ್ಯರಿಗೂ ಕೃತಜ್ಞತೆ ಸಲ್ಲಿಸುವೆ. ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹಾಗೂ ಕರ್ನಾಟಕ ರಾಜ್ಯದ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್ ಅವರೂ ಸೇರಿದಂತೆ ಪಕ್ಷದ ಪ್ರಮುಖರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರೆಲ್ಲರಿಗೂ ಹೃದಯತುಂಬಿ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಭದ್ರತಾ ಲೋಪ: ಬಿವೈವಿ

ದೇಶದ ಪ್ರಧಾನಮಂತ್ರಿಗಳ ನಿಗದಿತ ಸಂಚಾರದ ರಸ್ತೆಯಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ಗಂಭೀರ ಭದ್ರತಾ ಲೋಪ ಮಾತ್ರವಲ್ಲ, ಇದು ಕಾನೂನು ಸುವ್ಯವಸ್ಥೆ ಹೊಣೆ ಹೊತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ಅಕ್ಷಮ್ಯ ಮತ್ತು ಗಂಭೀರ ವೈಫಲ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ಷೇಪಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಖಂಡಿಸಿರುವ ಅವರು, ಕಾಂಗ್ರೆಸ್ ಸರ್ಕಾರದ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಭದ್ರತೆ ಸಂಪೂರ್ಣ ಕುಸಿದಿದೆ ಎಂದರು.

ಕುರ್ಚಿಗಾಗಿ ಗುದ್ದಾಟ ಸಹಜ: ಜಾರಕಿಹೊಳಿ

ಹಾವೇರಿ: ಕರ್ನಾಟಕ ರಾಜ್ಯದ ಕುರ್ಚಿ ಕಿತ್ತಾಟದ ಬಗ್ಗೆ ಮೋದಿಯವರು ರಾಜಕೀಯವಾಗಿ ಹೇಳುವುದು ಸ್ವಾಭಾವಿಕ. ರಾಜ್ಯದಲ್ಲಿ ಕುರ್ಚಿ ಗುದ್ದಾಟ ಇರುವುದೇ ಅಲ್ವಾ...? ಮೋದಿಯವರು ಮಾಡುವಂತಹ ವರ್ಕಿಂಗ್ ಸ್ಟೈಲ್ ಬೇರೆಯಾಗಿದೆ. ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ಯಾವ ರೀತಿ ಅಧಿಕಾರಕ್ಕೆ ಬಂದರು ಅಂತ ಗೊತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಭಾನುವಾರ ಹಾವೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನರೇಂದ್ರ ಮೋದಿ ಅವರ ವರ್ಕಿಂಗ್ ಸ್ಟೈಲ್ ಬೇರೆ, ಆದರೆ, ಕಾಂಗ್ರೆಸ್ ಪಕ್ಷದ ವರ್ಕಿಂಗ್ ಸ್ಟೈಲ್ ಬೇರೆ. ಅವರು ಹೇಳಿದಂತೆ ನಾವು ಹೇಳಲು ಆಗಲ್ಲ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಬಂದಾಗ ಭದ್ರತಾ ವೈಫಲ್ಯದ ಬಗ್ಗೆ ಮಾತನಾಡಿದ ಅವರು, ಆ ರೀತಿಯಲ್ಲ ಆಗಲ್ಲ, ಪೊಲೀಸರು ಭದ್ರತೆಯಲ್ಲಿ ಇರುತ್ತಾರೆ. ಅವರೇ ಎಲ್ಲ ನೋಡಿಕೊಳ್ಳುತ್ತಾರೆ. ಎಲ್ಲೋ ಆಗಿದ್ದಕ್ಕೂ, ಪ್ರಧಾನ ಮಂತ್ರಿಗೆ ಹೋಲಿಸಲು ಆಗುವುದಿಲ್ಲ, ಪ್ರಧಾನ ಮಂತ್ರಿ, ಪ್ರಧಾನ ಮಂತ್ರಿನೇ, ಭದ್ರತೆ ಜವಾಬ್ದಾರಿ ನಮ್ಮದು ಅಷ್ಟೇಯಲ್ಲ, ಸೆಂಟ್ರಲ್ ಅವರದ್ದು ಇರುತ್ತದೆ. ಅದೇನೂ ಆತಂಕ ಪಡುವಂತಹ ಅವಶ್ಯಕತೆ ಇಲ್ಲ ಎಂದರು.

ತಮಿಳುನಾಡಿನಲ್ಲಿ ಟಿವಿಕೆ ಅಧಿಕಾರದ ಗದ್ದುಗೆ ಏರಿರುವ ಕುರಿತು ಮಾತನಾಡಿದ ಅವರು, ತಮಿಳುನಾಡಿನಲ್ಲಿ ಸೆಲ್ಯುಲರ್ ಪಾರ್ಟಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಬಹಳ ಸಂತೋಷ. ಆ ಹಿನ್ನೆಲೆಯಲ್ಲಿ ನಾವೆಲ್ಲರೂ ಬೆಂಬಲ ಮಾಡಿದ್ದೇವೆ. ಗ್ಯಾರಂಟಿ ಬಗ್ಗೆ ಬಿಜೆಪಿಯವರು ಟೀಕೆ ಮಾಡುತ್ತಾರೆ. ಬಿಜೆಪಿ ಅಧಿಕಾರ ಇರುವ ಬೇರೆ ರಾಜ್ಯದಲ್ಲಿ ನಮ್ಮದೇ ಗ್ಯಾರಂಟಿ ಕಾಪಿ ಮಾಡಿ, ಅದನ್ನೇ ಜಾರಿಗೊಳಿಸುತ್ತಾರೆ ಎಂದು ಜಾರಕಿಹೊಳಿ ಹೇಳಿದರು.

ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಆಯ್ಕೆಯಾಗಲಿ

ಬೆಂಗಳೂರು: ಸರ್ಕಾರದ, ಸಂಘ-ಸಂಸ್ಥೆಗಳ ಮತ್ತು ಪಂಚಾಯತ್ ಕಾರ್ಯಕ್ರಮಗಳ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿಯೇ ಆಗಬೇಕೆಂದು 14ನೇ ಹಣಕಾಸು ಆಯೋಗ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಡಿ.ಆರ್.ಪಾಟೀಲ್ ತಿಳಿಸಿದ್ದಾರೆ.

ಕರ್ನಾಟಕ ಪಂಚಾಯತ್‌ರಾಜ್ ಪರಿಷತ್ ಭಾನುವಾರ ಗಾಂಧಿ ಭವನದಲ್ಲಿ ಆಯೋಜಿಸಿದ್ದ 16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗಗಳ ವರದಿಗಳ ಕುರಿತು ವಿಚಾರ ಸಂಕಿರಣದಲ್ಲಿ ಅವರುಜ ಮಾತನಾಡಿದರು. 14ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಗ್ರಾಮ ಪಂಚಾಯತ್‌ಗಳು ಮುಂದಿನ ವರ್ಷದಿಂದ ಜನಸಂಖ್ಯೆಗೆ ಅನುಗುಣವಾಗಿ ವಾರ್ಷಿಕ 488 ರೂ. ತಲಾ ವರಮಾನ ಪಡೆಯಲಿವೆ. ಇದೇ ರೀತಿ ರಾಜ್ಯ ಹಣಕಾಸು ಆಯೋಗವು ಹೆಚ್ಚುವರಿ ಹಣಕಾಸು ನೆರವು ನೇರವಾಗಿ ಗ್ರಾಮ ಪಂಚಾಯತ್‌ಗೆ ಸಿಗುವಂತೆ ಶಿಫಾರಸ್ಸು ಮಾಡಬೇಕು ಎಂದು ಸಲಹೆ ನೀಡಿದರು.

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಮಾತನಾಡಿ, ಗ್ರಾಮ ಸಭೆಗಳು ಪಂಚಾಯತ್ ವ್ಯವಸ್ಥೆಗೆ ಭದ್ರ ಅಡಿಪಾಯವಾಗಿವೆ ಎಂದರು.

ಪರರಿಗಾಗಿ ಬದುಕುವ ಬದುಕೇ ನಿಜವಾದ ಬದುಕು

ಮೇಘಾ ಪ್ರಮೋದ್

ಸೇವಾಗಾಥ
ಕಥೆ-5

ಹದಿನೇಳನೇ ವಯಸ್ಸು ಪ್ರಪಂಚವನ್ನು ತೊರೆಯುವ ವಯಸ್ಸೇನಲ್ಲ, ಆದರೆ ಹದಿನೇಳರ ಹರೆಯದಲ್ಲೇ, ಆ ಧೀರ ಬಾಲಕ ಯಮನಿಗೂ ಸವಾಲು ಹಾಕಿದ್ದ. 07-08-2005ರಂದು, ಮಾರುತಿನಗರದಿಂದ ಮನೋಜ್ ಚೌಹಾಣನ ಶವಯಾತ್ರೆ ಹೊರಟಾಗ ಇಂದೋರ್ ನಗರವೇ ಆ ಸ್ವಯಂಸೇವಕನಿಗಾಗಿ ಕಣ್ಣೀರು ಸುರಿಸಿತ್ತು. ಕೇವಲ ಬಿದಿರುಕೋಲು ಹಾಗೂ ತಗಡಿನ ಡಬ್ಬಗಳನ್ನು ಬಳಸಿ 18 ಕಂದಮ್ಮಗಳನ್ನು ಅಕ್ಷರಶಃ ಸಾವಿನ ದವಡೆಯಿಂದ ಮನೋಜ ಬಿಡಿಸಿಕೊಂಡು ಬಂದಿದ್ದ. ಈಗ, ಹಾಗೆ ಬದುಕುಳಿದಿದ್ದ ಪುಟ್ಟಮಕ್ಕಳ ಹೆತ್ತವರ ದುಃಖವೂ ಕಟ್ಟೆಯೊಡೆದಿತ್ತು. ಎರಡು ದಿನಗಳ ಕಾಲ ಮಾರುತಿನಗರದಲ್ಲಿ ಯಾರಿಗೂ ಊಟ ಸೇರಲಿಲ್ಲ.

ಬಣ್ಣಬಣ್ಣದ ಕನಸುಗಳಿಂದ ತನ್ನ ಸುಂದರ ಬದುಕನ್ನು ಸಿಂಗರಿಸಬೇಕಿದ್ದ ಹದಿಹರೆಯದ ಮನೋಜ, ಆ ಹದಿನೆಂಟು ಜೀವಗಳನ್ನು ಕಾಪಾಡಿ, ಯೌವನದ ಹೊಸ್ತಿಲಲ್ಲೇ ಚಿರನಿದ್ರೆಗೆ ಜಾರಿದ್ದ. ಗಣರಾಜ್ಯೋತ್ಸವ ಸಮಾರಂಭದಲ್ಲಿ ಮರಣೋತ್ತರ ಶೌರ್ಯಪ್ರಶಸ್ತಿ ಪಡೆದ ಮನೋಜನ ಬಲಿದಾನವು, ಇಂದಿನ ಯುವಕರಿಗೆ ದೇಶಕ್ಕಾಗಿ ಬದುಕುವ ಪ್ರೇರಣೆ ನೀಡುತ್ತಿದೆ.



21 ವರ್ಷಗಳ ಹಿಂದಿನ ಕಥೆಯಿದು. 01-08-2005ರಂದು ಇಂದೋರಿನಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ, ತಗ್ಗು ಪ್ರದೇಶಗಳಿಗೆ ಒಮ್ಮೆಲೇ ನೀರು ನುಗ್ಗಿತು. ಮಾರುತಿನಗರವು ಬಾಣಗಂಗಾ ಪ್ರದೇಶದ ಸಾವೇರ್ ರಸ್ತೆಬದಿಯ ತಗ್ಗು ಪ್ರದೇಶಗಳಲ್ಲಿರುವ ಒಂದು ಸೇವಾ ಬಸತಿ. ಅಲ್ಲಿನ ಮನೆಗಳಿಗೆ ನೀರು ನುಗ್ಗಿದ ರಭಸಕ್ಕೆ ಕೊಚ್ಚಿ ಹೋಗುತ್ತಿದ್ದ ಹಾಸಿಗೆ, ಪಾತ್ರೆಪಗಡಗಳ ಕೈಬಿಟ್ಟ ಜನರು, ತಂತಮ್ಮ ಚಿಕ್ಕಮಕ್ಕಳನ್ನು ಉಳಿಸಿಕೊಳ್ಳಲು ಹೆಣಗತೊಡಗಿದರು. ಸರ್ಕಾರೀ ವ್ಯವಸ್ಥೆಗಳು ಸಹಾಯಕ್ಕೆ ಧಾವಿಸುವ ಮುನ್ನವೇ, ಅಲ್ಲಿನ ನಿತ್ಯಶಾಖೆಯ ಹೊಣೆ ಹೊತ್ತಿದ್ದ ಮನೋಜ ರಕ್ಷಣಾ ಕಾರ್ಯಕ್ಕೆ ಧುಮುಕಿದ್ದ. ಬಬನ್ ಪಾಂಡೆ, ಸುರೇಶ್ ಬಾಥಾ ಮುಂತಾದವರೂ ಮನೋಜನೊಂದಿಗೆ ಕೈಜೋಡಿಸಿದರು. ಒಂದಿಷ್ಟು ಖಾಲಿ ಟಿನ್ನುಗಳು, ಬಿದಿರಿನ ದಂಡಗಳು ಹಾಗೂ ಟ್ಯೂಬುಗಳನ್ನು ಸಂಗ್ರಹಿಸಿದ ಈ ಯುವಕರ ಟೋಳಿ ಸಂತ್ರಸ್ತರ ಜೀವವುಳಿಸುವ ಕೆಲಸದಲ್ಲಿ ಮುಳುಗಿತು.

ಇಂದೋರಿನ ಜನತೆಯ ಹೃದಯಸಿಂಹಾಸನದಲ್ಲಿ ಮನೋಜ

2007ರ ಗಣರಾಜ್ಯೋತ್ಸವದಂದು ಭಾರತೀಯ ಬಾಲಕಲ್ಯಾಣ ಪರಿಷತ್ತು ಮನೋಜ ಚೌಹಾಣನಿಗೆ ಅಪ್ರತಿಮ ಶೌರ್ಯಪ್ರಶಸ್ತಿ ನೀಡುವ ನಿರ್ಣಯ ಕೈಗೊಂಡಾಗ ಮನೋಜ ಕಾಲವಾಗಿ ಎರಡು ವರ್ಷಗಳೇ ಕಳೆದಿದ್ದವು. ಆ ಪ್ರಶಸ್ತಿಗಾಗಿ ರಾಷ್ಟ್ರಪತಿಗಳಿಗೆ ಅರ್ಜಿ ಸಲ್ಲಿಸಿದ್ದ ನಗರದ ಪ್ರಸಿದ್ಧ ಚಾರ್ಟರ್ಡ್ ಅಕೌಂಟೆಂಟ್ ರಾಧೇಶ್ಯಾಮ್ ಸೋಮಾನೀ ಮತ್ತು ಡಾ. ಶೈಲೇಂದ್ರ ಜೈನ್ಮನೋಜನ ಬಗ್ಗೆ "ಗಣರಾಜ್ಯೋತ್ಸವದಂದು ಮನೋಜ ಅಂಬಾರಿಯ ಮೇಲೆ ಕೂರದಿದ್ದರೂ, ಇಂದೋರಿನ ಜನತೆಯ ಹೃದಯಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಸಿದ್ದಾನೆ. ಎಂದು ಹೇಳುತ್ತ ಗದ್ಗದಿತರಾಗುತ್ತಾರೆ.

ಜಲಾವೃತಗೊಂಡ ಮನೆಗಳಿಂದ ಪುಟ್ಟ ಪುಟ್ಟ ಕಂದಮ್ಮಗಳನ್ನು ಹೊತ್ತುಕೊಂಡು ಸುರಕ್ಷಿತ ತಾಣಕ್ಕೆ ತಲುಪಿಸುತ್ತಿದ್ದ ಮನೋಜನ ಮನದಲ್ಲಿ ಆರ್ ಎಸ್ ಎಸ್ ನ ನಗರ ಸಂಪರ್ಕ ಪ್ರಮುಖರಾದ ಡಾ. ಆನಂದ್ ಪ್ರಕಾಶ್ ಮಿಶ್ರಾರ ಎಚ್ಚರಿಕೆ ಮಾರ್ದನಿಸುತ್ತಿತ್ತು. ಮನೋಜಾ, ನಿನ್ನ ಹೃದಯದ ಕವಾಟಗಳ ಪರಿಸ್ಥಿತಿ ಹದಗೆಟ್ಟಿದೆ, ನೀರಿಗಿಳಿಯಲೇಬೇಡ ಮತ್ತು ಸುಸ್ತಾಗುವಷ್ಟು ಶ್ರಮ ಪಡಬೇಡ. ಹೃದಯದ ಮೇಲೆ ಒತ್ತಡ ಬಿದ್ದರೆ, ಪ್ರಾಣಕ್ಕೇ ಎರವಾಗಬಹುದು, ಮಗೂ ಎಂದಿದ್ದರು. ಪದೇ ಪದೇ ನೆನಪಾಗುತ್ತಿದ್ದ ಈ ಮಾತುಗಳನ್ನು ಮರೆಯಲೋ ಎಂಬಂತೆ, ಮನೋಜ ತಾನು ನಿತ್ಯಶಾಖೆಯಲ್ಲಿ ಹೇಳುತ್ತಿದ್ದ ಸೇವಾ ಹೈ ಯಜ್ಞ ಕುಂಡ್ ಸಮಿಧಾ ಸಮ್ ಹಮ್ ಜಲೇಎಂಬ ಹಾಡನ್ನೇ ಜೋರಾಗಿಹಾಡುತ್ತಲೇಇದ್ದ.

ಹೀಗೆ, ಸಂತ್ರಸ್ತ ಕುಟುಂಬಗಳ ರಕ್ಷಣಾಕಾರ್ಯದಲ್ಲಿ, ಮುಂಜಾವಿನ 4 ಗಂಟೆಯಿಂದ ಮಧ್ಯರಾತ್ರಿ 12ರವರೆಗೆ ಅವಿಶ್ರಾಂತವಾಗಿ ಮನೋಜ ದುಡಿದಿದ್ದ. ಆ ಭಯಂಕರ ಮೃತ್ಯುಕೂಪದಿಂದ ಎಲ್ಲರನ್ನೂ ಪಾರು ಮಾಡುವ ಹೊತ್ತಿಗೆ ಈ ರಾಷ್ಟ್ರಭಕ್ತ ನವತರುಣನ ಶ್ವಾಸಕೋಶಗಳಲ್ಲಿ ನೀರು ತುಂಬಲಾರಂಭಿಸಿತ್ತು. ಅದನ್ನೂ ನಿರ್ಲಕ್ಷಿಸುತ್ತ, ಸಂತ್ರಸ್ತರಿಗಾಗಿ ಅಗತ್ಯ ವಸ್ತುಗಳ ಪಟ್ಟಿ ಮಾಡಿದ ಮನೋಜ, ಅವುಗಳ ವಿಲೇವಾರಿ ಮಾಡುತ್ತ ಮರುದಿನವಿಡೀ ಓಡಾಡಿದ.

ಕೇಶವ ನಗರದ ಅಂದಿನ ನಗರ ಕಾರ್ಯವಾಹರಾದ ಅನೀಲ್ ಪಂಚವಾಲ ಜೀ ಹೇಳುವಂತೆ- ಆ ವಿಪರೀತ ದಣಿವನ್ನು ಮನೋಜನ ಶರೀರ ತಾಳದಾಯಿತು. ಆಸ್ಪತ್ರೆಗೇ ದಾಖಲಿಸಬೇಕಾಯಿತು. ಎರಡು ದಿನಗಳ ಕಾಲ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ, ನ್ಯುಮೋನಿಯಾ ಉಲ್ಬಣಿಸಿ ಮನೋಜ ಕೊನೆಯುಸಿರೆಳೆದ.ಎಂದು.

ದಿವ್ಯಾಂಗರಾಗಿದ್ದ ತಂದೆ ಉಮ್ರಾವ್ ಸಿಂಗ್ ಚೌಹಾಣ್, ಮಾನಸಿಕ ದೌರ್ಬಲ್ಯದಿಂದ ಬಳಲುತ್ತಿದ್ದ ಸೋದರ ಸೋನು ಮತ್ತು ಬಿಕ್ಕಳಿಸಿ ಅಳುತ್ತಿದ್ದ ತಾಯಿಯನ್ನು ಮನೋಜ ಬಿಟ್ಟಗಲಿದಾಗ ಇಡೀ ಮಾರುತಿನಗರಕ್ಕೆ ಎರಡು ದಿನ ಸೂತಕ ಆವರಿಸಿತ್ತು.

ಆ ಹುಡುಗ ಆಪದ್ಬಾಂದವನಂತೆ ಬಂದು, ತನ್ನ ಪ್ರಾಣ ಪಣಕ್ಕಿಟ್ಟು, 7 ವರ್ಷದ ನನ್ನ ಮೊಮ್ಮಗನನ್ನು ನೀರಿನ ಸುಳಿಯಿಂದ ಬಿಡಿಸಿ ತಂದ ಎನ್ನುತ್ತ ಕಣ್ಣೀರಾಗುತ್ತಾರೆ ಮಾರುತಿನಗರದ ನಿವಾಸಿ ಲಕ್ಷ್ಮೀದೇವಿ. ಅಂತ್ಯಕಾಲದಲ್ಲಿಯೂ ಸಂತ್ರಸ್ತರ ಹೆಸರು ಮತ್ತು ಅವರ ಅಗತ್ಯ ವಸ್ತುಗಳ ಪಟ್ಟಿ ಮನೋಜನ ಕಿಸೆಯಲ್ಲಿ ದೊರಕಿತ್ತು.

ಸಂಪಾದಕೀಯ

ಸಂಕಷ್ಟದ ಕಾಲದಲ್ಲಿ ಸಂಯಮವೇ ದೇಶಸೇವೆ

ಜಾಗತಿಕ ಯುದ್ಧ ಪರಿಸ್ಥಿತಿಯಿಂದ ಉಂಟಾಗಿರುವ ಆರ್ಥಿಕ ಅಸ್ಥಿರತೆ ವಿಶ್ವದ ಅನೇಕ ರಾಷ್ಟ್ರಗಳಂತೆ ಭಾರತಕ್ಕೂ ಸವಾಲಾಗಿ ಪರಿಣಮಿಸಿದೆ. ಇಂಧನ, ರಸಗೊಬ್ಬರ ಮತ್ತು ಅವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕಿನ ಮೇಲೂ ಒತ್ತಡ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಧಾನಿ ಮೋದಿ ನೀಡಿರುವ 'ಪೆಟ್ರೋಲ್- ಡೀಸೆಲ್ ಮಿತ ಬಳಕೆ' ಕರೆ ಕೇವಲ ರಾಜಕೀಯ ಘೋಷಣೆಯಲ್ಲ, ಅದು ಕಾಲದ ಅಗತ್ಯವೂ ಹೌದು.

ಭಾರತದ ಇಂಧನ ಅವಲಂಬನೆ ಬಹುಪಾಲು ಆಮದುಮೇಲೆ ನಿಂತಿದೆ. ಹೀಗಾಗಿ ಜಾಗತಿಕ ಯುದ್ಧ ಅಥವಾ ಪೂರೈಕೆ ಸರಪಳಿ ವ್ಯತ್ಯಯ ಉಂಟಾದಾಗ ಅದರ ನೇರ ಪರಿಣಾಮ ದೇಶದ ಆರ್ಥಿಕತೆಯ ಮೇಲೆ ಬೀಳುವುದು ಸಹಜ. ಈ ಹಿನ್ನೆಲೆಯಲ್ಲಿ ಮೆಟ್ರೋ, ಕಾರ್ ಪೂಲಿಂಗ್, ವಿದ್ಯುತ್ ವಾಹನಗಳು ಹಾಗೂ ವರ್ಕ್ ಫ್ರಮ್ ಹೋಮ್ ಪದ್ಧತಿಗೆ ಉತ್ತೇಜನ ನೀಡುವ ಮಾತು ಪ್ರಸ್ತುತ ಸಂದರ್ಭದಲ್ಲಿ ಸೂಕ್ತವಾಗಿದೆ.



ಇದರ ಜೊತೆಗೆ, ಸರ್ಕಾರವೂ ಪರ್ಯಾಯ ಇಂಧನ ಮೂಲಗಳ ಅಭಿವೃದ್ಧಿಗೆ ಇನ್ನಷ್ಟು ಒತ್ತು ನೀಡಬೇಕಾಗಿದೆ. ಸೌರಶಕ್ತಿ, ಜೈವಿಕ ಇಂಧನ ಮತ್ತು ವಿದ್ಯುತ್ ವಾಹನಗಳ ಮೂಲಸೌಕರ್ಯ ವಿಸ್ತರಣೆ ವೇಗಗೊಳ್ಳಬೇಕು. ದೀರ್ಘಾವಧಿಯಲ್ಲಿ ಇಂತಹ ಕ್ರಮಗಳೇ ದೇಶದ ಇಂಧನ ಸ್ವಾವಲಂಬನೆಯನ್ನು ಬಲಪಡಿಸಬಲ್ಲವು. ಕೇವಲ ಸಂಕಷ್ಟದ ಸಮಯದಲ್ಲಿ ಮಾತ್ರವಲ್ಲ, ಶಾಶ್ವತ ಜೀವನಶೈಲಿಯ ಭಾಗವಾಗಿಯೂ ಇಂಧನ ಸಂರಕ್ಷಣೆ ರೂಪುಗೊಳ್ಳಬೇಕಿದೆ.

ಇಂದಿನ ಯುವಜನತೆ ಹಾಗೂ ನಗರ ಮಧ್ಯಮವರ್ಗದಲ್ಲಿ ಅನಗತ್ಯ ಬಳಕೆ ಮತ್ತು ಪ್ರದರ್ಶನದ ಜೀವನಶೈಲಿ ಹೆಚ್ಚುತ್ತಿರುವುದು ವಾಸ್ತವ. ದೇಶ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿಯೂ ಮಿತವ್ಯಯದ ಮನೋಭಾವ ಬೆಳೆಯುವುದು ಅಗತ್ಯವಾಗಿದೆ. ವೈಯಕ್ತಿಕ ಸೌಕರ್ಯಕ್ಕಿಂತ ರಾಷ್ಟ್ರದ ಹಿತ ದೊಡ್ಡದು ಎಂಬ ಅರಿವು ಸಮಾಜದಲ್ಲಿ ಬಲಪಡಬೇಕಿದೆ.

ವಿದೇಶಿ ವಿನಿಮಯ ಉಳಿಸುವ ನಿಟ್ಟಿನಲ್ಲಿ ಅನಗತ್ಯ ಚಿನ್ನ ಖರೀದಿ ಮತ್ತು ವಿದೇಶ ಪ್ರವಾಸವನ್ನು ನಿಯಂತ್ರಿಸುವ ಸಲಹೆಯೂ ಗಮನಾರ್ಹ. ಸ್ವದೇಶಿ ಉತ್ಪನ್ನಗಳ ಬಳಕೆ, ನೈಸರ್ಗಿಕ ಕೃಷಿಗೆ ಉತ್ತೇಜನ ಮತ್ತು ಖಾದ್ಯ ಎಣ್ಣೆ ಬಳಕೆ ಕಡಿಮೆ ಮಾಡುವ ಸಲಹೆಗಳು ಆತ್ಮನಿರ್ಭರ ಭಾರತದ ಪರಿಕಲ್ಪನೆಗೆ ಪೂರಕವಾಗಿವೆ.

ಸಂಕಷ್ಟದ ಸಂದರ್ಭಗಳಲ್ಲಿ ಸರ್ಕಾರದ ಕ್ರಮಗಳಷ್ಟೇ ಸಾಕಾಗುವುದಿಲ್ಲ, ಜನರ ಸಹಭಾಗಿತ್ವವೂ ಅಗತ್ಯ. ದೇಶದ ಆರ್ಥಿಕ ಶಕ್ತಿಯನ್ನು ಕಾಪಾಡಲು ಪ್ರತಿಯೊಬ್ಬ ನಾಗರಿಕನೂ ಜವಾಬ್ದಾರಿಯುತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಸಮಯ ಇದು. ಸಂಯಮ ಮತ್ತು ಸ್ವಾವಲಂಬನೆಯ ಮನೋಭಾವವೇ ಇಂತಹ ಕಾಲಘಟ್ಟದಲ್ಲಿ ನಿಜವಾದ ದೇಶಸೇವೆ.

ಕಾಳಿ ಮಾತೆ ಕೊನೆಗೂ ಕಣ್ಣು ತೆರೆದಳು

ಪಶ್ಚಿಮ ಬಂಗಾಳದಲ್ಲಿ ಇದುವರೆಗೂ ಮರೀಚಿಕೆಯಾಗಿದ್ದ ಜನರ ನೆಮ್ಮದಿ, ಕಾನೂನು ಮತ್ತು ಸುವ್ಯವಸ್ಥೆ, ಅಭಿವೃದ್ಧಿಗಳಿಗೆ ಚಾಲನೆ ದೊರೆಯಬೇಕು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಪರಿವರ್ತನೆ ಅನ್ನುವುದು ಯುಗಕ್ಕೊಮ್ಮೆ ಆಗುತ್ತದೆ ಎಂದು ಹೇಳುವುದುಂಟು. ಯಾವುದೇ ಪರಿವರ್ತನೆ ಅಷ್ಟು ಸುಲಭವಾಗಿ ಪ್ರಾಪ್ತವಾಗದು ಎಂಬುದು ಈ ಮಾತಿನ ಒಳಾರ್ಥ. ಭಾರತದಂತ ಬೃಹತ್ ಸಂಕೀರ್ಣ ದೇಶದಲ್ಲಿ ಪರಿವರ್ತನೆ ತರುವುದು ಸುಲಭಸಾಧ್ಯವೇನೂ ಅಲ್ಲ. ಬಾಬರ್ ಎಂಬ ಆಕ್ರಮಣಕೋರ ಹಾಳುಗೆಡವಿದ ಅಯೋಧ್ಯೆ ಶ್ರೀರಾಮ ಮಂದಿರವನ್ನು ಮರು ಸ್ಥಾಪಿಸುವುದಕ್ಕೆ 500 ವರ್ಷಗಳೇ ಬೇಕಾಯಿತು. ಭ್ರಷ್ಟಾಚಾರ, ದುರಾಡಳಿತದಿಂದ ಜಡ್ಡುಗಟ್ಟಿದ್ದ ಕೇಂದ್ರದ ಕಾಂಗ್ರೆಸ್ ಸರ್ಕಾರಕ್ಕೆ ಅಂತ್ಯ ಹಾಡಿ, ಪರಿವರ್ತನೆ ತರಲು 50ಕ್ಕಿಂತ ಹೆಚ್ಚು ವರ್ಷ ಕಾಯಬೇಕಾಯಿತು. ಭ್ರಷ್ಟಾಚಾರ, ದುರಾಡಳಿತ, ಮಹಿಳೆಯರ ಮೇಲೆ ಅವ್ಯಾಹತ ಅತ್ಯಾಚಾರ, ಭಯಗ್ರಸ್ತ ಬಂಗಾಳದಲ್ಲಿ ಪರಿವರ್ತನೆ ತರುವುದಕ್ಕೂ ಬರೋಬ್ಬರಿ 79 ವರ್ಷವೇ ಬೇಕಾಯಿತು. ಸ್ವಾತಂತ್ರ್ಯ ಬಂದ ಆರಂಭದಲ್ಲಿದ್ದ ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ 1977ರಲ್ಲಿ ಸಿಪಿಎಂ ಅಂತ್ಯ ಹಾಡಿ 34 ವರ್ಷ ಆಡಳಿತ ನಡೆಸಿದರೂ ಬಂಗಾಳ ಬದಲಾಗಲಿಲ್ಲ, ಇನ್ನಷ್ಟು ಅಧಃಪತನ ಕಂಡಿತು. ಅಲ್ಲೊಂದು 'ಪರಿಬೊರ್ತನ್' ತರಲು ಹೊರಟ ಮಮತಾ ದೀದಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸತತ 15 ವರ್ಷ ಅಧಿಕಾರದಲ್ಲಿದ್ದರೂ ಆ ರಾಜ್ಯವನ್ನು 'ಬೀಮಾರು' ರಾಜ್ಯವಾಗಿ ಪ್ರಪಾತಕ್ಕೆ ದೂಡಿದ ಕೀರ್ತಿ ಆಕೆಗೇ ಸಲ್ಲಬೇಕು. ಈಗ ಆಕೆಯ ದುರಾಡಳಿತ ಕೊನೆಗೊಂಡು ಕಮಲ ಪಡೆಯ ಆಡಳಿತ ಆರಂಭವಾಗಿದೆ. ಬಿಜೆಪಿಯ ಸುವೇಂದು (ಶುಭೇಂದು) ಅಧಿಕಾರಿ ಪ. ಬಂಗಾಳದ ಮುಖ್ಯಮಂತ್ರಿಯಾಗಿ ಶನಿವಾರ (ಮೇ 9) ಅಧಿಕಾರ ವಹಿಸಿಕೊಂಡು ಇನ್ನೊಂದು 'ಪರಿಬೊರ್ತನ್'ಗೆ ಸಜ್ಜಾಗಿದ್ದಾರೆ. ಸುವೇಂದು ಹೆಸರಿಗೆ ತಕ್ಕಂತೆ ಬಂಗಾಳಕ್ಕೆ ಶುಭ ತರಲಿದ್ದಾರೆಯೇ? ಎಂಬುದು ಪ್ರಾಜ್ಞರ ಸದ್ಯದ ಕುತೂಹಲ.

ಬಂಗಾಳದಲ್ಲಿ ಚುನಾವಣಾ ಕಾಲದಿಂದಲೇ ಸದ್ದಿಲ್ಲದ ಪರಿವರ್ತನೆಯೊಂದು ಕಂಡು ಬರುತ್ತಿದೆ. 2021ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸುಮಾರು 300 ಕಡೆ ಹಿಂಸಾಚಾರ, 58 ಸಾವುಗಳು ವರದಿಯಾಗಿದ್ದವು. ಆದರೆ ವರದಿಯಾಗದ ಚುನಾವಣೋತ್ತರ ಹಿಂಸಾಚಾರವನ್ನೂ ಪರಿಗಣಿಸಿದರೆ 321 ಮಂದಿ ಬಿಜೆಪಿ ಕಾರ್ಯಕರ್ತರೇ ಟಿಎಂಸಿ ಗೂಂಡಾಗಳಿಂದ ಹತ್ಯೆಗೀಡಾಗಿದ್ದರು. ಆ ಚುನಾವಣೆಯಲ್ಲಿ ಮತದಾರರೇ ಓಟು ಹಾಕುವಂತಿರಲಿಲ್ಲ, ಅವರ ಪರವಾಗಿ ವೋಟ್ ಹಾಕಿದವರು ಟಿಎಂಸಿ ಗೂಂಡಾ ಕಾರ್ಯಕರ್ತರು. ಕಮ್ಯುನಿಸ್ಟ್ ಆಡಳಿತವಿದ್ದ ಕಾಲದಿಂದ ಬಂಗಾಳದಲ್ಲೊಂದು ಕ್ರೂರ ನಿಯಮವಿತ್ತು. 'ಮತ ಚಲಾಯಿಸಿ. ಆದರೆ ಅವು ನಮಗೇ ಬೀಳಬೇಕು. ಒಂದು ವೇಳೆ ಬೇರೆಯವರಿಗೆ ಹಾಕಿದರೆ ನೀವು ಯಾರಿಗೆ ವೋಟ್ ಹಾಕಿದಿರಿ ಎಂಬುದು ನಮಗೆ ತಿಳಿಯುತ್ತದೆ. ನಮಗೆ ಮತ ಬೀಳದಿದ್ದರೆ ನಿಮ್ಮ ಗ್ರಹಚಾರ ನೆಟ್ಟಗಿರುವುದಿಲ್ಲ'- ಇದು ಕಮ್ಯುನಿಸ್ಟ್ ಮತ್ತು ಟಿಎಂಸಿ ಆಡಳಿತ ಕಾಲದ ಅಲಿಖಿತ ಕ್ರೂರ ನಿಯಮ. ಹೀಗಿರುವಾಗ ಮತದಾರರು ಮತಗಟ್ಟೆಗೆ ಧೈರ್ಯವಾಗಿ ಹೇಗೆ ಹೋಗಲು ಸಾಧ್ಯ? ಒಂದು ವೇಳೆ ಹೋದರೂ ತನಗಿಷ್ಟವಾದವರಿಗೆ ನಿರ್ಭಯವಾಗಿ ಮತ ಚಲಾಯಿಸುವುದಾದರೂ ಹೇಗೆ? ಪ್ರಜಾಪ್ರಭುತ್ವ ನಾಶವಾಗುವುದು ಕಾನೂನು ಬದಲಾವಣೆಯಿಂದ ಅಲ್ಲ, ಬದಲಿಗೆ ಹೀಗೆ ಜನರ ವರ್ತನೆಯಲ್ಲಿ ಬದಲಾವಣೆ ತರುವ ಮೂಲಕ. ಸಿಪಿಎಂ, ಟಿಎಂಸಿ 49 ವರ್ಷ ಅವ್ಯಾಹತವಾಗಿ ನಡೆಸಿದ್ದು ಇದನ್ನೇ. ಹಾಗಾಗಿಯೇ ಅಷ್ಟೊಂದು ದೀರ್ಘಕಾಲ ಅಧಿಕಾರದಲ್ಲಿ ಮುಂದುವರೆಯಲು ಆ ಎರಡು ಪಕ್ಷಗಳಿಗೂ ಸಾಧ್ಯವಾಗಿದ್ದು.

ಜೊತೆಗೆ ವ್ಯವಸ್ಥೆಯಂತೂ ಹಳ್ಳ ಹಿಡಿದು ಹೋಗಿತ್ತು. ರಾಜ್ಯದಲ್ಲಿ ಶೇ. 70ರಷ್ಟು ದೂರುಗಳು ದಾಖಲಾಗುತ್ತಲೇ ಇರಲಿಲ್ಲ. ಪೊಲೀಸರು, ಸರ್ಕಾರಿ ಅಧಿಕಾರಿಗಳು, ನೌಕರರು ಒಂದು ರೀತಿಯಲ್ಲಿ ಟಿಎಂಸಿ ಏಜೆಂಟರಂತೆ ಕಾರ್ಯನಿರ್ವಹಿಸುತ್ತಿದ್ದರು. ಕಳೆದ ವಾರ ಸರ್ಕಾರ ಬದಲಾಗುತ್ತಲೇ ಅವರೆಲ್ಲರೂ ಕೇಸರಿ, ಬಿಜೆಪಿ ಬಾವುಟ ಹಿಡಿದು 'ಜೋಯ್ ಶ್ರೀರಾಂ' 'ಜೋಯ್ ಮೋದಿ' ಎಂದು ಇದ್ದಕ್ಕಿದ್ದಂತೆ ಅದುವರೆಗಿನ ಪ್ಲೇಟ್ ಬದಲಾಯಿಸಿ ಜಯಘೋಷ ಮಾಡಿದರು. ಅದು ನಿಜವಾದ ಪರಿವರ್ತನೆ ಯಂತೂ ಆಗಿರಲಿಲ್ಲ. ಹೀಗೇ ಇದ್ದರೆ ಇನ್ನು ಉಳಿಗಾಲವಿಲ್ಲ ಎಂಬ ಭಯದಿಂದ ನಿಷ್ಠೆ ಬದಲಾಯಿಸಿದ ಸಂಕೇತ ಅದಾಗಿತ್ತೆಂಬುದು ಗುಟ್ಟಲ್ಲ.

2021ರಲ್ಲಿ ಶೇ. 85.2ರಷ್ಟಿದ್ದ ಮತದಾನ ಪ್ರಮಾಣ ಈ ಬಾರಿ ಶೇ.92ಕ್ಕಿಂತಲೂ ಹೆಚ್ಚು ಆಗುವುದಕ್ಕೆ ಎಸ್‌ಆರ್‌ಐ ಒಂದೇ ಕಾರಣವಲ್ಲ. ಟಿಎಂಸಿಯ ದುರಾಡಳಿತ, ಹದಗೆಟ್ಟ ವ್ಯವಸ್ಥೆ, ಅವ್ಯಾಹತ ಅತ್ಯಾಚಾರದಿಂದ ಮುಕ್ತಿ ಪಡೆಯಬೇಕಾದರೆ ನೀವು ನಿರ್ಭಯದಿಂದ ಮತಗಟ್ಟೆಗೆ ಬಂದು ಮತ ಚಲಾಯಿಸಿ. ನಿಮ್ಮ ಜೊತೆ ನಾವಿದ್ದೇವೆಂಬ ಬಿಜೆಪಿ ವರಿಷ್ಠರ ಬಹಿರಂಗ ಕರೆ, ಹಳ್ಳಿಹಳ್ಳಿಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಪುಟ್ಟ ಪುಟ್ಟ ಸಭೆ, ಬೈಠಕ್‌ಗಳನ್ನು ನಡೆಸಿ ಮತದಾರರಲ್ಲಿ ಧೈರ್ಯ ತುಂಬಿದ ಸಂಘ ಪರಿವಾರದ ಪ್ರಚಾರ ಬಯಸದ ಸಾವಿರಾರು ಕಾರ್ಯಕರ್ತರ ಅಭಯ, ಜತೆಗೆ ಈ ಬಾರಿ ಏನೇ ಆದರೂ ಪರಿವರ್ತನೆ ತರಲೇಬೇಕೆಂಬ ಜನಮನದ ತೀವ್ರ ತುಡಿತಗಳ ಪರಿಣಾಮವಾಗಿ ಬಂಗಾಳದಲ್ಲಿ ಭಯಮುಕ್ತ ಸ್ವಾತಂತ್ರ್ಯದ ಕುಳಿರ್ಗಾಳಿ ಬೀಸುವಂತಾಯಿತು. ಆರ್‌ಜಿಕರ್ ಮೆಡಿಕಲ್ ಕಾಲೇಜಿನ ಅತ್ಯಾಚಾರ ಸಂತ್ರಸ್ತೆಯ ತಾಯಿ ರತ್ನಾ ದೇವನಾಥ್, 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಮಾಝಿ, ಸಂದೇಶ ಖಾಲಿಯ ಅತ್ಯಾಚಾರ ಸಂತ್ರಸ್ತೆ ರೇಖಾ ಪಾತ್ರರಂತಹ ಸಾಮಾನ್ಯರಲ್ಲಿ ಸಾಮಾನ್ಯರು ಚುನಾವಣೆಗೆ ಸ್ಪರ್ಧಿಸಿ ಬಿಜೆಪಿ ಶಾಸಕಿಯರಾಗಿರುವುದಕ್ಕೆ ಇದೇ ಹಿನ್ನೆಲೆ.



ಪಶ್ಚಿಮ ಬಂಗಾಳದ ಬಿಜೆಪಿ ಗೆಲುವು ನೆರೆಯ ಬಾಂಗ್ಲಾದೇಶದ ಗದ್ದುಗೆ ಹಿಡಿದವರಿಗೆ ಆತಂಕ, ಭಯ ಹುಟ್ಟಿಸಿರುವುದಂತೂ ನಿಜ. ಅಲ್ಲಿನ ಆಡಳಿತಾರೂಢ ಬಿಎನ್‌ಪಿ ಪಕ್ಷದ ಸಂಸದ ಮೊಹಮ್ಮದ್ ನೂರುಲ್ ಹುಡಾ ಹೇಳಿಕೆಯನ್ನು ನೀವು ಈಗಾಗಲೇ ಕೇಳಿಯೇ ಇರುತ್ತೀರಿ. ಚುನಾವಣೆಯಲ್ಲಿ ಸೋತು ಸುಣ್ಣವಾದ ಮಮತಾ ಬ್ಯಾನರ್ಜಿಗೆ ''ನೀವು ರಾಜೀನಾಮೆ ಕೊಡಬೇಡಿ. ಪ. ಬಂಗಾಳವನ್ನು ಭಾರತದಿಂದ ಪ್ರತ್ಯೇಕಿಸಲು ದಿಲ್ಲಿ ದೊರೆಗಳೊಂದಿಗೆ ಹೋರಾಡಿ. ಅದನ್ನು ಸ್ವತಂತ್ರ ದೇಶವನ್ನಾಗಿಸಲು ಬಾಂಗ್ಲಾದ 17 ಕೋಟಿ ಮುಸ್ಲಿಮರು ನಿಮ್ಮ ಜೊತೆಗೆ ಸಾಥ್ ನೀಡುತ್ತೇವೆ'' ಎಂದು ಆತ ಬಹಿರಂಗ ಕರೆ ಕೊಡುತ್ತಾನೆಂದರೆ ಆತಂಕ ಪಡಬೇಕಾಗಿರುವುದು ಪ.ಬಂಗಾಳದ ಬಿಜೆಪಿ ಸರ್ಕಾರ ಹಾಗೂ ಕೇಂದ್ರದ ಮೋದಿ ಸರ್ಕಾರವೇ ಹೊರತು ಬಾಂಗ್ಲಾದೇಶದ ಸರ್ಕಾರವಲ್ಲ.

ಮಮತಾ ಬ್ಯಾನರ್ಜಿ ಸರ್ಕಾರದ ಅವಧಿಯಲ್ಲಿ ದುರ್ಗಾಷ್ಟಮಿಯಂದು ದುರ್ಗಾ ಪೂಜೆ ಮಾಡುವಂತಿರಲಿಲ್ಲ. ಮಾ (ತಾಯಿ ಕಾಳಿ /ದುರ್ಗೆ), ಮಾಟಿ (ತಾಯಿನಾಡು) ಮತ್ತು ಮಾನುಷ್ (ಬಂಗಾಲಿಗಳು)- ಇವು ಬೆಂಗಾಲಿ ಹಿಂದುಗಳ ಮೂರು ಅಸ್ಮಿತೆಗಳು. ಅದಕ್ಕೆ ಧಕ್ಕೆ ಬಂದಾಗ ಮಾತ್ರ ಅವರು ಸುಮ್ಮನಿರುವುದಿಲ್ಲ. ಇಡೀ ದೇಶಕ್ಕೆ ದೇಶವೇ ರಾಮಮಂದಿರಕ್ಕೆ ಹೋರಾಡುತ್ತಿದ್ದ ವೇಳೆಯಲ್ಲಿ ತಲೆ ಕೆಡಿಸಿಕೊಳ್ಳದೆ ತಟಸ್ಥವಾಗಿದ್ದ ಏಕೈಕ ರಾಜ್ಯವೆಂದರೆ ಬಂಗಾಳವಾಗಿತ್ತು. ಆದರೆ ಮಮತಾ ಆಡಳಿತ ಕಾಲದಲ್ಲಿ ಟಿಎಂಸಿ ಗೂಂಡಾಗಳು ಬಂಗಾಳದ ಅಸ್ಮಿತೆಯದ ಪವಿತ್ರ ಕಾಳಿ ಮಂದಿರಗಳ ಬಾಗಿಲು ಮುಚ್ಚಿಸಿ, ಮೂರ್ತಿಯನ್ನು ಭಗ್ನಗೊಳಿಸಿ ಹಿಂಸಾಚಾರ ನಡೆಸಿದಾಗ ಬಂಗಾಳಿಗಳಿಗೆ ತಡೆದುಕೊಳ್ಳಲಾಗಲಿಲ್ಲ. ಸೇಡಿಗಾಗಿ ಕೊತ ಕೊತ ಕುದಿಯುತ್ತಿದ್ದರು. ಈ ಬಾರಿ ಮೋದಿ, ಶಾ, ನಾವಿದ್ದೇವೆ ಎಂದು ಅಭಯ ನೀಡಿದ್ದೇ ತಡ ಬಂಗಾಳಿಗಳ ಮೈ ಮೇಲೆ ಕಾಳಿಮಾತೆಯ ಆವಾಹನೆ ಆಗಿಬಿಟ್ಟಿತು. ಚುನಾವಣೆ ಫಲಿತಾಂಶ ಪ್ರಕಟವಾದ ದಿನದಂದೇ ಮುಚ್ಚಿಸಲಾಗಿದ್ದ ನೂರಾರು ಕಾಳಿ ಮಾತೆಯ ಗುಡಿಗಳ ಬಾಗಿಲಿನ ಚಿಲಕ ಕಿತ್ತು, ಗುಡಿಯನ್ನು ಸ್ವಚ್ಛಗೊಳಿಸಿ, ಸ್ವಚ್ಛಗೊಳಿಸಿದ ನೀರನ್ನು ಹಣೆ, ತಲೆಗೆ ಚಿಮುಕಿಸಿಕೊಂಡು ಸಂಭ್ರಮಿಸಿದರು. ಗೆದ್ದ ಹಲವು ಬಿಜೆಪಿ ಅಭ್ಯರ್ಥಿಗಳು ಕಾಳಿ ವಿಗ್ರಹದ ಪಾದದಲ್ಲಿ ಗೆಲುವಿನ ಪ್ರಮಾಣ ಪತ್ರ ಇಟ್ಟು ಆಶೀರ್ವಾದ ಬೇಡಿದರು. ಪಶ್ಚಿಮ ಬರ್ದಮಾನ್ ಜಿಲ್ಲೆಯ ಅಸನ್ಸೋಲ್ ಉತ್ತರ ಕ್ಷೇತ್ರದ ಕಾಳಿ ಮಾತೆಯ ಮಂದಿರಕ್ಕೆ ಟಿಎಂಸಿ ಗೂಂಡಾಗಳು ಬೀಗ ಜಡಿದಿದ್ದರು. ಈಗದು ಮುಕ್ತಗೊಂಡಿದೆ. ಅಲ್ಲಿ ಒಟ್ಟು ಒಂಬತ್ತು ಸೀಟುಗಳಿವೆ. 9ಕ್ಕೆ 9ರಲ್ಲೂ ಈ ಬಾರಿ ಬಿಜೆಪಿಯ ದಿಗ್ವಿಜಯ. ಈ ಜಿಲ್ಲೆಗೆ ತಾಗಿಕೊಂಡಿರುವ ಬಂಕುರಾದಲ್ಲಿ 12ಕ್ಕೆ 12, ಪುರುಲಿಯಾದಲ್ಲಿ 9ಕ್ಕೆ 9, ಝಾರ್ ಗ್ರಾಮ್‌ದಲ್ಲಿ 4ಕ್ಕೆ 4, ಪೂರ್ವ ಬರ್ಧಮಾನ್ ಜಿಲ್ಲೆಯಲ್ಲಿ 15ಕ್ಕೆ 13... ಹೀಗೆ ಕಾಳಿಮಾತೆ ಮಂದಿರಕ್ಕೆ ಟಿಎಂಸಿ ಬೀಗ ಜಡಿದ ಫಲವಾಗಿ ಬಿಜೆಪಿಗೆ ಮತದಾರರ ಭರ್ಜರಿ ಬೆಂಬಲ. ಮತದಾರರ ಆಕ್ರೋಶ ಅಂತಹುದಾಗಿತ್ತು.

ಕಾಳಿ ಮಾತೆ (ದುರ್ಗೆ) ಬಂಗಾಲಿಗಳ ಅಸ್ಮಿತೆ. ಶನಿವಾರ ನಡೆದ ಪ್ರಮಾಣವಚನ ಸಮಾರಂಭದ ವೇದಿಕೆಯ ಹಿಂಬದಿ ಕೂಡ ಕಾಳಿಮಾತೆಯ ಭವ್ಯ ಚಿತ್ರ ರಾರಾಜಿಸುತ್ತಿತ್ತು.

ಸುವೇಂದು ಅಧಿಕಾರಿ ಐವರು ಕ್ಯಾಬಿನೆಟ್ ಸಚಿವರೊಂದಿಗೆ ಮುಖ್ಯಮಂತ್ರಿ ಯಾಗಿ ಶಪಥ ಸ್ವೀಕರಿಸಿದ್ದಾರೆ. ಅಲ್ಲಿಗೆ ಪಶ್ಚಿಮ ಬಂಗಾಳದಲ್ಲೂ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸ್ಥಾಪನೆಯಾದಂತಾಗಿದೆ. ಬಂಗಾಳ ಹಲವು ಸ್ಥಿತ್ಯಂತರಗಳಿಗೆ ಸಾಕ್ಷಿಯಾಗಿದೆ. ಧ್ವಜದ ಬಣ್ಣಗಳು ಬದಲಾಗುತ್ತಲೇ ಇವೆ. 'ಕೆಂಪುಧ್ವಜ ಕೆಳಗಿಳಿದು ಹಸಿರು (ಟಿಎಂಸಿ) ಧ್ವಜ ಹಾರಾಡಿತು. ಈಗ ಹಸಿರು ಕೆಳಗಿಳಿದು ಕೇಸರಿ ಧ್ವಜ ಬಾನೆತ್ತರಕ್ಕೇರಿದೆ. ಅಷ್ಟಾದರೆ ಸಾಲದು, ಧ್ವಜದ ಬಣ್ಣ ಬದಲಾದರೆ ಸಾಲದು. ಆ ರಾಜ್ಯದ, ಇದುವರೆಗೂ ಮರೀಚಿಕೆಯಾಗಿದ್ದ ಜನರ ನೆಮ್ಮದಿ, ಕಾನೂನು ಮತ್ತು ಸುವ್ಯವಸ್ಥೆ, ಅಭಿವೃದ್ಧಿಗಳಿಗೆ ಚಾಲನೆ ದೊರೆಯಬೇಕು. 'ಅಭೀ ಬದ್ಲಾ ನಹೀ, ಬದಲಾವ್' (ಈಗ ಪ್ರತೀಕಾರವಲ್ಲ, ಬದಲಾವಣೆ) ಎಂಬ ಪ್ರಧಾನಿ ಮೋದಿ ಅವರ ಘೋಷಣೆ ಕೃತಿಗಿಳಿಯಬೇಕು. ಆಗಲೇ ಈ 'ಪೊರಿಬೊರ್ತನ್' ಅರ್ಥಪೂರ್ಣ ಹಾಗೂ ಐತಿಹಾಸಿಕ.

ಆಗ ಮಾತ್ರ ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರ ಆತ್ಮಕ್ಕೆ ಚಿರಶಾಂತಿ. 'ತುಮಿದುರ್ಗಾ ದಶಪ್ರಹರಣಧಾರಿಣಿ' ಎಂಬ ರಣಮಂತ್ರ ಬರೆದ ಬಂಕಿಮರ ಸ್ಮೃತಿಗೆ ಗೌರವ; ಹಿಂದು ಸನ್ಯಾಸಿ ವಿವೇಕಾನಂದ, ಚೈತನ್ಯ ಪ್ರಭು, ಅರವಿಂದ ಮಹರ್ಷಿ, ರವೀಂದ್ರನಾಥ ಟ್ಯಾಗೋರ್, ಸ್ವಾತಂತ್ರ್ಯ ಪ್ರಾಪ್ತಿಗಾಗಿ ನೇಣುಗಂಬವೇರಿದ ಅಗಣಿತ ಸ್ವಾತಂತ್ರ್ಯ ಸೇನಾನಿಗಳ ತ್ಯಾಗ, ಬಲಿದಾನಗಳಿಗೆ ಅಮೂಲ್ಯ ಬೆಲೆ. ಹಾಗಾಗಲಿ.

ರಾಷ್ಟ್ರೀಯ ತಂತ್ರಜ್ಞಾನ ದಿನದಂದು ತಂತ್ರಜ್ಞಾನ-ನಾವೀನ್ಯತೆಯ ಸಮನ್ವಯ

• ಡಾ. ಜಿತೇಂದ್ರ ಸಿಂಗ್, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು(ಸ್ವತಂತ್ರ ಉಸ್ತುವಾರಿ)



ರಾಷ್ಟ್ರೀಯ ತಂತ್ರಜ್ಞಾನ ದಿನ - ವಿಜ್ಞಾನ Tech, ಮೇ 11ರಂದು ಆಚರಿಸಲಾಗುವ ಈ ದಿನವು 1998ರ ಪೋಖ್ರಾನ್ ಪರಮಾಣು ಪರೀಕ್ಷೆಗಳ ಯಶಸ್ಸಿನ ಮೂಲಕ ಭಾರತದ ಐತಿಹಾಸಿಕ ತಾಂತ್ರಿಕ ಸಾಧನೆಯನ್ನು ಸ್ಮರಿಸುತ್ತದೆ. ಈ ಸಂದರ್ಭವು ವೈಜ್ಞಾನಿಕ ನಾವೀನ್ಯತೆ, ತಾಂತ್ರಿಕ ಪ್ರಗತಿ ಮತ್ತು ಭಾರತದ ಅಭಿವೃದ್ಧಿಯ ಪಥವನ್ನು ರೂಪಿಸುವಲ್ಲಿ ವಿಜ್ಞಾನ, ಸಮಾಜ ಮತ್ತು ಉದ್ಯಮಗಳ ನಡುವಿನ ಸಮನ್ವಯಕ್ಕೆ ದೇಶದ ಅಚಲ ಬದ್ಧತೆಯನ್ನು ಉಲ್ಲೇಖಿಸುತ್ತದೆ.

ಕಳೆದ ದಶಕದಲ್ಲಿ, ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತದ ತಾಂತ್ರಿಕ ಪರಿಸರ ವ್ಯವಸ್ಥೆಯು ಅಭೂತಪೂರ್ವ ಬೆಳವಣಿಗೆಗೆ ಸಾಕ್ಷಿಯಾಗಿದೆ. ಇದು ಕ್ಷಿಪ್ರ ನಾವೀನ್ಯತೆ, ವಿಸ್ತರಿಸುತ್ತಿರುವ ಡಿಜಿಟಲ್ ಮೂಲಸೌಕರ್ಯ ಮತ್ತು ಉದಯೋನ್ಮುಖ ವಲಯಗಳಲ್ಲಿನ ಮಹತ್ವದ ಪ್ರಗತಿಯಿಂದ ಗುರುತಿಸಲ್ಪಟ್ಟಿದೆ. ಸ್ವಾವಲಂಬನೆಗೆ ಇಲ್ಲಿ ಹೆಚ್ಚಿನ ಒತ್ತು ನೀಡಲಾಗಿದ್ದು, ವೈಜ್ಞಾನಿಕ ಆವಿಷ್ಕಾರಗಳನ್ನು ನೈಜ ಜಗತ್ತಿನ ಮೇಲೆ ಪ್ರಭಾವ ಬೀರುವಂತೆ ಪರಿವರ್ತಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಕ್ವಾಂಟಮ್ ಸಂವಹನ, ಬಾಹ್ಯಾಕಾಶ, ಜೈವಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (AI), ಸೆಮಿಕಂಡಕ್ಟರ್‌ಗಳು, ನವೀಕರಿಸಬಹುದಾದ ಇಂಧನ ಮತ್ತು ಹವಾಮಾನ-ಸ್ಥಿತಿಸ್ಥಾಪಕ ವ್ಯವಸ್ಥೆಗಳಂತಹ ಮುಂಚೂಣಿ ತಂತ್ರಜ್ಞಾನ ಚಾಲಿತ ಕ್ಷೇತ್ರಗಳಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ. 'ವಿಕಸಿತ ಭಾರತ'ದ ಗುರಿ ಸಾಧನೆಯಲ್ಲಿ ಜೈವಿಕ ಉತ್ಪಾದನೆಯು(Biomanufacturing) ಒಂದು ಪ್ರಮುಖ ತಂತ್ರಜ್ಞಾನವಾಗಿದ್ದು, ಇದು ಜೈವಿಕ ವ್ಯವಸ್ಥೆಗಳನ್ನು ಬಳಸಿಕೊಂಡು ಹೆಚ್ಚಿನ ಮೌಲ್ಯದ ಬಯೋಲಾಜಿಕ್ಸ್, ಲಸಿಕೆಗಳು, ಇಂಧನಗಳು ಮತ್ತು ಸಾಮಗ್ರಿಗಳನ್ನು ಉತ್ಪಾದಿಸುವ ಮೂಲಕ ಸುಸ್ಥಿರ ನಾವೀನ್ಯತೆ, ಆರೋಗ್ಯ ಕ್ಷೇತ್ರದ ಸ್ಥಿತಿಸ್ಥಾಪಕತ್ವ ಮತ್ತು ಬಲವಾದ ಜೈವಿಕ ಆರ್ಥಿಕತೆಯನ್ನು ಸಕ್ರಿಯಗೊಳಿಸುತ್ತದೆ. ಚಂದ್ರಯಾನ-3 ಮಿಷನ್‌ನ ಯಶಸ್ಸು ಮತ್ತು ಕಲ್ಪಾಕ್ಕಂನ ಸ್ವದೇಶಿ ಪ್ರೊಟೊಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ 'ಕ್ರಿಟಿಕಾಲಿಟಿ' (criticality) ಹಂತವನ್ನು ತಲುಪಿರುವುದು, ಆಯಕಟ್ಟಿನ ವಲಯಗಳಲ್ಲಿ ದೇಶದ ಮುನ್ನಡೆಯನ್ನು ಮತ್ತು ದೀರ್ಘಕಾಲದ ತಾಂತ್ರಿಕ ಸಾರ್ವಭೌಮತ್ವಕ್ಕೆ ಭಾರತದ ಬದ್ಧತೆಯನ್ನು ಮತ್ತಷ್ಟು ಉಲ್ಲೇಖಿಸುತ್ತವೆ.

ಈ ಪ್ರಗತಿಯು ವಿವಿಧ ಪ್ರಮುಖ ರಾಷ್ಟ್ರೀಯ ಮಾನದಂಡಗಳಲ್ಲೂ ಪ್ರತಿಫಲಿಸುತ್ತದೆ. ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (WIPO) ಬಿಡುಗಡೆ ಮಾಡಿದ ಜಾಗತಿಕ ನಾವೀನ್ಯತೆ ಸೂಚ್ಯಂಕದಲ್ಲಿ (Global Innovation Index) ಭಾರತವು ತನ್ನ ಸ್ಥಾನವನ್ನು ಗಣನೀಯವಾಗಿ ಸುಧಾರಿಸಿಕೊಂಡಿದ್ದು, 2015ರಲ್ಲಿ 81ನೇ ಸ್ಥಾನದಲ್ಲಿದ್ದ ದೇಶವು 2025ರಲ್ಲಿ 38ನೇ ಸ್ಥಾನಕ್ಕೆ ಏರಿದೆ. ದೇಶದಲ್ಲಿ ಮಂಜೂರಾದ ಪೇಟೆಂಟ್‌ಗಳ ಸಂಖ್ಯೆಯು 2014-15ರಲ್ಲಿ ಕೆಲವೇ ಸಾವಿರಗಳಷ್ಟಿದ್ದು, 2025ರ ವೇಳೆಗೆ ಸುಮಾರು 1.5 ಲಕ್ಷಕ್ಕೆ ಏರಿಕೆಯಾಗಿದೆ. ಭಾರತದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯು ಸಹ ಗಣನೀಯವಾಗಿ ವಿಸ್ತರಿಸಿದ್ದು, ವಿವಿಧ ಕ್ಷೇತ್ರಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಡಿಪಿಐಐಟಿ ಮಾನ್ಯತೆ ಪಡೆದ ಸ್ಟಾರ್ಟ್‌ಅಪ್ ಗಳಿವೆ. ಇದರಲ್ಲಿ ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್ ಮತ್ತು ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್ ನಂತಹ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸುಮಾರು ಹದಿನೈದು ಸಾವಿರ ಸ್ಟಾರ್ಟ್‌ಅಪ್‌ಗಳು ಕಾರ್ಯನಿರ್ವಹಿಸುತ್ತಿವೆ. ಪಳೆಯುಳಿಕೆ ರಹಿತ ಮೂಲಗಳಿಂದ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು 250 ಎಗಿಂತ ಹೆಚ್ಚಿಸಿರುವುದು ಮತ್ತು ಒಂದು ದಶಕದಲ್ಲಿ ಜೈವಿಕ ಆರ್ಥಿಕತೆಯು (bioeconomy) 10 ಬಿಲಿಯನ್‌ನಿಂದ 195 ಬಿಲಿಯನ್‌ಗೆ ಬೆಳೆದಿರುವುದು ಈ ರೂಪಾಂತರಕ್ಕೆ ಮತ್ತಷ್ಟು ಸಾಕ್ಷಿಯಾಗಿದೆ.

ಕಳೆದ ದಶಕದಲ್ಲಿ ಸರ್ಕಾರವು ಜಾರಿಗೆ ತಂದ ನೀತಿ ಸುಧಾರಣೆಗಳು ಈ ರೂಪಾಂತರದಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ಇವುಗಳಲ್ಲಿ ಸ್ಟಾರ್ಟ್‌ಅಪ್ ಮತ್ತು ಇನ್ಕ್ಯುಬೇಶನ್ ಪರಿಸರ ವ್ಯವಸ್ಥೆಯ ಕ್ಷಿಪ್ರ ವಿಸ್ತರಣೆ, ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಆಯಕಟ್ಟಿನ ಕ್ಷೇತ್ರಗಳನ್ನು ಖಾಸಗಿ ಸಹಭಾಗಿತ್ವಕ್ಕೆ ಮುಕ್ತಗೊಳಿಸುವುದು ಹಾಗೂ ANRF, BioE3 (ಆರ್ಥಿಕತೆ, ಪರಿಸರ ಮತ್ತು ಉದ್ಯೋಗಕ್ಕಾಗಿ ಜೈವಿಕ ತಂತ್ರಜ್ಞಾನ) ನೀತಿ ಮತ್ತು ಇತ್ತೀಚೆಗೆ ಪ್ರಾರಂಭಿಸಲಾದ 1 ಲಕ್ಷ ಕೋಟಿ ರೂಪಾಯಿಗಳ ಸಂಶೋಧನಾ ಅಭಿವೃದ್ಧಿ ಮತ್ತು ನಾವೀನ್ಯತೆ (RDI) ನಿಧಿಯಂತಹ ಪೂರಕ ಚೌಕಟ್ಟುಗಳ ಸ್ಥಾಪನೆ ಸೇರಿವೆ. ಈ ಉಪಕ್ರಮಗಳು ಭಾರತದ ನಾವೀನ್ಯತೆ ಸಂರಚನೆಯನ್ನು ಬಲಪಡಿಸಿವೆ ಮತ್ತು ವೈಜ್ಞಾನಿಕ ಫಲಿತಾಂಶಗಳನ್ನು ಸಾಮಾಜಿಕ ಮತ್ತು ಆರ್ಥಿಕ ಪ್ರಭಾವವಾಗಿ ಪರಿವರ್ತಿಸುವತ್ತ ಗಮನವನ್ನು ಕೇಂದ್ರೀಕರಿಸಿವೆ. ವಿಜ್ಞಾನವು ಈಗ ಪ್ರಯೋಗಾಲಯಗಳಿಂದ ಮಾರುಕಟ್ಟೆಗಳಿಗೆ ಮತ್ತು ಆಲೋಚನೆಗಳಿಂದ ಪ್ರಭಾವಕ್ಕೆ (Impact) ದಾಪುಗಾಲು ಹಾಕುತ್ತಿದೆ.

ಸಕ್ರಿಯ ನೀತಿಗಳು ಮತ್ತು ಹಳತಾದ ನಿಯಮಗಳ ತೆಗೆದುಹಾಕುವಿಕೆಯ ಮೂಲಕ ಸರ್ಕಾರವು ಸೂಕ್ತ ಉತ್ತೇಜನವನ್ನು ನೀಡುತ್ತಿದೆ ಹಾಗೂ ಭಾರತೀಯ ನಾವೀನ್ಯಕಾರರಿಗಾಗಿ ನೈತಿಕ ಮತ್ತು ಸಮಾನ ಅವಕಾಶಗಳ ವೇದಿಕೆಯನ್ನು ಯಶಸ್ವಿಯಾಗಿ ನಿರ್ಮಿಸುತ್ತಿದೆ. ಇದು ಕೇವಲ ಪ್ರಾಥಮಿಕವಾಗಿ ಧನಸಹಾಯ ನೀಡುವ ಮಟ್ಟವನ್ನು ಮೀರಿ, ಒಂದು ಪ್ರಮುಖ ಸಕ್ರಿಯಗೊಳಿಸುವ ಶಕ್ತಿಯಾಗಿ(primary enabler) ಹೊರಹೊಮ್ಮುತ್ತಿದೆ. ಭಾರತದಾದ್ಯಂತ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತೆಗೆ ಕಾರ್ಯತಂತ್ರದ ನಿರ್ದೇಶನ ನೀಡಲು ಕೇಂದ್ರದ ಅತ್ಯುನ್ನತ ಸಂಸ್ಥೆಯಾಗಿ 'ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ'(ANRF) ಸ್ಥಾಪನೆಯೊಂದಿಗೆ, ಭಾರತವನ್ನು ಜ್ಞಾನ ಆಧಾರಿತ ಆರ್ಥಿಕತೆಯನ್ನಾಗಿ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕರನ್ನಾಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ. ಈ ಪಯಣವು ಸ್ವದೇಶಿ ಬೌದ್ಧಿಕ ಆಸ್ತಿ, ನೈತಿಕ ಚೌಕಟ್ಟುಗಳು ಮತ್ತು ಸಂಪೂರ್ಣ ಸಮಾಜದ ಬದ್ಧತೆಗಾಗಿ ಸಂಪೂರ್ಣ ಸರ್ಕಾರದ ವಿಧಾನದ ಶಕ್ತಿಯೊಂದಿಗೆ ಸಾಗುವುದನ್ನು ಖಚಿತಪಡಿಸಿಕೊಳ್ಳುವುದು ಇದರ ವಿಶಾಲ ಉದ್ದೇಶವಾಗಿದೆ.

ವಿಜ್ಞಾನ Tech ಈ ಪಯಣವನ್ನು ಪ್ರತಿಬಿಂಬಿಸುತ್ತದೆ, ಇದರಲ್ಲಿ ವಿಜ್ಞಾನವು ಬುನಾದಿಯಾಗಿದ್ದರೆ, ತಂತ್ರಜ್ಞಾನವು ಅದನ್ನು ಸಕ್ರಿಯಗೊಳಿಸುವ ಶಕ್ತಿಯಾಗಿದೆ ಮತ್ತು ನಾವೀನ್ಯತೆಯು ಅದರ ಫಲಿತಾಂಶವಾಗಿದೆ. ನವದೆಹಲಿಯ BRIC-ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನೊಲಾಜಿ (NII) ನಲ್ಲಿ ಮೇ 11, 2026 ರಂದು ನಿಗದಿಯಾಗಿರುವ ರಾಷ್ಟ್ರೀಯ ಪ್ರದರ್ಶನವು ಭಾರತ ಸರ್ಕಾರದ 14 ಸಚಿವಾಲಯಗಳು ಮತ್ತು ಇಲಾಖೆಗಳ ಅಡಿಯಲ್ಲಿನ ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಮತ್ತು ಪ್ರಯೋಗಾಲಯಗಳು ಸ್ವದೇಶಿಯಾಗಿ ಅಭಿವೃದ್ಧಿಪಡಿಸಿದ 350ಕ್ಕೂ ಹೆಚ್ಚು 'ಡೀಪ್ ಟೆಕ್ನಾಲಜಿ'ಗಳನ್ನು (deep technologies) ಪ್ರದರ್ಶಿಸುತ್ತದೆ. ಈ ಸ್ವದೇಶಿ ತಂತ್ರಜ್ಞಾನಗಳು ಬಯೋಫಾರ್ಮಾ ಮತ್ತು ಆರೋಗ್ಯ ತಂತ್ರಜ್ಞಾನಗಳು, ಬಯೋ ಇಂಡಸ್ಟ್ರಿಯಲ್ ಮತ್ತು ಗ್ರೀನ್ ಕೆಮಿಕಲ್ಸ್, ಬಾಹ್ಯಾಕಾಶ ಮತ್ತು ಜಿಯೋಸ್ಪೇಷಿಯಲ್ ತಂತ್ರಜ್ಞಾನಗಳು, ಹವಾಮಾನ ಮತ್ತು ಕೃಷಿ-ಆಹಾರ ತಂತ್ರಜ್ಞಾನಗಳು, ಡೀಪ್-ಟೆಕ್ ಮೆಟೀರಿಯಲ್ಸ್ ಮತ್ತು ಸುಧಾರಿತ ಎಂಜಿನಿಯರಿಂಗ್ ತಂತ್ರಜ್ಞಾನಗಳು, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್‌ಗಳು ಮತ್ತು ಇಂಧನ ಹಾಗೂ ಆಳ ಸಮುದ್ರ ಮತ್ತು ವಾಯುಮಂಡಲದ ತಂತ್ರಜ್ಞಾನಗಳು ಸೇರಿದಂತೆ ಪ್ರಮುಖ ವಿಷಯಾಧಾರಿತ ವಲಯಗಳನ್ನು ಒಳಗೊಂಡಿವೆ. ಈ ತಂತ್ರಜ್ಞಾನಗಳಲ್ಲಿ ಹಲವು ಈಗಾಗಲೇ ಪರವಾನಗಿ ಪಡೆದಿವೆ ಅಥವಾ ವಾಣಿಜ್ಯೀಕರಣಗೊಂಡಿವೆ, ಉಳಿದವುಗಳು ಶೀಘ್ರದಲ್ಲೇ ಪರವಾನಗಿ ಮತ್ತು ನಿಯೋಜನೆಗಾಗಿ ಲಭ್ಯವಿರುತ್ತವೆ.

ಭಾರತದ ತಂತ್ರಜ್ಞಾನದ ಬೆಳವಣಿಗೆಯ ಮುಂದಿನ ಹಂತಕ್ಕೆ ಶಿಕ್ಷಣ ಸಂಸ್ಥೆಗಳು, ಉದ್ಯಮಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸರ್ಕಾರದ ನಡುವೆ ಸಂಶೋಧನಾ ಕಾರ್ಯಕ್ರಮಗಳ ಪರಿಕಲ್ಪನೆಯ ಹಂತದಿಂದಲೇ ಆಳವಾದ ಸಮನ್ವಯದ ಅಗತ್ಯವಿದೆ. ಬಲವಾದ ಉದ್ಯಮ-ಶೈಕ್ಷಣಿಕ ಪಾಲುದಾರಿಕೆಯು ಸಂಶೋಧನೆಯನ್ನು ರಾಷ್ಟ್ರೀಯ ಆದ್ಯತೆಗಳು, ಮಾರುಕಟ್ಟೆಯ ಅಗತ್ಯಗಳು ಮತ್ತು ಸಾಮಾಜಿಕ ಸವಾಲುಗಳೊಂದಿಗೆ ಉತ್ತಮವಾಗಿ ಹೊಂದಿಸಲು ಸಹಕರಿಸುತ್ತದೆ; ಅದೇ ಸಮಯದಲ್ಲಿ, ಮಹತ್ವದ ನಾವೀನ್ಯತೆ ಮತ್ತು ವೈಜ್ಞಾನಿಕ ಶ್ರೇಷ್ಠತೆಗಾಗಿ ಮೂಲಭೂತ ಸಂಶೋಧನೆಗಳನ್ನು ಉತ್ತೇಜಿಸುವುದನ್ನು ಮುಂದುವರಿಸಬೇಕಿದೆ. ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್, ಸುಧಾರಿತ ಸಾಮಗ್ರಿಗಳು, ಕ್ವಾಂಟಮ್ ತಂತ್ರಜ್ಞಾನಗಳು, ಬಾಹ್ಯಾಕಾಶ ಪರಿಶೋಧನೆ ಮತ್ತು ವೈದ್ಯಕೀಯ ತಂತ್ರಜ್ಞಾನಗಳಂತಹ ಮುಂಚೂಣಿಯ ಕ್ಷೇತ್ರಗಳಲ್ಲಿ ಉದ್ಭವಿಸುವ ಸವಾಲುಗಳನ್ನು ಎದುರಿಸಲು ರಾಷ್ಟ್ರೀಯ ಸಂಸ್ಥೆಗಳು ಮತ್ತು ಪ್ರಯೋಗಾಲಯಗಳು ಹೆಚ್ಚು ಸಹಕಾರಿ ಮತ್ತು ಮಿಷನ್-ಮೋಡ್ (Mission-mode) ರೀತಿಯಲ್ಲಿ ಕೆಲಸ ಮಾಡುವ ಅಗತ್ಯವಿದೆ. ಭಾರತವು 2047ರತ್ತ ಮುನ್ನಡೆಯುತ್ತಿರುವಂತೆ, ಆರ್ಥಿಕ ಬೆಳವಣಿಗೆ, ವ್ಯೂಹಾತ್ಮಕ ಸ್ವಾಯತ್ತತೆ, ಸಾಮಾಜಿಕ ರೂಪಾಂತರ ಮತ್ತು ಸುಸ್ಥಿರ ಭವಿಷ್ಯವನ್ನು ವೇಗವರ್ಧಿಸುವಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಹೆಚ್ಚು ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಲಿವೆ.

ಸರ್ವೋತ್ತಮನ 'ಡೋರ್'-ಆಲೋಚನೆಗಳು

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಅದೃಷ್ಟವೇ ಬಂದು ಬಾಗಿಲು ತಟ್ಟಲಿ' ಎಂದು ನಿರೀಕ್ಷಿಸುವವರು ತುಂಬಾ ಜನರಿರುತ್ತಾರೆ. ಆದರೆ ಆ ಅದೃಷ್ಟ ಬಂದು ಬಾಗಿಲು ತಟ್ಟುವುದೋ ಬಿಡುವುದೋ ಆದರೆ ಆಗಾಗ ಯಾರ್ ಯಾರೋ ಬಂದು ಮನೆ ಬಾಗಿಲನ್ನು ತಟ್ಟುತ್ತಲೇ ಇರುತ್ತಾರೆ. ಓಹ್ ಸಾರಿ.. ಸಾರಿ... ಬಾಗಿಲು ತಟ್ಟುವುದಿಲ್ಲ, ಬದಲಿಗೆ ಕಾಲಿಂಗ್ ಬೆಲ್ ಬಜಾಯಿಸುತ್ತಾರೆ. ಅದೊಂಥರ ಹಳೆಯ 'ಕಾಲಿಂಗ್' ಸಿಸ್ಟಮ್ ಎನ್ನಬಹುದು. ಈ ಕಾಲದ ಫೋನ್, ಮೊಬೈಲ್ 'ಕಾಲಿಂಗ್'ಗಿಂತ ಇದು ಸ್ವಲ್ಪ ಭಿನ್ನವಾದುದೇ ಸರಿ. ಕಾಲಿಂಗ್ ಬೆಲ್‌ನ ಕರೆಗೆ ಬೆನ್ನು ತೋರದೇ, ಬಂದು ಒಪ್ಪಿ, ಬಾಗಿಲು ತೆರೆದು, ಬಂದವರು ತೀರಾ ಪರಿಚಿತರೋ, ಆತ್ಮಾಪ್ತರೋ ಆಗಿದ್ದರೆ ಅಪ್ಪಿಕೊಂಡರೆ, ಆಗ ಕಾಲಿಂಗ್‌ನಿಂದ ಉಂಟಾದ ಈ ಆಲಿಂಗನವನ್ನು 'ಕಾಲಿಂಗನ' ಎಂದು ಕರೆಯಬಹುದೇನೋ! ಹಾಗಂತ ಬೆಲ್ ಮಾಡಿದಾಕ್ಷಣ ಎಲ್ಲರೂ ಹೀಗೆಯೇ, ಇದೇ ಮಾದರಿಯಲ್ಲೇ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಲಾಗದು. ಆ ಬೆಲ್‌ನ ರಿಂಗಣ ಕೇಳುತ್ತಿದ್ದಂತೆ ರಾಂಗ್ ಆಗುವವರೂ ಇರುತ್ತಾರೆ. ಹಾಗಂತ ಅಷ್ಟು ಸುಲಭಕ್ಕೆ ಅದನ್ನು ರಾಂಗ್ ನಂಬರ್ ಎಂದು ಪರಿಗಣಿಸಿ ಮುಂದೆ ಸಾಗದೇ, ಮತ್ತೆ ಮತ್ತೆ ಮನವೊಲಿಸಿ, 'ಬಾಗಿಲನು ತೆರೆಯೇ..' ಎಂದು ಭಿನ್ನವಿಸದೇ ಅನ್ಯ ದಾರಿಯೇ ಇಲ್ಲ, ಅಂಥ ಕೆಲಸವೊಂದಕ್ಕೆ ನಿಯುಕ್ತಗೊಂಡಿದ್ದ ನಮ್ಮ ಸರ್ಕಾರಿ ನೌಕರ ಸರ್ವೋತ್ತಮ.

ಈತನಿಗೆ ಸರ್ವೋತ್ತಮ ಎಂದು ಹೆಸರಿಟ್ಟು ನಲಿಯುವಾಗಲೋ, ನಂತರ ನೌಕರಿ ಗಿಟ್ಟಿಸಿಕೊಂಡು ನೆಮ್ಮದಿಯ, ನಗು ಬೀರುವಾಗಲೋ ಬಹುಶಃ ಆತನ ಹೆಸರಾದ 'ಸರ್ವೋತ್ತಮ'ದಲ್ಲಿ ಅಡಕವಾಗಿರುವ 'ಸರ್ವೇ' ಕಾರ್ಯಕ್ಕೆ ಆಗಾಗ ನಿಯೋಜಿಸಲ್ಪಡಬಹುದು ಎಂಬ ಸಣ್ಣ ಊಹೆಯೂ ಇರಲಿಲ್ಲ. ಆದರೆ ಈಗ ಹಲವು 'ಸರ್ವೇ'ಗಳ ಕೆಲಸಗಳಲ್ಲಿ ಮತ್ತೆ ಮತ್ತೆ ತೊಡಗಿಸಿಕೊಂಡಿರುವ ಕಾರಣಕ್ಕೆ ಆತನ ಅಂಕಿತ ನಾಮ ಎನ್ನುವುದು ಒಂದರ್ಥದಲ್ಲಿ ಅನ್ವರ್ಥ ನಾಮವೂ ಆಗಿ ಪರಿವರ್ತನೆ ಹೊಂದಿದೆ. ಅನ್ಯ ಆಯ್ಕೆಗಳು ಇಲ್ಲದ ಕಾರಣಕ್ಕೆ, ಮೇಲಧಿಕಾರಿಗಳ ಆದೇಶ ಪಾಲನೆಗೆ ಪಕ್ಕಾಗಿರುವ 'ಆದೇಶವಾಸಿ'ಯಾಗಿಯೇ ಇರಬೇಕಾದ ಅನಿವಾರ್ಯತೆಯ ಕಾರಣಕ್ಕೆ ಆತ 'ಪರಿವರ್ತನೆ ಜಗದ ನಿಯಮ' ಎಂದುಕೊಂಡು ಈ ಕೆಲಸಗಳನ್ನು ಚಾಚೂತಪ್ಪದೇ ನೆರವೇರಿಸಿಕೊಂಡು ಸಾಗುತ್ತಿದ್ದಾನೆ. ಹೆಗಲೇರಿದ ಈ ಕೆಲಸದ ಹೊಣೆಗಾರಿಕೆಯನ್ನು ಹಗಲು-ರಾತ್ರಿ ಎನ್ನದೇ ಬದ್ಧತೆಯಿಂದ ನಿರ್ವಹಿಸುತ್ತಿದ್ದಾನೆ. ಆತ ಈ ಕಾರ್ಯಕ್ಕಾಗಿ ಕಂಡ ಕಂಡವರ ಮನೆಯ ಬಾಗಿಲು ತಟ್ಟಲೇಬೇಕು. ನಂತರ ಬಾಗಿ, ಬಳುಕಿ, ಇಣುಕಿ, ಹಣಕಿ ನೋಡಿ ಮನೆಯೊಡೆಯನ ಮನವೊಲಿಸಿ ಮನೆ ಹಾಗೂ ಮನೆಯವರ ಕುರಿತಾದ ಮಾಹಿತಿಗಳನ್ನು ಅಕ್ಷರಶಃ ಸೋಸಿ ತೆಗೆಯಬೇಕು. ಹಾಗೆ ತೆಗೆದದ್ದನ್ನು ಆ್ಯಪ್‌ಗಳೆಂಬ ಬಕಾಸುರನ ಹೊಟ್ಟೆಗೆ ತುರುಕಬೇಕು.

ಸರ್ವೋತ್ತಮ ಪ್ರತೀ ಬಾರಿಯ ಮನೆ ಮನೆ ಸರ್ವೆಯ ಸಂದರ್ಭದಲ್ಲೂ ಮುಚ್ಚಿದ ಬಾಗಿಲುಗಳ ಮುಂದೆ ನಿಂತು ನಿಂತು, 'ಅಯ್ಯೋ ಈ ಮನೆ ಬಾಗಿಲುಗಳು ಇರುವುದೇ ಸದಾ ಮುಚ್ಚಿರಲೇನೋ?!' ಎಂಬ ಅಭಿಪ್ರಾಯಕ್ಕೆ ಬಂದಿದ್ದ. ಹೇಳಿ ಕೇಳಿ ಮಹಾನಗರಪಾಲಿಕೆಯ ಪ್ರದೇಶಗಳು ಆತನ ಪಾಲಿಗೆ ಬಂದು ಅಲ್ಲೇ ಕೆಲಸ ಮಾಡಿದ್ದರಿಂದ ಅಲ್ಲಿ ಆತನನ್ನು ಮೊದಲು ಸ್ವಾಗತಿಸುವುದೇ ಮುಚ್ಚಿದ ಬಾಗಿಲುಗಳು. ಪ್ರತೀ ಬಾರಿಯೂ ಹೇಗೋ ಬಾಗಿಲು ತೆರೆಯುವಂತೆ ಮಾಡುವ ಆತನ ವಿವಿಧ ಪ್ರಯತ್ನಗಳನ್ನು ನೋಡುವಾಗ ಆತನಿಗೆ 'ಬಾಗಿಲು ತೆರೆಯೇ ಸೇಸಮ್ಮ' ''ಬಾಗಿಲನು ತೆರೆದು...' ಇನ್ನು ಯಾವ್ಯಾವುದೋ ಹಾಡುಗಳೆಲ್ಲ ನೆನಪಿಗೆ ಬರುತ್ತಿದ್ದವಾದರೂ, ಪಾಪ ಅದನ್ನು ಒಳಗೊಳಗೇ ನುಂಗಿಕೊಂಡು, ಬಾಗಿಲು ತೆರೆದವರ ಮುಂದೆ ನಕಲಿ ನಗೆಯನ್ನು ಒಗಾಯಿಸುತ್ತಿದ್ದ. ಸದ್ಯ ಒಂದು ಬಾಗಿಲಾಗಿದ್ದಕ್ಕೇ ಹೀಗೆ, ಇನ್ನೆಲ್ಲಾದರೂ ಕೆಲವರು ಹೇಳುವಂತೆ 'ಮನೆಯೊಂದು ಮೂರು ಬಾಗಿಲು' ನಿಜವಾಗಿಯೂ ಆಗಿದ್ದರೆ, ಆಗತನ್ನ ಪಾಡು, ಪಡಿಪಾಟಲು ಅಧ್ವಾನವೇ ಸರಿ ಎಂಬ ಯೋಚನೆಯಲ್ಲಿ ಮುಳುಗಿ ಹೋಗಿ ಬೆಚ್ಚಿಬಿದ್ದು ಬಿಳಿಚಿಕೊಳ್ಳುತ್ತಾನೆ. ಹಾಗೂ ಆತನಿಗೆ ಆಗಾಗ ಅನಿಸುವುದಿದೆ. ಅಲ್ಲಾ ಅದು ಹೇಗೆ ಯಾವುದೋ ಅಡಗಿಸಿಟ್ಟ ಖಜಾನೆಯ ಬಾಗಿಲನ್ನು, ಇನ್ನಾವುದೋ ಗುಪ್ತ ದ್ವಾರವನ್ನು, ಮತ್ತಾವುದೋ ಮಹಾದ್ವಾರವನ್ನೆಲ್ಲಾ ತೆರೆಯುವವರೋ, ತೆರೆಸುವರೋ ಎಂದು!

ಈತ ಈ ಕಡೆಯಿಂದ ಬೆಲ್ ಮಾಡುವುದು, ಅತ್ತಲಿಂದ ಏನಾದರೂ ಸದ್ದು ಕೇಳುವುದೋ ಎಂದು ಕಿವಿಗೊಟ್ಟು ಕೇಳುವುದು, ಅತ್ತಲಿಂದ ಬರುವ ಮಾತಿಗೆ ಸರಿಯಾದ ಉತ್ತರವನ್ನು ಕಾದು ನೀಡುವುದು, ಅವರು ಬಾಗಿಲು ತೆಗೆಯದೇ ಇನ್ನೇನೋ ಹೇಳಿ ಸಾಗಹಾಕಲು ಯತ್ನಿಸುವುದು, ಇವನು ಆ ಬಡ ಪೆಟ್ಟಿಗೆ ಬಗ್ಗದೇ ಮತ್ತೇನೋ ಹೇಳಿ ಹೇಗೋ ಬಾಗಿಲಿನ ಚಿಲಕ ತೆಗೆಸಿಯೇ ತೀರುತ್ತೇನೆ ಎಂಬಂತೆ ಪಟ್ಟು ಹಾಕಿ ಮತ್ತೆ ಮತ್ತೆ ಪ್ರಯತ್ನಕ್ಕೆ ಇಳಿಯುವುದು.... ಅಬ್ಬಾ..! ಅಬ್ಬಬ್ಬಾ....!! ಒಂದೇ ಒಂದು 'ಕದ'ದ ಆಚೆ-ಈಚೆ ನಡೆಯುವ ಈ ಹಣಾಹಣಿ, ಈ ಪೈಪೋಟಿ, ಈ ಹಗ್ಗಜಗ್ಗಾಟಗಳನ್ನೆಲ್ಲಾ ನೋಡುತ್ತಿದ್ದರೆ ನಿಜಕ್ಕೂ ಇದೇ ಒಂದು 'ಕದನ'ವೇ ಸರಿ ಎಂದೆನಿಸುತ್ತದೆ. ಅಲ್ಲಿ 'ಕದನದೋಳ್ ಕಲಿ ಪಾರ್ಥ' ಆದೇ ಇಲ್ಲಿ 'ಕದ'ನದೋಳ್ ಬರೀ ಅಪಾರ್ಥ! ಹ್ಹೂಂ.. ಮತ್ತೆ ಇವರು ಅವರೇನೋ, ಆದೇನು ಕೇಳುವರೋ, ಆದೆಂಥ ಸ್ಕ್ಯಾಮೋ, ಮತ್ತಾವ ಸೇಲ್ಸ್ ಏಜೆಂಟೋ, ಡೆಲಿವರಿ ಬಾಯೋ, ಮಾಟವೋ, ಮಂತ್ರವೋ, ತಂತ್ರವೋ, ಕುತಂತ್ರವೋ, ಮಳ್ಳರೋ, ಕಳ್ಳರೋ ಕಾಕರೋ ಇಂಥ ಅಪಾರ್ಥ, ಅನುಮಾನ ಪ್ರಣೀತ ಯೋಚನೆಗಳೆಲ್ಲ ಒಂದು ಸುತ್ತು ಪ್ರೋಕ್ಷಣೆಯಾಗಿ, ನಂತರವೂ ಏನಾದರೂ ಚೂರು ನಂಬಿಕೆ ಮೂಡಿದರಷ್ಟೇ ಬಾಗಿಲು ತೆರೆಯುತ್ತದೆ, ದರ್ಶನವೂ ಸಿಗುತ್ತದೆ.

ಹೀಗೆಯೇ ಹತ್ತು ಹಲವು ಮನೆಗಳನ್ನು ಹತ್ತಿಳಿದು ನೋಡಿ ಬಹಳ ಬೇಸತ್ತು ಹೋಗಿದ್ದ ಸರ್ವೋತ್ತಮಗೆ ಅದೊಂದು ಮನೆಯ ಬಾಗಿಲು ತೆರೆದೇ ಇದ್ದದ್ದು ನೋಡಿ ಅತೀವ ಆನಂದವೇ ಉಂಟಾಯಿತು. ಸದ್ಯ ಇದೊಂದು ಮನೆಯಾದರೂ ಹೀಗೆ ಬಾಗಿಲನ್ನು ತೆರೆದೇ ಇಟ್ಟು, 'ತೆರೆದಿದೆ ಮನೆ ಓ ಬಾ ಅತಿಥಿ..' ಎಂದು ಕರೆಯುತ್ತಿದೆಯಲ್ಲ ಎಂದೆನಿಸಿ ಹುರುಪು, ಉತ್ಸಾಹ ಹಾಗೂ ಖುಷಿಯಿಂದ 'ಸಾರ್...' ಎಂದು ಲವಲವಿಕೆಯ ದನಿಯಲ್ಲಿ ಕರೆದ. 'ಸರ್' ಎಂಬ ಕರೆಗೆ ಯಾವ ಪ್ರತಿಕ್ರಿಯೆಯೂ ಬರದೇ ಇದ್ದಾಗ ಲಿಂಗ ಬದಲಿಸಿ, ಅಂದರೆ ಅದೇ ಕರೆಯ ಲಿಂಗ ಬದಲಿಸಿ 'ಮೇಡಂ' ಎಂದು ಕರೆದು ಪ್ರಯತ್ನಿಸಿದ. ಅದಕ್ಕೂ ಮೌನವೇ ಉತ್ತರವಾದಾಗ ಯಾಕೋ ಅನುಮಾನ ದಟ್ಟವಾಗಲಾರಂಭಿಸಿತು. ಮೆಲ್ಲಗೆ ಬಾಗಿಲ ಮೂಲಕ ಇಣುಕಿ ನೋಡಿದರೆ ವಸ್ತುಗಳೆಲ್ಲವೂ ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸುಟ್ಟುಕೊಂಡು ಬಿದ್ದ ಸಿಗರೇಟುಗಳ ತುಂಡುಗಳು, ಕುಡಿದು ಬಿಟ್ಟ ಬಾಟಲಿ, ಪಾಕೀಟುಗಳು ಯಾವುದೋ ಕತೆ ಹೇಳಲೋ ಬೇಡವೋ ಎಂಬಂತೆ ಅಲ್ಲಲ್ಲಿ ಹರಡಿಕೊಂಡಿದ್ದವು.

ಆವನಿಗೆ ಎಲ್ಲವೂ ನಿಧಾನಕ್ಕೆ ಅರ್ಥವಾಗಲಾರಂಭಿಸಿತು. ಆದರೆ ಇದಕ್ಕೆಲ್ಲ ಕಾರಣವಾದ 'ಮನೆಯೊಡೆಯ'(ಆತ ಮನೆಯೊಡೆಯನೋ ಮನೆ- ಒಡೆಯನೋ ಎಂಬ ಶಂಕೆಯೂ ಮೂಡಿತು) ಎಲ್ಲಿದ್ದಾನೆ ಎಂಬ ಕುತೂಹಲದಿಂದ ದನಿ ಎತ್ತರಿಸಿ ಕೂಗಿದರೆ ಪಕ್ಕದಲ್ಲಿದ್ದ ಬಿಲ್ಡಿಂಗ್‌ನ ಓನರ್, ''ಅಯ್ಯೋ ಅದು ಬ್ಯಾಚುಲರ್ ರೂಮಪ್ಪ. ಅದ್ ಯಾವ ಹೊತ್ತಲ್ಲಿ ಮನೇಲ್ ಇರ್ತಾನೋ, ಬಿಡ್ತಾನೋ ನಮಗೇ ಗೊತ್ತಾಗಲ್ಲ, ಇನ್ನು ನಿಮಗೆ...?'' ಎಂದರು. ತನ್ನ ಪ್ರಯತ್ನ ಕೈ ಬಿಟ್ಟ ಸರ್ವೋತ್ತಮ, ''ಮತ್ತೆ ಬಾಗಿಲು ತೆರೆದೇ ಇದೆಯಲ್ಲ?'' ಎಂದು ಶರಣಾಗತ ದನಿಯಲ್ಲಿ ಪ್ರಶ್ನಿಸಿದ. ''ಹ್ಹೂಂ.. ಆ ಮನೆಯನ್ನು ಆತ ಇಟ್ಟುಕೊಂಡಿರುವ (ದಯನೀಯ) ಸ್ಥಿತಿಯ ಬಗ್ಗೆ ಆತನಿಗೆ ಅದೆಷ್ಟು ವಿಶ್ವಾಸ ಇದೆಯೆಂದರೆ, ಯಾರೂ ಆ ಮನೆಯನ್ನು ಹೊಕ್ಕಲಾರರು ಎನ್ನುವುದು ಖಾತ್ರಿಯಿದೆ. ಅದಕ್ಕೇ ಬೀಗ ಹಾಕುವ ಅಗತ್ಯವೇ ಬೀಳಲ್ಲ'' ಎಂದರು. ತೆರೆದಿದೆ ಮನೆ ಅಂದಾಕ್ಷಣ, 'ಓ ಬಾ ಅತಿಥಿ..' ಎಂಬುವುದೇ ಆಶಯವೆಂದು ಅಂದುಕೊಳ್ಳಬೇಕಿಲ್ಲ, ಹೀಗೂ ಇದ್ದೀತು ಎನ್ನುವುದು ಸರ್ವೋತ್ತಮಗೆ ಅರ್ಥವಾಗಿ, ಬಾಗಿಲು ಎಳೆದುಕೊಂಡು ಬಂದ.

ಇನ್ನೊಂದು ಮನೆಯ ಬಾಗಿಲು ಬಡಿದು, ಅರೆಕ್ಷಣ ಕಾದು, ಮತ್ತೊಮ್ಮೆ ಡೋರ್ ಬೆಲ್ ರಿಂಗಾಯಿಸಿದ ಮೇಲೆ ಅತ್ತಲಿಂದ ವ್ಯಗ್ರ ದನಿಯೊಂದು ಬಾಗಿಲನ್ನು ಸೀಳಿಕೊಂಡು ಬಂದಿತು, 'ಅರೇ ಕೌನ್ ಹೋ...'. ಹಿಂದಿ ಮಾತನಾಡುವುದರಲ್ಲಿ ತುಸು ಹಿಂದೆಯೇ ಇದ್ದ ಸರ್ವೋತ್ತಮ ಆದೇನೇನೋ ಸೇರಿಸಿ, ಪೇರಿಸಿ ಬಂದ ಕಾರಣದ ಪ್ರಲಾಪ ಬಿಚ್ಚಿಟ್ಟರೆ ಅತ್ತಲಿಂದ ಮತ್ತೊಂದು ಎಪಿಸೋಡ್ ಉಗ್ರಾವತಾರದ ಮಾತುಗಳು. ಕೊನೆಗೆ ಅದೇನೋ 'ಹಟೋ ಇದರ್ ಸೆ...' ಅಂದಿದ್ದು ಸರ್ವೋತ್ತಮಗೆ 'ಹಟಾ...' ಎಂದಂತೆ ಆನಿಸಿ ತುಸು ಬೆಚ್ಚಿ ಬಿದ್ದ. ಇನ್ನೂ ಮನೆಯೊಳಗಿನ ಅರಚಾಟ ಇತ್ತ ಎರಚಿ ಬಂದಂತೆ ಬರುತ್ತಲೇ ಇತ್ತು. ಇಂಥ ಖತರ್‌ನಾಕ್ ವರ್ತನೆ ನೋಡಿದ ಅಲ್ಲಲ್ಲ ಕೇಳಿದ ಸರ್ವೋತ್ತಮ ಸುಸ್ತು ಹೊಡೆದಂತೆ ಅಲ್ಲಿಂದ ಹೊರಟುಬಂದ. ಬರುವಾಗ ಆತನಿಗೆ ಅದು ಖತರ್ ನಾಕ್ ಅಲ್ಲ 'ಕದ'ರ್‌ನಾಕ್ ವರ್ತನೆಯೇ ಎಂದೆನಿಸಲಾರಂಭಿಸಿತು. ಒಂದು ಕದ ತೆಗೆಯಲಿಕ್ಕೊಪ್ಪದೇ ಅಂಥ ಬಲು ಭಯಂಕರ ವರ್ತನೆ ತೋರಿದ್ದಲ್ಲವೇ ಹಾಗಾಗಿ. ಬಾಗಿಲೊಳು ಕೈ ಮುಗಿಯುವುದಲ್ಲ, ಆ ಬಾಗಿಲ ಮುಂದೆ ನಿಂತು ಸರ್ವೋತ್ತಮ ಕೈ ಎತ್ತಿ ದೊಡ್ಡ ನಮಸ್ಕಾರ ಎಂದು ಕೈ ಮುಗಿದಿದ್ದರೂ ಅಚ್ಚರಿಯೇನಿಲ್ಲ ಬಿಡಿ. ಒಟ್ಟಾರೆಯಾಗಿ ತೆರೆಯುವ ಬಾಗಿಲು, ತೆರೆಯದ ಬಾಗಿಲು ಹೀಗೆ ಎಲ್ಲದರ ಹಿಂದೆಯೂ ಅದೆಷ್ಟೆಷ್ಟೋ ಕತೆಗಳೇ ಅಡಗಿರುತ್ತವೆ. ಆದರೆ ಅವು ಬರೀ ಕತೆಗಳಲ್ಲ, ಬದುಕು-ಬವಣೆಯ ವ್ಯಥೆಗಳೂ ಆಗಿರಬಹುದು!

ಓವರ್‌ಡೋಸ್: ಕೆಲವರು 'ಮೊಬೈಲ್ ಕಾಲ್'ನ್ನಷ್ಟೇ ಸೈಲೆಂಟ್ ಆಗಿರಿಸಲ್ಲ, ಮನೆಯ ಕಾಲಿಂಗ್ ಬೆಲ್‌ನ್ನೂ ಸೈಲೆಂಟ್ ಆಗಿರಿಸಿಕೊಂಡಿರುತ್ತಾರೆ!

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಮೋದಿ ಕರೆ

ತೈಲ ಉತ್ಪನ್ನಗಳ ಬಳಕೆಗಿರಲಿ ಮಿತಿ



•ಹೈದರಾಬಾದ್: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಪೆಟ್ರೋಲಿಯಂ ಉತ್ಪನ್ನ ಗಳನ್ನು ಮಿತವಾಗಿ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕರೆ ನೀಡಿದ್ದಾರೆ.

ತೆಲಂಗಾಣದಲ್ಲಿ 9,400 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಹೈದರಾಬಾದ್ ಅಂತಾರಾಷ್ಟ್ರೀಯ ಸಮಾವೇಶ ಕೇಂದ್ರದಲ್ಲಿ ಮಾತನಾಡಿದರು. ವಿದೇಶಿ ವಿನಿಮಯವನ್ನು ಉಳಿಸಲು, ಜಾಗತಿಕ ಯುದ್ಧದ ಪರಿಣಾಮ ವನ್ನು ಕಡಿಮೆ ಮಾಡಲು ಆಮದು ಮಾಡಿಕೊಳ್ಳುವ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಅಗತ್ಯವಿದ್ದಾಗ ಮಾತ್ರ ಬಳಸಬೇಕು. ಭಾರತದ ಇಂಧನ ಭದ್ರತೆ ಗಾಗಿ ಸೌರಶಕ್ತಿ, ಎಥೆನಾಲ್ ಮಿಶ್ರಣ, ಎಲ್‌ಪಿಜಿ ವ್ಯಾಪ್ತಿ ಮತ್ತು ಸಿಎನ್‌ಜಿ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಪ್ರಧಾನಿ ತಿಳಿಸಿದರು.

ಮೂಲಸೌಕರ್ಯಕ್ಕೆ ಉತ್ತೇಜನ: ಪ್ರಧಾನ ಮಂತ್ರಿ, ಗುಡೆಬೆಲ್ಲೂರು ಮತ್ತು ಮಹಬೂಬ್‌ನಗರ ನಡುವಿನ ರಾಷ್ಟ್ರೀಯ ಹೆದ್ದಾರಿ-167ರ ಚತುಷ್ಪಥ ಕಾಮಗಾರಿ ಹಾಗೂ ಸಂಗಾರೆಡ್ಡಿ ಜಿಲ್ಲೆಯ ಜಹೀರಾ ಬಾದ್ ಕೈಗಾರಿಕಾ ಪ್ರದೇಶಕ್ಕೆ ವರ್ಚುವಲ್ ಮೂಲಕ ಶಂಕುಸ್ಥಾಪನೆ ಮಾಡಿದರು.

ಇದರೊಂದಿಗೆ ಕಾಜಿ ಪೇಟೆ-ವಿಜಯವಾಡ ರೈಲ್ವೆ ಮಲ್ಟಿ-ಟ್ರ್ಯಾಕಿಂಗ್ ಯೋಜನೆ, ಹೈದರಾ ಬಾದ್‌ನಲ್ಲಿ ಗ್ರೀನ್‌ಫೀಲ್ಡ್ ಪೆಟ್ರೋಲಿಯಂ ಟರ್ಮಿನಲ್, ವಾರಂಗಲ್‌ನಲ್ಲಿ ಪಿಎಂ ಮಿತ್ರ ಪಾರ್ಕ್ ಅನ್ನು ಅವರು ಉದ್ಘಾಟಿಸಿದರು.

ಕಳೆದ 11 ವರ್ಷಗಳಲ್ಲಿ ತೆಲಂಗಾಣದ ರಾಷ್ಟ್ರೀಯ ಹೆದ್ದಾರಿ ಜಾಲವು ದುಪ್ಪಟ್ಟಾಗಿದೆ. 2014ಕ್ಕೂ ಮೊದಲು ಅವಿಭಜಿತ ಆಂಧ್ರಪ್ರದೇಶಕ್ಕೆ ರೈಲ್ವೆ ಬಜೆಟ್ 1,000 ಕೋಟಿ ರೂ. ಗಿಂತ ಕಡಿಮೆ ಇತ್ತು. ಆದರೆ, ಇಂದು ತೆಲಂಗಾಣದ ರೈಲ್ವೆ ಬಜೆಟ್ 5,500 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ರಾಜ್ಯದಲ್ಲಿ ಸದ್ಯ 50,000 ಕೋಟಿ ರೂಪಾಯಿ ಮೌಲ್ಯದ ರೈಲ್ವೆ ಕಾಮಗಾರಿಗಳು ನಡೆಯುತ್ತಿವೆ ಎಂದು ಅವರು ವಿವರಿಸಿದರು. ಸಮಾರಂಭದಲ್ಲಿ ತೆಲಂಗಾಣ ರಾಜ್ಯಪಾಲ ಶಿವ ಪ್ರತಾಪ್ ಶುಕ್ಲ, ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಮೊದಲಾದವರು ಭಾಗವಹಿಸಿದ್ದರು.

ಜನತೆಗೆ ಪ್ರಧಾನಿ ಮೋದಿ ಸಲಹೆ

- ದೇಶ ಹಿತದ ಸಂಕಲ್ಪಕ್ಕೆ ಆದ್ಯತೆ ನೀಡಿ
- ಎಲೆಕ್ಟ್ರಾನಿಕ್ ವಾಹನಗಳ ಬಳಕೆಗೆ ಒತ್ತು ಕೊಡಿ
- ಪೆಟ್ರೋಲ್-ಡೀಸೆಲ್ ಮಿತ ಬಳಕೆ ಮಾಡಿ
- ದೇಶದ ವಿದೇಶಿ ವಿನಿಮಯ ಉಳಿಸುವ ಸಂಕಲ್ಪ ಮಾಡಿ
- ಮೆಟ್ರೋ ಸೇವೆ, ಸಾರ್ವಜನಿಕ ಸಾರಿಗೆ, ಕಾರ್‌ಪೂಲಿಂಗ್, ವಿದ್ಯುತ್ ವಾಹನ ಬಳಕೆ ಮಾಡಿ
- ವರ್ಚುವಲ್ ಸಭೆ, ವಿಡಿಯೋ ಕಾನ್ಫರೆನ್ಸ್, ವರ್ಕ್ ಫ್ರಮ್ ಹೋಮ್ ಪದ್ಧತಿ ಅನುಸರಿಸಿ
- ವರ್ಷದ ಮಟ್ಟಿಗೆ ಚಿನ್ನ ಖರೀದಿ, ವಿದೇಶ ಪ್ರವಾಸಗಳನ್ನು ಮುಂದೂಡಿ
- ಖಾದ್ಯ ಎಣ್ಣೆ ಬಳಕೆ ಆದಷ್ಟು ಕಡಿಮೆ ಮಾಡಿ
- ರಾಸಾಯನಿಕ ಗೊಬ್ಬರಗಳ ಅವಲಂಬನೆ ತಗ್ಗಿಸಿ, ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಿ
- ಕೃಷಿಗಾಗಿ ಸೌರಶಕ್ತಿ ಚಾಲಿತ ನೀರಾವರಿ ಪಂಪ್‌ಗಳನ್ನು ಅಳವಡಿಸಿಕೊಳ್ಳಿ
- ಸ್ವದೇಶಿ ಉತ್ಪನ್ನಗಳ ಬಳಕೆ ಹೆಚ್ಚಿಸಿ, ದೇಶವನ್ನು ಆತ್ಮನಿರ್ಭರವಾಗಿಸಲು ಸಹಕರಿಸಿ

ದೇಶದ ಮೊದಲ 'ಪಿಎಂ ಮಿತ್ರ ಪಾರ್ಕ್'

ತೆಲಂಗಾಣದ ವಾರಂಗಲ್‌ನಲ್ಲಿ ಭಾರತದ ಮೊದಲ ಸಂಪೂರ್ಣ ಕಾರ್ಯಾಚರಣೆಯ ಪಿಎಂ ಮಿತ್ರ ಪಾರ್ಕ್ ಅನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು. **1,327** ಎಕರೆ ಪ್ರದೇಶದಲ್ಲಿ **1,695.54** ಕೋಟಿ ರೂ. ವೆಚ್ಚದಲ್ಲಿ ಈ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ. ರೈತರಿಂದ ಕಾರ್ಖಾನೆಯವರೆಗೆ ಮತ್ತು ಫ್ಯಾಶನ್‌ನಿಂದ ವಿದೇಶದವರೆಗೆ ಜವಳಿ ಉದ್ಯಮವನ್ನು ಬೆಳೆಸುವ ಉದ್ದೇಶವನ್ನು ಇದು ಹೊಂದಿದೆ. ಈ ಯೋಜನೆಯಿಂದ ಸುಮಾರು **6,000** ಕೋಟಿ ರೂಪಾಯಿ ಹೂಡಿಕೆ ಹರಿದುಬರುವ ನಿರೀಕ್ಷೆಯಿದ್ದು, **24,400**ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. ಇದೇ ಮಾದರಿಯ ಪಾರ್ಕ್‌ಗಳನ್ನು ಕರ್ನಾಟಕ ಸೇರಿದಂತೆ ದೇಶದ ಏಳು ರಾಜ್ಯಗಳಲ್ಲಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ.



ತ.ನಾಡಿನ ಸಾಲದ ಪರಂಪರೆ, ವಿಜಯ್ ಜನಕಲ್ಯಾಣದ ಬರೆ

ಆರ್ಥಿಕ ಸಂಕಷ್ಟದ ಹಾದಿ...

ಸುದ್ದಿ ಸಮಗ್ರ

ಖ್ಯಾತ ನಟ ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ರಾಜ್ಯ ರಾಜಕಾರಣದಲ್ಲಿ ಹೊಸ ಅಧ್ಯಾಯ ಆರಂಭಿಸಿದ್ದಾರೆ. ಆದರೆ, ಅಧಿಕಾರಕ್ಕೆ ಬರುತ್ತಿದ್ದಂತೆಯೇ ಅವರ ಮುಂದೆ ಬೃಹತ್ ಸವಾಲುಗಳು ಎದುರಾಗಿವೆ. ನಿರ್ಗಮಿತ ಡಿಎಂಕೆ ಸರ್ಕಾರ ಬಿಟ್ಟುಹೋಗಿರುವ ಭಾರಿ ಸಾಲದ ನಡುವೆಯೇ, ವಿಜಯ್ ಅವರು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿರುವ ಬೃಹತ್ ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕಾದ ಅನಿವಾರ್ಯತೆ ಇದೆ. ಇದು ರಾಜ್ಯವನ್ನು ಆರ್ಥಿಕವಾಗಿ ಯಾವ ದಿಕ್ಕಿಗೆ ಕೊಂಡೊಯ್ಯಲಿದೆ ಎಂಬುದು ಈಗ ಚರ್ಚೆಯ ವಿಷಯವಾಗಿದೆ.

ಬೆಳೆಯದ ಆದಾಯ, ಹಣದುಬ್ಬರ ಅಧಿಕ

ತಮಿಳುನಾಡು ಕಳೆದ ವರ್ಷ ಶೇ.11.19 ರಷ್ಟು ಆರ್ಥಿಕ ಬೆಳವಣಿಗೆ ದಾಖಲಿಸಿದೆ. ಉತ್ಪಾದನಾ ವಲಯ ಶೇ. 14.74 ರಷ್ಟು ಅಭಿವೃದ್ಧಿ ಕಂಡಿದೆ. ಆದರೆ, ಈ ದೊಡ್ಡ ಅಂಕಿ-ಅಂಶಗಳ ಲಾಭ ಸಾಮಾನ್ಯ ಜನರ ಕೈಸೇರಿಲ್ಲ ಎಂಬುದು ಕಹಿ ಸತ್ಯ. ಆಹಾರ ಪದಾರ್ಥಗಳ ಬೆಲೆ ಏರಿಕೆ (ಹಣದುಬ್ಬರ) ಶೇ. 6-7 ರಷ್ಟಿದ್ದರೆ, ಅಸಂಘಟಿತ ವಲಯದ ಕಾರ್ಮಿಕರ ವೇತನ ಕೇವಲ ಶೇ.2-3ರಷ್ಟು ಮಾತ್ರ ಹೆಚ್ಚಾಗಿದೆ. ಇದರಿಂದಾಗಿ ಜನರ ಜೀವನಮಟ್ಟದಲ್ಲಿ ಸುಧಾರಣೆಯಾಗಿಲ್ಲ.



ಡಿಎಂಕೆ ಸರ್ಕಾರದ ಆರ್ಥಿಕ ಪರಂಪರೆ

ತಮಿಳುನಾಡು ಭಾರತದ ಪ್ರಬಲ ಕೈಗಾರಿಕಾ ಆರ್ಥಿಕತೆಗಳಲ್ಲಿ ಒಂದು. ಇಲ್ಲಿನ ಉತ್ಪಾದನಾ ವಲಯ, ಆಟೋಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳು ದೇಶದಲ್ಲೇ ಮುಂಚೂಣಿಯಲ್ಲಿವೆ. ಇಷ್ಟೆಲ್ಲಾ ಸಾಧನೆಯ ನಡುವೆಯೂ, ಕಳೆದ ದಶಕಗಳಲ್ಲಿ ಅಧಿಕಾರ ನಡೆಸಿದ ಸರ್ಕಾರಗಳು ರಾಜ್ಯದ ಮೇಲೆ ಸಾಲದ ಹೊರೆ ಹೊರಿಸಿವೆ. 2026ರ ಚುನಾವಣೆಯವರೆಗೆ ಅಧಿಕಾರದಲ್ಲಿದ್ದ ಡಿಎಂಕೆ ಸರ್ಕಾರ, ಉಚಿತ ಕೊಡುಗೆಗಳ ರಾಜಕೀಯ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬಂದಿತ್ತು. ಉಚಿತ ಟಿವಿ, ಮಿಕ್ಸರ್, ಲ್ಯಾಪ್‌ಟಾಪ್ ಮತ್ತು ನಗದು ಸಹಾಯದಂತಹ ಯೋಜನೆಗಳಿಂದಾಗಿ ರಾಜ್ಯದ ಸಾರ್ವಜನಿಕ ಹೊಣೆಗಾರಿಕೆಗಳು ಆತಂಕಕಾರಿ ಮಟ್ಟಕ್ಕೆ ತಲುಪಿವೆ. ಇಂದು ರಾಜ್ಯದ ಒಟ್ಟು ಆದಾಯದ ಬಹುಪಾಲು ಹಣ ಕೇವಲ ಬಡ್ಡಿ ಪಾವತಿಗೆ ವಿನಿಯೋಗವಾಗುತ್ತಿದೆ. ಮೂಲಸೌಕರ್ಯಾಭಿವೃದ್ಧಿಗೆ ಬಳಕೆಯಾಗಬೇಕಿದ್ದ ಹಣ, ಸಬ್ಸಿಡಿ, ಸಂಬಳ ಮತ್ತು ಪಿಂಚಣಿಗಳಂತಹ ಮರುಕಳಿಸುವ ವೆಚ್ಚಗಳಿಗೆ ಬಳಕೆಯಾಗುತ್ತಿರುವುದರ ಬಗ್ಗೆ ಆರ್ಥಿಕ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. 2026ರ ಹಣಕಾಸು ವರ್ಷದಲ್ಲಿ ರಾಜ್ಯಗಳ ಮಾರುಕಟ್ಟೆ ಸಾಲದ ಪ್ರಮಾಣ ಶೇ.15.2 ರಷ್ಟು ಏರಿಕೆಯಾಗಿ 12.4 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ತಮಿಳುನಾಡಿನ ಕಂದಾಯ ಕೊರತೆ 2027ರ ವೇಳೆಗೆ, ರಾಜ್ಯದ ಒಟ್ಟು ದೇಶೀಯ ಉತ್ಪನ್ನದ(ಜಿಎಸ್‌ಡಿಪಿ) ಶೇ. 1.2ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ.

ಟಿವಿಕೆ ಪ್ರಮುಖ ಭರವಸೆಗಳು

- ಕುಟುಂಬದ ಹಿರಿಯ ಮಹಿಳೆಗೆ ಮಾಸಿಕ 2,500 ರೂ. ಭತ್ಯೆ
- ವರ್ಷಕ್ಕೆ 6 ಉಚಿತ ಎಲ್‌ಪಿಜಿ ಸಿಲಿಂಡರ್, 200 ಯೂನಿಟ್ ಉಚಿತ ವಿದ್ಯುತ್
- ಪದವೀಧರರಿಗೆ ನಿರುದ್ಯೋಗ ಭತ್ಯೆ ಮತ್ತು ಯುವ ಉದ್ಯಮಿಗಳಿಗೆ 25 ಲಕ್ಷ ರೂ.ವರೆಗೆ ಸಾಲ
- ರೈತರ ಬೆಳೆ ಸಾಲ ಮನ್ನಾ, ವಿದ್ಯಾರ್ಥಿಗಳಿಗೆ ಶ್ಯೂರಿಟಿ ರಹಿತ ಶಿಕ್ಷಣ ಸಾಲ
- ವಧುವಿಗೆ 8 ಗ್ರಾಂ ಚಿನ್ನ ಮತ್ತು ಬಟ್ಟೆ ನೀಡುವ ವಿವಾಹ ಸಹಾಯ ಯೋಜನೆ



ಟಿವಿಕೆ ಜನಕಲ್ಯಾಣ ಪ್ರಣಾಳಿಕೆ

ಈ ಆರ್ಥಿಕ ಬಿಕ್ಕಟ್ಟಿನ ನಡುವೆ, ಮುಖ್ಯಮಂತ್ರಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷ ಘೋಷಿಸಿರುವ ಯೋಜನೆಗಳು ಜನಸಾಮಾನ್ಯರ ಗಮನ ಸೆಳೆದಿವೆ. ಮಹಿಳಾ ಸಬಲೀಕರಣದ ಭಾಗವಾಗಿ ಸರ್ಕಾರ ಕುಟುಂಬದ ಹಿರಿಯ ಮಹಿಳೆಗೆ ಮಾಸಿಕ **2,500** ರೂ. ಗೌರವ ಧನ. ವರ್ಷಕ್ಕೆ ಆರು ಉಚಿತ ಎಲ್‌ಪಿಜಿ ಸಿಲಿಂಡರ್ ಮತ್ತು ಉಚಿತ ಬಸ್ ಪ್ರಯಾಣದ ಭರವಸೆಯೂ ಪಟ್ಟಿಯಲ್ಲಿದೆ. ಪದವೀಧರರಿಗೆ ಮತ್ತು ಡಿಪ್ಲೊಮಾದಾರರಿಗೆ ನಿರುದ್ಯೋಗ ಭತ್ಯೆ, ಶ್ಯೂರಿಟಿರಹಿತ ಶಿಕ್ಷಣ ಸಾಲ ಹಾಗೂ ಯುವ ಉದ್ಯಮಿಗಳಿಗೆ **25** ಲಕ್ಷ ರೂ.ಗಳವರೆಗೆ ಸಾಲ ಸೌಲಭ್ಯದ ಆಶ್ವಾಸನೆ ನೀಡಲಾಗಿದೆ. ವಧುವಿಗೆ ಚಿನ್ನ ಮತ್ತು ಬಟ್ಟೆ ಸಹಾಯ, ಬೆಳೆ ಸಾಲ ಮನ್ನಾ ಮತ್ತು **200** ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ವಿಜಯ್ ಭರವಸೆ ನೀಡಿದ್ದಾರೆ. ಕೇವಲ ಮಹಿಳೆಯರಿಗೆ ನೀಡುವ ಮಾಸಿಕ ಭತ್ಯೆ ಯೋಜನೆಯೊಂದಕ್ಕೇ ವರ್ಷಕ್ಕೆ ಹತ್ತಾರು ಸಾವಿರ ಕೋಟಿ ರೂಪಾಯಿಗಳ ವೆಚ್ಚವಾಗಲಿದೆ. ಇದು ಸರ್ಕಾರದ ಬೊಕ್ಕಸಕ್ಕೆ ಶಾಶ್ವತ ಹೊರೆಯಾಗುವ ಸಾಧ್ಯತೆಯಿದೆ.

ನಿರ್ಣಾಯಕ ಹಂತದಲ್ಲಿ ತಮಿಳುನಾಡು

ಕ್ರಿಸಿಲ್ ವರದಿಯ ಪ್ರಕಾರ, ಗ್ರಾಮೀಣ ಭಾಗದ ಬಡ ಕುಟುಂಬಗಳಿಗೆ ಮಾಸಿಕ 1,500 ರೂ. ನಗದು ವರ್ಗಾವಣೆ ಅವರ ಶೇ.74 ರಷ್ಟು ವೆಚ್ಚವನ್ನು ಸರಿದೂಗಿಸುತ್ತದೆ. ಇದೇ ಕಾರಣಕ್ಕೆ ಇಂತಹ ಯೋಜನೆಗಳಿಗೆ ರಾಜಕೀಯವಾಗಿ ಹೆಚ್ಚಿನ ಮನ್ನಣೆ ಸಿಗುತ್ತದೆ. ತಮಿಳುನಾಡು ಇಂದು ಆರ್ಥಿಕ ಶಿಸ್ತು ಮತ್ತು ಜನಪ್ರಿಯ ಯೋಜನೆಗಳ ನಡುವಿನ ಸಂಕಷ್ಟದ ಹಾದಿಯಲ್ಲಿದೆ. ಹೊಸ ಸರ್ಕಾರ ತನ್ನ ಭರವಸೆಗಳನ್ನು ಈಡೇರಿಸುತ್ತಲೇ ಆರ್ಥಿಕ ಅಭಿವೃದ್ಧಿಯನ್ನು ಹೇಗೆ ಕಾಯ್ದುಕೊಳ್ಳಲಿದೆ, ಎಂಬುದರ ಮೇಲೆ ರಾಜ್ಯದ ಭವಿಷ್ಯ ಅಡಗಿದೆ.

ಹೂಡಿಕೆ, ಅಭಿವೃದ್ಧಿ ಮೇಲಿನ ಪರಿಣಾಮ

ಜನಕಲ್ಯಾಣ ವೆಚ್ಚಗಳು ಹೆಚ್ಚಾದಂತೆಲ್ಲಾ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಡುವ ಬಂಡವಾಳ ವೆಚ್ಚ ಕುಂಠಿತವಾಗುತ್ತದೆ ಎಂದು ಆರ್ಥಿಕ ತಜ್ಞರು ಎಚ್ಚರಿಸಿದ್ದಾರೆ. ಕೇರ್ ಎಡ್ಜ್ ರೇಟಿಂಗ್ಸ್ ಪ್ರಕಾರ, ಮುಂದಿನ ವರ್ಷಗಳಲ್ಲಿ ಅಭಿವೃದ್ಧಿ ಕೆಲಸಗಳ ವೇಗ ಶೇ. 8-10ಕ್ಕೆ ಕುಸಿಯಬಹುದು. ಉಚಿತ ವಿದ್ಯುತ್ ಮತ್ತು ಸಾಲ ಮನ್ನಾದಂತಹ ಯೋಜನೆಗಳು ಬ್ಯಾಂಕಿಂಗ್ ಮತ್ತು ವಿದ್ಯುತ್ ನಿಗಮಗಳ ಮೇಲೆ ಒತ್ತಡ ಹೇರುವ ಸಾಧ್ಯತೆಗಳಿವೆ.

ಕಿರುಸುದ್ದಿ

ಪಶ್ಚಿಮ ನೌಕಾ ಕಮಾಂಡ್ ಮುಖ್ಯಸ್ಥ ವಾತ್ಸಾಯನ್

•ಹೊಸದಿಲ್ಲಿ: ವೈಸ್ ಅಡ್ಮಿರಲ್ ಸಂಜಯ್ ವಾತ್ಸಾಯನ್ ಅವರನ್ನು ಪಶ್ಚಿಮ ನೌಕಾ ಕಮಾಂಡ್‌ನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ನೌಕಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ವಾತ್ಸಾಯನ್, ಕಾರ್ಯಾಚರಣೆಯ ನಿರ್ಣಾಯಕ ಕಮಾಂಡ್‌ನಲ್ಲಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ಸ್ವಾಮಿನಾಥನ್ ಅವರನ್ನು ಮುಂದಿನ ನೌಕಾಪಡೆಯ ಮುಖ್ಯಸ್ಥರನ್ನಾಗಿ ಶನಿವಾರ ನೇಮಿಸಲಾಗಿದೆ. ಪ್ರಸ್ತುತ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಮೇ 31ರಂದು ಸೇವೆಯಿಂದ ನಿವೃತ್ತರಾಗುವುದರಿಂದ ಅವರು ಉನ್ನತ ಹುದ್ದೆಯ ಉಸ್ತುವಾರಿಯನ್ನು ವಹಿಸಿಕೊಳ್ಳಲಿದ್ದಾರೆ.



ದಿತ್ವಾ: ಲಂಕೆಗೆ ಭಾರತದ ನೆರವು ಕಾರ್ಯ ಚುರುಕು

•ಹೊಸದಿಲ್ಲಿ: ಶ್ರೀಲಂಕಾದಲ್ಲಿ ಸಂಭವಿಸಿದ ಅತ್ಯಂತ ಭೀಕರ ನೈಸರ್ಗಿಕ ವಿಕೋಪ ದಿತ್ವಾ ಚಂಡಮಾರುತ ಬಳಿಕ ಭಾರತ ನೀಡಿದ 450 ಮಿಲಿಯನ್ ಡಾಲರ್ ಮೌಲ್ಯದ ಪುನರ್‌ನಿರ್ಮಾಣ ಪ್ಯಾಕೇಜ್ ಅನುಷ್ಠಾನ ತ್ವರಿತಗೊಳಿಸಲು ಭಾರತ ಮತ್ತು ಶ್ರೀಲಂಕಾ ಭಾನುವಾರ ಒಪ್ಪಿಕೊಂಡಿವೆ. ಕೊಲಂಬೊದಲ್ಲಿರುವ ಭಾರತೀಯ ಹೈಕಮಿಷನರ್ ಸಂತೋಷ್ ಜಾ ಅವರು ಶ್ರೀಲಂಕಾದ ಕಾರ್ಮಿಕ ಸಚಿವ ಮತ್ತು ಹಣಕಾಸು ಮತ್ತು ಯೋಜನಾ ಉಪ ಸಚಿವ ಅನಿಲ್ ಜಯಂತ ಫರ್ನಾಂಡೊ ಅವರ ಭೇಟಿಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು. ದಿತ್ವಾ ನಂತರದ 450 ಮಿಲಿಯನ್ ಡಾಲರ್ ಪುನರ್‌ನಿರ್ಮಾಣ ಪ್ಯಾಕೇಜ್ ಅನುಷ್ಠಾನವನ್ನು ತ್ವರಿತಗೊಳಿಸಲು ಒಪ್ಪಿಕೊಂಡಿದ್ದೇನೆ ಎಂದು ಜಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕ್‌ನಲ್ಲಿ ಉಗ್ರರ ದಾಳಿ; 15 ಭದ್ರತಾ ಸಿಬ್ಬಂದಿ ಬಲಿ

•ಇಸ್ಲಾಮಾಬಾದ್: ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದ ಪೊಲೀಸ್ ಠಾಣೆಯೊಂದರ ಮೇಲೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 15 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ವಾಯುವ್ಯ ಪಾಕಿಸ್ತಾನದ ಬನ್ನು ಜಿಲ್ಲೆಯಲ್ಲಿ ಶನಿವಾರ ಈ ಘಟನೆ ನಡೆದಿದೆ. ಅಲ್ಲಿ ಪೊಲೀಸ್ ಠಾಣೆಯನ್ನು ಸಮೀಪಿಸುತ್ತಿದ್ದ ಸ್ಫೋಟಕ ತುಂಬಿದ ವಾಹನದ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ್ದಾರೆ. ಇದರಿಂದ ಸ್ಫೋಟಗೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇರಾನ್‌ಗೆ ರಷ್ಯಾದಿಂದ ಅತ್ಯಾಧುನಿಕ ಡ್ರೋನ್!

•ಮಾಸ್ಕೋ: ಮಧ್ಯಪ್ರಾಚ್ಯದಲ್ಲಿರುವ ಅಮೆರಿಕ ಪಡೆಗಳನ್ನು ಗುರಿಯಾಗಿಸಲು ಇರಾನ್‌ಗೆ 5,000 ಜ್ಯಾಮ್ ಮಾಡಲಾಗದ ಫೈಬರ್ ಆಪ್ಟಿಕ್ ಡ್ರೋನ್‌ಗಳು ಮತ್ತು ದೀರ್ಘ ವ್ಯಾಪ್ತಿಯ ಉಪಗ್ರಹ ಆಧಾರಿತ ಡ್ರೋನ್‌ಗಳನ್ನು ಪೂರೈಸುವ ರಹಸ್ಯ ಯೋಜನೆಯನ್ನು ರಷ್ಯಾ ಸಿದ್ಧಪಡಿಸಿದೆ ಎಂದು ಗೌಪ್ಯ ದಾಖಲೆಗಳು ಬಹಿರಂಗಪಡಿಸಿವೆ.

ರಷ್ಯಾದ ಮಿಲಿಟರಿ ಗುಪ್ತಚರ ಸಂಸ್ಥೆ ಜಿಆರ್‌ಯು ಸಿದ್ಧಪಡಿಸಿರುವ 10 ಪುಟಗಳ ಈ ಪ್ರಸ್ತಾವನೆ, ಇರಾನಿನ ವೃತ್ತಿಪರರಿಗೆ ಈ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಲು ತರಬೇತಿ ನೀಡುವುದನ್ನು ಒಳಗೊಂಡಿದೆ. ರೇಡಿಯೋ ಸಿಗ್ನಲ್‌ಗಳ ಬದಲಿಗೆ ತೆಳುವಾದ ವೈರ್‌ಗಳ ಮೂಲಕ ನಿಯಂತ್ರಿಸಲ್ಪಡುವ ಈ ಫೈಬರ್ ಆಪ್ಟಿಕ್ ಡ್ರೋನ್‌ಗಳನ್ನು ಶತ್ರುಪಡೆಗಳು ಪತ್ತೆಹಚ್ಚಲು ಸಾಧ್ಯವಿಲ್ಲ. ಇವು 40 ಕಿಮೀಗಿಂತಲೂ ಹೆಚ್ಚಿನ ದೂರದ ಗುರಿಗಳ ಮೇಲೆ ನಿಖರ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ಅಲ್ಲದೆ, ಸ್ಟಾರ್‌ಲಿಂಕ್ ಟರ್ಮಿನಲ್‌ಗಳನ್ನು ಹೊಂದಿರುವ ಉಪಗ್ರಹ ಮಾರ್ಗದರ್ಶಿ ಡ್ರೋನ್ ಪೂರೈಸುವ ಯೋಜನೆಯೂ ಇದರಲ್ಲಿ ಸೇರಿದೆ.

ಇರಾನ್‌ನ ತೈಲ ಕೇಂದ್ರ, ಖಾರ್ಗ್ ದ್ವೀಪದ ಮೇಲೆ ದಾಳಿಯ ಭೀತಿ ಇದ್ದ ಯುದ್ಧದ ಆರಂಭಿಕ ಹಂತದಲ್ಲಿ ಈ ಯೋಜನೆ ರೂಪಿಸಲಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ರಷ್ಯಾದ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ 10,000 ಇರಾನ್ ವಿದ್ಯಾರ್ಥಿಗಳು ಹಾಗೂ ತಾಜಿಕ್ ಸಮುದಾಯದವರನ್ನು ಈ ಡ್ರೋನ್ ನಿರ್ವಾಹಕರನ್ನಾಗಿ ನೇಮಿಸಿಕೊಳ್ಳುವ ಕುರಿತು ಮಾಸ್ಕೋ ಪ್ರಸ್ತಾಪಿಸಿದೆ. ಲೆಬನಾನ್‌ನ ಹಿಜ್ಬುಲ್ಲಾ ಪಡೆಗಳಲ್ಲಿ ಇಂತಹ ಡ್ರೋನ್‌ಗಳು ಈಗಾಗಲೇ ಕಂಡುಬಂದಿದ್ದರೂ, ರಷ್ಯಾ ಅಧಿಕೃತವಾಗಿ ಇವುಗಳನ್ನು ಇರಾನ್‌ಗೆ ಕಳುಹಿಸಿದೆಯೇ ಎಂಬುದು ಇನ್ನೂ ದೃಢಪಟ್ಟಿಲ್ಲ.

ಚಂದ್ರಬಾಬು, ಪವನ್ ಮನೆಗೆ ಮೋದಿ ಭೇಟಿ

•ಅಮರಾವತಿ: ಪ್ರಧಾನಿ ನರೇಂದ್ರ ಮೋದಿ ಅವರ ಆಂಧ್ರಪ್ರದೇಶ ಭೇಟಿ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಪ್ರಧಾನಿ ಮೋದಿ ಭಾನುವಾರ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹಾಗೂ ಡಿಸಿಎಂ ಪವನ್ ಕಲ್ಯಾಣ್ ಅವರ ನಿವಾಸಗಳಿಗೆ ಭೇಟಿ ನೀಡಿ ಮಹತ್ವದ ಮಾತುಕತೆ ನಡೆಸಿದ್ದಾರೆ.



ಈ ಭೇಟಿ ರಾಜ್ಯದಲ್ಲಿನ ಬಿಜೆಪಿ-ಟಿಡಿಪಿ-ಜನಸೇನಾ ಮೈತ್ರಿಗೆ ಮತ್ತಷ್ಟು ಬಲ ತುಂಬುವ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ಮೊದಲಿಗೆ ಚಂದ್ರಬಾಬು ನಾಯ್ಡು ನಿವಾಸಕ್ಕೆ ತೆರಳಿದ ಪ್ರಧಾನಿ ನರೇಂದ್ರ ಮೋದಿ, ರಾಜ್ಯದ ಅಭಿವೃದ್ಧಿ, ಕೈಗಾರಿಕಾ ಹೂಡಿಕೆ, ಮೂಲ ಸೌಕರ್ಯ ವಿಸ್ತರಣೆ ಮತ್ತು ಕಲ್ಯಾಣ ಯೋಜನೆಗಳ ಕುರಿತು ಚರ್ಚೆ ನಡೆಸಿದರು ಎನ್ನಲಾಗಿದೆ.

ಅಮರಾವತಿ ಅಭಿವೃದ್ಧಿ, ಬಂದರುಗಳು, ಹೆದ್ದಾರಿಗಳು ಹಾಗೂ ರೈಲು ಸಂಪರ್ಕ ವಿಸ್ತರಣೆ ವಿಷಯಗಳೂ ಸಭೆಯಲ್ಲಿ ಪ್ರಸ್ತಾಪವಾಗಿವೆ ಎಂದು ತಿಳಿದುಬಂದಿದೆ. ನಂತರ ಪವನ್ ಕಲ್ಯಾಣ್ ನಿವಾಸಕ್ಕೆ ಭೇಟಿ ನೀಡಿದ ಮೋದಿ, ಯುವಜನರ ಸಬಲೀಕರಣ, ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣ ಆಡಳಿತ ಬಲಪಡಿಸುವ ವಿಚಾರಗಳ ಕುರಿತು ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಕೊಲ್ಲಿ ರಾಷ್ಟ್ರದಲ್ಲಿ ಡ್ರೋನ್ ದಾಳಿಗಳ ಆತಂಕ ಹೆಚ್ಚಳ

•ಟೆಹ್ರಾನ್: ಇರಾನ್ ಮತ್ತು ಅಮೆರಿಕ ನಡುವಿನ ಕದನ ವಿರಾಮ ಮಾತುಕತೆ ಮಧ್ಯೆ ಪರ್ಷಿಯನ್ ಕೊಲ್ಲಿಯ ರಾಷ್ಟ್ರಗಳಲ್ಲಿ ಡ್ರೋನ್ ದಾಳಿಗಳ ಆತಂಕ ಹೆಚ್ಚಾಗಿದೆ. ಅಮೆರಿಕ ನೀಡಿದ್ದ ಹೊಸ ಯುದ್ಧ ವಿರಾಮ ಪ್ರಸ್ತಾವನೆಗೆ ಇರಾನ್ ತನ್ನ ಪ್ರತಿಕ್ರಿಯೆಯನ್ನು ಪಾಕಿಸ್ತಾನದ ಮಧ್ಯವರ್ತಿಯ ಮೂಲಕ ಕಳುಹಿಸಿದೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ತಿಳಿಸಿವೆ. ಈ ವಿಚಾರವನ್ನು ಪಾಕಿಸ್ತಾನ ಕೂಡ ದೃಢಪಡಿಸಿದೆ.

ಯುದ್ಧವನ್ನು ಶಾಶ್ವತವಾಗಿ ಅಂತ್ಯಗೊಳಿಸುವುದರ ಜತೆಗೆ ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಸಂಘರ್ಷವನ್ನೂ ಕೊನೆಗೊಳಿಸಬೇಕು ಹಾಗೂ ಸಮುದ್ರ ವ್ಯಾಪಾರ ಮಾರ್ಗಗಳ ಭದ್ರತೆ ಖಚಿತಪಡಿಸಬೇಕು ಎಂದು ಇರಾನ್ ಒತ್ತಾಯಿಸಿದೆ. ಆದರೆ ಅಮೆರಿಕ, ಹಾರ್ಮುಜ್ ಜಲಸಂಧಿ ತೆರೆಯುವುದು ಮತ್ತು ಇರಾನ್ ಅಣು ಕಾರ್ಯಕ್ರಮ ಹಿಂಪಡೆಯುವ ವಿಷಯಕ್ಕೂ ಆದ್ಯತೆ ನೀಡುತ್ತಿದೆ.

ಇದೇ ವೇಳೆ ಕತಾರ್ ಸಮೀಪ ಸಾಗುತ್ತಿದ್ದ ಹಡಗಿಗೆ ಡ್ರೋನ್ ದಾಳಿ ನಡೆದಿದ್ದು, ಸಣ್ಣ ಮಟ್ಟದ ಬೆಂಕಿ ಕಾಣಿಸಿಕೊಂಡಿದೆ. ಯುಎಇ ಮತ್ತು ಕುವೈತ್ ವಾಯುಪ್ರದೇಶದಲ್ಲೂ ಅನುಮಾನಾಸ್ಪದ ಡ್ರೋನ್‌ಗಳು ಪತ್ತೆಯಾಗಿವೆ. ಯುಎಇ ಈ ದಾಳಿಗಳಿಗೆ ಇರಾನ್ ಹೊಣೆ ಎಂದು ಆರೋಪಿಸಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ನಂತರ ಫೆ.28ರಿಂದ ಆರಂಭವಾದ ಯುದ್ಧದ ಬಳಿಕ ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ನಿರ್ಬಂಧ ಹೇರಿದ್ದು, ಜಾಗತಿಕ ತೈಲ ಮತ್ತು ಅನಿಲ ಸರಬರಾಜಿನ ಮೇಲೆ ಪರಿಣಾಮ ಬೀರಿದೆ. ಅಮೆರಿಕ ಕೂಡ ಇರಾನ್ ಬಂದರುಗಳ ಮೇಲೆ ನಿರ್ಬಂಧ ಹೇರಿದ್ದು, ಎರಡು ತೈಲ ಟ್ಯಾಂಕರ್‌ಗಳ ಮೇಲೆ ದಾಳಿ ನಡೆಸಿದೆ.

ಯೋಗಿ ಸಚಿವ ಸಂಪುಟ ವಿಸ್ತರಣೆ

•ಲಖನೌ: ಉತ್ತರ ಪ್ರದೇಶದ ಮುಂದಿನ ವರ್ಷದ ಆರಂಭದಲ್ಲಿ ನಿಗದಿಯಾಗಿರುವ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಯೋಗಿ ಆದಿತ್ಯನಾಥ್ ಅವರು ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದಾರೆ. ಇಬ್ಬರು ಸಂಪುಟ ಸಚಿವರು ಮತ್ತು ನಾಲ್ವರು ರಾಜ್ಯ ಸಚಿವರನ್ನು ಉತ್ತರ ಪ್ರದೇಶ ಸರ್ಕಾರಕ್ಕೆ ಸೇರ್ಪಡೆ ಮಾಡಕೊಳ್ಳಲಾಗಿದೆ. ಇಬ್ಬರು ರಾಜ್ಯ ಸಚಿವರನ್ನು ಭಾನುವಾರ ಸ್ವತಂತ್ರ ಉಸ್ತುವಾರಿಗೆ ಬಡ್ತಿ ನೀಡಲಾಗಿದೆ. ಜನ ಭವನದಲ್ಲಿ ನಡೆದ ಪ್ರಮಾಣ ವಚನ ಸಮಾರಂಭದಲ್ಲಿ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಭೂಪೇಂದ್ರ ಚೌಧರಿ ಮತ್ತು ಮನೋಜ್ ಪಾಂಡೆ ಅವರನ್ನು ಸಂಪುಟ ಸಚಿವರನ್ನಾಗಿ ನೇಮಿಸಲಾಯಿತು. ರಾಜ್ಯ ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರಿಗೆ ಸ್ವತಂತ್ರ ಉಸ್ತುವಾರಿಯೊಂದಿಗೆ ರಾಜ್ಯ ಸಚಿವರ ಹುದ್ದೆಗೆ ಬಡ್ತಿ ನೀಡಲಾಯಿತು. ರಾಜ್ಯದ ನಾಲ್ವರು ಹೊಸ ಸಚಿವರಾದ ಕೃಷ್ಣ ಪಾಸ್ವಾನ್, ಸುರೇಂದ್ರ ದಿಲರ್, ಹಂಸರಾಜ್ ವಿಶ್ವಕರ್ಮ ಮತ್ತು ಕೈಲಾಶ್ ರಜಪೂತ್ ಪ್ರಮಾಣ ವಚನ ಸ್ವೀಕರಿಸಿದರು.

ಕೇರಳ ಯುಡಿಎಫ್ ಮುಖ್ಯಮಂತ್ರಿ ಆಯ್ಕೆ ಕಸರತ್ತು: ಮುಂದುವರಿದ ಅನಿಶ್ಚಿತತೆ

ಕೈ ಕಮಾಂಡ್ ಒಲವು ವೇಣುಗೋಪಾಲ್ ಕಡೆ?

•ಹೊಸದಿಲ್ಲಿ: ತಮಿಳುಡಿನಲ್ಲಿ ರಾಜಕೀಯ ಹೈಡ್ರಾಮಾ ಕೊನೆಗೊಂಡು ಟಿವಿಕೆ ಮುಖ್ಯಸ್ಥ ನಟ-ರಾಜಕಾರಣಿ ವಿಜಯ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿ ಕೊಂಡಿದ್ದಾರೆ. ಆದರೆ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ 102 ಸ್ಥಾನಗಳ ಭರ್ಜರಿ ಗೆಲುವು ಸಾಧಿಸಿದ ಹೊರತಾಗಿಯೂ ಮುಖ್ಯಮಂತ್ರಿ ಆಯ್ಕೆಯನ್ನು ಅಂತಿಮಗೊಳಿಸಲು ಇನ್ನೂ ಸಾಧ್ಯವಾಗ ದಿರುವುದು ಕಾಂಗ್ರೆಸ್ ನಾಯಕತ್ವಕ್ಕೆ ಇರಿಸುಮುರಿಸುಂಟು ಮಾಡಿದೆ.



ಶನಿವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ 3 ಗಂಟೆಗಳ ಕಾಲ ನಡೆದ ಬಿರುಸಿನ ಚರ್ಚೆಗಳ ಹೊರತಾಗಿಯೂ ಅಂತಿಮ ಘೋಷಣೆ ಹೊರಡಿಸಲು ಸಾಧ್ಯವಾಗಿಲ್ಲ. ಇದೀಗ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಮಿತ್ರಪಕ್ಷ ಮುಸ್ಲಿಂಲೀಗ್ ಜತೆ ಚರ್ಚಿಸಿದ ಬಳಿಕ ಶೀಘ್ರವೇ ಅಧಿಕೃತ ಘೋಷಣೆ ಹೊರಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಯುಡಿಎಫ್ ಕೂಟದಲ್ಲಿ ಕಾಂಗ್ರೆಸ್ 63 ಸ್ಥಾನಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಮೂಡಿಬಂದಿದ್ದು, ಇದೀಗ ಮುಖ್ಯ ಮಂತ್ರಿ ಸ್ಥಾನಕ್ಕೆ ಪ್ರಮುಖವಾಗಿ ವಿ.ಡಿ. ಸತೀಶನ್, ರಮೇಶ್ ಚೆನ್ನಿತ್ತಲ ಮತ್ತು ಕೆ.ಸಿ.ವೇಣುಗೋಪಾಲ್ ನಡುವೆ ತೀವ್ರ ಪೈಪೋಟಿ ನಡೆದಿದೆ. ಈ ಪೈಕಿ ಕಾಂಗ್ರೆಸ್ ಹೈಕಮಾಂಡ್ ಒಲವು ಗಾಂಧಿ ಕುಟುಂಬದ ಆಪ್ತರಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಕಡೆಗೆ ಇದೆ ಎನ್ನಲಾಗಿದ್ದು, ಅವರು ಮುಂಚೂಣಿಯಲ್ಲಿದ್ದಾರೆನ್ನಲಾಗಿದೆ. ಇನ್ನೊಂದೆಡೆ ಮುಸ್ಲಿಂಲೀಗ್ ಸೇರಿದಂತೆ ಕಾಂಗ್ರೆಸ್ ಮಿತ್ರಪಕ್ಷಗಳು ಇದನ್ನು ವಿರೋಧಿಸುತ್ತಿದ್ದು ಅವು ವಿ.ಡಿ.ಸತೀಶನ್ ಪರವಾಗಿ ಕಾಂಗ್ರೆಸ್ ಮೇಲೆ ತೀವ್ರ ಒತ್ತಡ ಹೇರುತ್ತಿವೆ.

ಕೈಕಮಾಂಡ್ ಅಸಮಾಧಾನ: ಮುಂದಿನ ಯುಡಿಎಫ್ ಸರ್ಕಾರದ ಮುಖ್ಯಮಂತ್ರಿ ಆಯ್ಕೆ ಗೊಂದಲ ನಿವಾರಿಸಲು ಹೆಣಗಾಡುತ್ತಿರುವ ನಡುವೆಯೇ, ಕೇರಳ ಮತ್ತು ದಿಲ್ಲಿಯಲ್ಲಿ ಮೂರೂ ನಾಯಕರ ಬೆಂಬಲಿಗರು ನಡೆಸುತ್ತಿರುವ ಬಲ ಪ್ರದರ್ಶನ ಕುರಿತಂತೆ ಕಾಂಗ್ರೆಸ್ ಹೈಕಮಾಂಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇದರ ಬೆನ್ನಿಗೇ ಇಂತಹ ಪ್ರದರ್ಶನಗಳನ್ನು ಕೂಡಲೇ ನಿಲ್ಲಿಸಬೇಕೆಂದು ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ದೀಪಾ ದಾಸ್‌ಮುನ್ಷಿ ಅವರು ತಾಕೀತು ಮಾಡಿದ್ದಾರೆ.

ಬಿಜೆಪಿ, ಸಿಪಿಎಂಗಳಿಂದ ಲೇವಡಿ

ಕೇರಳದಲ್ಲಿ ಯುಡಿಎಫ್ ಗೆಲುವು ಸಾಧಿಸಿ 6 ದಿನಗಳೇ ಕಳೆದರೂ ಇನ್ನೂ ಕಾಂಗ್ರೆಸಿಗೆ ಮುಖ್ಯಮಂತ್ರಿ ಆಯ್ಕೆಯನ್ನು ಅಂತಿಮಗೊಳಿಸಲು ಸಾಧ್ಯವಾಗದೆ ಇರುವುದಕ್ಕೆ ಸಿಪಿಎಂ ಮತ್ತು ಬಿಜೆಪಿಗಳು ಕಾಂಗ್ರೆಸನ್ನು ಲೇವಡಿಗೈದಿವೆ. ಮಾತು ಮಾತಿಗೂ ಕಾಂಗ್ರೆಸ್ ನಾಯಕರು ಪ್ರಜಾತಂತ್ರ, ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಚುನಾವಣೆ ನಡೆದು ಫಲಿತಾಂಶ ಪ್ರಕಟವಾದರೂ ಮುಖ್ಯಮಂತ್ರಿ ಆಯ್ಕೆಯನ್ನು ಮಾತ್ರ ಕುಟುಂಬ ಸೊಸೈಟಿ ಚುನಾವಣೆಯ ಮಾದರಿಯಲ್ಲಿ ನಿರ್ವಹಿಸುತ್ತಿದೆ ಎಂಬುದಾಗಿ ಅವು ಕಿಚಾಯಿಸುತ್ತಿವೆ. ಸಾಮಾಜಿಕ ಮಾಧ್ಯಮಗಳಲ್ಲೂ ಈ ಬಗ್ಗೆ ಟೀಕೆಗಳು ಕೇಳಿಬಂದಿದ್ದು, ಕೇರಳದಲ್ಲಿ ಕಾಂಗ್ರೆಸ್‌ನ ಮೂವರು ನಾಯಕರ ಪರವಾಗಿ ನಡೆದ ಬಹಿರಂಗ ಪ್ರದರ್ಶನಗಳು, ಆಕ್ರೋಶಗಳನ್ನು ಬೊಟ್ಟು ಮಾಡಲಾಗಿದೆ.

ತೈಲ ಕಂಪನಿಗಳಿಗೆ ₹1 ಲಕ್ಷ ಕೋಟಿ ನಷ್ಟ

•ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಸಂಘರ್ಷದ ನಂತರ ಜಾಗತಿಕ ಇಂಧನ ಬೆಲೆ ಏರಿಕೆಯ ಹೊರೆಯಿಂದ ದೇಶೀಯ ಗ್ರಾಹಕರನ್ನು ರಕ್ಷಿಸಲು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಹತ್ತು ವಾರಗಳಲ್ಲಿ 1 ಲಕ್ಷ ಕೋಟಿ ರೂ. ಗಿಂತಲೂ ಹೆಚ್ಚು ನಷ್ಟ ಅನುಭವಿಸಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಪ್ರತಿದಿನ 1,600 ಕೋಟಿ ರೂ.ನಿಂದ 1,700 ಕೋಟಿ ರೂ.ವರೆಗೆ ನಷ್ಟ ಅನುಭವಿಸುತ್ತಿವೆ. ಕಚ್ಚಾ ತೈಲ ಬೆಲೆಯಲ್ಲಿ ಶೇ.50ರಷ್ಟು ಏರಿಕೆಯಾಗಿದ್ದರೂ, ಈ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಎರಡು ವರ್ಷ ಹಳೆಯ ದರಗಳಾದ ಕ್ರಮವಾಗಿ ಲೀಟರ್‌ಗೆ 94.77 ರೂ. ಮತ್ತು 87.67 ರೂ. ಕಾಯ್ದುಕೊಂಡಿವೆ.

ಆರ್ಥಿಕ ಪರಿಣಾಮ: ನಿರಂತರ ನಷ್ಟ, ಈ ಸಂಸ್ಥೆಗಳು ಕಾರ್ಯನಿರತ ಬಂಡವಾಳಕ್ಕಾಗಿ ಹೆಚ್ಚಿನ ಸಾಲ ಪಡೆಯುವಂತೆ ಮಾಡಿದೆ. ಈ ಆರ್ಥಿಕ ಒತ್ತಡ ತೈಲ ಶುದ್ಧೀಕರಣ ವಿಸ್ತರಣೆ, ಪೈಪ್‌ಲೈನ್‌ಗಳು ಮತ್ತು ಶುದ್ಧ ಇಂಧನ ಯೋಜನೆಗಳಿಗೆ ಭವಿಷ್ಯದ ಹೂಡಿಕೆಗಳಿಗೆ ಅಡ್ಡಿಯಾಗುವ ಭೀತಿಯಿದೆ. ಜಪಾನ್ ಮತ್ತು ಯುಕೆಯಂತಹ ದೇಶಗಳಲ್ಲಿ ಇಂಧನ ಬೆಲೆಗಳು ಶೇ.30ರಷ್ಟು ಏರಿಕೆಯಾಗಿದ್ದರೆ, ಭಾರತದಲ್ಲಿ ದರಗಳು ಸ್ಥಿರವಾಗಿವೆ.

ಸರ್ಕಾರದ ರಕ್ಷಣೆ: ಸರ್ಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 13 ರೂ.ನಿಂದ 3 ರೂ.ಗೆ ಇಳಿಸಿದೆ ಮತ್ತು ಡೀಸೆಲ್ ಮೇಲಿನ 10 ರೂ. ಸುಂಕವನ್ನು ರದ್ದುಗೊಳಿಸಿದೆ. ಈ ಕ್ರಮಗಳಿಂದ ಸರ್ಕಾರಿ ಬೊಕ್ಕಸಕ್ಕೆ ಪ್ರತಿ ತಿಂಗಳು 14,000 ಕೋಟಿ ರೂ. ನಷ್ಟವಾಗುತ್ತಿದೆ.

ಕಿರುಸುದ್ದಿ

ಸಚಿವ ಸುಧಾಕರ್ ನಿಧನಕ್ಕೆ ಡಾ.ಹೆಗ್ಗಡೆ ತೀವ್ರ ಸಂತಾಪ



ಉಜಿರೆ: ರಾಜ್ಯ ಯೋಜನೆ ಮತ್ತು ಸಾಂಖಿಕ ಸಚಿವರಾಗಿದ್ದ ಡಿ. ಸುಧಾಕರ್ ಚಳ್ಳಕೆರೆ ಅವರ ನಿಧನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಅನುಭವ ಹೊಂದಿದ್ದ ಅವರು ಶಾಸಕರಾಗಿ, ಸಚಿವರಾಗಿ ಉತ್ತಮ ಸೇವೆ ಮಾಡಿದ್ದು ಎಲ್ಲರೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಅಪಾರ ಅಭಿಮಾನಿಯೂ, ಭಕ್ತರೂ ಆಗಿದ್ದು ಅನೇಕ ಬಾರಿ ಇಲ್ಲಿಗೆ ಬಂದು ದೇವರ ದರ್ಶನವನ್ನು ಪಡೆದು ಮಾತುಕತೆ ನಡೆಸಿ ಹೋಗುತ್ತಿದ್ದರು. ಇತ್ತೀಚೆಗೆ ಧರ್ಮಸ್ಥಳಕ್ಕೆ ಬಂದ ಸಂದರ್ಭದಲ್ಲಿ ನಮ್ಮ ಆನೆ ಮರಿ 'ಶಿವಾನಿ'ಯ ಹುಟ್ಟುಹಬ್ಬದಲ್ಲಿ ಸಂತೋಷದಿಂದ ಭಾಗವಹಿಸಿ ಸಂಭ್ರಮಿಸಿದ್ದನ್ನು ಅವರು ನೆನಪಿಸಿಕೊಂಡಿದ್ದಾರೆ. ಸರಕಾರವು ತಮಗೆ ನೀಡಿದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಜನಾನುರಾಗಿಯಾಗಿದ್ದ ಅವರು ಇಟ್ಟುಕೊಂಡು ತಮ್ಮ ಕ್ಷೇತ್ರದಲ್ಲಿ ಉತ್ತಮ ಸೇವಾಕಾರ್ಯಗಳನ್ನು ಮಾಡುತ್ತಿರುವುದನ್ನು ನಾನು ಗಮನಿಸಿದ್ದೇನೆ. ಧರ್ಮಸ್ಥಳದಲ್ಲಿ ಭಗವಾನ್ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕದ ಸಮಿತಿಯ ಸಭೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದ ಅವರು, ಮಸ್ತಕಾಭಿಷೇಕದ ಯಶಸ್ಸಿಗೆ ಸಕ್ರಿಯ ಸಹಕಾರ ನೀಡಿದ್ದರು. ಅಲ್ಪಕಾಲದ ಅನಾರೋಗ್ಯದಿಂದ ಅಗಲಿದ ಡಿ. ಸುಧಾಕರ್ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ ಹಾಗೂ ಕುಟುಂಬಸ್ಥರಿಗೆ ಅವರ ಅಗಲುವಿಕೆಯಿಂದ ಉಂಟಾದ ದುಃಖವನ್ನು ಸಹಿಸುವ ಶಕ್ತಿ-ತಾಳ್ಮೆಯನ್ನಿತ್ತು ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುವುದಾಗಿ ಅವರು ಸಂದೇಶದಲ್ಲಿ ತಿಳಿಸಿದ್ದಾರೆ.

ಲಕ್ಷ್ಮೀ ಹೆಬ್ಬಾಳ್ಕರ್ ಸಂತಾಪ

ಬೆಳಗಾವಿ: ಹಿರಿಯ ಸಚಿವ ಡಿ.ಸುಧಾಕರ ಅವರ ನಿಧನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅತ್ಯಂತ ಕಷ್ಟದಿಂದ ಮೇಲೆ ಬಂದಿದ್ದ ಸುಧಾಕರ ಅವರು ಅತ್ಯಂತ ಸರಳ, ಸಜ್ಜನರಾಗಿದ್ದರು. ಎಲ್ಲರೊಂದಿಗೆ ನಗು ನಗುತ್ತ ಮಾತನಾಡುತ್ತಿರುತ್ತಿದ್ದ ಸುಧಾಕರ ಅವರ ಅಕಾಲಿಕ ನಿಧನ ರಾಜ್ಯಕ್ಕೆ ಹಾಗೂ ಕಾಂಗ್ರೆಸ್‌ಗೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬಕ್ಕೆ ಧುಃಖವನ್ನು ಸಹಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಪ್ರಾರ್ಥಿಸಿದ್ದಾರೆ.

ನೀರಿನಲ್ಲಿ ಮುಳುಗಿ ಬಾಲಕ ಸಾವು

ಕುಷ್ಟಗಿ: ತಾಲೂಕಿನ ಕೆ.ಬೋದೂರು ಗ್ರಾಮದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ. ನೀರಿನಲ್ಲಿ ಮುಳುಗಿ ಮೃತಪಟ್ಟ ಬಾಲಕ ತಾಲೂಕಿನ ಕವಲ ಬೋದೂರು ಗ್ರಾಮದ ಹನಮಂತಪ್ಪ ತಂದೆ ಬಸವರಾಜ ಗೋರೆಬಾಳ (17) ಎಂದು ತಿಳಿದು ಬಂದಿದೆ. ಮೃತ ಹನಮಂತಪ್ಪ ಸ್ನೇಹಿತರೊಂದಿಗೆ ವಣಗೇರಾ ಸೀಮಾದ ಸರ್ವೆ ನಂಬರ್ 25/1ಹಿಸ್ಸಾ02 ರ ಬಿ.ಸೇತು ಕುಮಾರ ರವರಿಗೆ ಸೇರಿದ ಜಮೀನಿನಲ್ಲಿರುವ ಹೊಂಡದಲ್ಲಿ ಈಜಾಡಲು ಹೋದಾಗ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಘಟನಾ ಸ್ಥಳಕ್ಕೆ ಅಗ್ನಿ ಶಾಮಕ ದಳದವರು ಭೇಟಿ ನೀಡಿ ಮೃತದೇಹ ಶೋಧಕಾರ್ಯ ನಡೆಸಿದ್ದಾರೆ. ರಾತ್ರಿ ಸಮಯವಾಗಿರುವುದರಿಂದ ಶೋಧ ಕಾರ್ಯ ಕೈಬಿಡಲಾಗಿದ್ದು, ಬೆಳಗ್ಗೆ ಶೋಧ ಕಾರ್ಯ ಮುಂದುವರಿಯಲಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಪಿಎಸ್‌ಐ ಹನಮಂತಪ್ಪ ಸೇರಿದಂತೆ ಅಗ್ನಿ ಶಾಮಕದಳದವರು ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ.



ಶಕುಂತಲಾ ದಂಡಿನ ನಿಧನ

ಗದಗ: ನಗರದ ಕನಕದಾಸ ಶಿಕ್ಷಣ ಸಮಿತಿಯ ಅಧ್ಯಕ್ಷ ಡಾ.ಬಿ.ಎಫ್.ದಂಡಿನ ಧರ್ಮಪತ್ನಿ, ಜಿಪಂ ಮಾಜಿ ಉಪಾಧ್ಯಕ್ಷೆ ಹಾಗೂ ಭಾರತ ಆಹಾರ ನಿಗಮದ ರಾಜ್ಯ ನಿರ್ದೇಶಕ ರವಿ ದಂಡಿನ ಮಾತೋಶ್ರೀ ಶಕುಂತಲಾಬಾಯಿ ದಂಡಿನ (83) ಭಾನುವಾರ ನಿಧನರಾದರು. ಮೃತರು ಪತಿ, ಇರ್ವರು ಪತ್ರರು, ಮೂವರು ಪತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



ಐತಿಹಾಸಿಕವಾಗಿ 1.14 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ

ಕಂದಾಯ ಸೇವೆಯಲ್ಲಿ ಕರ್ನಾಟಕ ನಂ.1

ಕಲಬುರಗಿ: ಕಂದಾಯ ಸೇವೆಗಳನ್ನು ಪಡೆಯಲು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲೆಂದೇ ಸರ್ಕಾರ ಅನೇಕ ಸೇವೆಗಳನ್ನು ಡಿಜಿಟಲ್ ಮೂಲಕ ಜನರ ಮನೆಗೆ ಆಡಳಿತ ತೆಗೆದುಕೊಂಡು ಹೋಗಿದ್ದು, ಕಂದಾಯ ಸೇವೆ ಮತ್ತು ಪಂಚಾಯತ್ ರಾಜ್ ಸೇವೆ ನೀಡುವಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 1 ಸ್ಥಾನದಲ್ಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಕಂದಾಯ ಇಲಾಖೆಯ ಯೋಜನೆ ಫಲಾನುಭವಿಗಳಿಗೆ ಹಕ್ಕುಪತ್ರ, ಪಹಣಿ, ಪಿಂಚಣಿ ಮತ್ತಿತರ ವಿವಿಧ ಸೌಲಭ್ಯ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಸರ್ಕಾರ ಈಗಾಗಲೇ ನುಡಿದಂತೆ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸಿದ್ದೇವೆ. ಜನಸಾಮಾನ್ಯರಿಗೆ ಅವರ ಆಸ್ತಿಯ ಕಾನೂನಾತ್ಮಕ ಹಕ್ಕು ದಾಖಲೆಗಳನ್ನು ಒದಗಿಸುವ ಭೂ ಗ್ಯಾರಂಟಿ ಆರನೇ ಗ್ಯಾರಂಟಿ ಇದ್ದಂತೆ ಎಂದರು.

ಕಳೆದ ಮೂರು ವರ್ಷದಲ್ಲಿ ಕಂದಾಯ ಇಲಾಖೆಯು ದಾಖಲೆ ಪ್ರಮಾಣದಲ್ಲಿ ಇಂದಿಲ್ಲಿ 1,14,337 ಫಲಾನುಭವಿಗಳು ಏಕಕಾಲದಲ್ಲಿ ಸೌಲಭ್ಯಗಳನ್ನು ವಿತರಣೆ ಮಾಡುತ್ತಿರುವುದು ಕಂದಾಯ ಕ್ರಾಂತಿಯಾಗಿದೆ. ಇದಕ್ಕೆ ಹಗಲಿರುಳು ಶ್ರಮಿಸಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ನೇತೃತ್ವದ ಕಂದಾಯ ಇಲಾಖೆಯ ಇಡೀ ತಂಡದ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು.

40 ವರ್ಷದಿಂದ ಬಾಕಿ ಇದ್ದ ದರಖಾಸ್ತು ಪೋಡಿಗಳ ದುರಸ್ತಿಗೆ ಮುಕ್ತಿ ನೀಡಲಾಗಿದೆ. 94ಸಿ, 94 ಸಿಸಿನಲ್ಲಿ ಮನೆ ಹಕ್ಕುಪತ್ರ ನೀಡಲಾಗಿದೆ. ಆಸ್ತಿ ಕಬಳಿಕೆ ತಡೆಯಲು ಆರ್‌ಟಿಸಿಗೆ ಆಧಾರ್ ಸೀಡಿಂಗ್ ಮಾಡಿಸಲಾಗಿದೆ. ಹಿಂದೆಂದೂ ಆಗದ ಕೆಲಸ ಕಳೆದ 3 ವರ್ಷದ ನಮ್ಮ ಸರ್ಕಾರದ ಅವಧಿಯಲ್ಲಿ ಜಿಲ್ಲೆಯಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ.



ಕಳೆದ ಮೂರು ವರ್ಷದಲ್ಲಿ ಕಂದಾಯ ಗ್ರಾಮ ಯೋಜನೆಯಡಿ 368 ಗ್ರಾಮ ಗುರುತಿಸಿ ಅದರಲ್ಲಿ 330 ಗ್ರಾಮಗಳನ್ನು ಘೋಷಿಸಿ, 6,060 ಡಿಜಿಟಲ್ ಹಕ್ಕುಪತ್ರ ವಿತರಿಸಲಾಗಿದೆ. 23,447 ಪಹಣಿ ತಿದ್ದುಪಡಿ ಮಾಡಿಕೊಡಲಾಗಿದೆ. 542 ಪ್ರಕರಣಗಳಲ್ಲಿ ಅನುಬಂಧ-1 ಸೃಜಿಸಿ 1,660 ಮಂಜೂರುದಾರರ ಒಳಗೊಂಡ 978 ದಾಖಲೆಗಳು ದರಖಾಸ್ತು ಪೋಡಿ ದುರಸ್ತಿ ಮಾಡಿ 965 ಪಹಣಿ ಸೃಜಿಸಿದೆ.

■ ಫೌಜಿಯಾ ತರನ್ನುಮ್, ಡಿಸಿ

ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಜಿಲ್ಲೆಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ದಾಖಲೆ ಪ್ರಮಾಣದಲ್ಲಿ 6,060 ಹಕ್ಕುಪತ್ರಗಳನ್ನು ನೀಡಲಾಗಿದೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಸಾಧನೆಯಾಗಿದೆ. ಶೇ.76ರಷ್ಟು ಪಹಣಿಗಳಿಗೆ ಆಧಾರ್ ಜೋಡಣೆ ಮಾಡುವ ಮೂಲಕ ಭೂ ದಾಖಲೆಗಳ ನಿರ್ವಹಣೆಯಲ್ಲಿ ಸುರಕ್ಷತೆ ಮತ್ತು ಪಾರದರ್ಶಕತೆ ಖಚಿತಪಡಿಸಲಾಗಿದೆ ಎಂದರು.

ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರ, ಪ್ರವೀಣ ಪಾಟೀಲ ಹರವಾಳ, ಮಜಹರ್ ಆಲಂ ಖಾನ್, ಚಂದ್ರಿಕಾ ಪರಮೇಶ್ವರ, ಮಹಾಪೌರ ವರ್ಷಾ ರಾಜೀವ ಜಾನೆ,ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಸಿಇಓ ಭಂವರ್ ಸಿಂಗ್ ಮೀನಾ,ಎಸ್ಪಿ ಅಡ್ಡೂರು ಶ್ರೀನಿವಾಸಲು, ಡಿಸಿಪಿ ಶಾಲು, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಾಹಿತ್ಯ ಆಲದಕಟ್ಟಿ, ಪ್ರಭುರೆಡ್ಡಿ ಇದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು.

ಜು.11ರಂದು ರಾಷ್ಟ್ರೀಯ ಲೋಕ ಅದಾಲತ್

ಕೊಪ್ಪಳ: ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಕ್ಕೆ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿನ ಬಾಕಿ ಇರುವ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಪ'ರಿಹ'ರಿಸಿಕ'ೂಳ'್ಳಲು 'ಸಮಾಧಾನ ಸಮಾರೋಹ' ವಿಶೇಷ ಲೋಕ್ ಅದಾಲತ್‌ನಲ್ಲಿ ಸುವರ್ಣಾವಕಾಶವಾಗಿದ್ದು, ಪಕ್ಷಗಾರರು ಸದುಪಯೋಗ ಪಡೆದುಕೊಳ್ಳುವಂತೆ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಅವರು ಹೇಳಿದರು.



ಜಿಲ್ಲಾ ನ್ಯಾಯಾಲಯದಲ್ಲಿರುವ ಡಿಎಲ್‌ಎಸ್‌ಎ ಕಚೇರಿಯಲ್ಲಿ 'ಸಮಾಧಾನ ಸಮಾರೋಹ' ವಿಶೇಷ ಲೋಕ ಅದಾಲತ ಮತ್ತು ಮೆಗಾ ಲೋಕ ಅದಾಲತನ ಮಾಹಿತಿ ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಶೇಖರ ಸಿ. ಅವರ ನೇತೃತ್ವದಲ್ಲಿ ಕೊಪ್ಪಳ ಜಿಲ್ಲಾದ್ಯಂತ 2026ರ ಜು.11ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನದ ಮಾಡಿಕೊಳ್ಳುವ ಮೂಲಕ ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದರು.

ಸಮಾಧಾನ ಸಮಾರೋಹ ವಿಶೇಷ ಲೋಕ್ ಅದಾಲತ್: ಭಾರತದ ಸರ್ವೋಚ್ಚ ನ್ಯಾಯಾಲಯವು 'ಸಮಾಧಾನ ಸಮಾರೋಹ' ವಿಶೇಷ ಲೋಕ್ ಅದಾಲತ್‌ನ್ನು 2026ರ ಆ.21, 22 ಮತ್ತು 23ರಂದು ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದು, ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ವಿಚಾರಣೆಗೆ ಬಾಕಿ ಇರುವ ಒಟ್ಟು 4328 ಪ್ರಕರಣಗಳನ್ನು ಸಂಧಾನಕ್ಕಾಗಿ ಗುರುತಿಸಿ, ಈ ವಿಶೇಷ ಲೋಕ್ ಅದಾಲತ್‌ನ್ನು ಆಯೋಜಿಸಿದೆ ಎಂದರು.

ಜಿಲ್ಲಾ ನ್ಯಾಯಾಲಯದ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಮತ್ತು ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.

ರಾಮಕೃಷ್ಣ ಮಿಷನ್ ಆಶ್ರಮದ 'ರಜತ ಮಹೋತ್ಸವ' ಕಾರ್ಯಕ್ರಮ ಸಂಪನ್ನ

ಬೆಳಗಾವಿ: ಸ್ವಾಮಿ ವಿವೇಕಾನಂದರು ವಾಸ್ತವ್ಯ ಹೂಡಿದ್ದ ಬೆಳಗಾವಿ ಕೋಟೆಯ ರಾಮಕೃಷ್ಣ ಮಿಷನ್ ಆಶ್ರಮವು 25 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ 'ರಜತ ಮಹೋತ್ಸವ' ಭಾನುವಾರ ಸಂಪನ್ನಗೊಂಡಿತು.

ಮೇ 8ರಿಂದ 10ರ ವರೆಗೆ ನಡೆದ ಮಹೋತ್ಸವದಲ್ಲಿ ದೇಶದ ವಿವಿಧ ಭಾಗಗಳ ಗಣ್ಯರು ಹಾಗೂ ಕಲಾವಿದರು ಭಾಗವಹಿಸಿದ್ದರು. ಸಮಾರೋಪ ದಿನವಾದ ಭಾನುವಾರ ಬೇಲೂರು ಮಠದ ಉಪಾಧ್ಯಕ್ಷರಾದ ಸ್ವಾಮಿ ಸುಹಿತಾನಂದಜಿ ಅವರ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆದವು. ಬೆಳಗ್ಗೆ ಸ್ವಾಮೀ ಗಿರೀಜಾತ್ಮಾನಂದ ಮಹಾರಾಜರು ಮತ್ತು ಸ್ವಾಮಿ ಗಭೀರಾತ್ಮಾನಂದಜಿ ಮಹಾರಾಜರ ಉಪಸ್ಥಿತಿಯಲ್ಲಿ ರಾಮಕೃಷ್ಣ ಹೋಮ ಹಾಗೂ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು.

ಸಾರ್ವಜನಿಕ ಸಭೆಯಲ್ಲಿ ಪ್ರವಚನ ನೀಡಿದ ಬೇಲೂರು ರಾಮಕೃಷ್ಣ ಮಠದ ಶ್ರೀ ಮುಕ್ತಿದಾನಂದಜಿ ಮಹಾರಾಜರು, ಸ್ವಾಮಿ ವಿವೇಕಾನಂದರ ತತ್ವಗಳು ಮತ್ತು ಮನುಷ್ಯನಲ್ಲಿರುವ ಅಂತರ್ನಿಹಿತ ದೈವತ್ವದ ಕುರಿತು ಮಾತನಾಡಿದರು.

ತಮಿಳುನಾಡಿನ ಊಟಿ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ ಮಹಾರಾಜರು, ವಿವೇಕಾನಂದರು ಜಗತ್ತಿಗೆ ನೀಡಿದ ಆಧ್ಯಾತ್ಮಿಕ ಕೊಡುಗೆಗಳನ್ನು ಸ್ಮರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮ: ಮಧ್ಯಾಹ್ನ ಡಾ.ದತ್ತಾತ್ರೇಯ ವೇಲಣಕರ್ ತಂಡದಿಂದ ಗೀತ ಗಾಯನ ಹಾಗೂ ಸಂಜೆ ಪಂಡಿತ್ ಪುರಬಯಾನ್ ಚಟರ್ಜಿ ಅವರ ಸಿತಾರ್ ವಾದನ ಕಾರ್ಯಕ್ರಮ ನಡೆಯಿತು.

ಆಶ್ರಮದ ಕಾರ್ಯದರ್ಶಿ ಸ್ವಾಮಿ ಆತ್ಮಪ್ರಾಣಾನಂದಜಿ ಅವರ ನೇತೃತ್ವದಲ್ಲಿ ನಡೆದ ಈ ಮಹೋತ್ಸವದಲ್ಲಿ ಬೆಳಗಾವಿಯ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ನಗರಕ್ಕಿಂತ ಗ್ರಾಮೀಣದಲ್ಲೇ ಬಾಲ್ಯವಿವಾಹ ಹೆಚ್ಚು

▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ

ಮಸ್ಕಿ: ಬಾಲ್ಯವಿವಾಹಗಳ ಪ್ರಮಾಣ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ನಡೆಯುತ್ತವೆ. ಇದಕ್ಕೆ ಮೂಲ ಕಾರಣ ಈಗಿನ ಮಕ್ಕಳ ಮೇಲಿನ ಭದ್ರತೆಯ ಆತಂಕದಿಂದ ಬಾಲ್ಯ ವಿವಾಹಕ್ಕೆ ಮುಂದಾಗುತ್ತಾರೆಯೇ ಎಂಬ ಪ್ರಶ್ನೆ ಮೂಡುತ್ತದೆ.

ಆದರೆ, ಈ ಬಾಲ್ಯ ವಿವಾಹಗಳನ್ನು ತಡೆಯಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು, ಹಾಗೂ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು, ಹಾಗೂ ಮಕ್ಕಳ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಘಟನೆಗಳು ಈ ರೀತಿಯ ಬಾಲ್ಯವಿವಾಹ ತಡೆಯಲು ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದರೂ ಬಾಲ್ಯವಿವಾಹದ ಕೂಪಕ್ಕೆ ಬಲಿಯಾಗುತ್ತಿರುವ ಮಕ್ಕಳ ಸಂಖ್ಯೆ ಏರುತ್ತಲೇ ಇದೆಯೇ ಎಂಬ ಭಯ ಜಿಲ್ಲೆಯನ್ನು ಕಾಡುತ್ತಿದೆ.

ವರ್ಷಗಳ ಅಂಕಿ-ಅಂಶಗಳನ್ನು ತುಲನೆ ಮಾಡಿದರೆ 2023-24ರಲ್ಲಿಯೇ 3 ಪ್ರಕರಣಗಳು ದಾಖಲಾಗಿವೆ ಎಂಬ ಮಾಹಿತಿ ಲಭ್ಯವಾಗಿದೆ. ಆದರೆ ದಾಖಲಾಗದ ಈಗಲೂ ಗುಟ್ಟಾಗಿ ಉಳಿದ ಪ್ರಕರಣಗಳೂ ಬಹಳಷ್ಟಿವೆ.

ಇನ್ನೂ ಮುಂದೆ ಆದರೂ ಸಂಭಂದಪಟ್ಟ ಪೋಷಕರು ಮಕ್ಕಳ ಭವಿಷ್ಯದ ಬಗ್ಗೆ ಗಮನ ಹರಿಸಿ ಬಾಲ್ಯ ವಿವಾಹಗಳನ್ನು ಮಾಡಿದರೆ, ಮುಂದೆ ಆಗುವ ದುಷ್ಪರಿಣಾಮಗಳ ಎಚ್ಚರ ವಹಿಸಬೇಕಾದ ಅನಿವಾರ್ಯತೆ ಇದೆ.

ಆದ್ದರಿಂದ ಯಾರು ಕೂಡ ಹೆಣ್ಣು ಮಕ್ಕಳಿಗೆ ಕಾನೂನಿನ ಪ್ರಕಾರ 18 ವಯಸ್ಸಿನ ನಂತರ ಮದುವೆ ಮಾಡಿ ಕೊಡುವ ಮೂಲಕ ಕಾನೂನು ಪಾಲನೆ ಮಾಡಿ ಹೆಣ್ಣು ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಎಲ್ಲರೂ ಸೇರಿ ಬಾಲ್ಯ ವಿವಾಹ ಎಂಬ ಪಿಡುಗನ್ನು ಬೇರು ಸಮೇತ ಕಿತ್ತು ಹಾಕಲು ಸರ್ಕಾರದ ಜೊತೆ ಕೈ ಜೋಡಿಸಬೇಕಾಗಿದೆ.

ಬಾಲ್ಯ ವಿವಾಹದ ಬಗ್ಗೆ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳು ಜಾಗೃತಿ ಮೂಡಿಸುತ್ತಿದ್ದು, ಇದರ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಇದರ ಬಗ್ಗೆ ಪಾಲಕರು ಕೂಡ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಬಾಲ್ಯ ವಿವಾಹಗಳನ್ನು ಮಾಡಬಾರದು. ಒಂದು ವೇಳೆ ಮಾಡಿದರೆ ಅಂತವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಲಾಗುತ್ತದೆ.

■ ಪೂವಿತ ಎಸ್. ಜಿಲ್ಲಾಧಿಕಾರಿ ರಾಯಚೂರು

ಮುಖ್ಯವಾಗಿ ಪಾಲಕರು ಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡಿದಾಗ ಮಾತ್ರ ಬಾಲ್ಯಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಹಾಗೂ ಈಗಾಗಲೇ ಈ ಕೆಟ್ಟ ವ್ಯವಸ್ಥೆಯ ವಿರುದ್ಧ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುತ್ತಿದ್ದು, ಇನ್ನೂ ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸಲು ತಿಳಿಸಲಾಗುವುದು.

■ ಆರ್.ಬಸನಗೌಡ ತುರ್ವಿಹಾಳ, ಶಾಸಕ

ಮೂವರು ಅಂತರ್ ರಾಜ್ಯ ಕಳ್ಳರ ಬಂಧನ



ಬೆಳಗಾವಿ: ಮನೆಗಳ್ಳತನ ಮಾಡಿದ್ದ ಮೂವರು ಅಂತರ್ ರಾಜ್ಯ ಕಳ್ಳರನ್ನು ಎಪಿಎಂಸಿ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿಯ ಎಪಿಎಂಸಿ ಪೊಲೀಸರು ದಾಳಿ ಮಾಡಿ 4.71 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರ ಮೂಲದ ದೇವೇಂದ್ರ ಉರ್ಫ ಡೇಬ್ಯಾ ರಮೇಶ ವಾಘಮೋರೆ(39), ಸಚಿನ ದತ್ತಾತ್ರೇಯ ಗೌಳಿ(39), ಕಪೀಲ ಉರ್ಫ ಅಪ್ಪಾ ಭಜರಂಗ ಜಾಧವ(23) ಆರೋಪಿಗಳನ್ನು ಬಂಧಿಸಿ ತನಿಖೆ ಕೈಗೊಂಡಿದ್ದಾರೆ.

ಬಂಧಿತ ಆರೋಪಿಗಳಿಂದ 1.67 ಲಕ್ಷ ರೂ. ಮೌಲ್ಯದ 12.080 ಮಿ.ಗ್ರಾಂ. ಬಂಗಾರದ ಆಭರಣ, 1,83 ಲಕ್ಷ ರೂ. ಮೌಲ್ಯದ 744.5 ಗ್ರಾಂ ಬೆಳ್ಳಿಯ ಆಭರಣ, 1.20 ಲಕ್ಷ ರೂ. ಮೌಲ್ಯದ ಎರಡು ಮೋಟರ್ ಸೈಕಲ್ ಸೇರಿದಂತೆ ಒಟ್ಟು 4.71 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೇ 3ರಂದು ಕುವೆಂಪು ನಗರದ ನಿವೃತ್ತ ಉಪನ್ಯಾಸಕ ಅರುಣ ವಾಮನರಾವ ಜಾಧವ ಅವರು ತಮ್ಮ ಮನೆಯಲ್ಲಿ ಬೆಳ್ಳಿ ಹಾಗೂ ಬಂಗಾರದ ಆಭರಣಗಳು ಕಳ್ಳತನವಾದ ದೂರು ನೀಡಿದ್ದರು. ಪ್ರಕರಣದ ಬೆನ್ನತ್ತಿದ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಪಿಎಂಸಿ ಠಾಣೆ ಇನ್ಸಪೆಕ್ಟರ್ ಯು.ಎಸ್. ಆವಟಿ, ಪಿಎಸ್‌ಐ ಎಸ್.ಕೆ. ಹೊಳೆನ್ನವರ, ಎಎಸ್‌ಐ ಎಂ.ಎ.ಪಾಟೀಲ, ಸಿಬ್ಬಂದಿಗಳಾದ ಡಿ.ಸಿ.ಸಾಗರ, ಬಸವರಾಜ ನರಗುಂದ, ಖಾದರಸಾಬ ಖಾನಮ್ಮನವರ, ಗೋವಿಂದಪ್ಪ ಪೂಜಾರ, ರಫೀಕ ಮುಜಾವರ, ಶಿವಾಜಿ ಚವ್ಹಾಣ, ರಮೇಶ ಪಾಟೀಲ, ಹಾಗೂ ಬೆರಳು ಮುದ್ರೆ ಘಟಕ ಅಧಿಕಾರಿ ಇನ್ಸಪೆಕ್ಟರ್ ಆನಂದ ಮೇತ್ರಿ ಹಾಗೂ ಸಿಬ್ಬಂದಿಗಳಾದ ಸೋಮಶೇಖರ ಹಕಾರಿ, ಬಾಹುಬಲಿ ಅನಗಾಲೆ, ವಿಶ್ವನಾಥ ಮಠಪತಿ, ಸದಾಶಿವ ಖಾಡೆ, ಸಂತೋಷ ಮನಕಾಪುರೆ, ರಮೇಶ ಅಕ್ಕಿ, ಮಹಾದೇವ ಖಾಶೀದ, ದೀಪಕ ದೊಡಗೋಣಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಇವರ ಕಾರ್ಯಕ್ಕೆ ಪೊಲೀಸ್ ಆಯುಕ್ತರು ಶ್ಲಾಘಿಸಿದ್ದಾರೆ.

ಗ್ರಾಹಕರ ಕೊರತೆ: ಸಂಕಷ್ಟದಲ್ಲಿ ಕುಂಬಾರರ ಬದುಕು

▸ ಹುಸೇನಸಾಬ ಕಟಗಿ

ದಿಗಂತ ವಿಶೇಷ

ಹನುಮಸಾಗರ: ಪಟ್ಟಣ ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಪ್ರತಿ ವರ್ಷ ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸರಿಸುಮಾರು 40 ಡಿಗ್ರೀ ಬಿಸಿಲುಗೆ ಸಾರ್ವಜನಿಕರು ಹೈರಾಣರಾಗಿದ್ದಾರೆ.

ಒಮ್ಮೆ ಬೇಸಿಗೆ ಆರಂಭವಾದರೆ ಸಾಕು, ಗ್ರಾಮೀಣ ಭಾಗಗಳಲ್ಲಿ ಮಣ್ಣಿನ ಮಡಿಕೆಗಳಿಗೆ ಭಾರೀ ಬೇಡಿಕೆ ಇರುತ್ತಿತ್ತು. ಮನೆಮನೆಗೂ ತಂಪು ನೀರಿಗಾಗಿ ಮಣ್ಣಿನ ಮಡಿಕೆಗಳನ್ನು ಖರೀದಿಸುವುದು ಸಾಮಾನ್ಯ ದೃಶ್ಯವಾಗಿತ್ತು. ಆದರೆ ಕಾಲ ಬದಲಾಗುತ್ತಿದ್ದಂತೆ ಫ್ರಿಡ್ಜ್ ಹಾಗೂ ಆಧುನಿಕ ಉಪಕರಣಗಳ ಬಳಕೆ ಹೆಚ್ಚಾಗಿ, ಸಾಂಪ್ರದಾಯಿಕ ಮಣ್ಣಿನ ಮಡಿಕೆಗಳ ಮಹತ್ವ ನಿಧಾನವಾಗಿ ಕಡಿಮೆಯಾಗುತ್ತಿದೆ. ಇದರಿಂದ ಕುಂಬಾರ ಸಮುದಾಯದ ಬದುಕು ಸಂಕಷ್ಟಕ್ಕೆ ಸಿಲುಕಿದೆ.

ಹನುಮಸಾಗರದ ಸೋಮವಾರದ ಸಂತೆಯಲ್ಲಿ ಮಣ್ಣಿನ ಮಡಿಕೆಗಳನ್ನು ಮಾರಾಟಕ್ಕೆ ತಂದಿದ್ದ ಕುಂಬಾರ ಸಮುದಾಯದ ವ್ಯಾಪಾರಿಗಳು ಗ್ರಾಹಕರ ಕೊರತೆಯಿಂದ ನಿರಾಸೆ ವ್ಯಕ್ತಪಡಿಸಿದರು. 'ಹಿಂದೆ ಒಂದು ದಿನಕ್ಕೆ ಹತ್ತಾರು ಮಡಿಕೆಗಳು ಮಾರಾಟವಾಗುತ್ತಿದ್ದವು. ಈಗ ದಿನಪೂರ್ತಿ ಕೂತರೂ ಒಂದು ಮಡಿಕೆಯೂ ಮಾರಾಟವಾಗುವುದಿಲ್ಲ' ಎಂದು ಶಾಂತವ್ವ ಕುಂಬಾರ ಬೇಸರ ವ್ಯಕ್ತಪಡಿಸಿದರು.

ಮಲ್ಲಪ್ಪ ಕುಂಬಾರ ಮಾತನಾಡಿ, 'ಒಂದು ಮಡಿಕೆಗೆ 200 ರಿಂದ 250 ರೂಪಾಯಿ ಬೆಲೆ ನಿಗದಿ ಮಾಡಿದ್ದರೂ ಜನರು ಖರೀದಿಸಲು ಮುಂದೆ ಬರುತ್ತಿಲ್ಲ, ಫ್ರಿಜ್ ನೀರಿನತ್ತ ಜನರ ಆಸಕ್ತಿ ಹೆಚ್ಚಾಗಿದೆ' ಎಂದು ಹೇಳಿದರು.



ಬಾದಾಮಿ ಭಾಗದಿಂದ ಮಣ್ಣಿನ ಮಡಿಕೆಗಳನ್ನು ತಂದು ಮಾರಾಟ ಮಾಡುತ್ತಿರುವ ಮಂಗಳ ಕುಂಬಾರ ಅವರ ಪರಿಸ್ಥಿತಿಯೂ ಇದೇ ಆಗಿದೆ. 'ಸ್ವಲ್ಪ ಲಾಭದ ನಿರೀಕ್ಷೆಯಲ್ಲಿ ಮಡಿಕೆಗಳನ್ನು ತರುತ್ತೇವೆ. ಆದರೆ ಮಾರಾಟ ಇಲ್ಲದೆ ಖಾಲಿಹಸ್ತದಿಂದ ಮನೆಗೆ ಹಿಂತಿರುಗುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಅಳಲು ತೋಡಿಕೊಂಡರು.

ಆರೋಗ್ಯಕ್ಕೆ ಮಣ್ಣಿನ ಮಡಿಕೆಯ ನೀರೇ ಉತ್ತಮ

ವೈದ್ಯರು ಹಾಗೂ ಹಿರಿಯರು ಹೇಳುವಂತೆ, ಮಣ್ಣಿನ ಮಡಿಕೆಯಲ್ಲಿ ಸಂಗ್ರಹಿಸಿದ ನೀರು ನೈಸರ್ಗಿಕವಾಗಿ ತಂಪಾಗಿರುತ್ತದೆ. ಇದು ದೇಹದ ಉಷ್ಣತೆಯನ್ನು ಸಮತೋಲನದಲ್ಲಿಡುವುದಲ್ಲದೆ, ಜೀರ್ಣಕ್ರಿಯೆ ಸುಧಾರಣೆಗೆ ಸಹಕಾರಿಯಾಗುತ್ತದೆ. ಫ್ರೀಜ್ ನೀರಿನ ಅತಿಯಾದ ಬಳಕೆಯಿಂದ ಗಂಟಲು ನೋವು, ಶೀತ ಹಾಗೂ ಇತರೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂಬುದನ್ನೂ ಹಲವರು ಅಭಿಪ್ರಾಯಪಡುತ್ತಾರೆ.

ಮಣ್ಣಿನ ಮಡಿಕೆಯ ನೀರು ಆರೋಗ್ಯಕ್ಕೆ ಒಳ್ಳೆಯದು. ಆದರೂ ಜನರು ಅದರ ಮಹತ್ವ ಮರೆತಿದ್ದಾರೆ. ಮಡಿಕೆಗಳು ಮಾರಾಟವಾಗದಿದ್ದರೆ ನಮ್ಮ ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ.

■ ಮಲ್ಲಪ್ಪ ಕುಂಬಾರ, ಮಡಿಕೆ ವ್ಯಾಪಾರಿ

ಬೇಸಿಗೆ ಕಾಲದಲ್ಲಿ ಮಡಿಕೆಗಳಿಗೆ ತುಂಬಾ ಬೇಡಿಕೆ ಇರುತ್ತಿತ್ತು. ಈಗ ಫ್ರೀಜ್ ಬಳಕೆ ಹೆಚ್ಚಾಗಿ ನಮ್ಮ ವ್ಯಾಪಾರ ಕುಸಿದಿದೆ. ದಿನವಿಡೀ ಕೂತರೂ ಮಾರಾಟವಾಗುವುದಿಲ್ಲ.

■ ಶಾಂತವ್ವ ಕುಂಬಾರ, ಮಡಿಕೆ ಮಾರಾಟಗಾರ್ತಿ

ಆದರೂ ಆಧುನಿಕ ಜೀವನಶೈಲಿಯ ಪರಿಣಾಮವಾಗಿ ಜನರು ಮಣ್ಣಿನ ಮಡಿಕೆಗಳ ಬಳಕೆಯಿಂದ ದೂರವಾಗುತ್ತಿರುವುದು ಕುಂಬಾರ ಸಮುದಾಯದ ಆತಂಕಕ್ಕೆ ಕಾರಣವಾಗಿದೆ.

ಸಾಂಪ್ರದಾಯಿಕ ಕುಂಬಾರಿಕೆ ವೃತ್ತಿಯನ್ನು ಉಳಿಸಲು ಸರ್ಕಾರದಿಂದ ವಿಶೇಷ ಪ್ರೋತ್ಸಾಹ, ಸಾಲಸೌಲಭ್ಯ ಹಾಗೂ ಜಾಗೃತಿ ಕಾರ್ಯಕ್ರಮಗಳ ಅಗತ್ಯವಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ. ಮಣ್ಣಿನ ಮಡಿಕೆಗಳ ಬಳಕೆಯನ್ನು ಉತ್ತೇಜಿಸುವ ಮೂಲಕ ಆರೋಗ್ಯಕರ ಜೀವನಶೈಲಿಯ ಜೊತೆಗೆ ಕುಂಬಾರರ ಬದುಕಿಗೂ ನೆರವಾಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಜಾಗೃತಿ ಕಾರ್ಯಾಗಾರ | ಡಾ.ಶಬ್ಬೀರ್ ಅಹ್ಮದ್ ಹೇಳಿಕೆ

ಪ್ರಥಮ ಚಿಕಿತ್ಸೆಯಿಂದ ಜೀವ ಉಳಿಸಬಹುದು

ವಿಜಯನಗರ: ರಸ್ತೆ ಅಪಘಾತ, ಬೆಂಕಿ ಅವಘಡದಂತಹ ತುರ್ತು ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸೆಯಿಂದ ಅಪಾಯದಲ್ಲಿರುವವರ ಪ್ರಾಣ ಉಳಿಸಬಹುದಾಗಿದೆ. ಚಿಕಿತ್ಸೆ ಬಗ್ಗೆ ತಿಳುವಳಿಕೆ ಇರುವವರು, ಚಿಕಿತ್ಸೆ ನೀಡಲು ಕಾನೂನಿನಲ್ಲಿ ಅವಕಾಶವಿದೆ ಎಂದು ತುರ್ತು ಚಿಕಿತ್ಸಾ ತಜ್ಞ ಡಾ.ಶಬ್ಬೀರ್ ಅಹ್ಮದ್ ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವಿಜಯನಗರ ಜಿಲ್ಲಾ ಘಟಕವತಿಯಿಂದ ಗೃಹರಕ್ಷಕರಿಗಾಗಿ ಭಾನುವಾರ ಆಯೋಜಿಸಿದ್ದ ಪ್ರಥಮ ಚಿಕಿತ್ಸಾ ಜಾಗೃತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿ, ರಸ್ತೆ ಅಪಘಾತ, ಆತ್ಮಹತ್ಯೆ ಯತ್ನ, ಹೃದಯಾಘಾತ, ಬೆಂಕಿ ಅವಘಡ, ಹಾವು, ನಾಯಿ ಕಡಿತ ಮುಂತಾದ ತುರ್ತು ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸೆಯಿಂದ ಜೀವಗಳನ್ನು ಉಳಿಸಬಹುದು. ಈ ಬಗ್ಗೆ ತಿಳಿವಳಿಕೆ ಇರುವವರು ನಿರ್ಭಯವಾಗಿ ಚಿಕಿತ್ಸೆ ನೀಡಲು ಕಾನೂನಿನಲ್ಲಿ ಅವಕಾಶವಿದೆ. ಸಹಾಯ ಮಾಡುವವರಿಗೆ ಕಾನೂನಿನಲ್ಲಿ ರಕ್ಷಣೆ ಇದೆ. ಒಳ್ಳೆಯ ಉದ್ದೇಶದಿಂದ ಪ್ರಥಮ ಚಿಕಿತ್ಸೆ ನೀಡಿದವರನ್ನು ಪೊಲೀಸರು ವಿಚಾರಣೆ ನೆಪದಲ್ಲಿ ಕಿರುಕುಳ ನೀಡುವಂತಿಲ್ಲ. ಹೆಸರು, ವಿಳಾಸ ಪಡೆದು ಕಳುಹಿಸಬೇಕು ಎಂಬುದು ಸುಪ್ರೀಂ ಕೋರ್ಟ್ ಆದೇಶದಲ್ಲಿದೆ ಎಂದರು.


ಗೃಹರಕ್ಷಕರಿಗೆ 'ಹ್ಯಾಂಡ್ಸ್ ಓನ್ಲಿ ಸಿಪಿಆರ್' ತರಬೇತಿ ನೀಡಲಾಯಿತು. ಎದೆಯ ಮಧ್ಯಭಾಗ ನಿಮಿಷಕ್ಕೆ 100-120 ಬಾರಿ, 5 ಸೆಂ.ಮೀ ಆಳಕ್ಕೆ ಒತ್ತಬೇಕು. ಆಂಬುಲೆನ್ಸ್ ಬರುವವರೆಗೆ ಮುಂದುವರಿಸಬೇಕು ಎಂದರು. ರೆಡ್‌ಕ್ರಾಸ್ ಸಭಾಧ್ಯಕ್ಷ ರವಿಶಂಕರ್ ಮಾತನಾಡಿ, ಪೊಲೀಸರಿಗೆ ಹೆಗಲಾಗಿ ದುಡಿಯುವ ಗೃಹರಕ್ಷಕರ ಸೇವೆ ಶ್ಲಾಘನೀಯ ಎಂದರು. ಇದೇ ವೇಳೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಜಯಂತಿ ನಿಮಿತ್ತ ಮಲ್ಲಮ್ಮನ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ರೆಡ್‌ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರೇಖಾ ಪ್ರಕಾಶ್, ಎಂ.ಸಿ ಸದಸ್ಯೆ ಅನ್ನಪೂರ್ಣ ಸದಾಶಿವ, ಕೆ. ರೆಹಮಾನ್, ಮಹೇಂದ್ರ ಕುಮಾರ್ ಸೋನಿ, ಜಿಲ್ಲಾ ಹೋಂ ಗಾರ್ಡ್ಸ್ ಕಮಾಂಡರ್ ಎಸ್.ಎಂ. ಗಿರೀಶ್, ಪರಶುರಾಮ್ ನಾಯಕ್ ಇತರರು ಇದ್ದರು. ಸುಮಾರು 150 ಗೃಹರಕ್ಷಕರು ಶಿಬಿರದಲ್ಲಿ ಭಾಗಿಯಾಗಿದ್ದರು.



ರಸ್ತೆ ಅಪಘಾತದಲ್ಲಿ ರಕ್ತ ಸ್ರಾವವಾಗುತ್ತಿದ್ದರೆ ಶುದ್ಧ ಬಟ್ಟೆಯಿಂದ ಒತ್ತಿ ಹಿಡಿಯಬೇಕು. ಕುತ್ತಿಗೆ, ಬೆನ್ನುಮೂಳೆ ಪೆಟ್ಟು, ಅನುಮಾನವಿದ್ದರೆ ರೋಗಿಯನ್ನು ಅಲ್ಲಾಡಿಸಬಾರದು. ನೀರಿನಲ್ಲಿ ಮುಳುಗಿದವರನ್ನು ಮೇಲೆತ್ತಿದ ಕೂಡಲೇ ಉಸಿರಾಟ ಪರೀಕ್ಷಿಸಿ ಸಿಪಿಆರ್ ಆರಂಭಿಸಬೇಕು. ಹಾವು ಕಡಿದರೆ ಬಿಗಿಯಾಗಿ ಕಟ್ಟಬಾರದು, ಬ್ಲೇಡ್‌ನಿಂದ ಕೊಯ್ಯಬಾರದು. ನಾಯಿ ಕಡಿತಕ್ಕೆ 15 ನಿಮಿಷ ಸೋಪು ನೀರಿನಲ್ಲಿ ತೊಳೆಯಬೇಕು.

■ ಡಾ.ಶಬ್ಬೀರ್ ಅಹ್ಮದ್, ತುರ್ತು ಚಿಕಿತ್ಸಾ ತಜ್ಞ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಹೈದರಾಬಾದ್	11	7	4	0	14	+0.737
ಗುಜರಾತ್	11	7	4	0	14	+0.228
ಪಂಜಾಬ್	10	6	3	1	13	+0.571
ಆರ್‌ಸಿಬಿ	10	6	4	0	12	+1.234
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

5ನೇ ಸ್ಥಾನಕ್ಕೇರಿದ ಚೆನ್ನೈ | ಸತತ 3ನೇ ಜಯ | 3 ವಿಕೆಟ್ ಪಡೆದ ಓವರ್ಟನ್ ಪಂದ್ಯಶ್ರೇಷ್ಠ

ಚೆಪಾಕ್‌ನಲ್ಲಿ ಉರ್ವಿಲ್ ಸೂಪರ್ ಜೈಂಟ್

ಚೆನ್ನೈ: ಉರ್ವಿಲ್ ಪಟೇಲ್ ಸ್ಫೋಟಕ ಬ್ಯಾಟಿಂಗ್ ನಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ 2018ರ ಬಳಿಕ ಇದೇ ಮೊದಲ ಬಾರಿಗೆ 200+ ಸ್ಕೋರ್ ಬೆನ್ನತ್ತಿ ಗೆಲುವು ಸಾಧಿಸಿತು. ಈ ಆವೃತ್ತಿಯ ಮೊದಲಾರ್ಧ ಕಳಪೆ ಪ್ರದರ್ಶನ ನೀಡಿ ಮೊದಲು ಹೊರಬೀಳುವ ತಂಡವಾಗುವಂತೆ ಕಂಡಿದ್ದ ಸಿಎಸ್‌ಕೆ ಸತತ 3ನೇ ಜಯದೊಂದಿಗೆ ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ.

ಟಾಸ್ ಗೆದ್ದ ನಾಯಕ ಋತುರಾಜ್ ಗಾಯಕ್ವಾಡ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಚೆನ್ನೈ ಬೌಲರ್ ಜೇಮಿ ಓವರ್ಟನ್ ನಾಯಕ ನಿರ್ಧಾರಕ್ಕೆ ತಕ್ಕಂತೆ ಪ್ರದರ್ಶನ ನೀಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸ್ಫೋಟಕ ಅರ್ಧ ಶತಕ ಸಿಡಿಸಿದ್ದ ಇಂಗ್ಲಿಸ್ (85), ಲಖನೌ ನಾಯಕ ರಿಷಭ್ ಪಂತ್ (15) ವಿಕೆಟ್‌ಗಳನ್ನು ಕಬಳಿಸಿದ್ದರು.

ಸಿಡಿದ ಇಂಗ್ಲಿಸ್: ಲಖನೌ 200+ ಸ್ಕೋರ್: ಸೂಪರ್ ಜೈಂಟ್ಸ್ ಪರ ಜೋಶ್ ಇಂಗ್ಲಿಸ್ 17 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದು, ಬಳಿಕವೂ ಚೆನ್ನೈ ಬೌಲರ್ ಗಳನ್ನು ಚೆಂಡಾಡಿದರು. ಆದರೆ ಉಳಿದ ಬ್ಯಾಟರ್ಸ್ ಸಾಥ್ ನೀಡಿರಲಿಲ್ಲ, ಇಂಗ್ಲಿಸ್ ವಿಕೆಟ್ ಪತನವಾಗುತ್ತಲೇ ಲಖನೌ ತತ್ತರಿಸಿಹೋಗಿ ನಿರಂತರ ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಇಂಗ್ಲಿಸ್, ಶೆಹಬಾಜ್ ಆಟದಿಂದ ಲಖನೌ 200+ ಸ್ಕೋರ್ ಪೇರಿಸಿತ್ತು. ಆದರೆ ಗೆಲುವಿನ ಭಾಗ್ಯ ಒಲಿಯಲಿಲ್ಲ.

ಸಂಕ್ಷಿಪ್ತ ಸ್ಕೋರ್

ಲಖನೌ 203/8 (20): ಇಂಗ್ಲಿಸ್ 85, ಶಹಬಾಜ್ 43 (ಓವರ್ಟನ್ 36ಕ್ಕೆ 3).
ಚೆನ್ನೈ 208/5 (19.2): ಉರ್ವಿಲ್ 65, ಗಾಯಕ್ವಾಡ್ 42, ಸ್ಯಾಮ್ಸನ್ 28 (ಶೆಹಬಾಜ್ 30ಕ್ಕೆ 2)



ಇಂದಿನ ಪಂದ್ಯ
ಪಂಜಾಬ್-ದಿಲ್ಲಿ, ರಾತ್ರಿ 7.30ರಿಂದ, ಧರ್ಮಶಾಲಾ

ಉರ್ವಿಲ್ ಎದುರಿಸಿದ ಮೊದಲ 8 ಎಸೆತಗಳು
1, 6, 6, 6, 6, 6, 4, 6

ಮೊದಲ 10 ಎಸೆತಗಳಲ್ಲಿ ಗರಿಷ್ಠ ಸ್ಕೋರ್

- 42★ - ಉರ್ವಿಲ್ ಪಟೇಲ್, 2026
- 41★ - ಎಬಿ ಡಿ ವಿಲಿಯರ್ಸ್, 2015
- 41★ - ಯಶಸ್ವಿ ಜೈಸ್ವಾಲ್, 2023
- 40★ - ಅಭಿಷೇಕ್ ಶರ್ಮಾ, 2024
- 39★ - ರೊಮಾರಿಯೊ ಶೆಫರ್ಡ್, 2024
- 39★ - ಪ್ರಿಯಾಂಶ್ ಆರ್ಯ, 2026

ಅತಿ ವೇಗದ ಅರ್ಧ ಶತಕಗಳು

- 13 - ಯಶಸ್ವಿ ಜೈಸ್ವಾಲ್ (ಆರ್‌ಆರ್), 2023
- 13 - ಉರ್ವಿಲ್ ಪಟೇಲ್ (ಸಿಎಸ್‌ಕೆ), 2026
- 14 - ಕೆಎಲ್ ರಾಹುಲ್ (ಪಿಬಿಕೆಎಸ್), 2018
- 14 - ಪ್ಯಾಟ್ ಕಮಿನ್ಸ್ (ಕೆಕೆಆರ್), 2022
- 14 - ರೊಮಾರಿಯೊ (ಆರ್‌ಸಿಬಿ), 2025

ಉರ್ವಿಲ್ ಅತಿ ವೇಗದ ಅರ್ಧ ಶತಕ

ಚೆಪಾಕ್‌ನಲ್ಲಿ ಮಹೇಂದ್ರ ಸಿಂಗ್ ಧೋನಿ ಏನಾದರೂ ಮೈದಾನಕ್ಕಿಳಿದರೋ ಎಂಬಂತೆ ಬ್ಯಾಟ್ ಬೀಸಿದ ಉರ್ವಿಲ್ ಪಟೇಲ್, ಒಂದರ ಮೇಲೊಂದು ಸಿಕ್ಸರ್‌ಗಳನ್ನು ಎತ್ತಿದ್ದೇ ಎತ್ತಿದ್ದು. ಸ್ಫೋಟಕ ಆಟವಾಡಿದ ಉರ್ವಿಲ್ ಅತಿ ವೇಗದ ಅರ್ಧ ಶತಕದ ಜೈಸ್ವಾಲ್ ಐಪಿಎಲ್‌ನ ಸಾರ್ವಕಾಲಿಕ ದಾಖಲೆಯನ್ನು ಸರಿದೂಗಿಸಿದ್ದಾರೆ. ಸೂಪರ್ ಜೈಂಟ್ಸ್ ಬೌಲರ್‌ಗಳನ್ನು ಚೆಂಡಾಡಿದ ಚೆನ್ನೈ ಬ್ಯಾಟರ್ 13 ಎಸೆತಗಳಲ್ಲಿ ದಾಖಲೆಯ ಅರ್ಧ ಶತಕವನ್ನು ಪೂರೈಸಿದರು. ಸ್ಯಾಮ್ಸನ್ ವಿಕೆಟ್ ಪತನದ ಬಳಿಕ ಉದಾಸೀನರಾಗಿ ಕುಳಿತಿದ್ದ ಸಿಎಸ್‌ಕೆ ಅಭಿಮಾನಿಗಳೆಲ್ಲಾ ತಮ್ಮ ಆಸನದಿಂದ ಎದ್ದು ಕುಣಿದರು. ಲೆಗ್‌ಸ್ಪಿನ್ನರ್ ದಿಗ್ವೇಶ್ ರಾಠಿ ಓವರ್‌ನಲ್ಲಿ ಉರ್ವಿಲ್ ರೌದ್ರಾವತಾರ ತಾಳಿದ್ದರು. ದಿಗ್ವೇಶ್ ಓವರ್ ವೊಂದರಲ್ಲೇ 5 ಸಿಕ್ಸರ್‌ಗಳನ್ನು ಎತ್ತಿದ್ದರು. ಉರ್ವಿಲ್ ಬ್ಯಾಟಿಂಗ್‌ಗೆ ಇಳಿದಾಗ ಸಿಎಸ್‌ಕೆ ಗೆಲುವಿನ ಸಾಧ್ಯತೆ ಶೇ.38.13 ಇತ್ತು, ಆದರೆ ಆತ ಔಟಾದಾಗ ಅದು ಶೇ.93.02 ಆಗಿತ್ತು.

ದಿಸ್ ಈಸ್ ಫಾರ್ ಯೂ, ಪಾಪಾ!

ವಿಶ್ವ ತಾಯಂದಿರ ದಿನ ಅರ್ಧಶತಕ ಪೂರೈಸಿದ ಪಟೇಲ್, ದಿಸ್ ಈಸ್ ಫಾರ್ ಯೂ ಪಾಪಾ (ಇದು ನಿಮಗಾಗಿ ಅಪ್ಪ) ಎಂದು ಬರೆದಿದ್ದ ಚೀಟಿಯನ್ನು ತಮ್ಮ ಜೇಬಿನಿಂದ ಎತ್ತಿ ಪ್ರದರ್ಶಿಸಿದ ತಂದೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಸ್ಫೋಟಕ ಬ್ಯಾಟಿಂಗ್ ನಂತರ ಭಾವನಾತ್ಮಕ ರೀತಿಯಲ್ಲಿ ಪಟೇಲ್ ಸಂಭ್ರಮಾಚರಿಸಿದರು.

ಯಾರೀತ? ಹಿನ್ನೆಲೆಯೇನು?

28 ವರ್ಷದ ಉರ್ವಿಲ್ ಆಟ ನೋಡಿದಾಕ್ಷಣ ಸೂಪರ್ ಜೈಂಟ್ಸ್ ಅಷ್ಟೇ ಅಲ್ಲ ಪ್ರೇಕ್ಷಕರೂ ಯಾರೀತ? ಎಲ್ಲಿಂದ ಬಂದ ಎಂಬಂತೆ ತಬ್ಬಿಬ್ಬಾಗಿದ್ದರು. ಈತ ಗುಜರಾತ್‌ನ ವಜ್ರದ ವ್ಯಾಪಾರಕ್ಕೆ ಹೆಸರುವಾಸಿ ಪಾಲನ್‌ಪುರ್‌ನ ಕ್ರಿಕೆಟಿಗ. ಸೈಯದ್ ಮುಷ್ತಾಕ್ ಅಲಿ ಟಿ20 ಪಂದ್ಯಾವಳಿಯಲ್ಲಿ 28 ಎಸೆತಗಳಲ್ಲಿ ಅತಿ ವೇಗದ ಶತಕ ದಾಖಲಿಸಿದ ಭಾರತೀಯ ಎಂಬ ದಾಖಲೆ ಮತ್ತು ವಿಜಯ್ ಹಜಾರೆ ಟ್ರೋಫಿಯಲ್ಲಿ 41 ಎಸೆತಗಳಲ್ಲಿ ಶತಕ ಪೂರೈಸಿದ ದಾಖಲೆ ತಮ್ಮ ಹೆಸರಿಗೆ ಹೊಂದಿದ್ದಾರೆ. ಟಿ20ನಲ್ಲಿ 28 ಎಸೆತಗಳ ಶತಕ ವಿಶ್ವದಲ್ಲೇ ಎರಡನೇ ಅತಿ ವೇಗದ ಶತಕವೂ ಹೌದು.

ಕಿರುಸುದ್ದಿ

ಏಷ್ಯನ್ ವೇಟ್‌ಲಿಫ್ಟಿಂಗ್‌ಗಿಲ್ಲ ಗಾಯಾಳು ಮೀರಾಬಾಯಿ

ಹೊಸದಿಲ್ಲಿ: ಗಾಯದಿಂದ ಬಳಲುತ್ತಿರುವ ತಾರಾ ವೇಟ್ ಲಿಫ್ಟರ್ ಮತ್ತು ಒಲಿಂಪಿಕ್ ರಜತ ಪದಕ ವಿಜೇತೆ ಸೈಖೋಮ್ ಮೀರಾಬಾಯಿ ಚಾನು ಏಷ್ಯನ್ ವೇಟ್‌ಲಿಫ್ಟಿಂಗ್ ಪಂದ್ಯಾವಳಿಯಿಂದ ಹೊರಗುಳಿದಿದ್ದಾರೆ. ಮೇ 12ರಿಂದ 17ರವರೆಗೆ ಗುಜರಾತ್‌ನ ಗಾಂಧಿನಗರದಲ್ಲಿ ನಡೆಯಲಿರುವ ಏಷ್ಯನ್ ವೇಟ್‌ಲಿಫ್ಟಿಂಗ್-2026 ಪಂದ್ಯಾವಳಿಗೆ 16 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಪುರುಷರ ತಂಡದಲ್ಲಿ ಲವ್‌ಪ್ರೀತ್ ಸಿಂಗ್, ಹರ್‌ಚರಣ್ ಸಿಂಗ್, ಅಜಿತ್ ನಾರಾಯಣ ಮತ್ತು ಪರ್ವ್ ಚೌಧರಿ ಸ್ಥಾನ ಪಡೆದಿದ್ದಾರೆ. ಮಹಿಳೆಯರ ತಂಡದಲ್ಲಿ ಬಿಂದ್ಯಾರಾಣಿ ದೇವಿ, ಹರ್‌ಜಿಂದರ್ ಕೌರ್ ಮತ್ತು ಮಾರ್ಟಿನಾ ದೇವಿ ಮೈಬಮ್ ಸ್ಥಾನ ಪಡೆದಿದ್ದಾರೆ.

ವೈದೇಹಿ-ಜುರ್ಝೂನಾ ಜೋಡಿ ಮಹಿಳಾ ಡಬಲ್ಸ್ ರನ್ನರ್‌ಅಪ್

ಹೊಸದಿಲ್ಲಿ: ತುಮಕೂರು ಓಪನ್ ಟೆನಿಸ್ ಪಂದ್ಯಾವಳಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ವಾಕ್‌ಓವರ್ ನೀಡಿದ ಭಾರತದ ವೈದೇಹಿ ಚೌಧರಿ ಮತ್ತು ಪೋಲೆಂಡ್‌ನ ಜುರ್ಝೂನಾ ಪಾವ್ಲಿಕೊವ್‌ಸ್ಕಾ ಜೋಡಿ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿತು. ಭುಜದ ನೋವಿನ ಕಾರಣದಿಂದ ಪಾವ್ಲಿಕೊವ್‌ಸ್ಕಾ ಫೈನಲ್‌ನಿಂದ ಹೊರಗುಳಿದಿದ್ದರು. ಇದರಿಂದ ಸೆನಿಯಾ ಲಾಸ್ಕುಟೋವಾ ಮತ್ತ ಎಲಿನಾ ನೆಪಿಲಿ ಜೋಡಿ ಕಣಕ್ಕಿಳಿಯದೆ ಟ್ರೋಫಿ ಗೆದ್ದುಕೊಂಡಿತು. ಸಿಂಗಲ್ಸ್ ವಿಭಾಗದಲ್ಲಿ ಭಾರೀ ಭರವಸೆ ಮೂಡಿಸಿದ್ದ ವೈದೇಹಿ ಸೆಮಿ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತೆ ಜಸ್ಟಿನಾ ಮಿಕುಲ್‌ಸ್ಕೈಟ್ ವಿರುದ್ಧ (3-6, 6-2, 2-6) ಸೋಲುಂಡಿದ್ದರು.



ಜ್ಯೂಸ್ ಕುಡಿಯುತ್ತ ಉರ್ವಿಲ್ ಬ್ಯಾಟಿಂಗ್ ವೀಕ್ಷಿಸಿದ ವಿರಾಟ್

ರಾಯ್ಪುರ: ಅಭ್ಯಾಸದ ಬಳಿಕ ಜ್ಯೂಸ್ ಕುಡಿಯಲು ಡಗೌಟ್ ತೆರಳಿದ್ದ ಆರ್‌ಸಿಬಿ ಬ್ಯಾಟರ್ ವಿರಾಟ್ ಕೊಹ್ಲಿ, ಚೆನ್ನೈ ಬ್ಯಾಟರ್ ಉರ್ವಿಲ್ ಪಟೇಲ್ ಅರ್ಧ ಶತಕ ಪೂರೈಸಿದ ಕ್ಷಣವನ್ನು ಕಂಪ್ಯೂಟರ್ ಪರದೆಯಲ್ಲಿ ವೀಕ್ಷಿಸಿದರು. ಸದಾ ಕ್ರಿಕೆಟ್‌ನ ಮಾಹಿತಿ, ದಾಖಲೆಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಹೊಂದಿರುವ ಕೊಹ್ಲಿ ಸಾಮಾನ್ಯ ಕ್ರಿಕೆಟ್ ಅಭಿಮಾನಿಯಂತೆ ಆರೆಂಜ್ ಜ್ಯೂಸ್ ಕುಡಿಯುತ್ತ ಉರ್ವಿಲ್ ಭಾವನಾತ್ಮಕ ಕ್ಷಣವನ್ನು ವೀಕ್ಷಿಸಿ ಆನಂದಿಸಿದರು.

ಆರ್ಚರಿ ವಿಶ್ವಕಪ್‌ನಲ್ಲಿ ಭಾರತಕ್ಕೆ ಸ್ವರ್ಣ

ಶಾಂಘೈ: ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಕುಂಕುಮ್ ಮೊಹೊದ್ ಅವರನ್ನು ಒಳಗೊಂಡ ಭಾರತದ ಮಹಿಳಾ ರಿಕರ್ವ್ ತಂಡ ಆರ್ಚರಿ ವಿಶ್ವಕಪ್‌ನಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದೆ. ಐದು ವರ್ಷಗಳ ಬಳಿಕ ಭಾರತದ ರಿಕರ್ವ್ ತಂಡ ವಿಶ್ವಕಪ್ ಪದಕವೊಂದನ್ನು ಗೆದ್ದಿತು.

ಚೀನಾದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ಮಹಿಳಾ ರಿಕರ್ವ್ ವಿಭಾಗದ ಫೈನಲ್‌ನಲ್ಲಿ ತವರಿನ ತಂಡವನ್ನು 5-4 (28-26) ಅಂತರದಿಂದ ಮಣಿಸಿದ ಭಾರತ ಚಿನ್ನದ ಪದಕ ತನ್ನದಾಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಇದು ಭಾರತದ ಮೊದಲ ವಿಶ್ವಕಪ್ ಪದಕವಾಗಿದೆ. ಕಡೆಯದಾಗಿ 2023ರ ಪ್ಯಾರಿಸ್ ವಿಶ್ವಕಪ್‌ನಲ್ಲಿ ಪದಕ ಗೆದ್ದುಕೊಂಡಿತ್ತು. ಶನಿವಾರ ಭಾರತದ ಆರ್ಚರಿಪಟು ಸಾಹಿಲ್ ಜಾಧವ್ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಭಾನುವಾರ ಮಹಿಳೆಯರ ತಂಡ ಸ್ವರ್ಣ ಪದಕ ಗೆದ್ದಿರುವುದರಿಂದ ವಿಶ್ವಕಪ್‌ನಲ್ಲಿ ಇದು ಭಾರತದ 2ನೇ ಪದಕವಾಗಿದೆ. ಪೂರ್ಣಾವಧಿ ತರಬೇತುದಾರ ಇಲ್ಲದ ಭಾರತದ ತಂಡ ದೀಪಿಕಾ ಕುಮಾರಿ ನೇತೃತ್ವದಲ್ಲಿ ಸಾಧನೆ ಮಾಡಿದೆ. ಮಹಿಳಾ ರಿಕರ್ವ್ ಕೋಚ್ ಪ್ರಫುಲ್ ದಾಂಗೆ ತರಬೇತಿಯಿಂದ ರಾಷ್ಟ್ರೀಯ ಟ್ರಯಲ್ಸ್‌ನಲ್ಲಿ ಯುವ ಆರ್ಚರಿಪಟು ಕುಂಕುಮ್ ಅಗ್ರಸ್ಥಾನ ಪಡೆದಿದ್ದರು. ಮೊದಲ ಸೆಟ್‌ನಲ್ಲಿ ಭಾರತ 54-53 ಅಂಕಗಳಿಂದ ಗೆದ್ದಿತು. ಚೀನಾ ತಂಡ ತವರಿನ ಅಭಿಮಾನಿಗಳ ಮುಂದೆ 55-52 ಅಂಕಗಳ ಅಂತರದಿಂದ ದ್ವಿತೀಯ ಸೆಟ್ ಗೆದ್ದು 2-2 ಸಮಬಲ ಸಾಧಿಸಿತು. ಭಾರೀ ರೋಚಕ ಹಂತ ತಲುಪಿದ ಮೂರನೇ ಸೆಟ್ 56 ಅಂಕಗಳೊಂದಿಗೆ ಟೈ ಆಗಿದ್ದು, ಆದರೆ ಚೀನಾ ಹೊಡೆದಿದ್ದ ಕೊನೆಯ ಬಾಣ 8 ಅಲ್ಲ, 9 ಅಂಕ ಆಗಬೇಕಿತ್ತು. ರಿವ್ಯೂ ಪಡೆದುಕೊಂಡ ಚೀನಾ ಮೂರನೇ ಸೆಟ್‌ನಲ್ಲಿ 57-56 ಅಂಕಗಳಿಂದ ಗೆದ್ದು 4-2 ಸೆಟ್ ಅಂತರ ಕಾಯ್ದುಕೊಂಡಿತು. ನಾಲ್ಕನೇ ಸೆಟ್‌ನಲ್ಲಿ ಭಾರತ ಸೋಲಿನ ಅಂಚಿನಲ್ಲಿದ್ದಾಗ ದೀಪಿಕಾ ಎರಡು ಬಾರಿ 10 ಅಂಕಕ್ಕೆ ಗುರಿಯಿಟ್ಟು ಹೊಡೆದರು. 54 ಅಂಕಗಳನ್ನು ಸಂಪಾದಿಸಿದ ಭಾರತ ನಾಲ್ಕನೇ ಸೆಟ್ ಗೆದ್ದು 4 ಸೆಟ್ ಅಂಕಗಳೊಂದಿಗೆ 4-4 ಸಮಬಲ ಸಾಧಿಸಿತು.

ಶೂಟೌಟ್‌ನಲ್ಲಿ ಭಾರತಕ್ಕೆ ಗೆಲುವು: ಶೂಟೌಟ್‌ನಲ್ಲಿ ದೀಪಿಕಾ ನೇತೃತ್ವದ ಭಾರತ 28-26 ಅಂಕಗಳ ಅಂತರದಿಂದ ಸ್ವರ್ಣ ಪದಕ ಗೆದ್ದುಕೊಂಡಿತು. ಭಾರತ ಪರ ಅಂಕಿತಾ 9, ಕುಂಕುಮ್ 10 ಮತ್ತು ದೀಪಿಕಾ 9 ಅಂಕ ಸಂಪಾದಿಸಿದ್ದರು.



- 5 ವರ್ಷಗಳ ಬಳಿಕ ರಿಕರ್ವ್ ತಂಡಕ್ಕೆ ವಿಶ್ವಕಪ್ ಪದಕ
- 3 ವರ್ಷಗಳ ಬಳಿಕ ಮಹಿಳಾ ತಂಡಕ್ಕೆ ವಿಶ್ವಕಪ್ ಪದಕ
- ನಾಯಕಿ ದೀಪಿಕಾ ಕುಮಾರಿಗೆ 12ನೇ ವಿಶ್ವಕಪ್ ಸ್ವರ್ಣ
- ಚೀನಾ ವಿರುದ್ಧ ಭಾರತಕ್ಕೆ 5-4 (28-26) ಗೆಲುವು

ಸ್ಕೋರ್
ಫೈನಲ್: ಭಾರತ 5(28)-4(26) ಚೀನಾ
ಸೆಮಿ ಫೈನಲ್: ಭಾರತ 5-1 ದ.ಕೊರಿಯಾ
ಕ್ವಾರ್ಟರ್ ಫೈನಲ್: ಭಾರತ 5(28)-4(25) ವಿಯೆಟ್ನಾಂ

ಮಹತ್ವದ ಪಂದ್ಯದಲ್ಲಿ ಎಂಐ ಸಾಧಾರಣ ಮೊತ್ತ


ಭುವಿ ದಾಳಿಗೆ ಮುಂಬೈ ತತ್ತರ

ರಾಯ್ಪುರ: ಸ್ವಿಂಗ್ ಕಿಂಗ್ ಭುವನೇಶ್ವರ್ ಕುಮಾರ್ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಮುಂಬೈ ಇಂಡಿಯನ್ಸ್, ತಿಲಕ್ ವರ್ಮಾ ಅರ್ಧ ಶತಕದ ಆಸರೆಯಿಂದ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 166 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು.

ಭುವಿ ಕಬಳಿಸಿದ ಎಲ್ಲಾ ನಾಲ್ಕು ಪ್ರಮುಖ ಬ್ಯಾಟರ್ ಗಳದ್ದೇ ಆಗಿದ್ದವು, 10 ಎಸೆತಗಳಲ್ಲಿ 22 ರನ್ ಹೊಡೆದ ಅಬ್ಬರಿಸಿದ ಹಿಟ್‌ಮ್ಯಾನ್ ರೋಹಿತ್, ರಿಕೆಲ್ಟನ್ (2), ಮುಂಬೈ ಹಂಗಾಮಿ ನಾಯಕ ಸೂರ್ಯಕುಮಾರ್ (0) ಮತ್ತು ತಿಲಕ್ (57) ವಿಕೆಟ್‌ಗಳನ್ನು ಭುವನೇಶ್ವರ್ ಪಡೆದಿದ್ದರು. ಗಾಯಾಳು ಹಾರ್ದಿಕ್ ಅನುಪಸ್ಥಿತಿಯಲ್ಲಿ ನಾಯಕನಾದ ಸೂರ್ಯ ಮಹತ್ವದ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡರು. ಮುಂಬೈಗೆ ಧೀರನಾಗಿ ಆಡಿದ ಇನ್ನೋರ್ವ ಬ್ಯಾಟರ್ ನಮನ್ 47 ರನ್ ಹೊಡೆದರು. ರೊಮಾರಿಯೊ ಇಕಾನಮಿಕಲ್ ಬೌಲಿಂಗ್ ನಡೆಸಿದ್ದು ಜ್ಯಾಕ್ಸ್ ವಿಕೆಟ್ ಪಡೆದರು. ಆರ್‌ಸಿಬಿ ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಪ್ರಾಬಲ್ಯ ಮೆರೆದರೆ, ಮುಂಬೈ ಇನ್ನಿಂಗ್ಸ್‌ನಲ್ಲಿ ತಿಲಕ್ ಅರ್ಧಶತಕವೊಂದೇ ಹೈಲೈಟ್.

ಸಂಕ್ಷಿಪ್ತ ಸ್ಕೋರ್

ಮುಂಬೈ 166/7 (20): ತಿಲಕ್ 57(42), ಧೀರ್ 47(32), ರೋಹಿತ್ 22(10), ಭುವನೇಶ್ವರ್ 23ಕ್ಕೆ 4



ಕೊಹ್ಲಿ ಮತ್ತೆ ಗೋಲ್ಡನ್ ಡಕ್!

ಈ ಆವೃತ್ತಿಯಲ್ಲಿ ವಿರಾಟ್ ಕೊಹ್ಲಿ ಸತತ 2ನೇ ಬಾರಿ ಖಾತೆ ತೆರೆಯದೆ (ಗೋಲ್ಡನ್ ಡಕ್) ಔಟಾದರು. ಕಳೆದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧವೂ ಕೊಹ್ಲಿ ಖಾತೆ ತೆರೆದಿರಲಿಲ್ಲ. ವೇಗಿ ದೀಪಕ್ ಚಹರ್ ಬೌಲಿಂಗ್‌ನಲ್ಲಿ ಮಿಡ್‌ಆಫ್ ಕ್ಷೇತ್ರದಲ್ಲಿ ಹೊಡೆಯುವ ಯತ್ನದಲ್ಲಿ ರಾಜ್ ಬಾವಾಗೆ ಕ್ಯಾಚಿತ್ತು ಔಟಾಗಿದ್ದರು. ಕೊಹ್ಲಿ ವಿಕೆಟ್ ಪತನದಿಂದ ರಾಯ್ಪುರ ಮೈದಾನದಲ್ಲಿ ಮೌನ ಆವರಿಸಿಕೊಂಡಿತ್ತು. 167 ರನ್ ಗುರಿ ಬೆನ್ನತ್ತಿದ ಆರ್‌ಸಿಬಿ ತಂಡ ಪವರ್‌ಪ್ಲೇ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 47 ರನ್‌ಗಳನ್ನು ಪೇರಿಸಿತು.

ಐರನ್ ಮ್ಯಾನ್ ಸವಾಲು ಗೆದ್ದ ಐಜಿಪಿ ಸಂದೀಪ್

ಬಾಳಗೌಡ ಪಾಟೀಲ


ಬೆಳಗಾವಿ: ಇತ್ತೀಚೆಗೆ ಬೆಳಗಾವಿ ಉತ್ತರ ವಲಯದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ (ಐಜಿಪಿ) ಆಗಿ ನೇಮಕಗೊಂಡಿರುವ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ಅವರು ಆಸ್ಟ್ರೇಲಿಯಾದಲ್ಲಿ ನಡೆದ ವಿಶ್ವಪ್ರಸಿದ್ಧ ಐರನ್ ಮ್ಯಾನ್ 70.3 ವೆಸ್ಟರ್ನ್ ಸಿಡ್ನಿ-2026 ಸ್ಪರ್ಧೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಮತ್ತೊಮ್ಮೆ ತಮ್ಮ ಅಪಾರ ಸಹಿಷ್ಣುತೆ ಮತ್ತು ದೃಢ ಸಂಕಲ್ಪ ಸಾಬೀತುಪಡಿಸಿದ್ದಾರೆ.

ಈ ಸಾಧನೆಯೊಂದಿಗೆ ಅವರು ವಿಶ್ವದ ವಿವಿಧ ದೇಶಗಳಲ್ಲಿ ಒಟ್ಟು 6ನೇ ಬಾರಿ ಐರನ್ ಮ್ಯಾನ್ ಸ್ಪರ್ಧೆಯನ್ನು ಪೂರ್ಣಗೊಳಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈಗಾಗಲೇ ಗೋವಾ, ಥೈಲ್ಯಾಂಡ್, ಪೋಲೆಂಡ್, ಟರ್ಕಿ ಹಾಗೂ ಕೋಪನ್‌ಹೇಗನ್‌ನಲ್ಲಿ ನಡೆದ ಐರನ್ ಮ್ಯಾನ್ ಸ್ಪರ್ಧೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದ ಸಂದೀಪ್ ಪಾಟೀಲ್, ಇದೀಗ ಸಿಡ್ನಿಯಲ್ಲೂ ಅದೇ ಸಾಧನೆಯನ್ನು ಮರುಕಳಿಸಿದ್ದಾರೆ.

ಕಠಿಣ ಸ್ಪರ್ಧೆಯಲ್ಲಿ ಅದ್ಭುತ ಸಾಧನೆ: ಐರನ್ ಮ್ಯಾನ್ 70.3 ಸ್ಪರ್ಧೆ ವಿಶ್ವದ ಅತ್ಯಂತ ಕಠಿಣ ಸಹಿಷ್ಣುತೆ ಕ್ರೀಡಾ ಸ್ಪರ್ಧೆಗಳಲ್ಲಿ ಒಂದಾಗಿ ಪರಿಗಣಿಸಲ್ಪಡುತ್ತದೆ. ಈ ಸ್ಪರ್ಧೆಯಲ್ಲಿ ಸ್ಪರ್ಧಿಗಳು ನಿರಂತರವಾಗಿ 1.9 ಕಿಮೀ ಈಜು, 90 ಕಿಮೀ ಸೈಕ್ಲಿಂಗ್, ಮತ್ತು 21.1 ಕಿಮೀ ಅರ್ಧ ಮ್ಯಾರಥಾನ್ ಓಟವನ್ನು ಪೂರ್ಣಗೊಳಿಸಬೇಕಾಗುತ್ತದೆ. ಓಟ 45-49 ವಿಭಾಗದಲ್ಲಿ ಸ್ಪರ್ಧಿಸಿದ ಸಂದೀಪ್ ಪಾಟೀಲ್ ಅವರು ಈ ಸಂಪೂರ್ಣ ಸ್ಪರ್ಧೆಯನ್ನು 7 ಗಂಟೆ 16 ನಿಮಿಷ 25 ಸೆಕೆಂಡುಗಳಲ್ಲಿ ಯಶಸ್ವಿಯಾಗಿ ಮುಗಿಸಿ ಗಮನ ಸೆಳೆದಿದ್ದಾರೆ.

ಕರ್ತವ್ಯದೊಂದಿಗೆ ಫಿಟ್‌ನೆಸ್‌ಗೂ ಆದ್ಯತೆ: ಪೊಲೀಸ್ ಇಲಾಖೆಯಂತಹ ಒತ್ತಡದ ಕರ್ತವ್ಯಗಳ ನಡುವೆಯೂ ಸಂದೀಪ್ ಪಾಟೀಲ್ ಅವರು ಆರೋಗ್ಯ, ಫಿಟ್ನೆಸ್ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮಹತ್ವ ನೀಡುತ್ತಿರುವುದು ಯುವಕರಿಗೆ ಪ್ರೇರಣೆಯಾಗಿದೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿ ಅಂತಾರಾಷ್ಟ್ರೀಯ ಮಟ್ಟದ ಸಹಿಷ್ಣುತೆ ಸ್ಪರ್ಧೆಗಳಲ್ಲಿ ನಿರಂತರವಾಗಿ ಭಾಗವಹಿಸಿ ಯಶಸ್ಸು ಸಾಧಿಸುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಸಂದೀಪ್ ಪಾಟೀಲ್ ಅವರ ಸಾಧನೆಗೆ ಪೊಲೀಸ್ ಇಲಾಖೆ, ಕ್ರೀಡಾಭಿಮಾನಿಗಳು, ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳು ಅಭಿನಂದನೆಗಳನ್ನು ಸಲ್ಲಿಸಿವೆ.



ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆದ ವಿಶ್ವಪ್ರಸಿದ್ಧ ಐರನ್ ಮ್ಯಾನ್ 70.3 ಸ್ಪರ್ಧೆ

77ನೇ ಸ್ಥಾನ


ಈಜು: 49 ನಿಮಿಷ 58 ಸೆಕೆಂಡು, ಸೈಕ್ಲಿಂಗ್: 3 ಗಂಟೆ 38 ನಿಮಿಷ 03 ಸೆಕೆಂಡು, ಓಟ: 2 ಗಂಟೆ 35 ನಿಮಿಷ 06 ಸೆಕೆಂಡು ಈ ಸಾಧನೆಯೊಂದಿಗೆ ಅವರು ತಮ್ಮ ವಿಭಾಗದಲ್ಲಿ 77ನೇ ಸ್ಥಾನ ಪಡೆದುಕೊಂಡಿದ್ದಾರೆ.

ಪ್ರತಿ ಐರನ್ ಮ್ಯಾನ್ ಸ್ಪರ್ಧೆಯೂ ವಿಭಿನ್ನ ಅನುಭವ ನೀಡುತ್ತದೆ. ಪ್ರತಿಯೊಂದು ಓಟವೂ ದೈಹಿಕ ಮತ್ತು ಮಾನಸಿಕ ಸಹಿಷ್ಣುತೆಯನ್ನು ವಿಭಿನ್ನ ರೀತಿಯಲ್ಲಿ ಪರೀಕ್ಷಿಸುತ್ತದೆ. ಆದರೆ ಎಲ್ಲಾ ಸ್ಪರ್ಧೆಗಳಿಗೂ ಒಂದೇ ಗುಟ್ಟು -ಸ್ಥಿರತೆ, ಶಿಸ್ತು ಮತ್ತು ಎಂದಿಗೂ ಮುನ್ನುಗ್ಗುವುದನ್ನು ನಿಲ್ಲಿಸದ ಮನೋಭಾವ, ಪ್ರಯತ್ನಕ್ಕೆ ಸೋಲಿಲ್ಲ.
■ ಸಂದೀಪ್ ಪಾಟೀಲ್, ಬೆಳಗಾವಿ ಐಜಿಪಿ

ತುಮಕೂರಿನಲ್ಲಿ ಜಸ್ಟಿನಾ ಚಾಂಪಿಯನ್

ತುಮಕೂರು: ತುಮಕೂರು ಓಪನ್ ಸಿಂಗಲ್ಸ್ ವಿಭಾಗದಲ್ಲಿ ಜಸ್ಟಿನಾ ಮಿಕುಲ್‌ಸ್ಕೈಟ್ ಪ್ರಶಸ್ತಿ ವಿಜೇತೆಯಾಗಿ ಹೊರಹೊಮ್ಮಿದ್ದಾರೆ. ಜಿಲ್ಲಾ ಟೆನಿಸ್ ಅಸೋಸಿಯೇಷನ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಆಡಿದ ಗಾಯಾಳು ಎರಡನೇ ಶ್ರೇಯಾಂಕದ ಜುರ್ಝೂನಾ ಪಾವ್ಲಿಕೋವ್‌ಸ್ಕಾ ಮೊದಲ ಗೇಮ್ ಬಳಿಕ ಸ್ಪರ್ಧೆಯಿಂದ ಹಿಂದೆ ಸರಿದರು. ಹೀಗಾಗಿ ಜಸ್ಟಿನಾ ಸುಲಭವಾಗಿ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಭುಜದ ನೋವಿನಿಂದ ಬಳಲುತ್ತಿರುವ ಜುರ್ಝುನಾ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತರಾದರು.

ಭುಜದ ಗಾಯದಿಂದಾಗಿ ಶನಿವಾರ ನಡೆದ ಡಬಲ್ಸ್ ಫೈನಲ್‌ನಿಂದ ಹಿಂದೆ ಸರಿದಿದ್ದ ಪಾವ್ಲಿಕೋವ್‌ಸ್ಕಾ, ಗಾಯದ ಹೊರತಾಗಿಯೂ ಪ್ರಶಸ್ತಿ ಹೋರಾಟಕ್ಕೆ ಅಂಗಣಕ್ಕಿಳಿಯುವ ಮೂಲಕ ಅದ್ಭುತ ಧೈರ್ಯವನ್ನು ತೋರಿಸಿದರು. ಆದಾಗ್ಯೂ, ಆರಂಭಿಕ ಗೇಮ್‌ನ ನಂತರ ಪೋಲೆಂಡ್ ಆಟಗಾರ್ತಿಗೆ ಮುಂದುವರಿಯಲು ಸಾಧ್ಯವಾಗಲಿಲ್ಲ. ಇದು ಪ್ರಶಸ್ತಿ ಹೋರಾಟದ ಅಕಾಲಿಕ ಅಂತ್ಯಕ್ಕೆ ಕಾರಣವಾಯಿತು. ಅಗ್ರ ಎರಡು ಶ್ರೇಯಾಂಕಿತೆಯರ ನಡುವಿನ ಸೆಣಸಾಟ ರೋಮಾಂಚಕ ಆಗಿರಲಿದೆ ಎಂಬ ನಿರೀಕ್ಷೆಯಲ್ಲಿದ್ದ ಪ್ರೇಕ್ಷಕರ ದೊಡ್ಡ ಸಭೆಗೆ ನಿರಾಶೆಯಾಯಿತು. ಇದು ಜಸ್ಟಿನಾಗೆ 8ನೇ ಐಟಿಎಫ್ ಸಿಂಗಲ್ಸ್ ಕಿರೀಟವಾಗಿದೆ. ಇದರೊಂದಿಗೆ ಅವರು ಅಂತಾರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ಪ್ರಭಾವಶಾಲಿ ಋತುವಿಗೆ ಮತ್ತೊಂದು ಮೈಲಿಗಲ್ಲನ್ನು ಸೇರಿಸಿದರು. ಜಸ್ಟಿನಾ 4,860 ಯುಎಸ್ ಡಾಲರ್ (ಅಂದಾಜು 4.58 ಲಕ್ಷ ರೂ.) ವಿಜೇತರ ಚೆಕ್ ಅನ್ನು ಜೇಬಿಗೆ ಇಳಿಸಿಕೊಂಡರು ಮತ್ತು 35 ಮೌಲ್ಯಯುತ ಡಬ್ಲ್ಯುಟಿಎ ಶ್ರೇಯಾಂಕ ಅಂಕಗಳನ್ನು ತಮ್ಮದಾಗಿಸಿಕೊಂಡರು. ಪಾವ್ಲಿಕೋವ್‌ಸ್ಕಾ ರನ್ನರ್ ಅಪ್ ಸ್ಥಾನಕ್ಕೆ 2,637 ಯುಎಸ್ ಡಾಲರ್ ಮತ್ತು 23 ಡಬ್ಲ್ಯುಟಿಎ ಅಂಕಗಳನ್ನು ಸಂಪಾದಿಸಿದರು.



ರಾಜಸ್ಥಾನದಲ್ಲಿ ಜಿಟಿ ಪ್ರಾಬಲ್ಯ

ಜೈಪುರ: ನಾಯಕ ಗಿಲ್, ಸುದರ್ಶನ್ ಮತ್ತು ರಶೀದ್ ಉತ್ತಮ ಪ್ರದರ್ಶನದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ 77 ರನ್‌ಗಳ ಜಯದೊಂದಿಗೆ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೈಟಾನ್ಸ್ ಗಿಲ್ ಮತ್ತು ಸುದರ್ಶನ್ ಅರ್ಧ ಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 229 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತ್ತು. 230 ರನ್ ಬೃಹತ್ ಮೊತ್ತ ಬೆನ್ನತ್ತಿದ ರಾಯಲ್ಸ್‌ಗೆ ರಶೀದ್ ಲೆಗ್‌ಸ್ಪಿನ್ ಮೋಡಿಯಿಂದ ಆಘಾತ ನೀಡಿದರು. ಬೃಹತ್ ಸವಾಲು ಬೆನ್ನತ್ತಿದ ರಾಯಲ್ಸ್ ಪರ ವೈಭವ್ 16 ಎಸೆತಗಳಿಂದ 36 ರನ್ ಹೊಡೆದಿದ್ದು, ವೇಗಿ ಸಿರಾಜ್‌ಗೆ ವಿಕೆಟ್ ಒಪ್ಪಿಸಿದ್ದರು. ಮಿಂಚಿದ ರಬಾಡ 2 ವಿಕೆಟ್ ಕಬಳಿಸಿದರು. ಜಡೇಜಾರನ್ನು ಎಲ್‌ಬಿ ಬಲೆಗೆ ಬೀಳಿಸಿದ ರಶೀದ್ ಪಂದ್ಯ ಗೆಲ್ಲಿಸಿಕೊಟ್ಟರು. ಆರ್‌ಆರ್ 16.3 ಓವರ್ ಗಳಲ್ಲಿ 152ಕ್ಕೆ ಆಲೌಟಾಗಿ ಸೋಲೊಪ್ಪಿತು.



ಟೈಟಾನ್ಸ್‌ಗೆ 77 ರನ್ ಗೆಲುವು

ವೈಭವ್ 100ನೇ ಸಿಕ್ಸರ್: 2 ವಿಶ್ವದಾಖಲೆ!

ಪುರುಷರ ಟಿ20 ಕ್ರಿಕೆಟ್ ಇತಿಹಾಸದಲ್ಲೇ 100 ಸಿಕ್ಸರ್‌ಗಳ ಮೈಲಿಗಲ್ಲನ್ನು ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ ದಾಖಲಿಸಿದ ಮತ್ತು ಈ ದಾಖಲೆ ಬರೆದ ಅತಿ ಕಿರಿಯ ಬ್ಯಾಟರ್ ಎಂಬ ದಾಖಲೆಗಳನ್ನು ವೈಭವ್ ಸೂರ್ಯವಂಶಿ ಬರೆದಿದ್ದಾರೆ. 15ರ ಹರೆಯದ ಪೋರ ಸೂರ್ಯವಂಶಿ 29 ಇನ್ನಿಂಗ್ಸ್‌ಗಳಲ್ಲಿ ಈ ವಿಶ್ವದಾಖಲೆ ಬರೆದಿದ್ದಾರೆ.

ಶಾಟ್‌ಗನ್ ವಿಶ್ವಕಪ್: ಕಂಚು ಗೆದ್ದ ಭಾರತ


ಅಲ್ಮಾಟಿ: ಕಜಕಿಸ್ತಾನದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ಶೂಟಿಂಗ್ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತದ ವಿವಾನ್ ಮತ್ತು ನೀರು ಅವರ ಮಿಶ್ರ ಜೋಡಿ ಕಂಚಿನ ಪದಕ ಗೆದ್ದುಕೊಂಡಿದೆ. ವಿವಾನ್ ಕಪೂರ್ ಮತ್ತು ನೀರು ಜತೆಗೂಡಿ 24/30 ಸ್ಕೋರ್ ಮಾಡಿದ್ದರು. 31 ತಂಡಗಳ ಅರ್ಹತಾ ಸುತ್ತಿನಲ್ಲಿ 143/150 ಸ್ಕೋರ್‌ನೊಂದಿಗೆ 2ನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದರು.

ತವರಿನಲ್ಲಿ ಸಿನ್ನರ್ ಶುಭಾರಂಭ

ರೋಮ್: ಇಟಾಲಿಯನ್ ಓಪನ್ 2026ರಲ್ಲಿ ತವರಿನ ಐಕಾನ್ ಯಾನಿಕ್ ಸಿನ್ನರ್ ಶುಭಾರಂಭ ಮಾಡಿದ್ದಾರೆ. ಭಾರತೀಯ ಕಾಲಮಾನದಂತೆ ಶನಿವಾರ ತಡರಾತ್ರಿ ಮೊದಲ ಸುತ್ತಿನ ಪಂದ್ಯವಾಡಿದ್ದ ಸಿನ್ನರ್, ಆಸ್ಟ್ರಿಯಾ ಎದುರಾಳಿ ಸೆಬಾಸ್ಟಿಯನ್ ಆಫ್ನರ್ ಅವರನ್ನು 6-3, 6-4 ನೇರ ಸೆಟ್‌ಗಳ ಅಂತರದಿಂದ ಸೋಲಿಸಿ ಸುಲಭ ಜಯ ಸಾಧಿಸಿದ್ದಾರೆ. ಸತತ 5ನೇ ಮಾಸ್ಟರ್ಸ್ 1000 ಟೂರ್ನಿ ಗೆದ್ದು ದಾಖಲೆ ಬರೆಯುವ ಗುರಿ ಹೊಂದಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5980

ಎಡದಿಂದ ಬಲಕ್ಕೆ
1.ಸ್ಥಿರತೆ ತಪ್ಪಿದ ನಯನಗಳು (4)
3.ನಿಂದೆಯ ಕಡೆಯಲ್ಲಿ ಆದಾಯವಿದೆ (4)
5.ಬಲೆ ಬೀಸಿ ಮೀನು ಹಿಡಿಯುವವನು (4)
8.ನಮ ನಡುವೆ ಇಟ್ಟುಕೊಂಡ ಸೂರ್ಯ (4)
10.ಪಟದ ನಡುವೆ ಬದಲಾವಣೆಯಿದೆ (3)
11.ಪ್ರತಿಜ್ಞೆ-ಶಪಥದ ಸಮಾನಪದ (2)
12.ಬಾಲ್ಯಾವಸ್ಥೆಯ ಜೀವಿ ಉಲ್ಟಾ ಕುಳಿತಿದೆ (2)
14.ಪಹರೆಯ ಕಾಯಕದವನು (5)
16.ಮಾನ-ಹಾದಿ ಸೇರಿ ದೊಡ್ಡ ಹೊಳೆಯಾಯ್ತು (4)
17.ಇದೀಗ ತಾನೆ ಬರೆದ ಗೀತೆ (4)

ಮೇಲಿನಿಂದ ಕೆಳಕ್ಕೆ
2.ಕಾಳಿನಿಂದ ಎಣ್ಣೆ ತೆಗೆಯುವವ ತಲೆಕೆಳಗಾಗಿದ್ದಾನೆ (3)
4.ವಿಷಯ ಹೀಗೆ ತುಂಬ ಆಳವಾಗಿದೆ (3)
6.ಕ್ಷಾರ ವಸ್ತು-ಉಪ್ಪು ಇದು (3)
7. ಅವರ ಕಡೆಗೆ ಎಂಬರ್ಥದ ಶಬ್ದ ತಿರುಗಿದೆ (2)
8.ಸತ್ಯ-ನಿಜದ ಸಮಾನಪದ (2)
9.ಶಯನಿಸು-ನಿದ್ದೆಮಾಡುವಿಕೆ (3)
11.ಕೊಡಲಿಯನ್ನು ಆಯುಧವಾಗುಳ್ಳವನು (5)
13. ಮಡುವಿನ ನಡುವೆ ಉಸುಕಿನ ಪ್ರದೇಶವಿದೆ (5)
14. ಇದು ಸಮಯದ ಅಳತೆ (4)
15.ನೀಡುತ್ತಿರುವ ನೆರವು ತಲೆಕೆಳಗಾಗಿದೆ (4)

5979 ಉತ್ತರ

ಎಡದಿಂದ ಬಲಕ್ಕೆ:
1.ಸಂಪು 2.ದಿನಪ
4.ಕಂಬಿ 6.ಧನುರ್ಗುಣ
7.ಬವರಿಗ 8.ತಿಕಡಿ
10.ದಿಟ್ಟ 11.ವ್ಯಸನ
13.ತಾತ 15.ರಾಜಗಿರಿ
16.ರಾಗಿಬೀಸು

ಮೇಲಿನಿಂದ ಕೆಳಕ್ಕೆ :
1.ಸಂಶೋಧನೆ 2.ಪರಿಣತಿ
3.ದಿವ್ಯಂಬಡಿ 5.ಬಿಡಗಡೆ
9.ಕಳಸ 10.ದಿವರಾತ್ರಿ,
11.ವ್ಯತಿರಿಕ್ತ
12.ನಡುರಾತ್ರಿ
14.ತಲೆಸುತ್ತು



ಆಪರೇಷನ್ ಸಿಂದೂರ್: ಇದು ಕೇವಲ ಸೈನ್ಯ ಕಾರ್ಯಾಚರಣೆ ಅಲ್ಲ

ಭಾರತವು 2025ರ ಮೇ ತಿಂಗಳಲ್ಲಿ ನಡೆಸಿದ ಆಪರೇಷನ್ ಸಿಂದೂರ್ ಕೇವಲ ಒಂದು ಮಿಲಿಟರಿ ಕಾರ್ಯಾಚರಣೆಯಾಗಿರಲಿಲ್ಲ; ಅದು ಪಾಕಿಸ್ತಾನದ ಸೇನಾ ಶಕ್ತಿ, ಆರ್ಥಿಕ ಬೆನ್ನೆಲುಬು, ರಾಜಕೀಯ ಸ್ಥಿರತೆ ಮತ್ತು ಅಂತಾರಾಷ್ಟ್ರೀಯ ಪ್ರತಿಷ್ಠೆಯನ್ನು ಏಕಕಾಲದಲ್ಲಿ ಧ್ವಂಸಗೊಳಿಸಿದ ಐತಿಹಾಸಿಕ ಹೊಡೆತವಾಗಿತ್ತು. ಒಂದು ವರ್ಷ ಕಳೆದ ನಂತರ ತಿರುಗಿ ನೋಡಿದರೆ, ಪಾಕಿಸ್ತಾನ ಆರ್ಥಿಕವಾಗಿ, ರಾಜತಾಂತ್ರಿಕವಾಗಿ ಮತ್ತು ಆಂತರಿಕ ಭದ್ರತೆಯ ನೆಲೆಯಲ್ಲಿ ಚೇತರಿಸಿಕೊಳ್ಳಲಾಗದ ಬಿಕ್ಕಟ್ಟಿನ ಸುಳಿಗೆ ಸಿಲುಕಿದೆ.

ಅಜಿತ್ ಶೆಟ್ಟಿ ಹೆರಂಜೆ

ಸೇನಾ ಮೂಲಸೌಕರ್ಯದ ವಿನಾಶ ಮತ್ತು ಆರ್ಥಿಕ ಸಂಕಟ



ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ 11 ಪ್ರಮುಖ ವಾಯುನೆಲೆಗಳು ಭಾರತದ ಗುರಿಯಾದವು. ಅದರಲ್ಲಿ ರಾವಲ್ಪಿಂಡಿಯ ನೂರ್ ಖಾನ್, ಸರ್ಗೋಧಾ ಮತ್ತು ಜೇಕಬಾಬಾದ್ ವಾಯುನೆಲೆಗಳ ರನ್‌ವೇಗಳು, ಹ್ಯಾಂಗರ್‌ಗಳು ಹಾಗೂ ರಡಾರ್ ವ್ಯವಸ್ಥೆಗಳು ಸಂಪೂರ್ಣ ಧ್ವಂಸಗೊಂಡವು. ಭಾರತದ ವಾಯುಪಡೆ ಪಾಕ್ ವಾಯುಪ್ರದೇಶದೊಳಗೆ 150ರಿಂದ 200 ಕಿಮೀ ನುಗ್ಗಿ ದಾಳಿ ನಡೆಸಿತು ಎಂದು ಉಪಗ್ರಹ ಚಿತ್ರಗಳ ಮೂಲಕ ದೃಢಪಡಿಸಿದೆ. ಸರ್ಗೋಧಾ ನೆಲೆಯಲ್ಲಿದ್ದ ಪ್ರಮುಖ ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ ಸಂಪೂರ್ಣ ನಾಶವಾಗಿರುವುದು ಪಾಕಿಸ್ತಾನದ ಸಮರ ಸನ್ನದ್ಧತೆಯನ್ನು ನಿರ್ನಾಮ ಮಾಡಿದೆ. ಅಂತಾರಾಷ್ಟ್ರೀಯ ರಕ್ಷಣಾ ವಿಶ್ಲೇಷಣಾ ಸಂಸ್ಥೆ Observer Research Foundation (ORF) ಅಂದಾಜಿನ ಪ್ರಕಾರ, ಈ ದಾಳಿಯಿಂದ ಉಂಟಾದ ನೇರ ನಷ್ಟ ಸುಮಾರು 1.5 ಬಿಲಿಯನ್ ಡಾಲರ್ (ಅಂದಾಜು ಪಾಕಿಸ್ತಾನದ 41,800 ಕೋಟಿ ರೂಪಾಯಿ). ನಾಶವಾದ 13 ಯುದ್ಧ ವಿಮಾನಗಳ ಮೌಲ್ಯವು ಪಾಕ್ ವಾರ್ಷಿಕ ರಕ್ಷಣಾ ಬಜೆಟ್‌ನ ಬಹುಪಾಲನ್ನು ನುಂಗಿ ಹಾಕಿದೆ. ಧ್ವಂಸವಾದ ವಿಮಾನಗಳಲ್ಲಿ ಅಮೆರಿಕ ನಿರ್ಮಿತ ಎಫ್-16 ಮತ್ತು ಚೀನಾ-ಪಾಕ್ ಜಂಟಿ ನಿರ್ಮಿತ ಜೆಎಫ್-17 ಎರಡೂ ಸೇರಿವೆ. ಈಗಾಗಲೇ 138 ಬಿಲಿಯನ್ ಡಾಲರ್ ವಿದೇಶಿ ಸಾಲದ ಹೊರೆ ಹೊತ್ತಿರುವ ಪಾಕಿಸ್ತಾನಕ್ಕೆ ಈ ನಷ್ಟ ಭರಿಸಲು ಹಣದ ಮೂಲವೇ ಇಲ್ಲದಾಗಿದೆ. ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಸಾಲ ನೀಡಲು ಕಠಿಣ ಷರತ್ತುಗಳನ್ನು ವಿಧಿಸಿರುವ ಕಾರಣ, ಸರ್ಕಾರ ಸೈನ್ಯದ ಮರುನಿರ್ಮಾಣಕ್ಕಾಗಿ ಸಾಮಾನ್ಯ ಜನರ ಸಬ್ಸಿಡಿಗಳಿಗೆ ಕತ್ತರಿ ಹಾಕಿದೆ. ಪಾಕ್ ವಿದೇಶಾಂಗ ಸಚಿವ ಇಶಾಕ್ ದಾರ್ ಸ್ವತಃ ಒಪ್ಪಿಕೊಂಡಂತೆ, ಈ ನಷ್ಟ ಸರಿಪಡಿಸಲು ಕನಿಷ್ಠ 5ರಿಂದ 8 ವರ್ಷಗಳು ಬೇಕು.

ಸೈನಿಕರ ಮನೋಬಲ ಕುಸಿತ ಮತ್ತು ಸೇನಾ ಬಜೆಟ್ ಹೊಡೆತ

ಸೇನಾ ಮೂಲಸೌಕರ್ಯಗಳ ಮರುನಿರ್ಮಾಣಕ್ಕೆ ಬಿಲಿಯನ್ ಗಟ್ಟಲೆ ಡಾಲರ್ ಸುರಿಯಬೇಕಾಗಿ ಬಂದ ಪಾಕಿಸ್ತಾನಕ್ಕೆ, ತನ್ನ ಸೈನಿಕರ ಹೊಟ್ಟೆ ತುಂಬಿಸುವುದು ಮತ್ತು ಸರಿಯಾದ ವೇತನ ನೀಡುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸೇನಾ ಇತಿಹಾಸದಲ್ಲೇ ಮೊದಲ ಬಾರಿಗೆ ಸೈನಿಕರ ವೇತನ ಮತ್ತು ಭತ್ಯೆಗಳಿಗೆ ಕತ್ತರಿ ಬಿದ್ದಿದೆ. ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಪ್ರಕಾರ, ಹಣದುಬ್ಬರ ಶೇ. 7.2ಕ್ಕೆ ಏರಿದ್ದರಿಂದ ಸೈನಿಕರ ನೈಜ ಖರೀದಿ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ಗಡಿ ಭಾಗದ ಮುಂಚೂಣಿ ನೆಲೆಗಳಲ್ಲಿರುವ ಸೈನಿಕರಿಗೆ ದಿನಬಳಕೆಯ ಆಹಾರ, ಇಂಧನ ಮತ್ತು ವೈದ್ಯಕೀಯ ಕಿಟ್‌ಗಳ ಪೂರೈಕೆ ಶೇ.30ರಷ್ಟು ಕಡಿತಗೊಂಡಿದೆ. ಸಾರಿಗೆ ವೆಚ್ಚದ ಏರಿಕೆ ಮತ್ತು ಬಜೆಟ್ ಕೊರತೆಯಿಂದ ಸೇನಾ ವಾಹನಗಳಿಗೆ ಇಂಧನ ತುಂಬಿಸಲೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಹಸಿವು ಮತ್ತು ಆರ್ಥಿಕ ಅಭದ್ರತೆಯಲ್ಲಿರುವ ಸೈನಿಕರು ಕರ್ತವ್ಯಕ್ಕಿಂತ ಕುಟುಂಬದ ಉಳಿವಿಗೆ ಹೆಚ್ಚು ಚಿಂತಿಸುತ್ತಿರುವ ಪರಿಸ್ಥಿತಿ ಪಾಕ್ ರಕ್ಷಣಾ ವ್ಯವಸ್ಥೆಯ ಆಂತರಿಕ ಪತನಕ್ಕೆ ಕನ್ನಡಿ ಹಿಡಿಯುತ್ತಿದೆ.

ಬದಲಾದ ರಕ್ಷಣಾ ಸಮೀಕರಣ

ಆಪರೇಷನ್ ಸಿಂದೂರ್ ಸಂದರ್ಭದಲ್ಲಿ ಭಾರತ ಪಾಕ್ ನೆಲದೊಳಗೆ ಆಳವಾಗಿ ನುಗ್ಗಿ ದಾಳಿ ನಡೆಸಿದಾಗ, ಚೀನಾ ಕೇವಲ ರಾಜತಾಂತ್ರಿಕ ಹೇಳಿಕೆಗಳಿಗೆ ಸೀಮಿತವಾಗಿ, ನೇರ ಮಿಲಿಟರಿ ನೆರವು ನೀಡದೇ ಇದ್ದುದು ಪಾಕಿಸ್ತಾನಕ್ಕೆ ದೊಡ್ಡ ಆಘಾತ ನೀಡಿತು. ಎಂಪಿ-ಐಡಿಎಸ್‌ಎ ವರದಿಯಂತೆ, ಚೀನಾ ನೆರವು ಕಾಗದದ ಮೇಲೆ ಮಾತ್ರ ಇತ್ತೇ ಹೊರತು ನೆಲದ ಮೇಲಲ್ಲ. ಪಾಕ್ ಸೇನೆ ಸಂಪೂರ್ಣ ಒಂಟಿಯಾಗಿ ಹೋರಾಡಬೇಕಾದ ಪರಿಸ್ಥಿತಿ ಬಂದಾಗ ನಿಜವಾದ ಮಿತ್ರ ಯಾರೆಂಬ ಸತ್ಯ ಬೆಳಕಿಗೆ ಬಂದಿತು.



ಕಾರ್ಯಾಚರಣೆಯ ನಂತರ ಪಾಕಿಸ್ತಾನಕ್ಕೆ ಚೀನಾ ನೀಡುತ್ತಿದ್ದ ಅತ್ಯಾಧುನಿಕ ಮಿಲಿಟರಿ ತಂತ್ರಜ್ಞಾನ ವರ್ಗಾವಣೆಯಲ್ಲಿ ಗಣನೀಯ ಕಡಿತವಾಗಿದೆ. ಎಫ್-16 ಮತ್ತು ಜೆಎಫ್-17 ವಿಮಾನಗಳ ನಿರ್ವಹಣೆಗೆ ಬೇಕಾದ ಚೀನೀ ನಿರ್ಮಿತ ಕ್ಷಿಪಣಿ ತಂತ್ರಜ್ಞಾನ ಪೂರೈಕೆ ಈಗ ಮಂದಗತಿಯಲ್ಲಿದ್ದು, ಪಾಕ್ ಸೈನ್ಯ ತಾಂತ್ರಿಕವಾಗಿ ಇನ್ನಷ್ಟು ದುರ್ಬಲಗೊಂಡಿದೆ. ಮೇ 2026ರ ಹೊತ್ತಿಗೆ ಪಾಕಿಸ್ತಾನದ ಮೇಲಿನ ಚೀನಾ ಸಾಲ 29 ಬಿಲಿಯನ್ ಡಾಲರ್ ದಾಟಿದ್ದು, ಹೊಸ ಹೂಡಿಕೆಗಿಂತ ಹಳೆ ಸಾಲ ಮರುಪಾವತಿಗೆ ಒತ್ತಡ ಹೇರುತ್ತಿದೆ. ಕಜಕಿಸ್ತಾನದಲ್ಲಿ ಚೀನಾ ಮೂಲಸೌಕರ್ಯ ದಾಳಿಗಳಲ್ಲಿ ಪಾಕ್ ಪ್ರೇರಿತ ಉಗ್ರ ಗುಂಪುಗಳ ಪರೋಕ್ಷ ಸಂಬಂಧ ಇದೆ ಎಂಬ ಶಂಕೆ ಎದ್ದಾಗಿನಿಂದ ಎರಡೂ ದೇಶಗಳ ನಡುವೆ ಶೀತಲ ಸಮರ ಆರಂಭವಾಗಿದೆ. ಅತ್ಯಂತ ಅವಮಾನಕರ ಬೆಳವಣಿಗೆ ಎಂದರೆ, ದಿ ಸ್ಟೇಟ್ಸ್‌ಮನ್ ವರದಿ ಪ್ರಕಾರ ಚೀನಾ ಗ್ವಾದರ್‌ನಲ್ಲಿ ತನ್ನ ಪ್ರಜೆಗಳ ರಕ್ಷಣೆಗಾಗಿ ಪಾಕ್ ಸೇನೆಯ ಬದಲು ತನ್ನದೇ ಖಾಸಗಿ ಭದ್ರತಾ ಪಡೆಗಳನ್ನು ನಿಯೋಜಿಸುವ ಇಂಗಿತ ವ್ಯಕ್ತಪಡಿಸಿತ್ತು. ನಂತರ ಪರಿಸ್ಥಿತಿ ಕೈ ಮೀರಿದ ಕಾರಣ ಗ್ವಾದರ್ ಬಂದರು ಯೋಜನೆಯಿಂದಲೇ ಚೀನಾ ಸಂಪೂರ್ಣ ಹೊರ ನಡೆಯಿತು. ಇದು ಪಾಕ್ ಆರ್ಥಿಕ ಸ್ಥಿತಿಗೆ ಕೊನೆಯ ಪೆಟ್ಟಿನಂತಾಗಿದೆ. ಒಟ್ಟಾರೆ, ಚೀನಾ ಪಾಕಿಸ್ತಾನವನ್ನು ಕೇವಲ ಆರ್ಥಿಕ ಹೊರೆಯಾಗಿ ನೋಡಲು ಆರಂಭಿಸಿದ್ದು, ದಕ್ಷಿಣ ಏಷ್ಯಾದ ರಾಜಕೀಯ ಸಮೀಕರಣ ಬದಲಾಗುತ್ತಿದೆ. ಇದಕ್ಕಿಂತ ದೊಡ್ಡ ಅವಮಾನ ಯಾವುದು? ದಶಕಗಳ ಮಿತ್ರ ರಾಷ್ಟ್ರವೇ ನಿನ್ನ ಸೇನೆಯನ್ನು ನಂಬದೆ, ನಿನ್ನ ನೆಲದಲ್ಲಿ ತನ್ನದೇ ಭದ್ರತಾ ಪಡೆ ನಿಯೋಜಿಸುತ್ತೇನೆ ಎಂದು ಹೇಳಿದಾಗ, ಪಾಕ್ ಸಾರ್ವಭೌಮತ್ವ ಕೇವಲ ಕಾಗದದ ಮೇಲಿನ ಮಾತಾಗಿ ಉಳಿಯಿತು.

ಸೇನೆಯ ಆಂತರಿಕ ಬಿರುಕು: ಜನರಲ್ ಮುನೀರ್, ಐಎಸ್‌ಐ ಮತ್ತು ಎಂಐ ಸಂಘರ್ಷ

ಆಪರೇಷನ್ ಸಿಂದೂರ್ ನಂತರ ಅದರ ಹಿಂದಿನಿಂದಲೂ ಇದ್ದ ಆಂತರಿಕ ಅಸಮಧಾನ ಜೋರಾಗಿ ಕೇಳುತ್ತಿದೆ. ಕಾರ್ಯಾಚರಣೆ ನಡೆಯುತ್ತಿದ್ದ ಸಂದರ್ಭದಲ್ಲಿ, ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ರಾವಲ್ಪಿಂಡಿಯ ಜಿಎಚ್‌ಕ್ಯೂನ ಸುರಕ್ಷಿತ ಭೂಗತ ಬಂಕರ್‌ನಲ್ಲಿ ಅಡಗಿಕೊಂಡಿದ್ದರು ಎಂಬ ವಿಷಯ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಸ್ಟ್ರಾಟೆಜಿಕ್ ಸ್ಟಡೀಸ್ (ಐಐಎಸ್‌ಎಸ್) ವರದಿ ಮಾಡಿದೆ. ಯುದ್ಧ ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ನೀಡಬೇಕಿದ್ದ ಮುನೀರ್ ಸಂಪರ್ಕಕ್ಕೆ ಸಿಗದೆ ಇದ್ದ ನಡವಳಿಕೆ ಅಧಿಕಾರಿಗಳಲ್ಲಿ ತೀವ್ರ ಆಕ್ರೋಶ ಹುಟ್ಟಿಸಿತು. ಈ ವೈಫಲ್ಯ ಮುಚ್ಚಿಕೊಳ್ಳಲು ಮುನೀರ್ ನಂತರ ಸುಳ್ಳು ವಿಜಯೋತ್ಸವದ ಕಥೆ ಹೆಣೆದ ಮತ್ತು ತಮ್ಮ ನಿಷ್ಠಾವಂತ ಅಧಿಕಾರಿಗಳಿಗೆ ಅಕ್ರಮ ಪದೋನ್ನತಿ ನೀಡಿದ.



ಭಾರತದ ದಾಳಿಯ ಬಗ್ಗೆ ಮುನ್ಸೂಚನೆ ನೀಡಲು ಐಎಸ್‌ಐ ವಿಫಲವಾಗಿದ್ದರಿಂದ ಮುನೀರ್ ಅದರ ಮೇಲಿನ ವಿಶ್ವಾಸ ಕಳೆದುಕೊಂಡ. ಬದಲಿಗೆ ಮಿಲಿಟರಿ ಇಂಟೆಲಿಜೆನ್ಸ್ (ಎಂಐ) ಅನ್ನು ತಮ್ಮ ವೈಯಕ್ತಿಕ ಕಾವಲುಪಡೆಯಂತೆ ಬಳಸಿಕೊಳ್ಳಲು ಆರಂಭಿಸಿದ. ಐಎಸ್‌ಐ ಪ್ರಮುಖ ಅಧಿಕಾರಿಗಳನ್ನು ವರ್ಗಾಯಿಸಿ ಅವರ ಸ್ಥಾನಗಳಲ್ಲಿ ನಿಷ್ಠಾವಂತ ಎಂಐ ಅಧಿಕಾರಿಗಳನ್ನು ನೇಮಿಸುವ ಶುದ್ಧೀಕರಣ ಪ್ರಕ್ರಿಯೆ ಆರಂಭವಾಗಿದ್ದು, ಇದು ಜಿಎಚ್‌ಕ್ಯು ಒಳಗೆ ದೊಡ್ಡ ಮಟ್ಟದ ಅಸ್ಥಿರತೆ ಸೃಷ್ಟಿಸಿದೆ ಎಂದು ಮನಿ ಕಂಟ್ರೋಲ್ ವರದಿ ಮಾಡಿದೆ. ಗುಪ್ತಚರ ಮಾಹಿತಿ ಸರಿಯಾಗಿ ಹಂಚಿಕೆಯಾಗದ ಕಾರಣ ಖೈಬರ್ ಮತ್ತು ಬಲೂಚ್ ಉಗ್ರ ಗುಂಪುಗಳು ಈ ಬಿರುಕಿನ ಲಾಭ ಪಡೆಯುತ್ತಿದ್ದು, ದೇಶದ ಆಂತರಿಕ ಭದ್ರತೆ ಮತ್ತಷ್ಟು ದುರ್ಬಲವಾಗಿದೆ. ತಮ್ಮ ಅಧಿಕಾರ ಉಳಿಸಿಕೊಳ್ಳಲು ಮತ್ತು ಸಂಭಾವ್ಯ ಪೊಲಿಟಿಕಲ್ ಕೂ (ರಾಜಕೀಯ ದಂಗೆ) ತಡೆಯಲು ಮುನೀರ್ ನವೆಂಬರ್ 2025ರಲ್ಲಿ 27ನೇ ಸಂವಿಧಾನ ತಿದ್ದುಪಡಿ ಜಾರಿಗೆ ತಂದು ತನಗೆ ತಾನೇ ಫೀಲ್ಡ್ ಮಾರ್ಷಲ್ ಪಟ್ಟ ನೀಡಿಕೊಂಡು ಆಜೀವ ಶಿಕ್ಷೆಯಿಂದ ವಿನಾಯಿತಿ ಪಡೆದ ಎಂದು ಬಿಸಿಸಿಐ ನ್ಯೂಸ್ ಮತ್ತು ದಿ ಗಾರ್ಡಿಯನ್ ವರದಿ ಮಾಡಿವೆ. ಇದಕ್ಕೂ ಮೀರಿ, ಚೀಫ್ ಆಫ್ ಡಿಫೆನ್ಸ್ ಫೋರ್ಸಸ್ (ಸಿಡಿಎಫ್) ಎಂಬ ಸಂಪೂರ್ಣ ಹೊಸ ಹುದ್ದೆ ಸೃಷ್ಟಿಸಿಕೊಂಡು ನೌಕಾಪಡೆ ಮತ್ತು ವಾಯುಪಡೆಯ ಮೇಲೂ ಏಕವ್ಯಕ್ತಿ ಹಿಡಿತ ಸಾಧಿಸಿದ್ದು, ಈ ಸರ್ವಾಧಿಕಾರಿ ಧೋರಣೆ ಹಿರಿಯ ಕಮಾಂಡರ್‌ಗಳಲ್ಲಿ ತೀವ್ರ ಅಸಮಾಧಾನ ಮೂಡಿಸಿದ್ದು, ಅನೇಕ ಅಧಿಕಾರಿಗಳು ಮುನೀರ್ ಮಾನಸಿಕವಾಗಿ ಅಸ್ಥಿರ ಎಂದು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ದಿ ಸ್ಟೇಟ್ಸ್‌ಮನ್ ವರದಿ ಪ್ರಕಾರ, ಪಾಕ್ ಸೈನ್ಯ ಇಂದು ಮುನೀರ್ ಬಣ ಮತ್ತು ಸಾಂಪ್ರದಾಯಿಕ ಐಎಸ್‌ಐ ಬಣ ಎಂದು ಎರಡಾಗಿ ವಿಭಜಿತವಾಗಿದ್ದು, ಈ ಆಂತರಿಕ ಕಲಹ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದರೆ ಪಾಕ್ ಪರಮಾಣು ಶಸ್ತ್ರಾಸ್ತ್ರಗಳ ಭದ್ರತೆ ಬಗ್ಗೆ ಜಾಗತಿಕ ಮಟ್ಟದಲ್ಲೂ ಆತಂಕ ಶುರುವಾಗಿದೆ. ಒಆರ್‌ಎಫ್ ವಿಶ್ಲೇಷಣೆಯಂತೆ, ಪಾಕಿಸ್ತಾನ ಸೌಮ್ಯ ಸರ್ವಾಧಿಕಾರದಿಂದ ಸಂಪೂರ್ಣ ಮಿಲಿಟರಿ ಸ್ಟೇಟ್ ಆಗಿ ಬದಲಾಗಿದೆ.

ಅಮೆರಿಕದ ಚದುರಂಗ: ಗಾಜಾ ಶಾಂತಿಪಡೆ ಮತ್ತು ಸಾರ್ವಭೌಮತ್ವದ ಹರಾಜು

ಆಪರೇಷನ್ ಸಿಂದೂರ್ ನಂತರ ಅಮೆರಿಕ ಪಾಕಿಸ್ತಾನವನ್ನು ತನ್ನ ಕಾಲಾಳಿನಂತೆ ಬಳಸಿಕೊಳ್ಳಲು ಮುಂದಾಗಿದೆ. ನವೆಂಬರ್ 2025ರಲ್ಲಿ ಅಮೆರಿಕ ಮಂಡಿಸಿದ ಗಾಜಾ ಶಾಂತಿ ಯೋಜನೆಯ ಅಡಿಯಲ್ಲಿ, ಗಾಜಾದಲ್ಲಿ ಸ್ಥಿರತೆ ತರಲು ಪಾಕ್ ಸೈನ್ಯವನ್ನು ಶಾಂತಿಪಡೆಯಾಗಿ (ಐಎಸ್‌ಎಫ್) ನಿಯೋಜಿಸುವ ಪ್ರಸ್ತಾವ ಮಂಡಿಸಲಾಯಿತು. ಇದರ ಪರಿಣಾಮವಾಗಿ ಆಸಿಮ್ ಮುನೀರ್ ಅಮೆರಿಕದ ಒತ್ತಡಕ್ಕೆ ಮಣಿದು ತನ್ನ ದೇಶದ ಜನರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾಯಿತು. ಇದು ವಿರೋಧ ಪಕ್ಷಗಳಿಗೆ ದೊಡ್ಡ ಅಸ್ತ್ರವನ್ನು ನೀಡಿತು. ಪಾಕ್ ರಾಜಕೀಯ ವಲಯದಲ್ಲಿ ಅಮೆರಿಕದ ಪ್ರಭಾವ ಎಷ್ಟು ಗಾಢವಾಗಿದೆ ಎಂದರೆ, ಪ್ರಧಾನಿ ಮತ್ತು ಸೇನಾ ಮುಖ್ಯಸ್ಥರ ಆಯ್ಕೆ ಇಸ್ಲಾಮಾಬಾದ್ಗಿಂತ ವಾಷಿಂಗ್ಟನ್ನಲ್ಲಿ ನಿರ್ಧಾರವಾಗುತ್ತದೆ ಎಂಬ ಭಾವನೆ ಜನರಲ್ಲಿ ಬೇರೂರಿದೆ. ಅದಕ್ಕಾಗಿಯೇ ಜನ ಸಾಮಾನ್ಯರು ಅಮೆರಿಕ ಜೊ ಯಾರ್ ಹೈ ದೇಶ್ ಕಾ ಗದ್ದಾರ್ ಹೈ (ಅಮೆರಿಕದ ಮಿತ್ರ ದೇಶದ್ರೋಹಿ) ಎಂದು ಬೀದಿ ಬೀದಿಗಳಲ್ಲಿ ಸೈನ್ಯದ ವಿರುದ್ಧ ಘೋಷಣೆ ಕೂಗುತ್ತಿದ್ದಾರೆ.

ಶಿಯಾ-ಸುನ್ನಿ ಧ್ರುವೀಕರಣ: ಒಳ ಉರಿಯುತ್ತಿರುವ ಕೆಂಡ



ಇರಾನ್ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಮತ್ತು ಅಮೆರಿಕ ಒತ್ತಡ ದೇಶದ ಒಳಗೆ ತೀವ್ರ ಶಿಯಾ-ಸುನ್ನಿ ಧ್ರುವೀಕರಣಕ್ಕೆ ಕಾರಣವಾಗಿದೆ. ಒಟ್ಟು ಜನಸಂಖ್ಯೆಯ ಶೇ.15ರಿಂದ 20ರಷ್ಟಿರುವ ಶಿಯಾ ಸಮುದಾಯ ಇರಾನ್ ಅನ್ನು ತನ್ನ ಆಧ್ಯಾತ್ಮಿಕ ಕೇಂದ್ರವಾಗಿ ಕಾಣುತ್ತದೆ. ಇರಾನ್ ಮೇಲೆ ಅಂತಾರಾಷ್ಟ್ರೀಯ ಒತ್ತಡ ಮತ್ತು ದಾಳಿಗಳು ನಡೆದಾಗ ಪಾಕ್ ಶಿಯಾ ಸಮುದಾಯ ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿಯುತ್ತಿದೆ. ಇದನ್ನು ಬಳಸಿಕೊಳ್ಳುವ ಸುನ್ನಿ ಉಗ್ರಗಾಮಿ ಗುಂಪುಗಳು ಇದನ್ನು ಇರಾನ್ ಪ್ರಭಾವದ ವಿಸ್ತರಣೆ ಎಂದು ಬಿಂಬಿಸಿ ಗುಂಪು ಘರ್ಷಣೆ ಮತ್ತು ಅಸ್ಥಿರತೆಗೆ ದಾರಿ ಮಾಡಿಕೊಡುತ್ತಿದ್ದಾರೆ. ಈ ಉದ್ವಿಗ್ನ ಸ್ಥಿತಿಯಲ್ಲಿ, ಆಸಿಮ್ ಮುನೀರ್ ಶಿಯಾ ಧರ್ಮಗುರುಗಳ ಸಭೆಯಲ್ಲಿ ಇರಾನ್ ಬಗ್ಗೆ ಅಷ್ಟು ಪ್ರೀತಿ ಇದ್ದರೆ ಅಲ್ಲಿಗೇ ಹೋಗಿ ಎಂದ ಹೇಳಿಕೆ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಶಿಯಾ ನಿಷ್ಠೆಯನ್ನೇ ಪ್ರಶ್ನಿಸುವ ಈ ಹೇಳಿಕೆ ಸಮಾಜದಲ್ಲಿ ಆಳವಾದ ವಿಭಜನೆ ಸೃಷ್ಟಿಸಿದೆ. ಸೌದಿ ಅರೇಬಿಯಾ (ಸುನ್ನಿ ಪರ) ಮತ್ತು ಇರಾನ್ (ಶಿಯಾ ಪರ) ನಡುವಿನ ಪ್ರಾದೇಶಿಕ ಪೈಪೋಟಿ ಪಾಕ್ ನೆಲದಲ್ಲಿ ಪರೋಕ್ಷ ಯುದ್ಧಕ್ಕೆ ದಾರಿ ಮಾಡಿಕೊಡದಂತೆ ತಡೆಯಬೇಕಾದ ಗಂಭೀರ ಸವಾಲನ್ನು ಆಡಳಿತ ಎದುರಿಸುತ್ತಿದೆ.



ಇಸ್ಲಾಮಿಕ್ ಉಗ್ರವಾದ: ತಿರುಗಿ ಕಚ್ಚಿದ ಹಾವು

ಧಾರ್ಮಿಕ ನೆಲೆಯಲ್ಲೂ ಪರಿಸ್ಥಿತಿ ಜ್ವಲನಬಿಂದುವಿನಲ್ಲಿದೆ. ಗಾಜಾ ಮತ್ತು ಇಸ್ರೇಲ್ ಸಂಘರ್ಷದಲ್ಲಿ ಪಾಕಿಸ್ತಾನ ಮೃದು ಧೋರಣೆ ಅನುಸರಿಸಲು ಅಮೆರಿಕ ಒತ್ತಡ ಹಾಕಿರುವುದು ಟಿಎಲ್‌ಪಿ (ಟಿಎಲ್‌ಪಿ) ಮತ್ತು ಜಮಾತ್-ಎ-ಇಸ್ಲಾಮಿಯಂತಹ ಕಟ್ಟರ್ ಸಂಘಟನೆಗಳನ್ನು ಕೆರಳಿಸಿದೆ. ಮುಸ್ಲಿಂ ಉಮ್ಮಾವನ್ನು ಅಮೆರಿಕಕ್ಕೆ ಅಡವಿಡಲಾಗಿದೆ ಎಂಬ ಧಾರ್ಮಿಕ ಪ್ರಚೋದನೆ ಯುವಜನರನ್ನು ಉಗ್ರವಾದದತ್ತ ಸೆಳೆಯುತ್ತಿದೆ. ದಶಕಗಳ ಕಾಲ "Bleed India with a Thousand Cuts' ನೀತಿ ಅನುಸರಿಸಿ ಉಗ್ರರ ಮೂಲಕ ಭಾರತವನ್ನು ದುರ್ಬಲಗೊಳಿಸಲು ನೋಡಿದ ಪಾಕಿಸ್ತಾನಕ್ಕೆ, ಆಪರೇಷನ್ ಸಿಂದೂರ್ ಅದೇ ಭಾಷೆಯಲ್ಲಿ ಉತ್ತರ ಕೊಟ್ಟಿತು. ಪಾಕಿಸ್ತಾನದೊಳಗೆ ಆಗಲೇ ಪಂಜಾಬ್ ಪ್ರಾಂತ್ಯದ ಹಿಡಿತದಿಂದ ರೋಸಿ ಹೋಗಿದ್ದ ಉಳಿದ ರಾಜ್ಯಗಳು ತಿರುಗಿ ಬಿದ್ದಿದ್ದ ಸಂದರ್ಭದಲ್ಲಿ ಭಾರತ ನೇರವಾಗಿ ಪಂಜಾಬ್ ಕೇಂದ್ರಿತ ದಾಳಿ ನಡೆಸಿತು. ಪಾಕ್ ಸೈನ್ಯ ಭಾರತ ಪಾಕಿಸ್ತಾನದ ಮೇಲೆ ದಾಳಿ ನಡೆಸಿದೆ ಎಂದು ಘೋಷಿಸಿದಾಗ, ತಾನೇ ಸಾಕಿ ಬೆಳೆಸಿದ ಟಿಟಿಪಿ ಇದು ಪಾಕಿಸ್ತಾನದ ಮೇಲಿನ ದಾಳಿಯಲ್ಲ, ಪಂಜಾಬಿ ಸೈನ್ಯದ ಮೇಲಿನ ದಾಳಿ ಎಂದು ಹೇಳುವ ಮೂಲಕ ಪಾಕಿಸ್ತಾನದ ಆಂತರಿಕ ವಿದ್ರೋಹದ ಕುರುಹನ್ನು ಜಗಜ್ಜಾಹೀರು ಮಾಡಿತು. ಪಾಕಿಸ್ತಾನ ಒಂದು ಕಾಲದಲ್ಲಿ ಅಮೆರಿಕ ವಿರುದ್ಧ ಹೋರಾಡಲು ಸಾಕಿ ಬೆಳೆಸಿದ ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಈಗ ಪಾಕ್ ಸೈನ್ಯವನ್ನೇ ಅಮೆರಿಕದ ಏಜೆಂಟ್ ಎಂದು ಕರೆದು ಸೈನಿಕರ ಮೇಲೆ ಆತ್ಮಾಹುತಿ ದಾಳಿ ನಡೆಸುತ್ತಿದೆ. ಪಾಕ್ ತಾನೇ ಸಾಕಿದ ಹಾವು ತಿರುಗಿ ಕಚ್ಚಿದ ಪರಿಸ್ಥಿತಿ ಇದಾಗಿದ್ದು, ಅಮೆರಿಕದೊಂದಿಗಿನ ಪ್ರತಿ ಹೊಂದಾಣಿಕೆ ದೇಶದ ಒಳಗೆ ಮತ್ತಷ್ಟು ಅಂತರ್ಯುದ್ಧದಂತಹ ಸ್ಥಿತಿ ಸೃಷ್ಟಿಸುತ್ತಿದೆ. ಡಾಲರ್ ನೆರವು ಪಡೆಯುತ್ತಿದ್ದರೂ ಒಳಗಿನಿಂದ ರಾಜಕೀಯ ನೈತಿಕತೆ ಮತ್ತು ಸಾಮಾಜಿಕ ಶಾಂತಿಯನ್ನು ಶಾಶ್ವತವಾಗಿ ಕಳೆದು ಕೊಳ್ಳುತ್ತಿದೆ.

ಸೌದಿ-ಯುಎಇ ಪೈಪೋಟಿ, ಭಾರತದ ಕಾರ್ಯತಂತ್ರ

ಸೌದಿ ಅರೇಬಿಯಾ ಮತ್ತು ಯುಎಇ ನಡುವಿನ ಪ್ರಾದೇಶಿಕ ಪೈಪೋಟಿಯಲ್ಲಿ ಪಾಕಿಸ್ತಾನವು ಇಕ್ಕಟ್ಟಿಗೆ ಸಿಲುಕಿ ಎರಡೂ ಕಡೆಯಿಂದ ನಷ್ಟ ಅನುಭವಿಸುತ್ತಿದೆ. 2025ರ ಸೆಪ್ಟೆಂಬರ್‌ನಲ್ಲಿ ಪಾಕ್ ಸೌದಿ ಅರೇಬಿಯಾದೊಂದಿಗೆ ಮ್ಯೂಚುಯಲ್ ಡಿಫೆನ್ಸ್ ಪ್ಯಾಕ್ಟ್‌ಗೆ ಸಹಿ ಹಾಕಿ, ಸೌದಿಗೆ ಭೀತಿ ಎದುರಾದರೆ ತನ್ನ ಸೈನ್ಯವನ್ನು ನಿಯೋಜಿಸಲು ಒಪ್ಪಿಕೊಂಡಿತು. ಈ ನಡೆಯನ್ನು ಯುಎಇ ತನ್ನ ವಿರುದ್ಧ ಸೌದಿ ಪರ ಒಲವು ಎಂದು ಭಾವಿಸಿ ತಕ್ಷಣ ಸುಮಾರು 3.5 ಬಿಲಿಯನ್ ಡಾಲರ್ ಸಾಲವನ್ನು ಮರುಪಾವತಿಸಲು ಒತ್ತಡ ಹೇರಿತು. ಅಷ್ಟೇ ಅಲ್ಲ, ಎತಿಹಾದ್ ಏರ್ವೇಸ್‌ನಂತಹ ಯುಎಇ ಸಂಸ್ಥೆಗಳಿಂದ ಪಾಕ್ ಉದ್ಯೋಗಿಗಳನ್ನು ಭದ್ರತಾ ಕಾರಣ ನೀಡಿ ಕೆಲಸದಿಂದ ತೆಗೆದು ಕಠಿಣ ಸಂದೇಶವನ್ನು ರವಾನಿಸಿತು. ಸೌದಿ ಕೈಹಿಡಿದಿದ್ದರೂ ಹಳೆಯ ಮಿತ್ರ ಯುಎಇ ತಿರುಗಿ ನೋಡದ ಸ್ಥಿತಿ ಬಂದಿದೆ.

ಈ ಸಂದರ್ಭವನ್ನು ಭಾರತ ಅತ್ಯಂತ ಚಾಣಾಕ್ಷತನದ ಕಾರ್ಯತಂತ್ರ ಸಮತೋಲನ (Strategic Balancing) ತಂತ್ರದಿಂದ ಬಳಸಿಕೊಳ್ಳುತ್ತಿದೆ. ಸೌದಿ-ಪಾಕ್ ರಕ್ಷಣಾ ಒಪ್ಪಂದಕ್ಕೆ ಪ್ರತಿಯಾಗಿ ಭಾರತ ಯುಎಇ ಜೊತೆಗಿನ ರಕ್ಷಣಾ ಮತ್ತು ಆರ್ಥಿಕ ಸಂಬಂಧವನ್ನು ಗಾಢಗೊಳಿಸಿತು. ಇದರಿಂದ ಯುಎಇ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದ ಪ್ರಮುಖ ಭದ್ರತಾ ಪಾಲುದಾರನಾಗಿ ಭಾರತವನ್ನು ನೋಡಲು ಆರಂಭಿಸಿದೆ. ಏಕಕಾಲದಲ್ಲಿ ಭಾರತ ಇಂಡಿಯಾ-ಸೌದಿ ಸ್ಟ್ರಾಟೆಜಿಕ್ ಪಾರ್ಟ್ನರ್‌ಶಿಪ್ ಕೌನ್ಸಿಲ್ ಮೂಲಕ ಇಂಧನ ಮತ್ತು ಹೂಡಿಕೆ ಸಂಬಂಧವನ್ನು ಬಲಪಡಿಸಿ, ಪಾಕ್ ಮೇಲಿನ ಸೌದಿ ಮಿಲಿಟರಿ ಬೆಂಬಲ ಭಾರತದ ಹಿತಾಸಕ್ತಿಗೆ ವಿರೋಧವಾಗದಂತೆ ರಾಜತಾಂತ್ರಿಕ ಒತ್ತಡವನ್ನು ಬಳಸುತ್ತಿದೆ. ಭಾರತ ಇಸ್ರೇಲ್ ಮತ್ತು ಯುಎಇ ಜೊತೆಗೂಡಿ ಹೊಸ ಪ್ರಾದೇಶಿಕ ಅಕ್ಷವನ್ನು ಸೃಷ್ಟಿಸಿ ಸೌದಿ-ಪಾಕ್-ಟರ್ಕಿ ಮೈತ್ರಿಕೂಟಕ್ಕೆ ಪ್ರಬಲ ಪ್ರತ್ಯುತ್ತರ ನೀಡುತ್ತಿದ್ದು, ಗಲ್ಫ್ ಪ್ರದೇಶದಲ್ಲಿ ಭಾರತದ ಪ್ರಭಾವ ಹೆಚ್ಚಾಗಿ ಪಾಕ್ ರಾಜತಾಂತ್ರಿಕವಾಗಿ ಮೂಲೆಗುಂಪಾಗುತ್ತಿದೆ. ಪಾಕಿಸ್ತಾನ ಒಂದೊಂದಾಗಿ ಮಿತ್ರರನ್ನು ಕಳೆದುಕೊಳ್ಳುತ್ತಿದ್ದ ಅದೇ ಹೊತ್ತಿಗೆ, ಭಾರತ ಅದೇ ಮಿತ್ರರನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತಿತ್ತು. ಯುಎಇ ಪಾಕಿಸ್ತಾನದ ಸಾಲವನ್ನು ವಾಪಸ್ ಕೇಳುತ್ತಿದ್ದ ಅದೇ ಸಮಯದಲ್ಲಿ ಭಾರತದೊಂದಿಗೆ ರಕ್ಷಣಾ ಒಪ್ಪಂದವನ್ನು ಬಲಪಡಿಸಿಕೊಳ್ಳುತ್ತಿತ್ತು. ಸೌದಿ ಪಾಕ್ ಸೈನ್ಯಕ್ಕೆ ಹಣ ಕೊಡುತ್ತಿದ್ದರೂ, ಭಾರತದೊಂದಿಗೆ ಇಂಧನ ಮತ್ತು ಹೂಡಿಕೆ ಸಂಬಂಧವನ್ನು ಮತ್ತಷ್ಟು ಗಟ್ಟಿಯಾಗಿಸಿಕೊಳ್ಳುತ್ತಿತ್ತು. ಪಾಕಿಸ್ತಾನ ಡಾಲರ್‌ಗಾಗಿ ಸೈನ್ಯ ಮಾರಿಕೊಂಡು ತಾತ್ಕಾಲಿಕವಾಗಿ ಉಸಿರಾಡುತ್ತಿದ್ದರೆ, ಭಾರತ ಅದೇ ಕೊಲ್ಲಿ ರಾಷ್ಟ್ರಗಳ ನಡುವೆ ದೀರ್ಘಕಾಲಿಕ ಪ್ರಭಾವವನ್ನು ಬೆಳೆಸಿಕೊಳ್ಳುತ್ತಿತ್ತು.



ಒಟ್ಟಾರೆ ಸೈನ್ಯ ಒಡೆದಿದೆ, ಆರ್ಥಿಕತೆ ಕುಸಿದಿದೆ, ಚೀನಾ ದೂರ ಸರಿದಿದೆ, ಅಮೆರಿಕದ ಕಾಲಡಿಯಲ್ಲಿ ಸ್ವಾಭಿಮಾನ ಅಡವಿಟ್ಟಿದೆ, ತಾನೇ ಸಾಕಿದ ಉಗ್ರರು ತಿರುಗಿ ಕಚ್ಚುತ್ತಿದ್ದಾರೆ, ಮಿತ್ರ ರಾಷ್ಟ್ರಗಳು ಭಾರತದ ಕಡೆ ಸರಿಯುತ್ತಿವೆ. ಒಳಗಡೆ ಗೃಹಯುದ್ಧ ಮತ್ತು ಅರಾಜಕತೆ ಮಿತಿ ಮೀರಿದೆ, ಗಡಿಯಾಚೆ ಅಫ್ಘಾನಿಸ್ತಾನ ಹೊಂಚು ಹಾಕಿ ಕುಳಿತಿದೆ. ಇತಿಹಾಸದಲ್ಲಿ ಅನೇಕ ರಾಷ್ಟ್ರಗಳು ಯುದ್ಧದಲ್ಲಿ ಸೋತು ಮತ್ತೆ ಎದ್ದಿವೆ. ಆದರೆ ತನ್ನ ಸೈನ್ಯ, ತನ್ನ ಜನ, ತನ್ನ ಮಿತ್ರರು ಮತ್ತು ತನ್ನ ಆತ್ಮ? ಎಲ್ಲವನ್ನೂ ಒಂದೇ ಸಲ ಕಳೆದುಕೊಂಡ ರಾಷ್ಟ್ರ ಮತ್ತೆ ಏಳುವುದು ಸುಲಭವಲ್ಲ. ಪಾಕಿಸ್ತಾನ ಇಂದು ಅಂತಹ ಹಂತದಲ್ಲಿದೆ.

ಕಿರುಸುದ್ದಿ

ಬಸವ ಜಯಂತಿ ಇಂದು

ಮುಂಡರಗಿ: ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಮುಂಡರಗಿ ತಾಲೂಕು ಘಟಕ ಮತ್ತು ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ ಇವುಗಳ ಸಂಯುಕ್ತ ಆಶ್ರಯದಲ್ಲಿ ಮೇ 11ರಂದು ಬೆಳಗ್ಗೆ 10ಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ 893ನೇ ಬಸವ ಜಯಂತಿ ಆಚರಣೆ ಕಾರ್ಯಕ್ರಮ ಜರುಗುವುದು.

ಕಾರ್ಯಕ್ರಮದ ಸಾನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ನೇತೃತ್ವವನ್ನು ಕಲಕೇರಿ-ವಿರಾಪೂರದ ಗುರು ಮುದುಕೇಶ್ವರ ಶಿವಾಚಾರ್ಯರು ವಹಿಸುವರು. ಉದ್ಘಾಟನೆಯನ್ನು ಮಾಜಿ ಸಚಿವ ಎಸ್.ಎಸ್.ಪಾಟೀಲ ನೆರವೇರಿಸುವರು. ಅಧ್ಯಕ್ಷತೆಯನ್ನು ಮಹಾಸಭಾ ಮುಂಡರಗಿ ತಾಲೂಕು ಘಟಕದ ಅಧ್ಯಕ್ಷ ಶಿವನಗೌಡ ಗೌಡ್ರ ವಹಿಸುವರು. ಕಾರ್ಯಕ್ರಮದಲ್ಲಿ ಡಾ.ಬಿ.ಜಿ.ಜವಳಿ ಅವರು ಸಮಾನತೆಯ ಹರಿಕಾರ ಬಸವಣ್ಣ ಕುರಿತು ಉಪನ್ಯಾಸ ನೀಡಲಿದೆ, ಅಕ್ಕಮಹಾದೇವಿ ಹಿರೇಮಠ ಅವರು ಶರಣ ಚಳುವಳಿಯಲ್ಲಿ ಮಹಿಳಾ ಸ್ವಾತಂತ್ರ್ಯ ಕುರಿತು ಉಪನ್ಯಾಸ ನೀಡುವರು. ಅತಿಥಿಗಳಾಗಿ ಸಂಗನಗೌಡ ಪಾಟೀಲ, ಎಸ್.ಎಸ್.ಗುಡಿಮನಿ, ವಿಜಯಲಕ್ಷ್ಮಿ ಮಾನ್ವಿ, ಶಿವಪ್ಪ ಅಂಕದ ಭಾಗವಹಿಸುವರು. ಈ ವೇಳೆ ಸಾಧಕರಿಗೆ ಸನ್ಮಾನಿಸಲಾಗುವುದು.

ಜನ ಸಂಪರ್ಕ ಸಭೆ

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಮೇ 13 ರಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ಲಕ್ಷ್ಮೇಶ್ವರ ತಾಲೂಕಿನ ಸಾರ್ವಜನಿಕರಿಂದ ದೂರು ಸ್ವೀಕಾರ ಮಾಡಲಿದ್ದಾರೆ. ಯಾವುದೇ ಸರ್ಕಾರಿ ಅಧಿಕಾರಿ ಹಾಗೂ ನೌಕರರು ಸರ್ಕಾರಿ ಸೇವೆ ಒದಗಿಸುವಲ್ಲಿ ಲಂಚಕ್ಕೆ ಬೇಡಿಕೆ ಇಟ್ಟಲ್ಲಿ, ನ್ಯಾಯಕ್ಕೆ ವಿಳಂಬ ಮಾಡಿದಲ್ಲಿ, ಯಾವುದಾದರೂ ಸರ್ಕಾರಿ ಭೂಮಿಗಳು ಒತ್ತುವರಿಯಾಗಿದಲ್ಲಿ ಸಾಮಗ್ರಿಗಳಲ್ಲಿ ಹಣ ಅಥವಾ ಕಳಪೆ ಕಾರ್ಯ ನಡೆದಿದ್ದಲ್ಲಿ ಈ ಬಗ್ಗೆ ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಪ್ರಕಟಣೆಗೆ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ಗದಗ: ಪ್ರಸಕ್ತ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ. ಗುಣಮಟ್ಟದ ಕಡಲೆಕಾಳು ಉತ್ಪನ್ನವನ್ನು ರೈತರಿಂದ ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರೈತರ ನೋಂದಣಿಯೊಂದಿಗೆ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಲ್ಲಿ ಕಡಲೆಕಾಳು ಉತ್ಪನ್ನವನ್ನು ಖರೀದಿಸಲು ನಿಗದಿಪಡಿಸಿರುವ ಖರೀದಿ ಕಾಲಾವಧಿ ಮೇ 28ರ ವರೆಗೆ ವಿಸ್ತರಿಸಿ ನೋಂದಾಯಿತ ರೈತರಿಂದ ಮಾತ್ರ ಖರೀದಿಸಲು ಆದೇಶಿಸಲಾಗಿದೆ ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷ ಹಾಗೂ ಗದಗ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣ್ಣು ರಕ್ಷಿಸಿಕೊಳ್ಳಿ

ಗದಗ: ನಾವು ನಮ್ಮ ದೇಹವನ್ನು ಹೇಗೆ ಕಾಪಾಡಿಕೊಳ್ಳುತ್ತೇವೆ ಹಾಗೆಯೇ ನಮ್ಮ ಹೊಲದಲ್ಲಿನ ಮಣ್ಣನ್ನು ಕಾಪಾಡಿಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಚೇತನ ಪಾಟೀಲ ಹೇಳಿದರು.

ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಅಬ್ಬಿಗೇರಿ ಗ್ರಾಮದಲ್ಲಿ ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆ ಅಡಿ ಹಮ್ಮಿಕೊಂಡಿದ್ದ ಭೂ ಸಂಪನ್ಮೂಲ ಸಮೀಕ್ಷೆ ಸಾಕ್ಷರತಾ ಅಭಿಯಾನ ಉದ್ಘಾಟಿಸಿ ಮಾತನಾಡಿದರು.

ಮಣ್ಣು ಬದುಕಿನ ಶ್ರೇಷ್ಠವಾಗಿದೆ. ಇಂದಿನ ಫಲವತ್ತಾದ ಮಣ್ಣು ಎಷ್ಟೋ ವರ್ಷಗಳಿಂದ ರೂಪುಗೊಂಡಿದ್ದು ಅಂತಹ ಮಣ್ಣನ್ನು ಪರೀಕ್ಷಿಸಿ ಎಲ್‌ಆರ್‌ಐ ಕಾರ್ಡ್ ತಯಾರಿಸಲಾಗಿದೆ. ರೈತರು ತಮ್ಮ ಹೊಲದ ಯಾವ ಪೋಷಕಾಂಶ ಎಷ್ಟು ಪ್ರಮಾಣದಲ್ಲಿದೆ, ಸೂಕ್ತವಾದ ಬೆಳೆ ಯಾವುದು ಎಂದು ಕಾರ್ಡಿನ ಮೂಲಕ ತಿಳಿಯಬಹುದು.

ಕಡಿಮೆ ಇರುವ ಪೋಷಕಾಂಶ ಜಾಸ್ತಿ ಮಾಡಿ ರೈತರು ಗೊಬ್ಬರ ಉಪಯೋಗಿಸಬೇಕು. ಮುಖ್ಯವಾಗಿ ಸಾವಯುವ ಗೊಬ್ಬರಗಳನ್ನೇ ಉಪಯೋಗಿಸಿ ಮಣ್ಣನ್ನು ಕಾಪಾಡಬೇಕು ಎಂದರು. ಉಪ ಕೃಷಿ ನಿರ್ದೇಶಕ ಪಾಲಾಕ್ಷಗೌಡ, ಸಹಾಯಕ ಕೃಷಿ ನಿರ್ದೇಶಕ ಶೌಕತ್ ಅಲಿ ತಹಶೀಲ್ದಾರ್ ಮಾತನಾಡಿದರು. ಕೃಷಿ ಅಧಿಕಾರಿ ಬಸವರಾಜ ಗದಗಿನ ಸ್ವಾಗತಿಸಿದರು. ಅನ್ನಪೂರ್ಣ ವಂದಿಸಿದರು. ವಿಜಯಲಕ್ಷ್ಮೀ ಜೋಗಿ ನಿರೂಪಿಸಿದರು.

ಅರ್ಜಿ ಆಹ್ವಾನ

ಗದಗ: ಜಿಲೆಯ ದೇವದಾಸಿ ಪುನರ್ವಸತಿ ಯೋಜನೆಯ ಯಡಿ ಜಿಲ್ಲಾ ಘಟಕದ ಕಚೇರಿಗಳಲ್ಲಿ ಖಾಲಿರುವ ವಿವಿಧ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಯೋಜನಾಧಿಕಾರಿ ಹುದ್ದೆಗೆ MSW/ MA in sociology, MA, MSc.in Psychology ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಯೋಜನಾ ಅನುಷ್ಠಾನಾಧಿಕಾರಿ ಹುದ್ದೆಗೆ BSW/BA in sociology/MA.MSc in Psycholigy ಹಾಗೂ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಕಚೇರಿ ಸಹಾಯಕರಿಗೆ 7ನೇ ತರಗತಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳು ಮಾಹಿತಿ ಮತ್ತು ಮೂಲ ದಾಖಲೆಗಳ ನಕಲು ಪ್ರತಿಯೊಂದಿಗೆ ಜೂ.7 ರಿಂದ 22ರ ಸಂಜೆ 5.30 ರೊಳಗಾಗಿ ನಿಗದಿತ ನಮೂನೆಯಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಪರ್ಕಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.



ನರಗುಂದ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಭಾನುವಾರ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಗನಗೌಡ ಪಾಟೀಲ, ಎಸ್.ಬಿ. ಪಾಟೀಲ, ಈಶ್ವರ ಮಾದಿನೂರ, ಸುಭಾಸರಡ್ಡಿ ನೀಲರಡ್ಡಿ, ದೇವರಡ್ಡಿ ವೆಂಕರಡ್ಡಿಯವರ, ದೊಡ್ಡಲಿಂಗಪ್ಪನವರ, ಶಂಕರಗೌಡ ಯಲ್ಲಪ್ಪಗೌಡ್ರ ಹಾಗೂ ತಹಶೀಲ್ದಾರ್ ಕಾರ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಪೇಪರ್ ಲೆಸ್ ನೋಂದಣಿ ಕೈಬಿಡಲು ಆಗ್ರಹ



ಶಿರಹಟ್ಟಿ: ರಾಜ್ಯ ಸರ್ಕಾರ ಕಾವೇರಿ ತಂತ್ರಾಂಶದ ಮೂಲಕ ಪೇಪರ್ ಲೆಸ್ ಡಿಜಿಟಲ್ ನೋಂದಣಿ ಕಾರ್ಯ ಆರಂಭಿಸುತ್ತಿದ್ದು, ಇದು ದಸ್ತು ಬರಹಗಾರರ ಉದ್ಯೋಗಕ್ಕೆ ಮರಣ ಶಾಸನವಾಗಲಿದೆ ಮತ್ತು ಅನಕ್ಷರಸ್ಥ ನಾಗರಿಕರಿಗೆ ತೀವ್ರ ಸಮಸ್ಯೆ ಉಂಟಾಗುತ್ತದೆ. ಹೀಗಾಗಿ ಪೇಪರ್ ಲೆಸ್ ನೋಂದಣಿ ಕಾಯ್ದೆಯನ್ನು ಸರ್ಕಾರ ಕೈಬಿಡಬೇಕು ಎಂದು ಶಿರಹಟ್ಟಿ ತಾಲೂಕು ದಸ್ತು ಬರಹಗಾರರ ಸಂಘದ ಅಧ್ಯಕ್ಷ ಅಶೋಕ ಪರಸಪ್ಪ ಹುಬ್ಬಳ್ಳಿ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೋಂದಣಿ ದಾಖಲಾತಿಗಳು ಡಿಜಿ ಲಾಕರ್‌ನಲ್ಲಿ ಸೇವ ಆಗುವುದರಿಂದ ಆಸ್ತಿ ಖರೀದಿದಾರರಿಗೆ ನಿಖರ ದಾಖಲೆಗಳು ಸಿಗುವುದಿಲ್ಲ. ಪೇಪರ್ ಲೆಸ್ ಮಾಡುವ ಮೂಲಕ ಭೂ ಮಾಫಿಯಾಕ್ಕೆ ಅನುಕೂಲ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಪೇಪರ್ ಲೆಸ್ ನೋಂದಣಿ ಕಾರ್ಯದಿಂದ ಯಾರ ಆಸ್ತಿ, ಯಾರು ಖರೀದಿ ಮಾಡಿದ್ದಾರೆ? ಯಾರು ಮಾರಾಟ ಮಾಡಿದ್ದಾರೆ ಎಂಬುದೇ ಗೊತ್ತಾಗುವುದಿಲ್ಲ. ಅನಕ್ಷರಸ್ಥರಿಗೆ ತೀವ್ರ ತೊಂದರೆ ಆಗಲಿದೆ. ಕೂಡಲೇ ಸರ್ಕಾರ ಪೇಪರ್ ಲೆಸ್ ಜಾರಿಯನ್ನು ತಡೆಹಿಡಿಯಬೇಕು ಎಂದು ಆಗ್ರಹಿಸಿದರು. ಪೇಪರ್ ಲೆಸ್‌ನಿಂದ ಆಸ್ತಿ ಮಾರುವವರು, ಆಸ್ತಿ ಖರೀದಿದಾರರು, ಅಧಿಕಾರಿಗಳ ಸಹಿ ಕೂಡ ಬೇಕಾಗಿಲ್ಲ, ಹೀಗಾಗಿ ಆಸ್ತಿ ವಿಚಾರದಲ್ಲಿ ಮುಂದೆ ಬಹುದೊಡ್ಡ ಅನಾಹುತಗಳು ಆಗುವ ಸಾಧ್ಯತೆಗಳಿವೆ. ಡಿಜಿಟಲ್ ನೋಂದಣಿ ಕಾರ್ಯ ಜಾರಿ ಮಾಡಿದಲ್ಲಿ ರಾಜ್ಯದಲ್ಲಿರುವ ಲಕ್ಷಾಂತರ ದಸ್ತ ಬರಹಗಾರರು ಕೆಲಸ ಕಳೆದುಕೊಳ್ಳುತ್ತಾರೆ. ಆದ್ದರಿಂದ ಸರ್ಕಾರ ತಕ್ಷಣ ಈ ಕ್ರಮವನ್ನು ಕೈಬಿಡಬೇಕು ಎಂದರು.



ಮುಂಡರಗಿ: ಹೇಮರಡ್ಡಿ ಮಲ್ಲಮ್ಮ ವೃತ್ತದಲ್ಲಿರುವ ಹೇಮರಡ್ಡಿ ಮಲ್ಲಮ್ಮ ಮೂರ್ತಿಗೆ ವಿಶೇಷಪೂಜೆ ಸಲ್ಲಿಸುವುದರೊಂದಿಗೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಈಶ್ವರಪ್ಪ ಹಂಚಿನಾಳ, ರಮೇಶ ಭೂಮರಡ್ಡಿ, ಕರಬಸಪ್ಪ ಹಂಚಿನಾಳ, ಪಾಲಾಕ್ಷಿ ಗಣದಿನ್ನಿ, ಹೇಮಂತಗೌಡ ಪಾಟೀಲ, ಪವನ ಮೇಟಿ, ಕುಮಾರಸ್ವಾಮಿ ಹಿರೇಮಠ, ರಾಜು ಡಾವಣಗೇರಿ, ಮಂಜುನಾಥ ಹಂಚಿನಾಳ, ರಾಜು ಹಂಚಿನಾಳ, ಎಸ್.ಎಸ್.ಗಡ್ಡದ, ಸೊಲಬಣ್ಣ ಜೋಬಳಿ ಮುಂತಾದವರಿದ್ದರು.

1,200 ಹೆ.ನಲ್ಲಿ ಭತ್ತ ಬೆಳೆದ ಅನ್ನದಾತ | ಮಾಡಿದ ಖರ್ಚೂ ಬಾರದ ಸ್ಥಿತಿ

ಭತ್ತದ ಇಳುವರಿ ತೀರಾ ಕಡಿಮೆ!

ಸಿ.ಎಸ್.ಅರಸನಾಳ

ದಿಗಂತ ವಿಶೇಷ

ಮುಂಡರಗಿ: ತಾಲೂಕಿನ ತುಂಗಭದ್ರಾ ನದಿ ಭಾಗದಲ್ಲಿರುವಂತ ಕೊರ್ಲಹಳ್ಳಿ, ಗಂಗಾಪೂರ, ಶೀರನಹಳ್ಳಿ, ಶಿಂಗಟಾಲೂರು, ಹಮ್ಮಿಗಿ, ಬಿದರಹಳ್ಳಿ ಇನ್ನಿತರ ಗ್ರಾಮಗಳು ಸೇರಿದಂತೆ ತಾಲೂಕಿನಲ್ಲಿ 1,200 ಹೆಕ್ಟರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಆದರೆ ಈ ವರ್ಷ ಅತಿ ಹೆಚ್ಚು ಬಿಸಿಲು, ವಾತಾವರಣದಲ್ಲಿ ಬದಲಾವಣೆಯಿಂದಾಗಿ ಭತ್ತದ ಇಳುವರಿಯು ತೀರ ಕಡಿಮೆಯಾಗಿದ್ದು, ಮಾಡಿದ ಖರ್ಚು ಬಾರದ ಸ್ಥಿತಿಯು ಎದುರಾಗುತ್ತಿದೆ. ಇದರಿಂದಾಗಿ ಭತ್ತ ಬೆಳೆದ ರೈತರು ತೊಂದರೆ ಅನುಭವಿಸುವಂತಾಗಿದೆ. ಬೀಜ, ಗೊಬ್ಬರ, ಔಷಧಿ, ಕೂಲಿ ಸೇರಿದಂತೆ ಪ್ರತಿ ಎಕರೆಗೆ ಭತ್ತ ಬೆಳೆಯುವುದಕ್ಕೆ ಸುಮಾರು 40ಸಾವಿರ ರೂ.ಗೂ ಹೆಚ್ಚು ಖರ್ಚು ಮಾಡಲಾಗುತ್ತಿದೆ. ಈಗಾಗಲೇ ಹಲವು ಭಾಗದಲ್ಲಿ ಭತ್ತ ಕಟಾವು ಮಾಡಿ ಮಾರಾಟ ಮಾಡುತ್ತಿದ್ದಾರೆ. ಕೆಲವೆಡೆ ಭತ್ತದ ರಾಶಿ ಮಾಡುತ್ತಿದ್ದು, ಇನ್ನೂ ಕೆಲವು ಕಡೆ ಕಟಾವು ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಹಗಲಲ್ಲಿ ಸಿಗುವ 7 ತಾಸು ತ್ರಿಪೇಸ್ ವಿದ್ಯುತ್‌ನಲ್ಲಿ ಪಂಪ್‌ಸೆಟ್ ಮೂಲಕ ನೀರು ಹಾಯಿಸಿಕೊಳ್ಳಬೇಕು. 7 ತಾಸಿನಲ್ಲಿ 1ಎಕರೆಗೆ ಮಾತ್ರ ನೀರು ಹರಿಸಲು ಅವಕಾಶ ಸಿಗುತ್ತಿತ್ತು. ಹೆಚ್ಚು ಬಿಸಿಲಿದ್ದಿದ್ದರಿಂದ ಬೆಳೆಗೆ ತೇವಾಂಶ ಕೊರತೆಯಾಗಿದೆ. ವಾತಾವರಣದಲ್ಲಿನ ಬದಲಾವಣೆಯಿಂದ ಭತ್ತದಲ್ಲಿ ಬಿಳಿತೆನೆ ಕಾಣಿಸಿ ಕಾಳು ಜೊಳ್ಳಾಗಿದ್ದರಿಂದಲೂ ಇಳುವರಿ ಕಡಿಮೆಯಾಗುತ್ತಿದೆ ಎನ್ನುತ್ತಾರೆ ರೈತರು.

- ಪ್ರತಿವರ್ಷ ಪ್ರತಿ ಎಕರೆಗೆ 75 ಕೆಜಿ ತೂಕದ ಕನಿಷ್ಠ 40ರಿಂದ 45 ಚೀಲ ಇಳುವರಿ ಬರುತ್ತಿತ್ತು ಆದರೆ ಪ್ರಸ್ತುತ 26ರಿಂದ 30ಚೀಲಕ್ಕೆ ಕುಸಿದಿದೆ
- ಎರಡು ವರ್ಷಗಳ ಹಿಂದೆ ಇದ್ದ ದರಕ್ಕಿಂತ ಪ್ರಸ್ತುತ ಕಡಿಮೆ
- ಎರಡು ವರ್ಷದಿಂದೆ 75 ಕೆಜಿ ತೂಕದ ಚೀಲಕ್ಕೆ 2,200ರೂ.ಗೆ ಮಾರಾಟ
- ಕಳೆದ ವರ್ಷ 1,500ರೂ.ನಿಂದ 1,550ರೂ.ವರೆಗೆ ಮಾರಾಟ
- ಈಗ ದರದಲ್ಲಿ ಕಳೆದ ವರ್ಷಕ್ಕಿಂತ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದು 1820-1830 ರೂ.ಗೆ ಮಾರಾಟ

ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಎಪಿಎಂಸಿಯಲ್ಲಿ ಭತ್ತ ಖರೀದಿದಾರರ ಕರೆಯಿಸಿ ಟೆಂಡರ್ ಮೂಲಕ ಭತ್ತ ಖರೀದಿ ನಡೆಸುವುದಕ್ಕೆ ಕ್ರಮ ವಹಿಸಲಾಗುವುದು. ವೆಬ್ ಸೈಟ್‌ನಲ್ಲಿ ಬೆಳೆಗಳ ಅಂದಿನ ದರದ ಮಾಹಿತಿ ಲಭ್ಯವಾಗುತ್ತದೆ. ರೈತರು ಖರೀದಿದಾರರು ಹೇಳುವ ದರಕ್ಕೆ ಸರಿ ಅನಿಸಿದರೆ ಮಾರಾಟ ಮಾಡಬಹುದು.
■ ರಾಘವೇಂದ್ರ ಜಿ., ಎಪಿಎಂಸಿ ಕಾರ್ಯದರ್ಶಿ, ಮುಂಡರಗಿ



ಭತ್ತ ಖರೀದಿದಾರರೇ ಇಲ್ಲ

ತಾಲೂಕಿನ ಭತ್ತ ಖರೀದಿಗೆ ಕೊಪ್ಪಳ, ಹೂವಿನಹಡಗಲಿ, ದಾವಣಗೇರಿ, ಮಲೆಬೆನ್ನೂರು, ಗಂಗಾವತಿ, ಸಿಂಧನೂರು ಮತ್ತಿತರ ಕಡೆಗಳಿಂದ ಖರೀದಿದಾರರು ಬರುತ್ತಾರೆ. ಅವರು ನಿಗದಿ ಪಡಿಸುವಂತ ದರದಲ್ಲಿ ರೈತರು ಭತ್ತ ಮಾರಾಟ ಮಾಡಬೇಕು. ಇಲ್ಲದಿದ್ದರೆ ರೈತರೇ ತಮಗೆ ಉತ್ತಮ ದರ ಸಿಗುವಂತ ಬೇರೆ ಕಡೆಗಳಿಗೆ ತೆರಳಿ ಭತ್ತ ಮಾರಾಟ ಮಾಡಬೇಕೆಂದರೆ ಸಾಗಾಣಿಕೆ ವೆಚ್ಚವನ್ನು ಸಹ ಭರಿಸಬೇಕಾಗುತ್ತದೆ. ಈ ಭಾಗದಲ್ಲಿ ಭತ್ತ ಖರೀದಿದಾರರೇ ಇಲ್ಲ. ಹೀಗಾಗಿ ಭತ್ತ ಬೆಳೆದ ರೈತರು ಬೇರೆ-ಬೇರೆ ಜಿಲ್ಲೆಯಿಂದ ಬರುವಂತ ಭತ್ತದ ಖರೀದಿದಾರರ ಮೇಲೆ ಹೆಚ್ಚು ಅವಲಂಬಿತವಾಗುವ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ.

ಕಡಿಮೆಯಾದ ನೀರು

ಎರಡು ವರ್ಷಗಳ ಹಿಂದೆ 75 ಕೆಜಿ ತೂಕದ ಚೀಲಕ್ಕೆ 2,000ರೂ.ನಿಂದ 2,200ರೂ.ಗೆ ಮಾರಾಟ ಮಾಡಲಾಗಿತ್ತು. ಆದರೆ ಈಗ ಆ ದರ ದೊರೆಯುತ್ತಿಲ್ಲ. ಪ್ರಸ್ತುತ ದಿನದಲ್ಲಿ ಬಿಸಿಲು ಹೆಚ್ಚಾಗಿ ಭತ್ತದ ಬೆಳೆಗೆ ನೀರು ಕಡಿಮೆಯಾಯಿತು. ಬಿಳಿತೆನೆಯಾಗಿ ಕಾಳು ಜೊಳ್ಳಾಗಿ ಇಳುವರಿ ಕಡಿಮೆಯಾಗಿದೆ. ಇದೀಗ ಮಾಡಿದ ಖರ್ಚು ಸಿಗದಂತಾಗುತ್ತಿದೆ. ಹೀಗಾಗಿ ಖರೀದಿದಾರರು ಭತ್ತವನ್ನು ಹೆಚ್ಚಿನ ದರಕ್ಕೆ ಖರೀದಿಸಿದರೆ ರೈತರಿಗೆ ಅನುಕೂಲವಾಗಲಿದೆ ಎನ್ನುತ್ತಿದ್ದಾರೆ ಭತ್ತ ಬೆಳೆಯುವ ರೈತರಾದ ಬಸಪ್ಪ ಪೂಜಾರ ಹಾಗೂ ಚಂದ್ರು ಮಜ್ಜಿಗಿ.

ವೀರಶೈವ-ಲಿಂಗಾಯತ ಒಗ್ಗೂಡಿಸುವೆ: ಚವಡಿ

ಗಜೇಂದ್ರಗಡ: ವೀರಶೈವ ಮತ್ತು ಲಿಂಗಾಯತ ಸಮುದಾಯಗಳುಬೇರೆ ಬೇರೆಯಲ್ಲ. ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳ ಪಂಗಡಗಳನ್ನು ಒಗೂಡಿಸುವುದು ಅತ್ಯಂತ ಮುಖ್ಯವಾಗಿದೆ. ಆದಕ್ಕಾಗಿ ನಾನು ಶ್ರಮಿಸುತ್ತೇನೆ ಎಂದು ನೂತನ ಅಧ್ಯಕ್ಷ ಪ್ರಭು ಚವಡಿ ಹೇಳಿದರು.

ಪಟ್ಟಣದ ಗವಿಮಠದ ಹತ್ತಿರವಿರುವ ವೀರಶೈವ ಲಿಂಗಾಯತ ಸಮಾಜದ ಕಚೇರಿಯಲ್ಲಿ ನಡೆದ ಚುನವನಾ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಅವರು ಮಾತನಾಡಿದರು. ಕರ್ನಾಟಕದ ಅಭಿವೃದ್ಧಿಗಾಗಿ ವೀರಶೈವ ಲಿಂಗಾಯತ ಸಮಾಜ ಮತ್ತು ಮಹಾಸಭಾದ ಕೊಡುಗೆ ಬಹಳಷ್ಟಿದೆ. ಲಿಂಗಾಯತ ಸಮುದಾಯದಲ್ಲಿಯೂ ಸುಮಾರು 50% ಬಡವರಿದ್ದಾರೆ. 30% ರಷ್ಟು ಹೆಚ್ಚು ಜನರು ಹಿಂದುಳಿದಿದ್ದಾರೆ. ಸಾಮಾಜಿಕ ನ್ಯಾಯ ಎಲ್ಲರಿಗೂ ದೊರಕಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದರು.

ಅಧ್ಯಕ್ಷ ಸ್ಥಾನಕ್ಕಾಗಿ ಶಿವಕುಮಾರ ಕೋರಧಾನ್ಯಮಠ, ಸುರೇಶ ಜಾಳಿಹಾಳ, ಪ್ರಭು ಚವಡಿ, ಅಮರೇಶ ಬಳಿಗೇರ ಸೇರಿ ಒಟ್ಟು ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ನಾಲ್ಕು ಜನ ಅಭ್ಯರ್ಥಿಗಳು ಸೇರಿ ಒಮ್ಮತಕ್ಕೆ ಬಂದು ಪ್ರಭು ಚವಡಿ ಅವರನ್ನು ಆಯ್ಕೆ ಮಾಡಲಾಯಿತು. ನೂನವಾಗಿ ಆಯ್ಕೆಯಾದ ಅಧ್ಯಕ್ಷ ಪ್ರಭು ಚವಡಿ ಅವರಿಗೆ ಸನ್ಮಾನಿಸಿ ಮಾತನಾಡಿದ ಡಾ.ಬಿ.ವಿ.ಕಂಬಳ್ಯಾಳ, ನೂತನ ಅಧ್ಯಕ್ಷರಾಗಿರುವ ಪ್ರಭು ಚವಡಿ ಅವರು ಹಲವಾರು ವರ್ಷಗಳಿಂದ ನಾನಾ ಹುದ್ದೆಗಳನ್ನು ಅಲಂಕರಿಸಿ ಸಮಾಜ ಕ್ಕಾಗಿ ಅವರು ದುಡಿದಿದ್ದಾರೆ ಹೀಗಾಗಿ ಮಹಾಸಭಾದ ಎಲ್ಲ ಸದಸ್ಯರು ಸೂಕ್ತ ವ್ಯಕ್ತಿಯನ್ನು ಅವಿರೋದವಾಗಿ ಆಯ್ಕೆ ಮಾಡಿದ್ದಾರೆ ಎಂದರು. ಅವರಿಗೆ ಅಖಿಲ ಭಾರತವೀರಶೈವಲಿಂಗಾಯತಮಹಾಸಭಾ ರಾಜ್ಯಾಧ್ಯಕ್ಷ ಡಾ.ಶಂಕರ ಬಿದರಿ,ಮಾಜಿ ಸಚಿವ ಕಳಕಪ್ಪ ಬಂಡಿ ಸನ್ಮಾನಿಸಿದರು. ಈ ವೇಳೆ ಡಾ.ಬಿ.ವಿ.ಕಂಬಳ್ಯಾಳ, ಬಿ.ಎಂ. ಸಜ್ಜನರ, ಟಿ.ಎಸ್.ರಾಜೂರ, ಚಂಬಣ್ಣ ಚವಡಿ, ಗುರುಸಿದ್ದಯ್ಯ ಸೊಗಿರಯ್ಯನಮಠ, ಶರಣಪ್ಪ ರೇವಡಿ, ಸುರೇಶ ಜಾಲಿಹಾಳ, ಬಸವರಾಜ ಶೀಲವಂತರ, ಸುಭಾಸ ಮ್ಯಾಗೇರಿ, ಮುತ್ತಣ್ಣ ಮ್ಯಾಗೇರಿ, ಬಸವರಾಜ ಚನ್ನಿ, ಅಮರಯ್ಯ ಗೌರಿಮಠ, ಶಿವಕುಮಾರ ಶಶಿಮಠ, ಹುಚ್ಚಪ್ಪ ಹಾವೇರಿ, ವಿಶ್ವನಾಥ ಕುಷ್ಟಗಿ, ಮಂಜುಳಾ ರೇವಡಿ, ಸುಮಂಗಲಾ ರೇವಡಿ, ಮಲ್ಲಿಕಾರ್ಜುನ ಕುಂದಗೋಳ, ಬೀಮಣ್ಣ ಮ್ಯಾಗೇರಿ ಸೇರಿದಂತೆ ಇತರರಿದ್ದರು.



ರಸಗೊಬ್ಬರ ನೀಡುವಾಗ ನಿರ್ಬಂಧ ಕೈಬಿಡಲು ಒತ್ತಾಯ

ಲಕ್ಷ್ಮೇಶ್ವರ: ಪಟ್ಟಣದ ಕೆಂಚಲಾಪುರ ಓಣಿಯ ಮಾಗಡಿ ಅವರ ಇಂಡಸ್ಟ್ರೀಜ್‌ನಲ್ಲಿ ರೈತರ ವಿವಿಧ ಬೇಡಿಕೆ, ಸಮಸ್ಯೆಗಳ ಕುರಿತು ಚರ್ಚಿಸಲು ಶುಕ್ರವಾರ ಕರೆಯಲಾಗಿದ್ದ ಸಮಾಲೋಚನ ಸಭೆಯಲ್ಲಿ ರೈತ ಸಂಘಟನೆಗಳು, ರೈತ ಮುಖಂಡರು, ಹೋರಾಟಗಾರು ಪಾಲ್ಗೊಂಡಿದ್ದರು. ವಿವಿಧ ವಿಷಯಗಳ ಕುರಿತು ಚರ್ಚೆಗಳನ್ನು ನಡೆಸಲಾಯಿತು.

ಹೋರಾಟಗಾರ ಹಾಗೂ ವಕೀಲ ರವಿಕಾಂತ ಅಂಗಡಿ ಮತ್ತು ಸಮಗ್ರ ರೈತಪರ ಹೋರಾಟ ಸಮಿತಿ ಅಧ್ಯಕ್ಷ ಮಂಜುನಾಥ ಮಾಗಡಿ ಮಾತನಾಡಿ, ರೈತರಿಗೆ ರಸಗೊಬ್ಬರ ನೀಡುವ ವಿಚಾರದಲ್ಲಿ ಎಫ್ ಐಡಿ ಆದ ರೈತರಿಗೆ ಒಂದು ಚೀಲ ಗೊಬ್ಬರ ಎಂಬ ನಿರ್ಬಂಧ ವಿಧಿಸಿರುವುದನ್ನು ಕೈಬಿಡಬೇಕು. ಮೊದಲಿನಂತೆ ರೈತರಿಗೆ ಹೆಬ್ಬೆಟ್ಟು ಕೊಡುವ ಪದ್ಧತಿ ಕೈಬಿಟ್ಟು, ಓಟಿಪಿ ಮೂಲಕ ಬೀಜ, ರಸಗೊಬ್ಬರ ವಿತರಣೆ ಮಾಡಬೇಕು. ಅಲ್ಲದೇ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯವರು ರೈತರಿಗೆ ಕೆಲವೇ ಗೊಬ್ಬರಗಳ ಮಾಹಿತಿ ನೀಡುತ್ತಾರೆ. ಇದು ಯಾಕೆ ಎಂದು ಪ್ರಶ್ನಿಸಿದ ಅವರು, ಎಲ್ಲ ರಸಗೊಬ್ಬರಗಳ ಬಗ್ಗೆಯೂ ರೈತರಿಗೆ ಮಾಹಿತಿ ನೀಡುವಂತಾಗಬೇಕು ಎಂದು ಆಗ್ರಹಿಸಿದರು.

ರೈತರಿಗೆ ಸಿಗುವ ಸೌಲಭ್ಯಗಳು ನೇರವಾಗಿ ರೈತರಿಗೆ ಮುಟ್ಟಿಸುವ ಕೆಲಸ ಆಗಬೇಕು. ಶಿರಹಟ್ಟಿ ಮತಕ್ಷೇತ್ರದಲ್ಲಿ ಜಿಪಿಎಸ್ ಮಾಡಿದ್ದು ಮಿಸ್ ಮ್ಯಾಚ್ ಆಗಿ ಸಾವಿರಾರು ರೈತರಿಗೆ ವಿಮಾ ಸಿಗುತ್ತಿಲ್ಲ, ಮಿಸ್ ಮ್ಯಾಚ್ ಮಾಡಿದ ವ್ಯಕ್ತಗಳ ಮೇಲೆ ಕ್ರಮ ಕೈಗೊಳ್ಳಿ ಎಂದು ಅಗ್ರಹಿಸಿದರು.

ಕೃಷಿಕ ಸಮಾಜ (ನವದೆಹಲಿ) ತಾಲೂಕಾಧ್ಯಕ್ಷ ಚನ್ನಪ್ಪ ಷಣ್ಮುಖಿ ಮತ್ತು ಪಕ್ಷಾತೀತ ರೈತಪರ ಹೋರಾಟ ವೇದಿಕೆ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ ಮಾತನಾಡಿ, ಬೆಳೆ ವಿಮೆ ರೈತರಿಗೆ ಬಂದಿಲ್ಲ, ಆದಷ್ಟು ಬೇಗ ಬೆಳೆ ವಿಮೆ ಬಿಡುಗಡೆ ಮಾಡಬೇಕು. ರೈತರ ಸಮಸ್ಯೆ ಬಂದಾಗ ಪಕ್ಷಾತೀತವಾಗಿ ಹೋರಾಟ ಮಾಡಬೇಕಾಗುತ್ತದೆ. ರೈತರ ಹಕ್ಕುಗಳಿಗಾಗಿ ಹೋರಾಟ ಅನಿವಾರ್ಯ ಎಂದರು.

ಬಸವರಾಜ ಹಿರೇಮನಿ, ನೀಲಪ್ಪ ಶೇರಸೂರಿ, ಹೊನ್ನಪ್ಪವಡ್ಡರಟಾಕಪ್ಪಸಾತಪುತೆಮಾತನಾಡಿದರು. ನಾಮದೇವ ಮಾಂಡ್ರೆ, ಸಂಜೀವ ಹುಡೇದ, ಬಸವರಾಜ ಜಾಲಗಾರ, ಚಂದ್ರು ಮಾಗಡಿ, ಮಂಜುನಾಥ ಮುಳಗುಂದ, ಶಂಕರ ಬ್ಯಾಡಗಿ, ವೀರಣ್ಣ ಕಟಗಿ, ಪವನ ಬಂಕಾಪುರ, ಮುತ್ತಣ್ಣ ನೀರಲಗಿ, ಮಲ್ಲಿಕಾರ್ಜುನ ನೀರಾಲೋಟಿ, ರಾಜು ಗುಡಗೇರಿ, ಶಿವಪುತ್ರಪ್ಪ ತಾರಿಕೊಪ್ಪ, ಪದ್ಮನಗೌಡ ಪಾಟೀಲ, ಫಕ್ಕಿರಪ್ಪ ಕುಸಲಾಪುರ, ನಾಗನಗೌಡ ಪಾಟೀಲ್, ಮಹಾಂತೇಶ ಉಮಚಗಿ, ಅನೇಕರು ಇದ್ದರು. ರೈತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಬೇಡಿಕೆಗಳ ಈಡೇರಿಕೆಗಾಗಿ ರೈತ ಹುತಾತ್ಮರ ಗ್ರಾಮವಾದ ಗೋವನಾಳದಿಂದ ಶಿಗ್ಲಿ ಮೂಲಕ ಹಾಯ್ದು ಲಕ್ಷ್ಮೇಶ್ವರದವರೆಗೂ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು ಎಂದು ರೈತ ಮುಖಂಡರು ಎಚ್ಚರಿಸಿದರು.



ಪಂಚಪೀಠಾಧಿಪತಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಅದ್ಧೂರಿ

ಗಜೇಂದ್ರಗಡ: ತಾಲೂಕಿನ ಸೂಡಿ ಗ್ರಾಮದಲ್ಲಿ ವೀರಶೈವ ಧರ್ಮ ಪೀಠಗಳ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವು ನೂರಾರು ಭಕ್ತರ ಹರ್ಷೋದ್ಗಾರದ ಮಧ್ಯ ಅದ್ಧೂರಿಯಾಗಿ ಪಂಚಪೀಠಾಧಿಪತಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಭಾನುವಾರ ನಡೆಯಿತು.

ಸೂಡಿಯ ಜುಕ್ತಿ ಹಿರೇಮಠದ 50ನೇ ವರ್ಷದ ರಥೋತ್ಸವದ ನಿಮಿತ್ತ ನೂತನ ರಥದ ಲೋಕಾರ್ಪಣೆ ಅಂಗವಾಗಿ ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಯಿನಿ ಸದ್ಧರ್ಮ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಸ್ವಾಮೀಜಿ, ವಾರಣಾಸಿ ಪೀಠದ ಚಂದ್ರಶೇಖರ ಸ್ವಾಮೀಜಿ, ವಾರಣಾಸಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಸ್ವಾಮೀಜಿ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದಲ್ಲಿ ನಿರ್ಮಿಸಿರುವ ಬೃಹತ್ ಮಾನವ ಧರ್ಮ ಮಂಟಪದಿಂದ ಪ್ರಾರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿಗಳಲ್ಲಿ ಸಂಚರಿಸಿ ಜುಕ್ತಿ ಹಿರೇಮಠದ ಆವರಣದಲ್ಲಿ ಸಮಾಪ್ತಿಗೊಂಡಿತು. ಬಳಿಕ ಜುಕ್ತಿಹಿರೇಮಠದ ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಹಾಗೂ ಸಿಂದಗಿ ಸಾರಂಗಿ ದೇವರಮಠದ ಪ್ರಭುಸಾರಂಗದೇವ ಸ್ವಾಮೀಜಿ, ಮುಕ್ತಿಮಂದಿರದ ವಿಮಲ ರೇಣುಕ ವೀರಮುಕ್ತಿಮುನಿ ಸ್ವಾಮೀಜಿ, ಮೈಸೂರು-ಬನ್ನಿಕೊಪ್ಪದ ಅರಮನೆ ಜಪದಕಟ್ಟಿಮಠದ ಸುಜ್ಞಾನದೇವ ಸ್ವಾಮೀಜಿ, ಮಸೂತಿ ಜಗದೀಶ್ವರ ಹಿರೇಮಠದ ಪ್ರಭುಕುಮಾರ ಸ್ವಾಮೀಜಿ ಉಪಸ್ಥಿಯಲ್ಲಿ ಜನಜಾಗೃತಿ ಧರ್ಮ ಸಮ್ಮೇಳನ ನಡೆಯಿತು. ಸಾನ್ನಿಧ್ಯವನ್ನು ಜುಕ್ತಿ ಹಿರೇಮಠದ ಡಾ.ಕೊಟ್ಟುರು ಬಸವೇಶ್ವರ ಶಿವಚಾರ್ಯರು ವಹಿಸಿದ್ದರು. ವಿವಿಧ ಕ್ಷೇತ್ರದಲ್ಲಿನ 5 ಜನ ಸಾಧಕರಿಗೆ ಶ್ರೀಮಠದಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಹೇಮರೆಡ್ಡಿ ಮಲ್ಲಮ್ಮನ 604ನೇ ಜಯಂತಿ

ಮುಂಡರಗಿ: ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಅಂಗವಾಗಿ ಸಮಾಜದ ಪ್ರತಿಭಾವಂತ ಮಕ್ಕಳಿಗೆ ಹಾಗೂ ಇತರೆ ಸಮಾಜದ ಸಾಧಕರಿಗೆ ಗುರುತಿಸಿ ಗೌರವಿಸುವ ಕಾರ್ಯ ಮಾಡಲಾಗುತ್ತಿದೆ. ಮುಂದಿನ ವರ್ಷದಿಂದ ಈ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುವುದು ಎಂದು ತಾಲೂಕು ರಡ್ಡಿ ಸಮಾಜದ ಅಧ್ಯಕ್ಷ ಡಾ.ಬಿ.ಎಸ್.ಮೇಟಿ ಹೇಳಿದರು.

ಅವರು ಭಾನುವಾರ ಪಟ್ಟಣದ ಹೆಸರೂರು ರಸ್ತೆಯಲ್ಲಿರುವ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದ ಕಲ್ಯಾಣ ಮಂಟಪದ ನಿಯೋಜಿತ ಕಟ್ಟಡದಲ್ಲಿ ರಡ್ಡಿ ಸಮಾಜ ಶೈಕ್ಷಣಿಕ ಹಾಗೂ ಸಮಾಜ ಸೇವಾ ಟ್ರಸ್ಟ್ ಕಮಿಟಿ ವತಿಯಿಂದ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ 604ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅತಿಥಿ ಉಪನ್ಯಾಸಕರಾಗಿ ಪ್ರೊ.ಎ.ವೈ.ನವಲಗುಂದ ಮಾತನಾಡಿ ಹೇಮರೆಡ್ಡಿ ಮಲ್ಲಮ್ಮ ನುಡಿದಂತೆಯೇ ನಡೆದು ತೋರಿಸಿದ ಸಾಧ್ವಿ, ಮಹಾತ್ಮರು ಕೇವಲ ಪೂಜೆಗೊಳ್ಳುವುದಕ್ಕೆ ಮಾತ್ರ ಸೀಮಿತವಾಗದೇ ನಮಗೆ ಪ್ರೇರಣೆ ನೀಡಲು ಇರಬೇಕು ಎಂದರು.



ಜಿ.ಪಂ. ಮಾಜಿ ಉಪಾಧ್ಯಕ್ಷೆ ಶೋಭಾ ಮೇಟಿ ಮಾತನಾಡಿದರು. ಪ್ರೊ.ಬಿ.ಎಫ್. ಈಟಿ, ಬಸವರಾಜ ನವಲಗುಂದ ಸೇರಿದಂತೆ ಅನೇಕರು ಮಾತನಾಡಿದರು. ಪೊಲೀಸ್ ಇಲಾಖೆಯಲ್ಲಿ ಸಾಧನೆ ಮಾಡಿದ ಜಾಫರ್ ಬಚ್ಚೇರಿ ಹಾಗೂ ವಿರೇಶ ಜೋಳದ ಹಾಗೂ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ಎಂ.ಪಿ.ಶೀರನಹಳ್ಳಿ, ಎಸ್.ಡಿ.ಬಸೇಗೌಡ ಹಾಗೂ ಸೇವಾ ನಿವೃತ್ತಿ ಹೊಂದಿದ ನೌಕರರಿಗೆ ಸನ್ಮಾನಿಸಲಾಯಿತು. ಅಶೋಕ ಶಿದ್ಲಿಂಗ, ಡಿ.ಡಿ.ಮೋರನಾಳ, ಡಾ.ಅನ್ನದಾನಿ ಮೇಟಿ, ಯರಾಶಿ ವಕೀಲರು, ಬಿ.ಎಸ್.ರಡ್ಡಿ, ಬಾಬಣ್ಣ ಚೆನ್ನಳ್ಳಿ, ವೀರಣ್ಣ ಮೇಟಿ, ಮೂಗನೂರ, ರವಿಗೌಡ ಪಾಟೀಲ ಇತರರಿದ್ದರು. ಹನುಮರಡ್ಡಿ ಇಟಗಿ ಸ್ವಾಗತಿಸಿದರು. ಪ್ರೊ. ಎಸ್.ಆರ್.ಬಸಾಪೂರ ಪ್ರಾಸ್ತಾವಿಸಿದರು. ಎಸ್.ಕೆ.ರಾಜೂರ ನಿರೂಪಿಸಿದರು. ವಿಜಯಕುಮಾರ ಬಣಕಾರ ವಂದಿಸಿದರು.

ವಿಶ್ವ ತಾಯಂದಿರ ದಿನಾಚರಣೆ



ನರಗುಂದ: ತಾಯಿ ಎಂಬ ಪದವು ಬಲವಾದ ಭಾವನಾತ್ಮಕ ಪ್ರತಿಕ್ರಿಯೆಯನ್ನು ಹುಟ್ಟುಹಾಕುತ್ತದೆ. ಇದು ಬೇಷರತ್ತಾದ ಪ್ರೀತಿ, ತ್ಯಾಗ ಮತ್ತು ಮುರಿಯಲಾಗದ ಬಂಧವನ್ನು ಸಾಕಾರಗೊಳಿಸುತ್ತದೆ ಎಂದು ಧಾರವಾಡದ ಪವನ ಸಮೂಹ ಸಂಸ್ಥೆಯ ಅಧ್ಯಕ್ಷೆ ರತ್ನಾ ಶಂಕರ ಪಾಟೀಲ ಹೇಳಿದರು.

ಅವರು ಪಟ್ಟಣದ ಶ್ರೀ ಯಡೆಯೂರ ಸಿದ್ಧಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯ ಹಾಗೂ ಎನ್‌ಎಸ್‌ಎಸ್ ಘಟಕದ ನೇತೃತ್ವದಲ್ಲಿ ಹಮ್ಮಿಕೊಂಡ ವಿಶ್ವ ತಾಯಂದಿರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಆರ್.ಬಿ. ಪಾಟೀಲ ಮಾತನಾಡಿ, ಭವದ್ದು, ಭಾವದ್ದು ಎಂತದ್ದೇ ಸಮಸ್ಯೆ ಬಂದರೂ ಮೊದಲು ತಟ್ಟುವುದು ಮಾತೃ ಹೃದಯಕ್ಕೆ. ಬದುಕಿನ ನಾನಾ ಹಂತಗಳುದ್ದಕ್ಕೂ ಇರುವ ಧರ್ಮ ಸಂಕಟಗಳ ನಡುವೆ ತನ್ನ ಬದುಕನ್ನು ನಗುತ್ತಲೇ ಕಳೆಯುವವಳು ತಾಯಿ ಎಂದರು.

ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ತಮ್ಮ ತಾಯಂದಿರ ಬಗ್ಗೆ ಹಾಗೂ ತಾಯಂದಿರು ತಮ್ಮ ಮಕ್ಕಳ ಬಗ್ಗೆ ತಮ್ಮ ಭಾವನೆಗಳನ್ನು ಹೊರ ಹಾಕಿದರು. ತಾಯಿಯ ಕುರಿತ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ನಾಟಕ ಪ್ರದರ್ಶನಗಳು ಜರುಗಿದವು. ವಿದ್ಯಾರ್ಥಿಗಳು ತಮ್ಮ ತಾಯಂದಿರ ಪಾದಪೂಜೆ ಮಾಡಿದರು. ನವೀನ ನಾಯ್ಕರ, ಪುನೀತ ಬೋಗಾರ, ಮಂಜುನಾಥ ಅಸುಂಡಿ, ವಿಕಾಸ ಕಣ್ಣೂರ ಇದ್ದರು. ಶೋಭಾ ಮಸ್ಕಿ ಹಾಗೂ ಪ್ರವೀಣ ಕುಂಬಾರ ಸ್ವಾಗತಿಸಿದರು. ಅನ್ನಪೂರ್ಣ ಕಂಬಾರ ವಂದಿಸಿದರು. ಸುರೇಖಾ ಪೆಟ್ಲೂರ ಮತ್ತು ವಿಜಯಕುಮಾರ ಗಡದೆ ನಿರೂಪಿಸಿದರು.

ಪೂರ್ವನಿಯೋಜಿತವಾಗದೆ ಕಾಮಗಾರಿ ಆರಂಭ ಆರೋಪ: ಗ್ರಾಪಂಗೆ ಮುತ್ತಿಗೆ

ಲಕ್ಷ್ಮೇಶ್ವರ: ತಾಲೂಕಿನ ಸೂರಣಗಿ ಗ್ರಾ.ಪಂ.ನಲ್ಲಿ ವಿಬಿಜಿರಾಮ್‌ಜಿ ಯೋಜನೆ ಕಾಮಗಾರಿ ಪೂರ್ವನಿಯೋಜಿತವಾಗದೆ ಕಾಮಗಾರಿ ಪ್ರಾರಂಭಿಸಲಾಗಿದೆ ಎಂದು ನೂರಾರು ಕೂಲಿಕಾರ್ಮಿಕರು ಗ್ರಾಮ ಪಂಚಾಯತ್‌ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ ಘಟನೆ ಜರುಗಿದೆ.

ಸೂರಣಗಿ ಗ್ರಾಮ ಪಂಚಾಯಿತಿಯಿಂದ ಪ್ರತಿ ವರ್ಷ ವಿಬಿಜಿರಾಮ್‌ಜಿ ಯೋಜನೆ ಗ್ರಾಮದ ಕೂಲಿ ಕಾರ್ಮಿಕರಿಗೆ ನೀಡಬೇಕಾದ ಕೆಲಸ ಕಾಮಗಾರಿಗಳ ಪೂರ್ವ ನಿಯೋಜಿತವಾಗದೆ ಇರುವುದರಿಂದ ಕಾಮಗಾರಿಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ ಎಂದು ಕೂಲಿಕಾರ್ಮಿಕರು ಆರೋಪಿಸಿದರು. ಕೂಲಿಕಾರ್ಮಿಕರ ಫೇಸ್ ಲಾಕ್ ಓಪನ್ ಆಗುತ್ತಿಲ್ಲ ಎನ್ನುವ ನೆಪವೊಡ್ಡಿ ಎಲ್ಲರಿಗೂ ಕೆಲಸ ದೊರೆಯದಂತಾಗಿದೆ. ಅದಕ್ಕಾಗಿ ಗ್ರಾ.ಪಂ. ಪೂರ್ವನಿಯೋಜಿತವಾಗಿ ಕಾಮಗಾರಿ ನಿರ್ಧರಿಸಬೇಕು ಮತ್ತು ಇರುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಿಕೊಳ್ಳಬೇಕು. ಕಳೆದ ವರ್ಷ ಮಳೆ ಆರಂಭವಾದ ದಿನದಿಂದ ಕಾಮಗಾರಿ ಮಾಡಲು ಪ್ರಯತ್ನಿಸಿದ್ದರು. 20 ದಿನ ಕೆಲಸ ಮಾಡಿದರೂ ಸಹ ಕೇವಲ ಕೆಲವೆ ದಿನಗಳ ಅರ್ಧ ಕೂಲಿಯನ್ನು ಮಾತ್ರ ಹಾಕಿ ತಾಂತ್ರಿಕ ದೋಷದ ನೆಪವೊಡ್ಡಿದರು ಎಂದು ಆರೋಪಿದರು. ಇದೀಗ ಪೂರ್ವ ನಿಯೋಜಿತ ಯೋಜನೆ ಮಾಡದೆ ಏಕಾಏಕಿ ಕಾಮಗಾರಿ ಪ್ರಾರಂಭಿಸಿದ್ದು ಸ್ಥಳಕ್ಕೆ ಕೂಲಿ ಕಾರ್ಮಿಕರು ಹೋಗಿ ಕೆಲಸ ಪ್ರಾರಂಭಿಸಿದರು ಮತ್ತು ಮೊದಲ ಎರಡು ದಿನ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ಹೋಗಿ ಜಾಬ್ ಕಾರ್ಡ್ ಕೊಟ್ಟು ಸರಿ ಮಾಡಿಸಿ ಎಲ್ಲಾ ಬಂದರೂ ಅವರಿಗೆ ಎನ್ ಎಂಆರ್ ಹಾಕಲಾರದೆ ಕಾಮಗಾರಿ ನಡೆಯುವ ಸ್ಥಳದಲ್ಲಿ ಫೇಸ್ ಲಾಕ್ ಓಪನ್ ಆಗದೆ ಇರುವದರಿಂದ ಕೆಲವು ಕೂಲಿಕಾರ್ಮಿಕರು ಕೂಲಿಯಿಂದ ವಂಚಿತರಾಗುತ್ತಿದ್ದಾರೆ. ಅದಕ್ಕಾಗಿ ಈ ಕ್ರಮವನ್ನು ಖಂಡಿಸಿ ಎಲ್ಲಾ ಸಮುದಾಯದ ಕೂಲಿ ಕಾರ್ಮಿಕರು ಕೆಲಸವನ್ನು ಬಂದ್ ಮಾಡಿದ್ದಾರೆ ಎಂದು ಕೂಲಿ ಕಾರ್ಮಿಕರು ಆರೋಪಿಸಿದರು.



ನಿರ್ಲಕ್ಷ್ಯ

ಪ್ರತಿವರ್ಷ ಕೂಲಿಕಾರ್ಮಿಕರು ಗ್ರಾ.ಪಂ ಜಾಬ್ ಕಾರ್ಡ್ ಕೊಟ್ಟರು ಸಿಬ್ಬಂದಿ ಎನ್‌ಎಂಆರ್ ಹಾಕುವುದಿಲ್ಲ. ಪೂರ್ವ ನಿಯೋಜಿತ ಕಾಮಗಾರಿ ಹಾಕಿಕೊಳ್ಳದೆ ಎನ್ ಎಂಆರ್ ಹಾಕಿ ಕಳಿಸಬೇಕು. ಕಾರ್ಮಿಕರು ಉದ್ಯೋಗದಿಂದ ವಂಚಿತರಾಗುತ್ತಿದ್ದು, ಇದರಿಂದ ಗುಳೆಹೋಗಲು ಪ್ರಾರಂಭವಾಗುತ್ತದೆ. ಇದು ಅಧಿಕಾರಿಗಳ ನಿರ್ಲಕ್ಷ್ಯವಾಗಿದೆ ಎಂದು ಗ್ರಾ.ಪಂ.ಮಾಜಿ ಸದಸ್ಯ ಪ್ರವೀಣ ಸೂರಣಗಿ ಆರೋಪಿಸಿದರು.

ನಿರ್ಲಕ್ಷ್ಯವಿಲ್ಲ

ವಿಬಿಜಿರಾಮ್‌ಜಿ ಯೋಜನೆಯಲ್ಲಿ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದ್ದು, ಕಾಮಗಾರಿಗಳನ್ನು ಪೂರ್ವನಿಯೋಜಿತವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಗ್ರಾಮದಲ್ಲಿ ಡಂಗೂರ ಸಾರುವ ಮೂಲಕ ಪ್ರಕಟಣೆ ಹೊರಡಿಸಲಾಗಿದೆ. ಕೆಲವು ತಾಂತ್ರಿಕ ಸಮಸ್ಯೆಗಳಿಂದ ಆದರಲ್ಲೂ ಫೇಸ್‌ಲಾಕ್ ಸಮಸ್ಯೆಯಿಂದ ಕೂಲಿಕಾರ್ಮಿಕರ ಅವರ ನೋಂದಣಿ ವಿಳಂಬವಾಗುತ್ತಿದೆ. ಜಿಲ್ಲೆಯ ಹಲವಾರು ಕಡೆಗಳಲ್ಲಿ ತಾಂತ್ರಿಕ ಸಮಸ್ಯೆ ಇದ್ದು, ಸರಿಪಡಿಸಿದ ಕೂಡಲೇ ನಿಯೋಜಿತ ಕಾಮಗಾರಿ ಪ್ರಾರಂಭಿಸುತ್ತೇವೆ. ಇದರಲ್ಲಿ ಸಿಬ್ಬಂದಿ ನಿರ್ಲಕ್ಷ್ಯ ವಹಿಸುವ ಮಾತೇ ಇಲ್ಲ ಎಂದು ಪಿಡಿಒ ಜಿ.ಎಂ.ರೋಣದ ಹೇಳಿದ್ದಾರೆ

ಮಲ್ಲಮನ ವ್ಯಕ್ತಿತ್ವ ಮಾದರಿ: ಪಾಟೀಲ

ಗಜೇಂದ್ರಗಡ: ತಾಲೂಕಿನ ಹೇಮರೆಡ್ಡಿ ಮಲ್ಲಮ್ಮ ಸಮಾಜದಿಂದ ಆಯೋಜಿಸಿದ್ದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ 604ನೇ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಣೆಯನ್ನು ಮಲ್ಲಮ್ಮನ ಭಾವಚಿತ್ರಕ್ಕೆ ಪುಷ್ಪ ಹಾಕುವ ಮೂಲಕ ಆಚರಣೆ ಮಾಡಲಾಯಿತು.

ರೋಣ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಮಿಥುನ ಪಾಟೀಲ ಮಾತನಾಡಿ, ಮಲ್ಲಮ್ಮ ಸಾರಿದ ದಾನ, ಧರ್ಮ ಮತ್ತು ಭಕ್ತಿಯ ಹಾದಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. 14ನೇ ಶತಮಾನದಲ್ಲಿಯೇ ಸಂಸಾರದಲ್ಲಿದ್ದುಕೊಂಡು ಪರಮಾರ್ಥವನ್ನು ಸಾಧಿಸಿ, ಮಹಿಳೆಯರಿಗೆ ಆದರ್ಶಪ್ರಾಯರಾದ ಅವರ ವ್ಯಕ್ತಿತ್ವವು ಇಂದಿನ ಸಮಾಜದಲ್ಲಿನ ಮಾನವರಿಗೆ ಮಾದರಿಯಾಗಿದೆ. ಮಲ್ಲಮ್ಮನವರು ಸಮಾಜ ಸುಧಾರಣೆಯಲ್ಲಿ ಯಾವುದೇ ಜಾತಿ, ಮತ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸಬೇಕು ಹಾಗೂ ದಾಸೋಹ ಮಾಡುವ ಗುಣ ಬೆಳಸಿಕೊಳ್ಳಬೇಕೆಂದ ಸಂದೇಶವನ್ನು ಇಡೀ ಜಗತ್ತಿಗೆ ಸಾರಿ ಹೋಗಿದ್ದಾರೆ. ಮಲ್ಲಮ್ಮರ ಜೀವನ ಕೇವಲ ಪುರಾಣಕ್ಕೆ ಸೀಮಿತವಾಗದೆ, ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಕೊಳ್ಳಬೇಕಾದ ಸಂಸ್ಕಾರದ ಹಾದಿಯಾಗಬೇಕು ಎಂದರು. ವೀರಪ್ಪ ದೇವರೆಡ್ಡಿ, ಪ್ರಸನ್ನ ಪಾಟೀಲ, ಸಂತೋಷ ಹುಚ್ಚರೆಡ್ಡಿ, ಸುರೇಶ ಸಿದ್ದರೆಡ್ಡಿ, ಎಸ್.ಎಸ್. ರೆಡ್ಡೆರ, ಗಂಗಾಧರ ಬಯ್ಯಾಪೂರ, ಬಸಣ್ಣ ಶಿರೋಳ,ದೇವಣ್ಣ ದೇವರೆಡ್ಡಿ, ಶಿಕ್ಷಕ ಜೋಗರೆಡ್ಡಿ ಇದ್ದರು.



ಕಿರುಸುದ್ದಿ

ಬಟ್ಟೆ ಬಿಚ್ಚಿಸಿ ವಿಡಿಯೋ ಮಾಡಿದವರ ಬಂಧನ

ಹಾವೇರಿ: ಇಲ್ಲಿಯ ಕಾಗಿನೆಲೆ ಬ್ರಿಡ್ ಸರ್ವೀಸ್ ರಸ್ತೆಯಲ್ಲಿ ಹೋಗುತ್ತಿದ್ದ ಮೂವರ ಮೇಲೆ ಹಲ್ಲೆ ನಡೆಸಿದ್ದಲ್ಲದೇ ಅವರ ವಿಡಿಯೋ ಮಾಡಿ ಅವರಲ್ಲಿದ್ದ ಹಣ ಕಿತ್ತುಕೊಂಡ ಪ್ರಕರಣ ಇಲ್ಲಿಯ ಶಹರ ಠಾಣೆಯಲ್ಲಿ ದಾಖಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಸವಣೂರು ತಾಲೂಕು ಕಡಕೋಳ ಗ್ರಾಮದ ಸಲೀಂ ರಶೀದ್ ಸಾಬ್, ಆತನ ಸಹೋದರ ಹಾಗೂ ಸ್ನೇಹಿತ ಸೇರಿ ಮೂವರು ಮೇ 6ರಂದು ಬೆಳಗಿನ ಜಾವ ಕಾಗಿನೆಲೆ ಬ್ರಿಡ್ಜ್ ಸರ್ವೀಸ್ ರಸ್ತೆಯಲ್ಲಿ ಹೋಗುತ್ತಿದ್ದ ವೇಳೆ ಆರೋಪಿಗಳಾದ ನಾಗೇಂದ್ರನಮಟ್ಟಿ ನಿವಾಸಿಗಳಾದ ಸುದೀಪ ದೊಡ್ಡಮನಿ ಹಾಗೂ ಸುದೀಪ ಕುಂಚಿಕೊರವರ ಎಂಬವರು ಅಡ್ಡಗಟ್ಟಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ಬಟ್ಟೆ ಬಿಚ್ಚಿಸಿ ಅದನ್ನು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಅಲ್ಲದೇ ಮೂವರ ಬಳಿಯಿದ್ದ 16100 ರರೂ. ಸುಲಿಗೆ ಮಾಡಿದ ಆರೋಪದ ಮೇಲೆ ಶಹರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

ಗಾಂಜಾ ಮಾರಾಟ: ಆರೋಪಿ ಬಂಧನ

ಬೆಳಗಾವಿ: ಬೆಳಗಾವಿ ನಗರದಲ್ಲಿ ಅಕ್ರಮವಾಗಿ ಗಾಂಜಾ ಮಾರುತ್ತಿದ್ದ ಆರೋಪಿಯನ್ನು ಖಡೇಬಜಾರ್ ಪೊಲೀಸರು ದಾಳಿ ಮಾಡಿ ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹರ್ಷಾ ಸುನೀಲ ವರ್ಮಾ(19) ಬಂದಿತ ಆರೋಪಿ. ಬೆಳಗಾವಿ ನಗರದ ಸರ್ದಾರ್ ಗ್ರೌಂಡ್ ಬಳಿಯ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಎಂಬ ಮಾದಕ ವಸ್ತುವನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುವಾಗ ವೇಳೆ ಖಡೇಬಜಾರ ಠಾಣೆಯ ಇನ್ಸಪೆಕ್ಟರ್ ಮಹಾಂತೇಶ ದಾಮನ್ನವರ ಹಾಗೂ ಸಿಬ್ಬಂದಿ ದಾಳಿ ಮಾಡಿ ಆರೋಪಿಯನ್ನು ಬಂಧಿಸಿದ್ದಾರೆ. ಪ್ಲಾಸ್ಟಿಕ್ ಪ್ಯಾಕೆಟ್ ನಲ್ಲಿದ್ದ 272.45 ಗ್ರಾಂ ನಷ್ಟು ಗಾಂಜಾ, ಮೊಬೈಲ್ ವಶಕ್ಕೆ ಪಡೆದಿದ್ದಾರೆ. ಖಡೇಬಜಾರ ಪೊಲೀಸ್ ಠಾಣೆಯಲ್ಲಿ ಎನ್ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ.

ಭೀಮಗಢ ಅಭಯಾರಣ್ಯದಲ್ಲಿ ಬದುಕು ಅಸ್ತವ್ಯಸ್ತ

ಕಾಡಿನಿಂದ ಸ್ಥಳಾಂತರಕ್ಕೆ 450 ಕುಟುಂಬಗಳು ಸಿದ್ಧ!

ಬಾಳಗೌಡ ಪಾಟೀಲ

ದಿಗಂತ ವಿಶೇಷ

ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನ ಭೀಮಗಢ ಅಭಯಾರಣ್ಯದಿಂದ ಸ್ಥಳಾಂತರಕ್ಕೆ ಸಿದ್ಧವಾಗಿರುವ 450 ಕುಟುಂಬಗಳು ಒಂದು ವರ್ಷದಿಂದ ಕಾಯುತ್ತಿವೆ. ಪರಿಹಾರ ಮೊತ್ತ, ಭೂಮಿ ಕೊರತೆ ಮತ್ತು ಕಾನೂನು ತೊಡಕುಗಳಿಂದ ಪ್ರಕ್ರಿಯೆ ವಿಳಂಬವಾಗುತ್ತಿದ್ದು, ಕಾಡಿನ ಕಠಿಣ ಬದುಕು ನಡುವೆ ಜನರ ಅಸಮಾಧಾನ ಹೆಚ್ಚಾಗಿದೆ. ತುರ್ತು ಚಿಕಿತ್ಸೆಯಂತಹ ಮೂಲಭೂತ ಸೌಕರ್ಯಕ್ಕೂ ಕಿಲೋ ಮೀಟರ್‌ಗಟ್ಟಲೆ ಕ್ರಮಿಸಬೇಕಾಗಿರುವ ಪರಿಸ್ಥಿತಿ ಸ್ಥಳೀಯರಲ್ಲಿ ದಿನನಿತ್ಯವೂ ಕಾಡುತ್ತಿದೆ.

ಪಶ್ಚಿಮ ಘಟ್ಟದ ಸೂಕ್ಷ್ಮಪ್ರದೇಶ ಹಾಗೂ ಹುಲಿ–ಆನೆಗಳ ಪ್ರಮುಖ ಸಂಚಾರಿ ಪಥವಾಗಿರುವ ಬೆಳಗಾವಿಯ ಭೀಮಗಢ ವನ್ಯಜೀವಿ ಅಭಯಾರಣ್ಯದಿಂದ ಸ್ವಯಂಪ್ರೇರಿತವಾಗಿ ಹೊರಬರಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವ 450ಕ್ಕೂ ಹೆಚ್ಚು ಕುಟುಂಬಗಳು ಕಳೆದ ಒಂದು ವರ್ಷಗಳಿಂದ ಸರ್ಕಾರದ ಮುಂದಿನ ಕ್ರಮದ ಆದೇಶಕ್ಕಾಗಿ ಕಾದು ಕುಳಿತಿವೆ.

ಸ್ಥಳಾಂತರ ವಿಳಂಬಕ್ಕೆ ಕಾರಣ?: ಕಳೆದ 2025 ಮೇ ತಿಂಗಳಿನಲ್ಲಿ ತಾಳೇವಾಡಿ ಗ್ರಾಮದ 27 ಕುಟುಂಬಗಳಿಗೆ ತಲಾ 10 ಲಕ್ಷ ರೂ.ಗಳ ಮೊದಲ ಕಂತಿನ ಚೆಕ್ ವಿತರಿಸಲಾಗಿತ್ತು. ಆದರೆ, ಉಳಿದ ಕುಟುಂಬಗಳ ಅರ್ಜಿ ಪ್ರಕ್ರಿಯೆ ಇನ್ನೂ ಕುಂಟುತ್ತಾ ಸಾಗಿದೆ. ಅರಣ್ಯ ಇಲಾಖೆಯ ಪ್ರಕಾರ, ಸ್ಥಳಾಂತರಗೊಳ್ಳುವ ಕುಟುಂಬಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗೆ ಹೊಂದಿಕೆಯಾಗುವ ಸೂಕ್ತ ಭೂಮಿ ಪತ್ತೆ ಹಚ್ಚುವುದು ದೊಡ್ಡ ಸವಾಲಾಗಿದೆ.

ಪರಿಹಾರದ ಮೊತ್ತಕ್ಕಿಂತ ಹೆಚ್ಚುವರಿ ಹಣ ಬೇಡಿಕೆ: ಅಭಯಾರಣ್ಯದ ಒಟ್ಟು 13 ಹಳ್ಳಿಗಳ ಪೈಕಿ 9 ಹಳ್ಳಿಗಳ ಜನರು ತಕ್ಷಣ ಸ್ಥಳಾಂತರಗೊಳ್ಳಲು ಸಿದ್ಧರಿದ್ದಾರೆ. ಆದರೆ, ಪ್ರಸ್ತುತ ನೀಡಲಾಗುತ್ತಿರುವ 15 ಲಕ್ಷ ರೂ.ಗಳ ಪರಿಹಾರ ಮೊತ್ತ ಸಾಲುತ್ತಿಲ್ಲ ಎಂಬುದು ಕಾಡಂಚಿನ ಪ್ರದೇಶದ ಗ್ರಾಮದ ನಿವಾಸಿಗಳ ವಾದ. ಬದುಕನ್ನು ಕಟ್ಟಿಕೊಳ್ಳಲು ಕೃಷಿ ಭೂಮಿ ಮತ್ತು ಮನೆಯನ್ನು ನೀಡಬೇಕೆಂದು ಆಗ್ರಹಿಸಿದ್ದಾರೆ.

ಆದರೆ, ಸರ್ಕಾರ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ನಿಗದಿಪಡಿಸಿದ 15 ಲಕ್ಷ ರೂ.ಗಳ ಪ್ಯಾಕೇಜ್ ಪರಿಗಣಿಸಿದೆ. ಇಷ್ಟು ಹಣದಲ್ಲಿ ಮನೆ ಕಟ್ಟುವುದಕ್ಕೆ ಭೂಮಿ ಕರಿದಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಕಾಡಂಚಿನ ಪ್ರದೇಶದ ಗ್ರಾಮಸ್ಥರು ಅಸಮಾಧಾನ ತೋಡಿಕೊಂಡರು.

ಕಾಡಂಚಿನ ಒಪ್ರದೇಶಗಳಲ್ಲಿರುವ ಗ್ರಾಮಗಳ ಸ್ಥಳಾಂತರ ಪ್ರಕ್ರಿಯೆಯು ಕಾನೂನು ಬದ್ಧವಾಗಿ ನಡೆಯುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿದ್ದು, ಸಾಮಾಜಿಕ ಕಾರ್ಯಕರ್ತರ ದೂರಿನ ಹಿನ್ನೆಲೆಯಲ್ಲಿ ದಾಖಲೆಗಳ ಮರುಪರಿಶೀಲನೆ ಪ್ರಕ್ರಿಯೆಯೂ ನಡೆದಿದೆ. ಒಟ್ಟಾರೆಯಾಗಿ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಭಿಮಗಡ ಅಭಯಾಣ್ಯ ಪ್ರದೇಶದ ಕಾಡಂಚಿನಲ್ಲಿರುವ ಗ್ರಾಮಗಳಿಗೆ ಸರ್ಕಾರ ಯಾವ ರೀತಿ ಪರಿಹಾರ ನೀಡುತ್ತದೆ ಎಂದು ಕಾದು ನೋಡಬೇಕಾಗಿದೆ.

ಸ್ವಯಂಪ್ರೇರಿತವಾಗಿ ಹೊರ ಬರಲು ಸರ್ಕಾರಕ್ಕೆ ಕುಟುಂಬಗಳಿಂದ ಅರ್ಜಿ



ಸೌಲಭ್ಯಗಳು ಸಿಗಲಿ

ಗವಳಿ ಗ್ರಾಮದಂತಹ ಕೆಲವು ಹಳ್ಳಿಗಳಲ್ಲಿ ಸ್ಥಳಾಂತರಕ್ಕೆ ವಿರೋಧ ವ್ಯಕ್ತವಾಗಿದೆ. ಅದಕ್ಕೆ ನಾವುಗಳು ಬೆಂಬಲವನ್ನು ವ್ಯಕ್ತಪಡಿಸುತ್ತೇವೆ. ನಮ್ಮ ದೇವತೆಯನ್ನು ಬಿಟ್ಟು ಹೋಗಲಾರೆವು. ಸ್ಥಳಾಂತರ ಮಾಡುವ ಬದಲು ಸೇತುವೆಗಳನ್ನು ನಿರ್ಮಿಸಿಕೊಡಿ. ಪಟ್ಟಣದಲ್ಲಿ ಯಾವ ರೀತಿ ಎಲ್ಲ ಪ್ರಕಾರದ ಸೌಲಭ್ಯಗಳು ಇರುತ್ತವೆ ಅದೇ ರೀತಿ ನಮ್ಮ ಕಾಡು ಪ್ರದೇಶದಲ್ಲಿರುವ ಗ್ರಾಮಗಳಿಗೂ ಸೌಲಭ್ಯಗಳು ಬೇಕು ಎಂದು ಅಲ್ಲಿನ ದೇವಸ್ಥಾನದ ಅರ್ಚಕರು ತಿಳಿಸಿದರು.

ಅಭಯಾರಣ್ಯದ ಒಳಗಿನ ಬದುಕು ಸುಲಭವಲ್ಲ. ತುರ್ತು ಚಿಕಿತ್ಸೆಗೆ ಸುಮಾರು 25 ಕಿ.ಮೀ ದೂರ ಕ್ರಮಿಸಬೇಕು. ಮಳೆಗಾಲದಲ್ಲಂತೂ ಇಲ್ಲಿನ 11 ಹಳ್ಳಿಗಳಲ್ಲಿನ ಹಳ್ಳ-ಕೊಳ್ಳಗಳು ತುಂಬಿ ಹರಿಯುವುದರಿಂದ ಓಡಾಟಕ್ಕೆ ಅಡೆತಡೆ ಉಂಟಾಗುತ್ತದೆ. ನಮ್ಮ ಬೇಡಿಕೆ ಈಡೇರುವವರೆಗೂ ನಾವು ಕಾಡು ಬಿಟ್ಟು ಕದಲುವುದಿಲ್ಲ. ರಾಜ್ಯ ಸರ್ಕಾರ ಯಾವುದಾದರು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಸುಮಿತ್ರಾ ಗೌಡ, ಪಾಸ್ಟೋಲಿ ಗ್ರಾಮದ ನಿವಾಸಿ

ಕಾಂಗ್ರೆಸ್‌ಗೆ ಬಂದರೆ ಶಾಸಕಿ ಮಾಡ್ತೇವೆ। ಎಂಎಲ್ಸಿ ಜಕ್ಕಪ್ಪನವರ ಭರವಸೆ

ಮೇಯರ್‌ಗೆ ಶಾಸಕಿ ಸ್ಥಾನದ ಆಫರ್!

ಧಾರವಾಡ: ನಗರದ ಮರಾಠ ವಿದ್ಯಾಪ್ರಸಾರಕ ಮಂಡಳ ಆವರಣದಲ್ಲಿ ಭಾನುವಾರ ನಡೆದ ಐಟಿಐ ಕಾಲೇಜು, ವಸತಿ ನಿಲಯದ ಶಂಕುಸ್ಥಾಪನೆ, ಪಿಯುಸಿ ವಿಜ್ಞಾನ ಹಾಗೂ ಬಿಎಸ್ಸಿ ಪದವಿ ಕಟ್ಟಡದ ಉದ್ಘಾಟನಾ ಸಮಾರಂಭ ರಾಜಕೀಯ ಹಾಸ್ಯದ ಮಾತುಗಳಿಗೆ ಸಾಕ್ಷಿಯಾಗಿದೆ.



ಪಿಯುಸಿ ವಿಜ್ಞಾನ ಹಾಗೂ ಬಿಎಸ್ಸಿ ಪದವಿ ಕಟ್ಟಡದ ಉದ್ಘಾಟಿಸಿದ ರಾಜ್ಯ ವಿಧಾನ ಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ ಅವರು ಹುಧಾ ಮೇಯರ್ ಜ್ಯೋತಿ ಪಾಟೀಲ ಅವರ ಕುರಿಂತೆ ಆಡಿರುವ ಮಾತುಗಳು ಸಭಿಕರಲ್ಲಿ ನಗೆಯ ಅಲೆಗಳು ಎಬ್ಬಿಸಿದವು.

ಹಳ್ಳದ ನೀರು ಕುಡಿದ ಜಾಣೆ: ಮೇಯರ್ ಜ್ಯೋತಿ ಪಾಟೀಲ ಅವರ ಕಾರ್ಯಕ್ಷಮತೆ ಮೆಚ್ಚಿದ ಜಕ್ಕಪ್ಪನವರು, ಹುಲಕೋಟಿಯಲ್ಲಿ ಜನಿಸಿ, ಅಲ್ಲಿನ ಹಳ್ಳದ ನೀರು ಕುಡಿದು ಬೆಳೆದಿರುವ ಜ್ಯೋತಿ ಪಾಟೀಲ ಅವರು ಬಹಳಷ್ಟು ಜಾಣೆ. ಅವರಲ್ಲಿ ಅದ್ಭುತ ನಾಯಕತ್ವದ ಗುಣಗಳಿವೆ ಎಂದು ಗುಣಗಾನ ಮಾಡಿದರು.

ಶಾಸಕಿ ಸ್ಥಾನದ ಆಫರ್!: ಈ ವೇಳೆ ಹಾಸ್ಯದ ಮೂಲಕ ತಮ್ಮ ರಾಜಕೀಯ ಚತುರತೆ ಪ್ರದರ್ಶಿಸಿದ ಅವರು, ಜ್ಯೋತಿ ಅವರು ಕಾಂಗ್ರೆಸ್‌ಗೆ ಬಂದರೆ, ಅವರನ್ನು ಶಾಸಕಿ ಮಾಡುತ್ತೇವೆ. ನಮಗೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಂತೆ ಮತ್ತೊಬ್ಬ ಮಹಿಳಾ ನಾಯಕಿ ಲಭಿಸಿದಂತೆ ಆಗಲಿದೆ ಎಂದು ಹಾಸ್ಯ ಚಟಕಿ ಹಾರಿಸಿದರು.

ಜಕ್ಕಪ್ಪನವರ ಈ ಆಹ್ವಾನವು ವೇದಿಕೆಯಲ್ಲಿದ್ದ ಗಣ್ಯರು ಹಾಗೂ ಸಭಿಕರಲ್ಲಿ ನಗು ಮೂಡಿಸಿತು. ಶೈಕ್ಷಣಿಕ ಕಾರ್ಯಕ್ರಮ ಆದ್ದರೂ, ಜಕ್ಕಪ್ಪನವರ ಈ ರಾಜಕೀಯ ಲೇಪಿತ ಹಾಸ್ಯ ಮಾತುಗಳು ಇದೀಗ ಧಾರವಾಡದ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿವೆ.

ಕಾಂಗ್ರೆಸ್ ಓಲೈಕೆ ರಾಜಕಾರಣ ನಿಲ್ಲಿಸಲಿ

ಧಾರವಾಡ: ಹುಬ್ಬಳ್ಳಿ–ಧಾರವಾಡ ಪಾಲಿಕೆ ಅಧಿಕಾರೇತರ ಸದಸ್ಯರ ನೇಮಕದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಮತ್ತೆ ಅಲ್ಪಸಂಖ್ಯಾತರ ಓಲೈಕೆಯ ರಾಜಕಾರಣಕ್ಕೆ ಮುಂದಾಗಿದೆ ಎಂದು ಪಾಲಿಕೆ ಸಭಾನಾಯಕ ಈರೇಶ ಅಂಚಟಗೇರಿ ಆರೋಪ ಮಾಡಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಅಭಿವೃದ್ಧಿಗೆ ಪೂರಕವಾಗುವಂತೆ ವಿವಿಧ ಕ್ಷೇತ್ರಗಳಲ್ಲಿ ಅನುಭವಿ ಮತ್ತು ಸಮಾಜಮುಖಿ ವ್ಯಕ್ತಿಗಳ ಅಧಿಕಾರೇತರ ಸದಸ್ಯರ ನೇಮಕದಲ್ಲಿ ಕಾಂಗ್ರೆಸ್ ಸರ್ಕಾರವು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದಿದ್ದಾರೆ. ಸಮುದಾಯಗಳ ನಡುವೆ ಸಮಾನತೆ ಕಾಪಾಡಬೇಕಾದ ಸರ್ಕಾರ, ಮತಬ್ಯಾಂಕ್ ರಾಜಕಾರಣದ ಉದ್ದೇಶದಿಂದ ಏಕಪಕ್ಷೀಯ ನಿರ್ಧಾರಗಳನ್ನು ಖಂಡಿಸಿದ ಅವರು, ಆಡಳಿತ ವ್ಯವಸ್ಥೆಯಲ್ಲಿ ಎಲ್ಲ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡುವಂತೆ ಆಗ್ರಹ ಮಾಡಿದ್ದಾರೆ.

ಇತ್ತೀಚಿನ ನೇಮಕದಲ್ಲಿ ಸಮಾಜದ ಇತರ ವರ್ಗಗಳನ್ನು ನಿರ್ಲಕ್ಷಿಸಿ, ನಿರ್ದಿಷ್ಟ ಸಮುದಾಯದ ಓಲೈಕೆಗೆ ಆದ್ಯತೆ ನೀಡಿವುದು ಸರ್ಕಾರ ನಿಜ ಸ್ವರೂಪಕ್ಕೆ ಹಿಡಿದ ಕೈಗನ್ನಡಿ. ಸರ್ಕಾರ ಓಲೈಕೆ ರಾಜಕಾರಣ ಕೈಬಿಡಬೇಕು ಎಂದು ಅಂಚಟಗೇರಿ ಒತ್ತಾಯಿಸಿದ್ದಾರೆ.

ಅಧಿಕಾರೇತರ ಸದಸ್ಯರ ನೇಮಕಾತಿಯಲ್ಲಿ ನ್ಯಾಯಸಮ್ಮತ ಮಾನದಂಡಗಳನ್ನು ಅನುಸರಿಸಬೇಕು. ಎಲ್ಲ ವರ್ಗಗಳಿಗೂ ಸಮಾನ ಅವಕಾಶ ನೀಡುವ ಮೂಲಕ ಜನತಾಂತ್ರಿಕ ಮೌಲ್ಯಗಳನ್ನು ಉಳಿಸಿದ್ದರೆ, ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಕಲಬುರಗಿ–ಬೆಂಗಳೂರು ವಿಮಾನ ಸೇವೆ ಪುನಾರಂಭ ಕೆಕೆಆರ್‌ಡಿಬಿ ಮಂಡಳಿ ನೆರವು: ಡಾ.ಅಜಯ್ ಸಿಂಗ್

ಕಲಬುರಗಿ: ಜಿಲ್ಲೆಯ ಜನತೆಯ ಬಹುದಿನದ ಬೇಡಿಕೆ ಯಾದ ಕಲಬುರಗಿ–ಬೆಂಗಳೂರು ನಡುವಿನ ವಿಮಾನಯಾನ ಸೇವೆಯನ್ನು ಪುನಾರಂಭಿಸಲು ರಾಜ್ಯ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದ್ದು, ವಾಣಿಜ್ಯ ಕಾರಣಗಳಿಂದ ಸ್ಥಗಿತ ಗೊಂಡಿದ್ದ ಈ ಮಾರ್ಗದ ಕಾರ್ಯಾಚರಣೆಗೆ ಜೀವ ತುಂಬಲು ವೈಯಬಿಲಿಟಿ ಗ್ಯಾಪ್ ಫಂಡಿಂಗ್ (ವಿಜಿಎಫ್) ಯೋಜನೆಯಡಿ ಆರ್ಥಿಕ ನೆರವು ನೀಡಲು ನಿರ್ಧರಿಸಲಾಗಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ ಡಾ.ಅಜಯ್ ಸಿಂಗ್ ತಿಳಿಸಿದರು.

ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಪಂಚಾಯತ್ ರಾಜ್ ಮತ್ತು ಐ.ಟಿ. ಇಲಾಖೆ,ಅರಣ್ಯ,ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ, ಪೌರಾಡಳಿತ ಮಂತ್ರಿಗಳ ಸಭೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ. ವಿಮಾನಯಾನ ಸಂಸ್ಥೆಗಳು ಪ್ರತಿದಿನ ಕಾರ್ಯಾಚರಣೆ ನಡೆಸಲು ಆಸಕ್ತಿ ತೋರಿದ್ದು, ಇದಕ್ಕಾಗಿ ವರ್ಷಕ್ಕೆ ಅಂದಾಜು ರೂ. 12.50 ಕೋಟಿ ಆರ್ಥಿಕ ಬೆಂಬಲದ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ ಎಂದರು.

ವಿಮಾನಯಾನ ಸಂಸ್ಥೆಗಳಿಗೆ ನೀಡಬೇಕಾದ ಈ ಮೊತ್ತದಲ್ಲಿ ಸಿಂಹಪಾಲು ಅಂದರೆ ಶೇ.80ರಷ್ಟನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಭರಿಸಲಿದ್ದು,ಉಳಿದಶೇ.20ರಷ್ಟನ್ನು ರಾಜ್ಯ ಸರ್ಕಾರ ನೀಡಲಿದೆ. ಈಗಾಗಲೇ ಬೀದರ್–ಬೆಂಗಳೂರು ಮಾರ್ಗಕ್ಕಾಗಿ 2025–26ನೇ ಸಾಲಿನಲ್ಲಿ 12.20 ಕೋಟಿ ರೂ. ಮಂಡಳಿಯಿಂದ ಮಂಜೂರು ಮಾಡಲಾಗಿದ್ದು, ಇದೇ ಮಾದರಿಯಲ್ಲಿ ಕಲಬುರಗಿ ಮಾರ್ಗಕ್ಕೂ ಅನುದಾನ ಒದಗಿಸಲು ಮಂಡಳಿಯ ಕ್ರಿಯಾ ಯೋಜನೆಯಡಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.



ಸರ್ಕಾರ ಹಾಗೂ ಕೆಕೆಆರ್‌ಡಿಬಿಯ ಸಹಯೋಗದಲ್ಲಿ ವಿಮಾನಯಾನ ಸಂಸ್ಥೆಗಳು ಪ್ರತಿದಿನ ಕಾರ್ಯಾಚರಣೆಗೆ ವರ್ಷಕ್ಕೆ ಅಂದಾಜು ರೂ. 12.50 ಕೋಟಿ ಆರ್ಥಿಕ ಬೆಂಬಲದ ಅಗತ್ಯವಿದೆ. ಕಲಬುರಗಿ ಮತ್ತು ಬೆಂಗಳೂರು ನಡುವೆ ಶೀಘ್ರದಲ್ಲೇ ಪ್ರತಿನಿತ್ಯ ವಿಮಾನ ಸಂಚಾರ ಆರಂಭವಾಗುವ ನಿರೀಕ್ಷೆಯಿದ್ದು, ಭಾಗದ ಕೈಗಾರಿಕಾ ಮತ್ತು ಶೈಕ್ಷಣಿಕ ಪ್ರಗತಿಗೆ ಹೊಸ ವೇಗ ನೀಡಲಿದೆ.

ಡಾ.ಅಜಯ್ ಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ

ಪ್ರಯಾಣಿಕರಿಗೆ ಆಸರೆ

ಕಲಬುರಗಿ ವಿಮಾನ ನಿಲ್ದಾಣವು ಕೇವಲ ಜಿಲ್ಲೆಗೆ ಮಾತ್ರವಲ್ಲದೆ, ಸುತ್ತಮುತ್ತಲಿನ ಆರು ಜಿಲ್ಲೆಗಳು ಹಾಗೂ ನೆರೆಯ ಮಹಾರಾಷ್ಟ್ರ ಮತ್ತು ತೆಲಂಗಾಣದ ಪ್ರಯಾಣಿಕರಿಗೂ ಆಸರೆಯಾಗಿದೆ. ಇಲ್ಲಿ ಏರ್‌ಬಸ್ 320 ಹಾಗೂ ಬೋಯಿಂಗ್ -737 ನಂತಹ ಬೃಹತ್ ವಿಮಾನಗಳ ಸಂಚಾರಕ್ಕೆ ಬೇಕಾದ ಅತ್ಯಾಧುನಿಕ ಮೂಲಸೌಕರ್ಯಗಳಿವೆ. ಆದರೆ, ಈ ಹಿಂದೆ ಸೇವೆ ನೀಡುತ್ತಿದ್ದ ಫ್ಲೋಡಾವತ್ ಸಂಸ್ಥೆಯು ಪ್ರಯಾಣಿಕರ ಕೊರತೆ ಮತ್ತು ಆರ್ಥಿಕ ನಷ್ಟದ ಕಾರಣ ನೀಡಿ ಅಕ್ಟೋಬರ್ 15, 2025ರಿಂದ ಸೇವೆ ಸ್ಥಗಿತಗೊಳಿಸಿತ್ತು.

ಜಮೀರ್ ಅಹ್ಮದ್ ದರ್ಗಾವಾಲೆ ಕೊಲೆ ಪ್ರಕರಣ ಆರೋಪಿಗಳ ಮನೆ ಮೇಲೆ ದಾಳಿ: ಪರಿಶೀಲನೆ

ಮುಂಡಗೋಡ: ಜಮೀರ್ ಅಹ್ಮದ್ ದರ್ಗಾವಾಲೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಮನೆ ಮೇಲೆ ದಾಳಿ ಮಾಡಿ ಸರ್ಚ್ ಮಾಡಿದ ಘಟನೆ ಭಾನುವಾರ ನಡೆದಿದೆ.



ಪಟ್ಟಣದ ಮೀಟರ್ ಬಡ್ಡಿ ಕಿಂಗ್ ಪಿನ್ ಜಮೀರನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದರು. ಒಟ್ಟು ಈಪ್ರಕರಣದಲ್ಲಿ11ಆರೋಪಿಗಳನ್ನು ಬಂಧಿಸಿದಂತಾಗಿದೆ.

ಕೊಲೆಗೆ ಕಂಟ್ರಿಮೇಡ್ ಪಿಸ್ತೂಲ್ ಬಳಸಲಾಗಿತ್ತು. ಅಲ್ಲದೆ ಈಗಾಗಲೇ 3 ಪಿಸ್ತೂಲ್‌ಗಳನ್ನು, 6 ಸಜೀವ ಗುಂಡುಗಳನ್ನು ಪೊಲೀಸರುಆರೋಪಿಗಳಿಂದಜಪ್ತಿ ಮಾಡಿದ್ದರು. ಎರಡು ವರ್ಷದ ಹಿಂದೆಯೇ ಹತ್ಯೆಗೆ ಪ್ಲ್ಯಾನ್ ರಚಿಸಿದ್ದ ಹಂತಕರು, ಅದಕ್ಕಾಗೇ ಅವತ್ತೇ ಕಂಟ್ರಿಮೇಡ್ ಪಿಸ್ತೂಲ್ ಖರೀದಿಸಲು ರೆಡಿಯಾಗಿದ್ದರು.

ಹೀಗಾಗಿ, ಪ್ರಮುಖ ಆರೋಪಿ ಮಂಜು ಕಾಜಗಾರಗೆ ಅವತ್ತು ಶಿರಸಿ ಜೈಲಲ್ಲಿ ಪರಿಚಯವಾಗಿದ್ದ ದಿಲ್‌ರಾಜನ ಮೂಲಕ ಉತ್ತರ ಪ್ರದೇಶಕ್ಕೆ ಹೋಗಿದ್ದರು. ಎರಡು ವರ್ಷಗಳ ಹಿಂದೆಯೇ ದಿಲ್ ರಾಜ್ ಮಾರ್ಗದರ್ಶನದಲ್ಲೇ ಪಿಸ್ತೂಲು ಖರೀದಿಸಲು ಕೊಲೆ ಆರೋಪಿ ಮಂಜು ಕಾಜಗಾರ್ ಜೊತೆ ಉತ್ತರ ಪ್ರದೇಶದ ಗೋರಖಪುರಕ್ಕೆ ತೆರಳಿದ್ದ ಆರೋಪದ ಮೇಲೆ ಶನಿವಾರ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ತನಿಖೆ ವೇಳೆ ದಿಲ್‌ರಾಜ್ ಹಾಗೂ ಮಂಜು ಕಾಜಗಾರ್ ಬಾಯಿಬಿಟ್ಟ ಹಿನ್ನೆಲೆಯಲ್ಲಿ ಪೊಲೀಸರು ಅಲರ್ಟ್ ಆಗಿ ಕೂಲಂಕುಷವಾಗಿ ತನಿಖೆ ಕೈಗೊಳ್ಳಲಾಗಿತ್ತು. ಭಾನುವಾರ ಬೆಳ್ಳಂಬೆಳಗ್ಗೆ 7 ತಂಡಗಳಲ್ಲಿ ಪೊಲೀಸರು ಆರೋಪಿಗಳ ಮನೆಗಳಮೇಲೆ ದಾಳಿ ಮಾಡಿದ್ದಾರೆ. ಮಾರಕಾಸ್ತ್ರಗಳು ಸೇರಿದಂತೆ ಇನ್ನೂ ಏನಾದ್ರೂ ಕ್ರಿಮಿನಲ್ ಹಿನ್ನೆಲೆಯ ದಾಖಲೆಗಳು ಸಿಗಬಹುದಾ ಎಂದು ಸರ್ಚಿಂಗ್ ಮಾಡಿದ್ದಾರೆ.

ಇಲ್ಲಿನ ನ್ಯಾಯಾಲಯದ ಅನುಮತಿ ಪಡೆದು ಕೊಲೆ ಆರೋಪಿಗಳ ಮನೆಯ ಮನೆ ದಾಳಿ ಮಾಡಿದ್ದಾರೆ. ಕೊಲೆ ಪ್ರಕರಣದ ಪ್ರಮುಖ ಆರೋಪಿ ಸಾಲಗಾಂವಿಯ ಮಂಜು ಕಾಜಗಾರ ಮನೆ, ಮುಂಡಗೋಡ ಕಿಲ್ಲೆ ಓಣಿಯ ಮಲ್ಲಿಕಜಹಾನ ಜಹೀರ ತಂದೆ ಶಬ್ಬೀರ ಶೇಖ್, ಮಹಮ್ಮದ ಸಾಧಿಕ ತಂದೆ ಅಬ್ದುಲ್ ರಜಾಕ ದರ್ಗಾವಾಲೆ ಮುಂಡಗೋಡ ಮಾರಿಕಾಂಬಾ ನಗರದ ಅಸಗರ ಅಲಿ ತಂದೆ ಮಕ್ತುಮ ಅಲಿ ದೊಡ್ಡನಿ, ಹಾಗೂ ಸಾಹೀಲ್ ತಂದೆ ಬಾಬಾಬುಡನ್ ಶೇಖ ನಂದಿಕಟ್ಟಿ ಸೇರಿದಂತೆ ಆರೋಪಿಗಳಮನೆಗಳ ಮೇಲೆ ದಾಳಿ ನಡೆಸಿ ಸರ್ಚ್ ಮಾಡಿದ್ದಾರೆ. ಆದರೆ ಯಾವುದೇ ದಾಖಲೆಗಳಾಗಲಿ ಮಾರಕಾಸ್ತ್ರಗಳಾಗಲಿ ಪತ್ತೆಯಾಗಿಲ್ಲ ಎನ್ನಲಾಗಿದೆ.

ಕೆಎಲ್‌ಎಸ್ ವಿಡಿಐಟಿ ಸಂಸ್ಥಾಪನಾ ದಿನ ಇಂದು

ಹಳಿಯಾಳ: 1939ರಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ಕಾನೂನು ಸಂಸ್ಥೆ (ಕೆಎಲ್‌ಎಸ್) ಬೆಳಗಾವಿ, 2004ರಲ್ಲಿ ಹಳಿಯಾಳದಲ್ಲಿ ವಿಶ್ವನಾಥರಾವ್ ದೇಶಪಾಂಡೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಡಿಐಟಿ)ಯನ್ನು ಪ್ರಾರಂಭಿಸಿತು.

4 ಎಂಜಿನಿಯರಿಂಗ್ ವಿಭಾಗಗಳೊಂದಿಗೆ ಪ್ರಾರಂಭವಾದ ಮಹಾವಿದ್ಯಾಲಯ ಇಂದು 6 ಪದವಿ ವಿಭಾಗ, 2 ಸ್ನಾತಕೋತ್ತರ ಕೋರ್ಸ್ ಮತ್ತು ವಿಟಿಯುದಿಂದ ಮಾನ್ಯತೆ ಪಡೆದ 7 ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. ಈ ಸಂಶೋಧನಾ ಕೇಂದ್ರಗಳಲ್ಲಿ ವಿಟಿಯು ಮಾನ್ಯತೆ ಪಡೆದ 18 ಪ್ರಾಧ್ಯಾಪಕರು, 29 ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಮಾರ್ಗದರ್ಶನ ಮಾಡುತ್ತಿದ್ದಾರೆ.

2026–27 ಶೈಕ್ಷಣಿಕ ವರ್ಷದಿಂದ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ (ಡೇಟಾ ಸೈನ್ಸ್) ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐಸಿಟಿಇ) ನವದೆಹಲಿ ಅನುಮತಿ ಪಡೆಯಲಾಗಿದೆ.

28 ಎಕರೆ ಹಚ್ಚು ಹಸುರಿನ ಕ್ಯಾಂಪಸ್‌ನಲ್ಲಿ 1700ಕ್ಕೂ ಅಧಿಕ ವಿದ್ಯಾರ್ಥಿಗಳು ಗುಣಮಟ್ಟದ ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ.

ನ್ಯಾಕ್ ಎ ಗ್ರೇಡ್ ಮಾನ್ಯತೆ, ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಕೊಲ್ಕತ್ತಾದಿಂದ ಉತ್ತಮ ಎಂಜಿನಿಯರಿಂಗ್ ಕಾಲೇಜು ಪ್ರಶಸ್ತಿ, ಲೋಕಧ್ವನಿ ಹೆಮ್ಮೆಯ ಸಾಧಕರು ಪ್ರಶಸ್ತಿ ಸೇರಿದಂತೆ, ಹತ್ತು ಹಲವು ಪ್ರಶಸ್ತಿ–ಅಭಿನಂದನಾ ಪತ್ರಗಳನ್ನು ಮುಡಿಗೇರಿಸಿಕೊಂಡಿದೆ.



ವಿಶ್ವವಿದ್ಯಾಲಯದ ಪಠ್ಯಕ್ರಮದ ಹೊರತಾಗಿ, ಉದ್ಯಮ ತಜ್ಞರು ಮತ್ತು ಮಾಜಿ ವಿದ್ಯಾರ್ಥಿಗಳು ತಯಾರಿಸಿದ ಕೋರ್ಸ್‌ಗಳನ್ನು ಬೋಧಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದಿಂದ, ಸೈಬರ್ ಸೆಕ್ಯೂರಿಟಿಯಲ್ಲಿ ನಾವಿನ್ಯತಾ ಲ್ಯಾಬ್‌ಗಾಗಿ 1.25 ಕೋಟಿ ರೂಪಾಯಿ ಅನುದಾನ ಪಡೆದುಕೊಂಡಿದೆ. ವಿಜಿಎಸ್‌ಟಿ, ಐಐಟಿ ಧಾರವಾಡ, ಬೆಳಗಾವಿ ಫೌಂಡ್ರಿ ಕ್ಲಸ್ಟರ್, ಕೆಎಸ್‌ಟಿಎಸ್‌ಟಿ, ಟಾಟಾ ಟೆಕ್ನಾಲಜಿ ಸೇರಿದಂತೆ ಅನೇಕ ಸಂಸ್ಥೆಗಳು ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರ ಪ್ರಾಜೆಕ್ಟ್‌ಗಳಿಗೆ ಧನಸಹಾಯ ನೀಡಿವೆ.

13 ಪ್ರಾಧ್ಯಾಪಕರು ಪ್ರತಿಷ್ಠಿತ ಐಐಟಿ ಮತ್ತು ಐಐಐಟಿಗಳಿಂದ ಪೋಸ್ಟ್ ಗ್ರಾಜುಯೇಟ್ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ವಿದ್ಯಾರ್ಥಿಗಳು ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್, ಸಿಸ್ಕೊ, ಐಬಿಎಂ ಸೇರಿದಂತೆ ಪ್ರತಿಷ್ಠಿತ ಕಂಪನಿಗಳ 2000ಕ್ಕೂ ಅಧಿಕ ಕೋರ್ಸ್‌ಗಳನ್ನು ಮುಗಿಸಿ, ಕೌಶಲ್ಯ ವರ್ಧಿಸಿಕೊಂಡಿದ್ದಾರೆ.

ಮಹಾವಿದ್ಯಾಲಯ 30ಕ್ಕೂ ಅಧಿಕ ಕೈಗಾರಿಕೆ ಮತ್ತು ಸಂಸ್ಥೆಗಳ ಜೊತೆ ಒಡಂಬಡಿಕೆ ಹೊಂದಿದೆ. ಕರ್ನಾಟಕದಲ್ಲಿ ಪ್ರಥಮ ಬಾರಿಗೆ ರಾಯಲ್ ಎನ್ಫೀಲ್ಡ್ ತರಬೇತಿ ಕೇಂದ್ರ ಹೊಂದಿದ ಖ್ಯಾತಿ ವಿಡಿಐಟಿ ಪಡೆದಿದೆ.

ಕಲ್ಪವೃಕ್ಷ ಕನ್ನಡ ಸಂಘ, ಎನ್ ಎಸ್ ಎಸ್ ಘಟಕ, ಉನ್ನತ ಭಾರತ ಅಭಿಯಾನ, ರೆಡ್ ಕ್ರಾಸ್ ಘಟಕ, ಆಕಾಶವಾಣಿ ಪ್ರಾಯೋಜಿತ ಕಾರ್ಯಕ್ರಮಗಳ ಮೂಲಕ ವಿವಿಧ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುವದರಲ್ಲಿ ವಿಡಿಐಟಿ ಮುಂಚೂಣಿಯಲ್ಲಿದೆ.

ಕೆಎಲ್‌ಎಸ್‌ವಿಡಿಐಟಿಯ ಸಂಸ್ಥಾಪನಾ ದಿನವನ್ನು ಇಂದು ಆಚರಿಸಲಾಗುತ್ತಿದ್ದು, ಈ ಕಾರ್ಯಕ್ರಮಕ್ಕೆ ಶಾಸಕ ಆರ್.ವಿ. ದೇಶಪಾಂಡೆ, ಇನ್ಫೋಸಿಸ್ ಸಹ ಉಪಾಧ್ಯಕ್ಷ ಅಲ್ಲಾಬಕ್ಷ, ಬೆಂಗಳೂರಿನ ಎಝೋನ್ ಎಲೆಕ್ಟ್ರಿಕ್ ವೆಹಿಕಲ್ಸ್ ಕಂಪನಿ ಸಂಸ್ಥಾಪಕ ನಿರ್ದೇಶಕ ಗಣಪತಿ ಸೋಡಿಗದ್ದೆ, ಇನ್ಫೋಸಿಸ್ ಸೀನಿಯರ್ ಎಂಜಿನಿಯರಿಂಗ್ ಮ್ಯಾನೇಜರ್ ಶಿವಾನಂದ ಕುಡ್ಲಮಠ, ವಿಡಿಐಟಿ ಮಾಜಿ ವಿದ್ಯಾರ್ಥಿ ಮತ್ತು ಸಿವಿಲ್ ಸರ್ವಿಸ್ ಪರೀಕ್ಷೆ ಯಲ್ಲಿ 739 ರ್‍ಯಾಂಕ್ ಪಡೆದ ಬಸವರಾಜ ಪಾಟೀಲ, ಕೆಎಲ್‌ಎಸ್ ಅಧ್ಯಕ್ಷ ಪ್ರದೀಪ ಸಾವಕಾರ, ಕೆಎಲ್‌ಎಸ್ ಛೇರ್ಮನ್ ಅನಂತ ತಗಾರೆ, ವಿಡಿಐಟಿ ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಕರ್ನಾಟಕ ಬ್ಯಾಂಕ್ ನಿಂದ ನೀಡಲ್ಪಟ್ಟ ಡಿಜಿಟಲ್ ಡಿಸ್ಪ್ಲೇ ಬೋರ್ಡ್ ಉದ್ಘಾಟನೆ, ಜೆಟ್ಸನ್ ಎನ್ವಿಡಿಯಾ ಕಲಿಕಾ ಕೇಂದ್ರ ಉದ್ಘಾಟನೆ, ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗಾಗಿ ಗಣಪತಿ ಸೋಡಿಗದ್ದೆ ನೀಡಿರುವ ಎಲೆಕ್ಟ್ರಿಕ್ ವೆಹಿಕಲ್ ಹಸ್ತಾಂತರ ಕಾರ್ಯಕ್ರಮ ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಯೋಧ ನಾಗರಾಜಗೆ ಅದ್ದೂರಿ ಸ್ವಾಗತ



◆ **ಕುಮಟಾ:** ಭಾರತೀಯ ಸೇನೆಯಲ್ಲಿ ಸುಧೀರ್ಘ 30 ವರ್ಷಗಳ ಕಾಲ ರಾಂಕ್ ಸುಬೇದಾರ್ ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ಕುಮಟಾಕ್ಕೆ ಆಗಮಿಸಿದ ನಾಗರಾಜ ಹೊಸಬಯ್ಯ ಗುನಗಾ ಅವರನ್ನು ಕುಮಟಾದ -ನಾಗರಿಕರು ಅದ್ದೂರಿಯಾಗಿ ಸ್ವಾಗತಿಸಿ, ಗೌರವಿಸಿದರು.

ಪಟ್ಟಣದ ಮಾಸ್ತಿಕಟ್ಟೆಯಲ್ಲಿ ಜಮಾಯಿಸಿದ ಕುಮಟಾ ನಾಗರಿಕರು ಮಾಜಿ ಸೈನಿಕರಾದ ನಾಗರಾಜ್ ಅವರನ್ನು ಬರಮಾಡಿಕೊಂಡರು. ಮಾಸ್ತಿಕಟ್ಟೆ ಸರ್ಕಲ್‌ನಿಂದ ಹಳಕಾರದ ಗುನಗನಕೊಪ್ಪದ ವರೆಗೂ ಅದ್ದೂರಿ ಮೆರವಣಿಗೆಯೊಂದಿಗೆ ಅವರನ್ನು ಕರೆದುಕೊಂಡು ಹೋಗಿ ಮನೆಗೆ ಬಿಡುವ ಮೂಲಕ ದೇಶ ಪ್ರೇಮ ಮೆರೆದರು. ಜೆಡಿಎಸ್ ಜಿಲ್ಲಾಧ್ಯಕ್ಷ ಸೂರಜ್ ನಾಯ್ಕ ಸೋನಿ ಮಾತನಾಡಿದರು.ನಿವೃತ್ತ ಯೋಧರು, ವಕೀಲರಾದ ವಿನಾಯಕ ಪಟಗಾರ, ಹಳಕಾರ ಊರಿನ ಪ್ರಮುಖರು, ಗುನಗಾ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಸಚಿವ ಸುಧಾಕರಗೆ ಶಾಸಕ ದೇಶಪಾಂಡೆ ಸಂತಾಪ

◆ **ಹಳಿಯಾಳ:** ಕರ್ನಾಟಕದ ರಾಜಕೀಯ ರಂಗದಲ್ಲಿ ತಮ್ಮದೇ ಆದ ವ್ಯಕ್ತಿತ್ವ, ಸೇವಾ ಮನೋಭಾವ ಹಾಗೂ ಜನಪರ ಚಿಂತನೆಗಳ ಮೂಲಕ ಅಳಿಯದ ಗುರುತು ಮೂಡಿಸಿದ್ದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು ಹಾಗೂ ಆತ್ಮೀಯರಾದ ಡಿ. ಸುಧಾಕರ್ ಅವರ ಅಗಲಿಕೆಯ ಸುದ್ದಿ ಮನಸ್ಸಿಗೆ ಅತೀವ ನೋವು ಉಂಟುಮಾಡಿದೆ.ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು ಅಧಿಕಾರವನ್ನು ಪ್ರತಿಷ್ಠೆಯಾಗಿ ಅಲ್ಲ, ಜನಸೇವೆಯ ಸಾಧನವಾಗಿ ಕಂಡ ಅಪರೂಪದ ನಾಯಕರಾಗಿದ್ದರು. ಸರಳತೆ, ಸೌಜನ್ಯ ಮತ್ತು ಮಾನವೀಯತೆ ಅವರ ಬದುಕಿನ ಮೌಲ್ಯಗಳಾಗಿದ್ದವು. ಜನರ ನೋವಿಗೆ ಸ್ಪಂದಿಸುವ ಹೃದಯ,ಅಭಿವೃದ್ಧಿಯತ್ತ ಇರುವ ದೃಢ ಸಂಕಲ್ಪ ಮತ್ತು ಎಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುವ ಗುಣದಿಂದ ಅವರು ಜನಮನಗಳಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದು ನೆನಪನ್ನು ಹಂಚಿಕೊಳ್ಳುವುದರ ಮೂಲಕ ಶಾಸಕ ಆರ್ ವಿ.ದೇಶಪಾಂಡೆ ಸಂತಾಪ ಸೂಚಿಸಿದ್ದಾರೆ.

ಕಾರು ಮರಕ್ಕೆ ಡಿಕ್ಕಿ: ಇಬ್ಬರಿಗೆ ಗಾಯ



◆ **ಬನವಾಸಿ:** ಚಾಲಕನ ನಿಯಂತ್ರಣ ತಪ್ಪಿ ಕಾರು ಮರಕ್ಕೆ ಡಿಕ್ಕಿಯಾಗಿ ಇಬ್ಬರಿಗೆ ಗಂಭೀರ ಗಾಯವಾಗಿ, ಚಾಲಕನಿಗೆ ಸಣ್ಣಪುಟ್ಟ ಗಾಯವಾದ ಘಟನೆ ಶಿರಸಿ-ಬನವಾಸಿ ರಸ್ತೆಯ ಕಾಂಗ್ರೆಸ್ ಕಚೇರಿಯ ಬಳಿ ಭಾನುವಾರ ಸಂಜೆ ನಡೆದಿದೆ. ಬನವಾಸಿ ಕಡೆಯಿಂದ ಶಿರಸಿ ಕಡೆಗೆ ಹೋಗುತ್ತಿದ್ದ ಮೂವರು ಪ್ರಯಾಣಿಸುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ. ಈ ಘಟನೆಯಲ್ಲಿ ಕಾರಿನಲ್ಲಿದ್ದ ಇಬ್ಬರಿಗೆ ಗಂಭೀರ ಸ್ವರೂಪದ ಗಾಯವಾಗಿದೆ. ಚಾಲಕನಿಗೆ ಸಣ್ಣ ಪ್ರಮಾಣದ ಗಾಯವಾಗಿದ್ದು ಗಾಯಗೊಂಡವರನ್ನು ತಕ್ಷಣವೇ ಸ್ಥಳೀಯರು 108 ಕರೆ ಮಾಡಿ ಅಂಬುಲೆನ್ಸ್‌ನಲ್ಲಿ ಕಳುಹಿಸುವ ಮೂಲಕ ಶಿರಸಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.ಗಂಭೀರವಾಗಿ ಗಾಯಗೊಂಡವರು ಶಿರಸಿ ನಗರದ ಗುಡ್ಡದಮನೆ ನಿವಾಸಿಗಳಾಗಿದ್ದು ಭಾಸ್ಕರ ಪಿ.(63) ಹಾಗೂ ಮಹೇಶ್ ಗುಡ್ಡದಮನೆ(54) ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಬನವಾಸಿ ಪೊಲೀಸ್ ಠಾಣೆಯ ಪಿಎಸ್‌ಐ ಮಾಂತೇಶ ಕುಂಬಾರ ಭೇಟಿ ನೀಡಿ ಪರಿಶೀಲನೆ ನಡೆಸಿ ದೂರು ದಾಖಲಿಸಿಕೊಂಡಿದ್ದಾರೆ.

ಮರದಿಂದ ಬಿದ್ದು ಕೂಲಿಕಾರ್ಮಿಕ ಸಾವು

◆ **ಅಂಕೋಲಾ:** ತೆಂಗಿನ ಮರ ಹತ್ತಿ ತೆಂಗಿನಕಾಯಿಯ ಕೊಯ್ಯುವ ಕೂಲಿಕಾರ್ಮಿಕ ಆಕಸ್ಮಿಕವಾಗಿ ಮರದಿಂದ ಬಿದ್ದು ಮೃತಪಟ್ಟ ಘಟನೆ ತಾಲೂಕಿನ ಬಾವಿಕೇರಿಯಲ್ಲಿ ನಡೆದಿದೆ. ಅವರ್ಸಾ ಸಕಲಬೇಣ ನಿವಾಸಿ ಸೂರ್ಯಕಾಂತ ದಾಮೋದರ ಗೌಡ(43) ಮೃತ ವ್ಯಕ್ತಿಯಾಗಿದ್ದು ಕಟ್ಟಡ ಕಾರ್ಮಿಕ ಮತ್ತು ತೆಂಗಿನಕಾಯಿ ಕೊಯ್ಯುವ ಕೆಲಸ ಮಾಡುತ್ತಿದ್ದ ಈತ ಬಾವಿಕೇರಿಯ ವ್ಯಕ್ತಿಯೋರ್ವರ ತೆಂಗಿನ ತೋಟದಲ್ಲಿ ತೆಂಗಿನ ಮರ ಹತ್ತಿ ತೆಂಗಿನಕಾಯಿ ಇಳಿಸುತ್ತಿರುವಾಗ ಆಕಸ್ಮಿಕವಾಗಿ ಕಾಲು ಜಾರಿ ಮರದಿಂದ ಕೆಳಗೆ ಬಿದ್ದುಮೃತಪಟ್ಟಿರುವುದಾಗಿ ತಿಳಿದು ಬಂದಿದೆ.ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ, ಪಿ.ಎಸ್.ಐ ಗುರುನಾಥ ಹಾದಿಮನಿಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತನ ಸಹೋದರ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪ್ರಕರಣ ದಾಖಲಾಗಿದೆ.



ಸಿದ್ದಾಪುರ: ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯ ಶನೇಶ್ವರ ದೇವಸ್ಥಾನ ಟ್ರಸ್ಟ್ ಇವರಿಂದ ಶನೇಶ್ವರ ದೇವರ ಸನ್ನಿಧಿಯಲ್ಲಿ ಸಂಪ್ರೋಕ್ಷಣ್ಯ ಕಾರ್ಯಕ್ರಮದ ಪ್ರಯುಕ್ತ ನಡೆದ ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮ ಕಲಾಸಕ್ತರ ಮನತಣಿಸಿತು.

ಶಾನಬಾಳೆಗದ್ದೆಯಲ್ಲಿ ಮನಗೆದ್ದ ಗಾನಸಂಪ್ರೋಕ್ಷಣ್ಯ

◆ **ಸಿದ್ದಾಪುರ:** ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯ ಶನೇಶ್ವರ ದೇವಸ್ಥಾನ ಟ್ರಸ್ಟ್ ಇವರಿಂದ ಶನೇಶ್ವರ ದೇವರ ಸನ್ನಿಧಿಯಲ್ಲಿ ಸಂಪ್ರೋಕ್ಷಣ್ಯ ಕಾರ್ಯಕ್ರಮದ ಪ್ರಯುಕ್ತ ನಡೆದ ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮ ಕಲಾಸಕ್ತರ ಮನತಣಿಸಿತು.

ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮದಲ್ಲಿ ಪಂಚವಟಿ, ರಾಮನಿರ್ಯಾಣ, ವಿಶ್ವಾಮಿತ್ರಮೇನಕೆ, ಭೀಷ್ಮವಿಜಯ, ಚಕ್ರಚಂಡಿಕೆ, ಪಾಪಣ್ಣ ವಿಜಯ, ಚಂದ್ರಹಾಸ, ದ್ರೌಪದಿಪ್ರತಾಪ, ಮಾಯಾಮೃಗಾವತಿ, ರಾಣಿಶಶಿಪ್ರಭೆ, ಕವಿರತ್ನಕಾಳಿದಾಸ, ಬಬ್ರುವಾಹನ, ರತ್ನಾವತಿ ಕಲ್ಯಾಣ, ಶನೀಶ್ವರ ಮಹಾತ್ಮೆ ಸೇರಿದಂತೆ ಯಕ್ಷಗಾನದ ಹಲವು ಪೌರಾಣಿಕ ಪ್ರಸಂಗಗಳ ಅಪರೂಪದ ಪದ್ಯಗಳನ್ನು ರಾಘವೇಂದ್ರ ಆಚಾರ್ಯ ಜನ್ಸಾಲೆ, ರಾಮಕೃಷ್ಣ ಹೆಗಡೆ ಹಿಲ್ಲೂರು ಉತ್ತಮವಾಗಿ ಹಾಡಿ ರಂಜಿಸಿದರು. ಮದ್ದಳೆಯಲ್ಲಿ ಶಶಾಂಕ ಆಚಾರ್ಯ ಕಿರುಮಂಜೇಶ್ವರ, ಶ್ರೀವತ್ಸ ಗುಡ್ಡೆದಿಂಬ, ಚಂಡೆಯಲ್ಲಿ ವಿಘ್ನೇಶ್ವರ ಗೌಡ ಕೆಸರಕೊಪ್ಪ, ಪ್ರಜ್ವಲ್ ಮುಂಡಾಡಿ ಉತ್ತಮವಾಗಿ ಸಾಥ್ ನೀಡಿ ಮೆಚ್ಚುಗೆಗಳಿಸಿದರು.ದೇವಾಲಯದ ನಿರ್ಮಾಣದಲ್ಲಿ ಸಹಕಾರ ನೀಡಿದ ಊರಿನ ಗಣ್ಯರಾದ ಶಂಕರ ಭಟ್ಟ ಎಲೆಸರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಪಿ.ವಿ.ಹೆಗಡೆ ಹೊಸಗದ್ದೆ, ಗೋಪಾಲ ಹೆಗಡೆ ಹುಲಿಮನೆ, ಸಂಘಟಕರಾದ ಮಂಜುನಾಥ ಹಾಗೂ ಅಣ್ಣಪ್ಪ ಶಾನಬಾಳೆಗದ್ದೆ ಉಪಸ್ಥಿತರಿದ್ದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹಾರ್ಸಿಮನೆ ಕಾರ್ಯಕ್ರಮ ನಿರೂಪಿಸಿದರು.



ಸಿದ್ದಾಪುರ; ತಾಲೂಕಿನ ನೆಲ್ಲಿಕೊಪ್ಪ ಗ್ರಾಮದ 75 ವರ್ಷದ ವಯೋವೃದ್ಧ ಮಹಿಳೆ ಚೌಡಮ್ಮ ಜಟ್ಯಾ ಮಡಿವಾಳ ಅವರು ಮೇ 3 ರಂದು 4.5 ಲಕ್ಷ ರೂ. ಬೆಲೆಬಾಳುವ 38 ಗ್ರಾಂ ತೂಕದ ಬಂಗಾರದ ಸರವನ್ನು ಕಳೆದುಕೊಂಡಿದ್ದರು. ಈ ಕುರಿತು ಹಿರಿಯ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿಗಳು, ಸಿಬ್ಬಂದಿ ಕಳೆದುಕೊಂಡಿದ್ದ ಬಂಗಾರದ ಸರವನ್ನು ಹುಡುಕಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಸಂಭ್ರಮದ ಭದ್ರಕಾಳಿ, ಪರಿವಾರ ದೇವರ ಮರು ಬಂಡಿಹಬ್ಬ

◆ **ಗೋಕರ್ಣ:** ಗ್ರಾಮ ದೇವತೆ ಭದ್ರಕಾಳಿ ಹಾಗೂ ಪರಿವಾರ ದೇವರ ಮರು ಬಂಡಿಹಬ್ಬ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಸಂಜೆ ರಥಬೀದಿಯಲ್ಲಿರುವ ಕಳಸದ ಮನೆಯಿಂದ ಶ್ರೀ ದೇವಿಯ ಕಳಸ ಆಕರ್ಷಕ ಸಾಂಪ್ರದಾಯಕ ಮೆರವಣಿಗೆಯೊಂದಿಗೆ ಹೊರಟು ಭದ್ರಕಾಳಿ ಹಾಗೂ ಪರಿವಾರ ದೇವರ ಸಾನಿಧ್ಯಕ್ಕೆ ತೆರಳಿ ಪೂಜೆ ಸ್ವೀಕರಿಸಿತು.

ಈ ವೇಳೆ ಭಕ್ತರು ವಾರ್ಷಿಕವಾಗಿ ನೀಡುವ ಹರಕೆ, ಕಾಣಿಕೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ನಂತರ ಕಳಸದ ಮನೆಗೆ ಆಗಮಿಸುವುದರೊಂದಿಗೆ ಹಬ್ಬ ಸಂಪನ್ನಗೊಂಡಿತು. ಹಬ್ಬದ ಪ್ರಯುಕ್ತ ಭದ್ರಕಾಳಿ ಮಂದಿರದ ಬಳಿ ಮಿಠಾಯಿ ಮತ್ತಿತರ ಅಂಗಡಿಗಳು ಬಂದಿತ್ತು. ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.



ರಸ್ತೆ ಮಧ್ಯೆ ಶೆಡ್ ಹಾಕಿದ ರೈತರು

◆ **ಮುಂಡಗೋಡ:** ಒಂದೇ ಸರ್ವೇ ನಂಬರನ ರೈತರ ಗದ್ದೆಯಲ್ಲಿ ಎರಡು ರಸ್ತೆ ನಿರ್ಮಾಣಮಾಡಲುಮುಂದಾಗಿದ್ದರಿಂದ ವಿವಿಧ ಗ್ರಾಮಗಳಿಗೆ ತೆರಳುವ ರಸ್ತೆಯನ್ನು ಬಂದ ಮಾಡಿ ಶೆಡ್ ನಿರ್ಮಾಣ ಮಾಡಿ ರಸ್ತೆ ಬಂದ್ ಮಾಡಿದ ಘಟನೆ ನಡೆದಿದೆ. ತಾಲೂಕಿನ ಸಾಲಗಾಂವ್ ಗ್ರಾಮದಿಂದ ತುಂಬರಗಿ ಗ್ರಾಮಕ್ಕೆ ರೈತರ ಜಮೀನಿನಲ್ಲಿ ಹಾದು ಹೋಗಿರುವ ರಸ್ತೆಯ ಮಧ್ಯೆ ಗದ್ದೆಯ ರೈತರು ಶೆಡ್ ನಿರ್ಮಾಣ ಮಾಡಿದ್ದಾರೆ.ಕಳೆದ ಹಲವು ವರ್ಷಗಳ ಹಿಂದೆ ಸಾಲಗಾಂವ್ ಗ್ರಾಮದ ಸರ್ವೆ ನಂ.116,117,66,67ರಲ್ಲಿ ಹಿರಿಯರ ಒಪ್ಪಿಗೆಮೇರೆಗೆರೈತರಜಮೀನಿನಮೂಲಕ ತುಂಬರಗಿ ಗ್ರಾಮಕ್ಕೆ ಸಿಸಿ ರಸ್ತೆ ನಿರ್ಮಾಣ ಮಾಡಲಾಗಿತ್ತು. ಆದರಿಗ ಒಂದೇ ಸರ್ವೆ ನಂಬರ್‌ನಲ್ಲಿ ನಕಾಶೆಯಲ್ಲಿರುವ ಜಾಗದಲ್ಲಿ ಕೆಲವರು ಎರಡನೇ ರಸ್ತೆ ಮಾಡಲು ಮುಂದಾಗಿದ್ದಾರೆ. ಎರಡನೇ ರಸ್ತೆಗೆ ರೈತರು ಜಾಗ ಕೊಡುವುದರಿಂದ ಅನ್ಯಾಯವಾಗುತ್ತಿದೆ ಎಂದು ರೈತರು ಆರೋಪಿಸಿ ನಕಾಶೆಯಲ್ಲಿ ಇದ್ದ ಜಾಗದಲ್ಲೇ ರಸ್ತೆ ನಿರ್ಮಾಣ ಮಾಡುವಂತೆ ಒತ್ತಾಯಿಸಿ ಈಗಿರುವ ಹಳೆಯ ರಸ್ತೆಯ ಮಧ್ಯೆ ಶೆಡ್ ನಿರ್ಮಾಣ ಮಾಡಿ ರಸ್ತೆ ಬಂದ್ ಮಾಡಿದ್ದಾರೆ.ಕೆಲ ವ್ಯಕ್ತಿಗಳು ತಮ್ಮ ಹೊಲಗಳಗೆ ಹೋಗಲು ತೊಂದರೆಯಾಗುತ್ತಿದೆ ಎಂದು ತಮ್ಮ ಖರ್ಚಿನಲ್ಲೆ ನಕಾಶೆಯಲ್ಲಿ ಇರುವ ಜಾಗದಲ್ಲಿ ರಸ್ತೆ ನಿರ್ಮಾಣ ಕಾರ್ಯ ಆರಂಭಿಸಿದ್ದಾರೆ. ಈಕುರಿತು ತಹಸೀಲ್ದಾರ್ ಶಂಕರ ಗೌಡಿ ಅವರ ಗಮನಕ್ಕೆ ತಂದಿದ್ದು, ಸರಕಾರದ ಆದೇಶದಂತೆ ನಕಾಶೆಯಲ್ಲಿ ಇರುವ ಜಾಗದಲ್ಲಿ ರಸ್ತೆ ಮಾಡಲು ಅವಕಾಶವಿದೆ. ಹೀಗಾಗಿ ಹಳೆಯ ರಸ್ತೆಯನ್ನೆ ಕೃಷಿಗೆ ಬಳಸಿಕೊಳ್ಳಿ ಎಂದು ತಹಶೀಲ್ದಾರ್ ಹೇಳಿರುವುದಾಗಿ ರೈತರು ತಿಳಿಸಿದ್ದಾರೆ. ಈ ಏಕಾಏಕಿ ರೈತರು ರಸ್ತೆಯ ಮಧ್ಯೆ ಶೆಡ್ ನಿರ್ಮಿಸಿ ರಸ್ತೆ ಬಂದ್ ಮಾಡಿರುವುದಿರಂದ ಗ್ರಾಮಸ್ಥರಿಗೆ ಹೋಗಲು ಸಮರ್ಪಕ ರಸ್ತೆ ಇಲ್ಲದಂತಾಗಿದೆ. ಇದರಿಂದ ಸಾಲಗಾಂವ್ ಗ್ರಾಮದಿಂದ ತುಂಬರಗಿ ಗ್ರಾಮಕ್ಕೆ ತೆರಳಲು ಎರಡು ದಿನಗಳಿಂದ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇಲ್ಲಿನ ರಸ್ತೆಯ ಸಮಸ್ಯೆ ಬಗೆಹರಿಸುವರೆಗೂ ರಸ್ತೆಯ ಮಧ್ಯೆದಲ್ಲಿನ ಶೆಡ್ ತೆರವು ಮಾಡುವುದಿಲ್ಲವೆಂದು ರೈತರು ಪಟ್ಟು ಹಿಡಿದಿದ್ದಾರೆ. ಒಂದೆ ಸರ್ವೆ ನಂಬರನಲ್ಲಿ ಎರಡು ರಸ್ತೆ ಕೊಡುವುದರಿಂದ ರೈತರಗೆ ಅನ್ಯಾಯವಾಗುತ್ತದೆ. ಹೀಗಾಗಿ ಹಳೆಯ ರಸ್ತೆಯಲ್ಲಿ ಶೆಡ್ ನಿರ್ಮಾಣ ಮಾಡಿ ರಸ್ತೆ ಬಂದ್ ಮಾಡಿದ್ದೇವೆ. ಕೆಲವು ರೈತರು ಗ್ರಾಮಸ್ಥರು ಆರೋಪಿಸಿದರು.



ಗಮನ ಸೆಳೆದ ಸಾಣಿ ಅಮ್ಮ ದೇವಿಯ ನಗರೋತ್ಸವ

◆ **ಕುಮಟಾ:** ಪಟ್ಟಣದ ಹೆರವಟ್ಟಾದಲ್ಲಿ ದಕ್ಷಿಣಾಭಿಮುಖವಾಗಿ ನೆಲ್ಲೆಸಿರುವ ಶ್ರೀ ಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ ಸಂಭ್ರಮದ ನಿಮಿತ್ತ ಭಾನುವಾರ ನಡೆದ ದೇವಿಯ ನಗರೋತ್ಸವ ಗಮನ ಸೆಳೆಯಿತು.

ಹೆರವಟ್ಟಾದ ಶ್ರೀಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ ಸಂಭ್ರಮ ಕಾರ್ಯಕ್ರಮದ ನಾಲ್ಕನೇ ದಿನವಾದ ಭಾನುವಾರ ವಿವಿಧ ಹೋಮ ಹವನಾಧಿಗಳು ವೈದಿಕರ ನೇತೃತ್ವದಲ್ಲಿ ನಡೆಯಿತು. ನಾಗರ ಕಲ್ಲು ಪ್ರತಿಷ್ಠಾಪನೆ ಸೇರಿದಂತೆ ವಿವಿಧ ದೈವಿ ಕೈಂಕರ್ಯಗಳು ಭಕ್ತರ ಉಪಸ್ಥಿತಿಯಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಸೂರಜ್ ನಾಯ್ಕ ಸೋನಿ ಭೇಟಿ ನೀಡಿ, ದೇವರ ದರ್ಶನ ಪಡೆದು, ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ಸಂಜೆ ದೇವಿಯ ನಗರೋತ್ಸವ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದಿಂದ ಹೊರಟ ದೇವರ ಪಲ್ಲಕಿಯು ಹೆರವಟ್ಟಾದ ಬೆಣ್ಣೆ ಮನೆ ರಸ್ತೆ ಮಾರ್ಗವಾಗಿ ಹಂಡಿ ಓಣಿ ರಸ್ತೆಯಲ್ಲೂ ತೆರಳಿ, ಭಕ್ತರಿಂದ ಪೂಜೆ ಸ್ವೀಕರಿತು. ಬಳಿಕ ಹೆರವಟ್ಟಾ ಮುಖ್ಯ ರಸ್ತೆ ಮಾರ್ಗವಾಗಿ ಗಿಬ್ ಸರ್ಕಲ್, ಕೋರ್ಟ್ ರಸ್ತೆ ಮೂಲಕ ಶ್ರೀ ಕುಂಬೇಶ್ವರ ದೇವಾಲಯಕ್ಕೆ ತೆರಳಿ, ಅಲ್ಲಿಂದ ಮಾಸ್ತಿಕಟ್ಟೆ ಸರ್ಕಲ್, ಗುಡಾಳದಲ್ಲಿ ಭಕ್ತರಿಂದ ಪೂಜೆ ಸ್ವೀಕರಿಸಿದ ಬಳಿಕ ಅಲ್ಲಿಂದ ದೇವಸ್ಥಾನಕ್ಕೆ ಮರಳಿತು.



ಮೆರವಣಿಗೆಯೂದ್ದಕ್ಕೂ ಅಲ್ಲಲ್ಲಿ ಪಾನಕ ಸೇವೆಯನ್ನು ಭಕ್ತರುಕಲ್ಪಿಸಿದ್ದರಿಂದ ಮೆರವಣಿಗೆಯಲ್ಲಿ ಪಾಲ್ಗೊಂಡ ಭಕ್ತರು ದಣಿವಾರಿಸಿಕೊಂಡರು.

ಬಳಿಕ ಅಷ್ಟಾವಧಾನ ಸೇವೆ ನಡೆಯಿತು. ಇಂದು 108 ಬ್ರಹ್ಮ ಕಲಶಾಭಿಷೇಕ, ಪ್ರಸನ್ನ ಚಂಡಿಕಾ ಹೋಮ, ಮಹಾ ಪೂರ್ಣಾಹುತಿ, ಪ್ರಸಾದ ವಿತರಣೆ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಅಮೃತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ವೆಂಕಟೇಶ ನಾಯಕ ,ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ನಾಗಪ್ಪ ಗೌಡ ಅವರು ವಿನಂತಿಸಿದ್ದಾರೆ.

ಯಕ್ಷಗಾನ ನಮ್ಮ ಸಂಸ್ಕೃತಿಯ ಬೇರು: ಹೆಗಡೆ


◆ **ಸಿದ್ದಾಪುರ:** ಯಕ್ಷಗಾನವು ಕೇವಲ ಮನರಂಜನೆಗೆ ಸೀಮಿತವಲ್ಲ, ಇದು ಪರಮಾತ್ಮನಿಗೆ ಸಲ್ಲಿಸುವ ಕಲಾಸೇವೆ ಎಂದು ಉದ್ಯಮಿ, ಯುವ ಮುಖಂಡ ಅನಂತಮೂರ್ತಿ ಹೆಗಡೆ ಶಿರಸಿ ಹೇಳಿದರು. ಅವರು ತಾಲೂಕಿನ ದೊಡ್ಮನೆಯಲ್ಲಿ ದೊಡ್ಮನೆ ಯಕ್ಷೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿದ್ದ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಮಾತನಾಡಿ, ಯಕ್ಷಗಾನವು ನಮ್ಮ ಸಂಸ್ಕೃತಿಯ ಬೇರು. ಸಮಾಜಕ್ಕೆ ಪೂರಕವಾದುದನ್ನು ಯಕ್ಷಗಾನ ಕಲೆ ನೀಡುತ್ತದೆ. ನವರಸಗಳನ್ನು ಒಳಗೊಂಡ ಯಕ್ಷಗಾನವು ದಕ್ಷಿಣೋತ್ತರಕನ್ನಡ ಜಿಲ್ಲೆಯ ಕಲಾಭಿಮಾನಿಗಳೊಂದಿಗೆ ಕರಳು ಬಳ್ಳಿಯ ಸಂಬಂಧ ಹೊಂದಿದೆ. ಸನ್ಮಾನಿತ ಹಾಸ್ಯ ಕಲಾವಿದ ಚಪ್ಪರಮನೆ ಶ್ರೀಧರ ಹೆಗಡೆ ಯಕ್ಷಗಾನ ಕಲೆಯ ಸಂಪ್ರದಾಯ, ಚೌಕಟ್ಟನ್ನು ಕಾಯ್ದುಕೊಂಡು ಬಂದವರು ಎಂದರು.

ಯಕ್ಷಗಾನ ಕಲಾ ಅಕಾಡೆಮಿ ಸದಸ್ಯ ವಿದ್ಯಾಧರರಾವ್ ಜಲವಳ್ಳಿ ಮಾತನಾಡಿ, ಹಿಂದೆಲ್ಲಾ ಕಲಾವಿದರು ಆರ್ಥಿಕ ಲಾಭ ಪಡೆಯದೆ ಯಕ್ಷಗಾನ ಕಲೆಯನ್ನು ಸಮೃದ್ಧಿಗೊಳಿಸಿದ್ದರು. ಇಂದು ಆರ್ಥಿಕ ಲಾಭ ಪಡೆಯುತ್ತಿದ್ದರೂ ಕಲೆಯ ಮೌಲ್ಯ ವೃದ್ಧಿಸುತ್ತಿಲ್ಲ, ಕಲಾವಿದರಾದ ನಾವೇ ಈ ಕಲೆಯನ್ನು ಹಾಳುಮಾಡುತ್ತಿದ್ದಂತೆ ಅನಿಸುತ್ತದೆ. ಎಲ್ಲಿಯೂ ರಾಜಿಮಾಡಿಕೊಳ್ಳದೇ ರಾಜಹಾಸ್ಯ ನೀಡುವ ಕಲಾವಿದ ಚಪ್ಪರಮನೆಯವರನ್ನು ಸನ್ಮಾನಿಸಿದ್ದು ಸಂತಸದಾಯಕ. ಅವರ ಜೊತೆ ಪಾತ್ರಮಾಡುತ್ತಿರುವುದು ನಮ್ಮ ಸೌಭಾಗ್ಯ ಎಂದರು. ತಾಲೂಕಾ ಭಾರತ ಸೇವಾದಳದ ಅಧ್ಯಕ್ಷ ಕೆಕ್ಕಾರ ನಾಗರಾಜ ಭಟ್ಟ, ಹವ್ಯಾಸಿ ಯಕ್ಷಗಾನ ಕಲಾವಿದ ಶ್ರೀಧರ ಭಟ್ಟ ಗಡಿಹಿತ್ಲು ಉಪಸ್ಥಿತರಿದ್ದರು.

ಯಕ್ಷಗಾನ ಕಲಾರಂಗದ ಖ್ಯಾತ ಹಾಸ್ಯ ಕಲಾವಿದ ಶ್ರೀಧರ ಹೆಗಡೆ ಚಪ್ಪರಮನೆ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ಮಾತನಾಡಿದರು. ಕಾರ್ಯಕ್ರಮ ವ್ಯವಸ್ಥಾಪಕರಾದ ದರ್ಶನ ಹೆಗಡೆ, ಗೌರೀಶ ಹೆಗಡೆ ಇತರರು ಉಪಸ್ಥಿತರಿದ್ದರು. ನಾರಾಯಣ ಹೆಗಡೆ ನಿರ್ವಹಿಸಿದರು. ಗಜಾನನ ಹೆಗಡೆ ವಂದಿಸಿದರು. ನಂತರ ಪೆರ್ಡೂರು ಮೇಳ ಹಾಗೂ ಖ್ಯಾತ ಕಲಾವಿದರಿಂದ ರುದ್ರಕೋಪ, ಮಾಗಧ ಹಾಗೂ ಭದ್ರಸೇನ ಯಕ್ಷಗಾನ ಪ್ರದರ್ಶನಗೊಂಡವು.



ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ

◆ **ಗೋಕರ್ಣ:** ಸೊಕ್ಕು ಇದ್ದವರಿಗೆ ಯಾಣ, ರೊಕ್ಕ ಇದ್ದವರಿಗೆ ಗೋಕರ್ಣ ಎಂದು ಪ್ರಚಲಿತದಲ್ಲಿರುವ ಗಾದೆ ಮಾತು ಇಲ್ಲಿನ ಸ್ಥಳೀಯ ಆಡಳಿತಕ್ಕೆ ಅನ್ವಯವಾಗುತ್ತಿದೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಒಂದು ರಸ್ತೆಯಲ್ಲಿ ಧೂಳಿನ ರಾಶಿ ಇನ್ನೊಂದು ವ 'ಾರ್ಗದಲ್ಲಿ ಕಸದ ರಾಶಿ ಹೀಗೆ ಎಲ್ಲೆಡೆ ಸಮಸ್ಯೆಗಳು ರಾರಾಜಿಸುತ್ತಿದ್ದು, ಇದನ್ನ ಸರಿಪಡಿಸುವ ಗೋಜಿಗೆ ಹೋಗದ ಗ್ರಾಪಂಯವರು ಕೇವಲ ತಮಗೆ ಆದಾಯ ಬರುವ ಕೆಲಸ ಕಾರ್ಯವನ್ನು ಮಾಡುತ್ತಿದ್ದು, ಜನಸಾಮಾನ್ಯರ ಕೆಲಸವನ್ನ ನಿರ್ಲಕ್ಷಿಸಿದ್ದಾರೆ ಎಂಬ ಆರೋಪ ಜನರಿಂದ ಕೇಳಿಬರುತ್ತಿದೆ. ಹಳೆ ಮನೆಯ ದುರಸ್ತಿ ಅಥವಾ ಮೇಲ್ಛಾವಣಿ ನಿರ್ಮಾಣ ಮಾಡುವವರನ್ನ ಗುರುತಿಸಿ ಅಂಥವರಿಗೆ ನೋಟಿಸ್ ನೀಡಿ ನೀವು ಅಕ್ರಮ ಕಟ್ಟಡ ಕಟ್ಟುತ್ತಿದ್ದಿರಿ ತೆರವುಗೊಳಿಸಿ ಎಂದು ಸೂಚಿಸಲಾಗುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಮುಖ್ಯಕಡಲತೀರದ ಹಂಗಾಮಿ ಅಂಗಡಿಯ ಮಾಡುವ ಗ್ರಾಪಂ ಸ್ಥಳದಲ್ಲೇ ಖಾಯಂ ಕಟ್ಟಡ ಕಟ್ಟಿದ್ದು,ಆದರೆ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.ರಸ್ತೆ ಅಂಗಡಿ ಮುಂಗಟ್ಟುಗಳ ತೆರವಿನ ವರಸೆ ಬದಲು ಇಲ್ಲಿನ ಸಂಗಮ ನಾಲಾದ ಸೇತುವೆಯನ್ನ ಆಕ್ರಮಿಸಿ ಅಂಗಡಿ ಮುಂಗಟ್ಟು ಮುಂದೆ ತಂದಿರುವದನ್ನ ಸ್ವತಃ ಶಾಸಕ ದಿನಕರ ಶೆಟ್ಟಿ ವೀಕ್ಷಿಸಿ ವಾಹನ ಸಂಚಾರಕ್ಕೆ ತೊಡಕಾಗುತ್ತಿರುವುದನ್ನ ಅರಿತು ಅತಿಕ್ರಮಣವನ್ನ ತೆರವುಗೊಳಿಸುವಂತೆ ಪಂಚಾಯತ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ ಆರು ತಿಂಗಳ ಕಳೆದರು ಯಾವುದೇ ಕ್ರಮವಾಗಿಲ್ಲ, ಶಾಸಕರು ಸೂಚಿಸಿದ ದಿನವೇ ಅವರಿಗೆ ತಿಳಿಸಿದರೆ ಅವರು ಆಯಾ ಇಲಾಖೆಗೆ ಹೇಳುತ್ತಿದ್ದರಲ್ಲವೇ ಎಂದು ಪ್ರಶ್ನಿಸಿದಾಗ ತಮ್ಮ ಮಾತಿನ ವರಸೆ ಬದಲಿಸಿದ್ದಾರೆ. ಪ್ರವಾಸಿ ತಾಣದಲ್ಲಿ ಎಲ್ಲವೂ ಮಾಮೂಲಿನಲ್ಲಿ ನಡೆಯುತ್ತಿದ್ದು, ಇದರಂತೆ ಹೊರ ಜಿಲ್ಲೆಗಳಿಂದ ಬಂದು ವಹಿವಾಟು ನಡೆಸುವ ಅಂಗಡಿಕಾರರ ವಹಿವಾಟು ಮಾಮೂಲಿಗೆ ಒಳಪಟ್ಟಂತೆ ತೋರುತ್ತಿದೆ. ಒಟ್ಟಾರೆ ಜನಸಾಮಾನ್ಯ ಮಾತ್ರ ಅಗತ್ಯ ಕೆಲಸ ಕಾರ್ಯಗಳಿಗೆ ಹೈರಾಣಾಗಿದ್ದರೆ ಪ್ರವಾಸಿಗರು ಮೂಲಭೂತ ಸೌಕರ್ಯವಿಲ್ಲದೆ ಪರದಾಡುವುದು ಮುಂದುವರಿದಿದೆ.



ರಾಷ್ಟ್ರೀಯ ಪಂಚಾಯತ ರಾಜ್ ದಿನಾಚರಣೆ

◆ **ಭಟ್ಕಳ:** ಸರ್ಕಾರಿ ನೌಕರರು ಸದುದ್ದೇಶದಿಂದ ಮಾಡಿದ ಕೆಲಸಕ್ಕೆ ಕಾನೂನಿನಲ್ಲಿ ರಕ್ಷಣೆಇದ್ದು, ಇದರ ಪರಿಣಾಮ ಯಾವುದೇ ಅಡೆತಡೆ, ದೂರುಗಳು ದಾಖಲಾದರೂ, ಜಯಿಸಿ ಬರಲು ಸಾಧ್ಯವಿದೆ ಎಂದು ವಿಶ್ರಾಂತ ಜಿಲ್ಲಾ ನ್ಯಾಯಾಧೀಶ ಹಾಗೂ ಉಕ ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರ ರವಿ ನಾಯ್ಕ ಹೇಳಿದರು.

ಅವರು ಭಟ್ಕಳ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಪಂಚಾಯತ ರಾಜ್ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಲ್ಲಿ ತಾಳ್ಮೆ ಸೌಜನ್ಯ, ಪ್ರೀತಿಯ ಮನೋಭಾವ ಮುಖ್ಯವಾಗಿದ್ದು, ಹಳ್ಳಿಯಿಂದ ಬರುವ ಗ್ರಾಮೀಣ ವಾಸಿಗಳಿಗೆ ಅವರ ಭಾಷೆಯನ್ನು ಅರ್ಥೈಸಿಕೊಂಡು, ಅವರ ಭಾವನೆಗೆ ಒತ್ತು ನೀಡಿ ಸ್ಪಂದಿಸುವುದರಿಂದ ಕರ್ತವ್ಯಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ. ಪ್ರೊಬೆಷನರಿ, ಪ್ರಮೋಷನ್, ಪೆನ್ಶನ್ ಎಂಬ ಮೂರು ಕಾರ್ಯ ನಿರ್ವಹಿಸುವ ನೌಕರರು ಪ್ರತಿ ಹಂತದಲ್ಲೂ ಎಚ್ಚರಿಕೆಯ ಹೆಜ್ಜೆ ಇಡುವುದು ಮುಖ್ಯವಾಗಿದ್ದು, ಯಾವುದೇ ವಿವಾದಕ್ಕೆ ಸಿಲುಕದೆ ವ್ಯಾಪ್ತಿಗೆ ಬಾರದ ವಿಷಯದ ಕುರಿತು ಪ್ರಮಾಣೀಕರಿಸದೇ ಮತ್ತು ಪ್ರತಿಕ್ರಿಯಿಸದೇ ವರ್ತಿಸುವುದು ಮುಖ್ಯವಾಗಿದೆ ಎಂದರು. ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ ಮಾತನಾಡಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುನೀಲ್ ಎಂ. ಪ್ರಾಸ್ತಾವಿಕವಾಗಿ ಮಾತನಾಡಿ ಪಂಚಾಯತ ರಾಜ್ ವ್ಯವಸ್ಥೆ ನಡೆದು ಬಂದ ದಾರಿಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು.ಸನ್ಮಾನಿತರ ಪರವಾಗಿ ಮಾರುತಿ ದೇವಡಿಗ ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಂದ್ರಶೇಖರ ಮಾತನಾಡಿದರು. ವೇದಿಕೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಅಶೋಕ್, ಪಂರಾಇಂಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಗಣೇಶ, ತಾಪಂ ಸಹಾಯಕ ಲೆಕ್ಕಾಧಿಕಾರಿ ರಾಜೇಶ ಮಹಾಲೆ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಂದ್ರಶೇಖರ ಉಪಸ್ಥಿತರಿದ್ದರು. ಉಮೇಶ ಮುಂಡಳ್ಳಿ ಪ್ರಾರ್ಥಿಸಿದರು. ತಾಪಂ ವ್ಯವಸ್ಥಾಪಕ ಕರಿಯಪ್ಪ ನಾಯ್ಕ ಸ್ವಾಗತಿಸಿದರು. ಲೆಕ್ಕ ಸಹಾಯಕ ರಾಘವೇಂದ್ರ ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು. ಸಹಾಯಕ ನಿರ್ದೇಶಕ ಉದಯ ಬೋರ್ಕರ ವಂದಿಸಿದರು.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಚಾಲನೆ

◆ **ಹಾನಗಲ್ಲ:** ಹೊಸ ಆರ್ಥಿಕ ವರ್ಷ ಆರಂಭವಾಗಿ ಒಂದು ತಿಂಗಳು ಕಳೆದರೂ ಕೇಂದ್ರ ಸರ್ಕಾರದ ವಿಬಿ-ಜಿ ರಾಮ್‌ಜಿ ಇನ್ನೂ ಟೇಕಾಫ್ ಆಗಿಲ್ಲ, ಎರಡು ದಶಕದಿಂದ ಜಾರಿಯಲ್ಲಿದ್ದು ಗ್ರಾಮೀಣರಿಗೆ ಆಸರೆಯಾಗಿದ್ದ ಮನರೇಗಾ ಯೋಜನೆ ಮುಂದುವರೆಸಲು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಲು ನಿರ್ಧರಿಸಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಮಲ್ಲಿಗಾರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 20 ಲಕ್ಷ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಅಭಿವೃದ್ಧಿ ಹಾಗೂ ಗ್ರಾಮೀಣರ ಅಭ್ಯುದಯದ ಹಿತದೃಷ್ಟಿಯಿಂದ ಮನರೇಗಾ ಯೋಜನೆ ಮುಂದುವರೆಸುವುದು ಅನಿವಾರ್ಯವಾಗಿದೆ. ಆದರೆ ಮನರೇಗಾ ಬದಲಿಗೆ ವಿಬಿ-ಜಿ ರಾಮ್‌ಜಿ ಯೋಜನೆ ಜಾರಿಗೊಳಿಸಲು ಮುಂದಾಗಿರುವ ಕೇಂದ್ರ ಸರ್ಕಾರ ಇದುವರೆಗೆ ಅಧಿಸೂಚನೆ ಸಹ ಹೊರಡಿಸಿಲ್ಲ. ಯೋಜನೆ ಜಾರಿಗೂ ಮೊದಲು ರಾಜ್ಯ ಸರ್ಕಾರಗಳೊಂದಿಗೆ ಚರ್ಚೆ ಸಹ ನಡೆಸಿಲ್ಲ ಎಂದು ಹೇಳಿದ ಅವರು ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಗ್ರಾಮಗಳ ಒಳಗಿನ ರಸ್ತೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಮೂಲಭೂತ ಸೌಲಭ್ಯಗಳ ಹೆಚ್ಚಳಕ್ಕೂ ಒತ್ತು ನೀಡಲಾಗಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿಯ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಮುಖಂಡರಾದ ದಿವಾನಸಾಬ ಮಾಸನಕಟ್ಟಿ, ಈರಣ್ಣ ಬೈಲವಾಳ, ಅಶೋಕ ಅಡವಿ, ಸಿದ್ರಾಮಪ್ಪ ಹಾವೇರಿ, ಶಿವರಾಯಪ್ಪ ಅಡವೇರ, ಮಲ್ಲೇಶಪ್ಪ ಹಾವೇರಿ, ಗಂಗಾಧರ ಲಮಾಣಿ, ಕೃಷ್ಣಪ್ಪ ನಾಯ್ಕ, ಕೃಷ್ಣಪ್ಪ ಲಮಾಣಿ, ಕಲೀಂ ಮಾಸನಕಟ್ಟಿ, ಬಾಬುಸಾಬ ಹಾನಗಲ್, ಮೂಕಪ್ಪ ಲಮಾಣಿ, ರಮೇಶ ನಾಯ್ಕ, ಸಂಜು ಲಮಾಣಿ, ಮೆಹಬೂಬಅಲಿ ಹುಬ್ಬಳ್ಳಿ, ಬಸವರಾಜ ಅಡವಿ, ಬಸವರಾಜ ಅಡವೇರ, ಲಕ್ಷ್ಮಣ ಲಮಾಣಿ, ಬಸನಗೌಡ ಪಾಟೀಲ ಸೇರಿದಂತೆ ಇತರರು ಇದ್ದರು.



ನಾಳೆ ಐದು ಮನೆಗೊಂದು ಗ್ರಂಥಾಲಯಗಳು ಅನುಷ್ಠಾನ

◆ **ಹಾವೇರಿ:** ಕನ್ನಡ ಪುಸ್ತಕ ಪ್ರಾಧಿಕಾರದ, ಜಿಲ್ಲಾ ಜಾಗೃತಿ ಸಮಿತಿಯಿಂದ ಹಾವೇರಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಮೇ 12ರಂದು ಐದು ಗ್ರಂಥಾಲಯಗಳು ಅನುಷ್ಠಾನಗೊಳ್ಳಲಿವೆ.

ಮಂಗಳವಾರ ಬೆಳಗ್ಗೆ 10 ಘಂಟೆಗೆ ಅಗಡಿಯಲ್ಲಿ ಗುಡ್ಡಪ್ಪ. ಎನ್. ಚಟ್ರಮ್ಮನವರ ಅವರ ಮನೆಯಲ್ಲಿ ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಲಿಂಗಯ್ಯ ಹಿರೇಮಠ ಮೊದಲ ಗ್ರಂಥಾಲಯವನ್ನು ಉದ್ಘಾಟಿಸುವರು.

12 ಘಂಟೆಗೆ ಹೊಸರಿತ್ತಿ ಗ್ರಾಮದಲ್ಲಿ ಅಲ್ಲಾದೀನ್ ಎಮ್. ಕರ್ಜಗಿ ಅವರ ಮನೆಯಲ್ಲಿ ಎರಡನೇ ಗ್ರಂಥಾಲಯ ಉದ್ಘಾಟನೆಗೊಂಡರೆ, ಮಧ್ಯಾಹ್ನ 1 ಘಂಟೆಗೆ ಹೊಸರಿತ್ತಿಯಲ್ಲಿ ನಿವೃತ್ತ ಶಿಕ್ಷಕ ಬಸವರಾಜ ಎಸ್ ಯಾವಗಲ ಅವರ ಮನೆಯಲ್ಲಿ ಮೂರನೇ ಗ್ರಂಥಾಲಯ ಚಾಲನೆ ಪಡೆಯಲಿದೆ.ಮಧ್ನಹಾ 2 ಘಂಟೆಗೆ ಹೊಸರಿತ್ತಿಯಲ್ಲಿ ಶಿಕ್ಷಕ ಚಂದ್ರಶೇಖರ. ಎಸ್. ಮರಳಿಹಳ್ಳಿ ಅವರ ಮನೆಯಲ್ಲಿ ನಾಲ್ಕನೇ ಗ್ರಂಥಾಲಯ ಹಾಗೂ ಮಧ್ಯಾನ್ಹ 2.30 ಘಂಟೆಗೆ ಮೇಲ್ಮುರಿಯಲ್ಲಿ ಯುವಕವಿ ಶಿವರಾಜ ಅರಳಿ ಅವರ ಮನೆಯಲ್ಲಿ ಐದನೇ ಗ್ರಂಥಾಲಯ ಉದ್ಘಾಟನೆಯಾಗುವುದು ಎಂದು ನಿಯೋಜಿತ ಜಿಲ್ಲಾ ಜಾಗೃತಿ ಮನೆಗೊಂದು ಗ್ರಂಥಾಲಯ ಸಮಿತಿಯ ಸಂಚಾಲಕರಾದ ಎಸ್. ಆರ್.ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನ ನಾಳೆ

◆ **ಹಾವೇರಿ:** ನಗರದ ಸೃಜನಶೀಲ ಉಪನ್ಯಾಸಕರ ವೇದಿಕೆ ವತಿಯಿಂದ ಮೇ 12ರಂದು ಸಂಜೆ 4 ಗಂಟೆಗೆ ಇಲ್ಲಿಯ ಸರ್ಕಾರಿ ನೌಕರರ ಭವನದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ -1ರ ಫಲಿತಾಂಶದಲ್ಲಿ ಜಿಲ್ಲೆಗೆ ಅತಿ ಹೆಚ್ಚು ಅಂಕ ಪಡೆದು ರಾಜ್ಯಮಟ್ಟದ ಟಾಪ್-10 ರಲ್ಲಿ ಸ್ಥಾನ ಪಡೆದ ಮತ್ತು ಜಿಲ್ಲಾ ಮಟ್ಟದಲ್ಲಿ ಟಾಪ್ -10 ನಲ್ಲಿ ಸ್ಥಾನ ಪಡೆದು ಜಿಲ್ಲೆಯ ಕೀರ್ತಿ ಹೆಚ್ಚಿಸಿದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ಎಲ್ಲಾ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಹಾಗೂ ಪಿ.ಯು.ಸಿ. ನಂತರ ಮುಂದೇನು? ಕುರಿತ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ ವೇಳೆ ಸಮಾಜ ಕಲ್ಯಾಣ ಇಲಾಖೆಯ ಹಾವೇರಿ ನಗರದ ನಂಬರ್-1, 2 ವಸತಿ ನಿಲಯ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಸತಿ ನಿಲಯದ ಟಾಪ್-3 ವಿದ್ಯಾರ್ಥಿಗಳಿಗೆ ಹಾಗೂ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಟಾಪ್ -3ರಲ್ಲಿ ಸ್ಥಾನ ಪಡೆದ ವಿದ್ಯಾರ್ಥಿಗಳಿಗೂ ಸನ್ಮಾನಿಸಲಾಗುವುದು.

ಕಾರ್ಯಕ್ರಮ ವನ್ನು ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಉದ್ಘಾಟಿಸ ಲಿದ್ದಾರೆ. ಸಮಾಜಿಕ ಕಾರ್ಯಕರ್ತರಾದ ಪ್ರಭಾಕರರಾವ್ ಮಂಗಳೂರು ಅಧ್ಯಕ್ಷತೆ ವಹಿಸುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ(ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕ ಅಶೋಕ ಶಾಸ್ತ್ರಿ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸೃಜನಶೀಲ ಉಪನ್ಯಾಸಕರ ವೇದಿಕೆಯ ಗೌರವಾಧ್ಯಕ್ಷ ಶೇಖರ ಭಜಂತ್ರಿ ಪ್ರಾಸ್ತಾವಿಕ ನುಡಿಗಳನ್ನಾಡುವರು. ಅತಿಥಿಗಳಾಗಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಲ್ಲೇಶ ಕರಿಗಾರ ಮತ್ತು ನಗರದ ವೈದ್ಯರಾದ ಡಾ.ಉಮಾ ಬಳಿಗಾರರ ಅವರು ಭಾಗವಹಿಸುವರು. ಸೃಜನಶೀಲ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ಮಂಜುನಾಥ ಹಟ್ಟಿಯವರ ಗೌರವ ಉಪಸ್ಥಿತಿಯಲ್ಲಿರುವರು. ಒಟ್ಟು 51 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಸಾಧಕರಿಗೆ ಗೌರವಿಸಲಾಗುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಪೋಷಕರು, ಉಪನ್ಯಾಸಕರು, ಶಿಕ್ಷಣ ಪ್ರೇಮಿಗಳು ಮತ್ತು ಆಸಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವೇದಿಕೆಯ ಪದಾಧಿಕಾರಿಗಳು ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

ಕಿರುಸುದ್ದಿ

ರಕ್ಷಣೆಗೆ ಕಾನೂನು ಅರಿವು ಅಭಿಯಾನ

ಬೆಳಗಾವಿ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು. ಶೋಷಿತ ಸಮುದಾಯಗಳಿಗೆ ಕಾನೂನಿನ ರಕ್ಷಣೆ ಒದಗಿಸುವ ಉದ್ದೇಶದ ಈ ಕಾರ್ಯಕ್ರಮದಲ್ಲಿ ತಜ್ಞರು ಸಮಾನತೆಯ ಸಂದೇಶ ಸಾರಿದರು. ಬೆಳಗಾವಿ ನಗರ ಪೊಲೀಸ್ ಮತ್ತು ಮಾರಿಹಾಳ ಪೊಲೀಸ್ ಠಾಣೆಯ ವತಿಯಿಂದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುರಿತ ಕಾನೂನು ಅರಿವು ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿ ಆಯೋಜಿಸಲಾಗಿತು. ಸಮಾರಂಭದಲ್ಲಿ ಅಟ್ರಾಸಿಟಿ ತಡೆ ಕಾಯ್ದೆ ಮಹತ್ವ, ಎಸ್ಸಿ, ಎಸ್ಟಿ ಸಮುದಾಯದ ಹಕ್ಕುಗಳು ಮತ್ತು ಸಂವಿಧಾನ ಬದ್ಧ ಕಾನೂನು ರಕ್ಷಣೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.ಸಮಾಜದಲ್ಲಿ ನ್ಯಾಯ ಮತ್ತು ಸಮಾನತೆಗಾಗಿ ಪ್ರತಿಯೊಬ್ಬ ನಾಗರಿಕನಿಗೂ ಕಾನೂನು ಅರಿವು ಅತ್ಯಗತ್ಯವಾಗಿದ್ದು, ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಪೊಲೀಸ್ ಅಧಿಕಾರಿಗಳು ಮತ್ತು ಕಾನೂನು ತಜ್ಞರು ಭಾಗಿಯಾಗಿ ಈ ಅಭಿಯಾನವು ಸಮುದಾಯದಲ್ಲಿ ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಯಶಸ್ವಿಯಾಯಿತು.

ಅರ್ಜಿ ಆಹ್ವಾನ

ಬೆಳಗಾವಿ: ಬೆಳಗಾವಿ ಹಾಗೂ ಚಿಕ್ಕೋಡಿ ''ಸಖಿ'' ಒನ್ ಸ್ಟಾಪ್ ಸೆಂಟರ್ ಕೇಂದ್ರಗಳಿಗೆ ಮಿಷನ್ ಶಕ್ತಿಯೋಜನೆಯಡಿ ಆಡಳಿತಾಧಿಕಾರಿಗಳು, ಆಪ್ತಸಮಾಲೋಚಕರು ವಿಷಯನಿರ್ವಾಹಕರು, ಕಾನೂನು ಸಲಹೆಗಾರರು ಮತ್ತು ಸ್ವಚ್ಛತಾಗಾರರ ಕಂ. ಸೆಕ್ಯೂರಿಟಿ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳನ್ನು ಸೇವಾಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮಹಿಳಾ ಅಭ್ಯರ್ಥಿಗಳು ಮೇ 11 ರಿಂದ ಮೇ 25ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಖಾನಾಪುರ: ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕನ್ನಡ, ಇಂಗ್ಲೀಷ್, ಹಿಂದಿ, ಇತಿಹಾಸ, ರಾಜ್ಯಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಮತ್ತು ಕಂಪ್ಯೂಟರ್ ಸೈನ್ಸ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಈ ಹುದ್ದೆಗಳಿಗೆ ತಾತ್ಕಾಲಿಕ ಆಧಾರದಡಿ ಸ್ನಾತಕೋತ್ತರ ಪದವಿ ಪೂರೈಸಿದ ಮತ್ತು ಕಲಿಕೆಯಲ್ಲಿ ಅನುಭವವುಳ್ಳ ಅಭ್ಯರ್ಥಿಗಳನ್ನು ನೇಮಕಗೊಳಿಸಲಾಗುವುದು. ಅರ್ಜಿ ಸಲ್ಲಿಸಲು ಮೇ 30 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ಪಟ್ಟಣದ ವಿದ್ಯಾನಗರ, ಬಿಇಒ ಕಚೇರಿ ಬಳಿಯ ಪಿಯು ಕಾಲೇಜಿನ ಪ್ರಾಚಾರ್ಯರನ್ನು ಮತ್ತು ಕಾಲೇಜಿನ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉದ್ಯೋಗ ಮೇಳ ಇಂದು

ಖಾನಾಪುರ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ಮೇ 11ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2.30ರವರೆಗೆ ನಿರುದ್ಯೋಗಿಗಳಿಗಾಗಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಆಯೋಜಿಸಿರುವ ಈ ಮೇಳದಲ್ಲಿ ಎಸ್‌ಎಸ್ ಎಲ್‌ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ, ಬಿಇ ಪೂರೈಸಿದ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರ ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ ಹಾಜರಾಗಬಹುದು.

ಮಾರುತಿ ಹಂಜಿ ನಿಧನ

ಸಂಕೇಶ್ವರ: ಸ್ಥಳೀಯ (ನಮಾಜಮಾಳ) ಮಹಾದೇವ ನಗರದ ನಿವಾಸಿ ಮಾರುತಿ ಬಾಬುರಾವ್ ಹಂಜಿ (76) ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಓರ್ವ ಮಗ, ಮಗಳು, ಸೊಸೆ, ಮೊಮ್ಮಕ್ಕಳನ್ನು ಅಪಾರ ಬಳಗ ಇದ್ದಾರೆ.



ಯಲ್ಲಪ ಚಂದರಗಿ ನಿಧನ

ಯರಗಟ್ಟಿ: ಸಮೀಪದ ಇಟ್ನಾಳ ಗ್ರಾಮದ ನಿವಾಸಿ ವೀರಶೈವ ಲಿಂಗಾಯತ ಸಮಾಜದ ಹಿರಿಯರಾದ ಯಲ್ಲಪ್ಪ ಬಸಪ್ಪ ಚಂದರಗಿ (96) ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಬಿಜೆಪಿ ಮಂಡಳ ನಿಕಟಪೂರ್ವ ಅಧ್ಯಕ್ಷ ಈರಣ್ಣಾ ಚಂದರಗಿ ಸೇರಿದಂತೆ ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿ ಇದ್ದಾರೆ.





ಗೋಕರ್ಣ: ಗ್ರಾಮ ದೇವತೆ ಭದ್ರಕಾಳಿ ಹಾಗೂ ಪರಿವಾರ ದೇವರ ಮರು ಬಂಡಿಹಬ್ಬ ಭಾನುವಾರ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಭಕ್ತರು ವಾರ್ಷಿಕವಾಗಿ ನೀಡುವ ಹರಕೆ, ಕಾಣಿಕೆ ಸಲ್ಲಿಸಿ ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು. ನಂತರ ಕಳಸದ ಮನೆಗೆ ಆಗಮಿಸುವುದರೊಂದಿಗೆ ಹಬ್ಬ ಸಂಪನ್ನಗೊಂಡಿತು. ಹಬ್ಬದ ಪ್ರಯುಕ್ತ ಭದ್ರಕಾಳಿ ಮಂದಿರದ ಬಳಿ ಮಿಠಾಯಿ ಮತ್ತಿತರ ಅಂಗಡಿಗಳು ಬಂದಿತ್ತು. ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಶ್ರದ್ಧಾ ಭಕ್ತಿಯ ಹಿರೇಮಠದ ಶ್ರೀಗಳ ಅಡ್ಡಪಲ್ಲಕ್ಕಿ

ಯರಗಟ್ಟಿ: ತಾಲೂಕಿನ ಕೋ.ಶಿವಾಪೂರ ಗ್ರಾಮದ ಹಿರೇಮಠದ ಜಡೆತೆಲೆ ಮರುಳಸಿದ್ಧ ಶಿವಾಚಾರ್ಯ ಶ್ರೀಗಳ 5ನೇ ದಿನದ ಅಡ್ಡಪಲ್ಲಕಿ, ಲಿಂಗದೀಕ್ಷೆ ಹಾಗೂ ಅಯ್ಯಾಚಾರ, ಜಾತ್ರಾ ಮಹೋತ್ಸವವು ಬುಧವಾರ ಸಂಭ್ರಮದಿಂದ ನೆರವೇರಿತು.

ವಿವಿಧ ಬಣ್ಣದ ಹೂಗಳಿಂದ ಅಲಂಕಾರಿಕ ವಸ್ತುಗಳಿಂದ ಅಲಂಕೃತಗೊಂಡ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.

ಮಹಿಳೆಯರು ಕುಂಭ, ಕಳಸ ಹೊತ್ತು ಸಾಗಿದರು. ಭಜನಾ ಮಂಡಳಿಯವರು, ಡೊಳ್ಳಿನ ವಾದ್ಯಗಳು, ಭಕ್ತಿಗೀತೆ, ಶರಣರ ಪದಗಳು, ಜಾನಪದ ಹಾಡುಗಳು ಹಾಡಿ ಉತ್ಸವಕ್ಕೆ ಮೆರಗು ನೀಡಿದರು.

ಗ್ರಾಮದ ಹಿರೇಮಠದಿಂದ ಆವರಣದಿಂದ ಪ್ರಾರಂಭವಾದ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯಮೇಳಗಳೊಂದಿಗೆ ಮೆರವಣಿಗೆ ಮೂಲಕ ಸಂಚರಿಸಿ ಮಠಕ್ಕೆ ಬಂದು ತಲುಪಿತು.

ನಂತರ ಧರ್ಮಸಭೆಯಲ್ಲಿ ಸತ್ತಿಗೇರಿ ಚಂದ್ರಶೇಖರ ಸ್ವಾಮೀಜಿ, ಬಾಗೋಜಿಕೊಪ್ಪದ ಮುರಘರಾಜೇಂದ್ರ ಸ್ವಾಮೀಜಿ, ಮೊರಬ ಮಹೇಶ್ವರ ಸ್ವಾಮೀಜಿ, ಗ್ರಾಮದ ಮಹಾದೇವ ನಿಂ ಗಡ್ಡಿ, ಬಸಯ್ಯ ಹಿರೇಮಠ, ಮಹಾಂತೇಶ ತೋಟಗಿ, ಚನ್ನಪ್ಪ ಬೆಣಚನಮರಡಿ, ಶಿವಾನಂದ ಹಾದಿಮನಿ, ಶಿವಲಿಂಗಯ್ಯ ಮಠಪತಿ, ಶಿವಾನಂದ ಕಟ್ಟಿಮನಿ, ಪುಂಡಲೀಕ ಬದಾಮಿ, ಶಿದ್ಲಿಂಗ ಕುಂದರಗಿ, ಹಣಮಂತ ಯರಗಟ್ಟಿ ಮುಂತಾದವರು ಇದ್ದರು.



ಯರಗಟ್ಟಿ: ತಾಲೂಕಿನ ಕೋ.ಶಿವಾಪೂರ ಗ್ರಾಮದ ಹಿರೇಮಠದ ಜಡೆತೆಲೆ ಮರುಳಸಿದ್ಧ ಶಿವಾಚಾರ್ಯ ಶ್ರೀಗಳ 5ನೇ ದಿನದ ಅಡ್ಡಪಲ್ಲಕಿ, ಲಿಂಗದೀಕ್ಷೆ ಹಾಗೂ ಅಯ್ಯಾಚಾರ, ಜಾತ್ರಾ ಮಹೋತ್ಸವವು ಬುಧವಾರ ಸಂಭ್ರಮದಿಂದ ನೆರವೇರಿತು.

ಜೊಲ್ಲೆ ಗ್ರೂಪ್ ಸಂಸ್ಥಾಪಕ ಅಣ್ಣಾಸಾಹೇಬ ಜೊಲ್ಲೆ ಹೇಳಿಕೆ

ನೂತನ 55 ಶಾಖೆ ಆರಂಭಿಸುವ ಗುರಿ

ಚಿಕ್ಕೋಡಿ: ಗ್ರಾಮೀಣ ಪ್ರದೇಶದಲ್ಲಿ ಆರಂಭಗೊಂಡ ಸಂಸ್ಥೆಯು ಇಂದು ಅಂತರರಾಜ್ಯ ಮಟ್ಟದಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ 55 ನೂತನ ಶಾಖೆಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಜೊಲ್ಲೆ ಗ್ರೂಪ್ ಸಂಸ್ಥಾಪಕ ಅಣ್ಣಾಸಾಹೇಬ ಜೊಲ್ಲೆ ಹೇಳಿದರು.

ಚಿಕ್ಕೋಡಿ ತಾಲೂಕಿನ ಯಕ್ಸಂಬಾ-ನನದಿ ಸಿಬಿಎಸ್‌ಇ ಶಾಲೆಯ ಮೈದಾನದಲ್ಲಿ ಜೊಲ್ಲೆ ಗ್ರುಪ್‌ನ ವಿವಿಧ ಸಂಸ್ಥೆಗಳ ವಾರ್ಷಿಕ ಸರ್ವಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಸಹಕಾರಿ ಸಂಸ್ಥೆ ಬೆಳವಣಿಗೆ ಕಾಣುತ್ತಿವೆ. ಪ್ರಧಾನಿ ಮೋದಿ ಅವರು ರೈತ ಸಹಕಾರ ಸಂಘ ಆರಂಭ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿದ್ದಾರೆ.

ಕಳೆದ 36 ವರ್ಷಗಳಿಂದ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದಲ್ಲಿ ಬೀರೇಶ್ವರ ಸಹಕಾರಿ ಶಾಖೆಗಳನ್ನು ಆರಂಭಿಸಿ ಸಹಕಾರಿ ರಂಗದಲ್ಲಿ ಹೊಸ ಅಧ್ಯಾಯ ಬರೆದಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೊರೆಯುವ ಎಲ್ಲ ಸೌಲಭ್ಯಗಳು ಸಹಕಾರಿ ಸಂಸ್ಥೆಯಲ್ಲಿ ದೊರೆಯುತ್ತವೆ. ಇದರಿಂದ ಗ್ರಾಹಕರ ನೆಚ್ಚಿನ ಸಹಕಾರಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಹುಲಜಂತಿಯಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗುತ್ತದೆ. ಜೊಲ್ಲೆ ಮನೆತನ ಸಮಾಜದ ಪರವಾಗಿ ಕೆಲಸ ಮಾಡಲಾಗುತ್ತದೆ ಎಂದರು.

ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಟಿ ಲಿ. (ಬಹುರಾಜ್ಯ) 36ನೆಯ ಸರ್ವಸದಸ್ಯರ ಸಭೆ, ಎಣ್ಣೆ ಬೀಜ ಬೆಳಗಾರರ ಸಹಕಾರಿ ಸಂಘ ನಿ.ಯಕ್ಸಂಬಾದ 33ನೆಯ ವಾರ್ಷಿಕ ಸಭೆ, ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘದ 32 ನೆಯ ವಾರ್ಷಿಕ ಸಭೆ, ಜೊಲ್ಲೆ ಎಜ್ಯೂಕೇಶನ್ ಸೊಸಾಯಟಿಯ 31ನೇ ವಾರ್ಷಿಕ ಸಭೆ, ಯಕ್ಸಂಬಾ ಮಹಿಳಾ ಹಾಲು ಉತ್ಪಾದಕರ ಸಹಕಾರಿ ಸಂಘದ 19ನೆಯ ವಾರ್ಷಿಕ ಸಭೆ, ಲೋಕ ಕಲ್ಯಾಣ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ 15ನೆಯ ವಾರ್ಷಿಕ ಸಭೆ, ಬಸವಜ್ಯೋತಿ ಫಾರ್ಮರ್ ಪ್ರೊಡ್ಯುಸರ್ ಆರ್ಗನೈಜೇಶನ್‌ಕೋ-ಆಪ್. ಸೊಸಾಯಟಿಯ 6 ನೆಯ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



> ಪ್ರಸಕ್ತ ವರ್ಷದಿಂದ ಜೊಲ್ಲೆ ಗ್ರುಪ್ ದಿಂದ ಜಿಯೋ ಪೆಟ್ರೋಲ್ ಪಂಪ್ ಮತ್ತು ಜೊಲ್ಲೆ ಧ್ವನಿ ಎನ್ನುವ ಎಫ್‌ಎಂ ಆರಂಭ ಮಾಡಲಾಗುತ್ತದೆ.
> ■ **ಬಸವಪ್ರಸಾದ ಜೊಲ್ಲೆ, ಜೊಲ್ಲೆ ಗ್ರುಪ್ ಉಪಾಧ್ಯಕ್ಷ**

ಸಂಸ್ಥೆಯು ಪ್ರಸಕ್ತ ವರ್ಷದಲ್ಲಿ 4.45 ಲಕ್ಷ ಸದಸ್ಯರನ್ನು ಹೊಂದಿದೆ. 5000 ಕ್ಕೂ ಅಧಿಕ ಕೋಟಿ ಠೇವು ಸಂಗ್ರಹ. 3838 ಕೋಟಿ ಸಾಲ. 51.04 ಕೋಟಿ ರೂ ನಿವ್ವಳ ಲಾಭ ಗಳಿಸಿದೆ. ಕರ್ನಾಟಕ.ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ 233 ಶಾಖೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತವೆ ಎಂದರು.

ಸಂಸ್ಥೆಯು ಇಷ್ಟೊಂದು ಬೆಳವಣಿಗೆ ಸಾಧಿಸಲು ಗ್ರಾಹಕರ ವಿಶ್ವಾಸ, ಆಡಳಿತ ಮಂಡಳಿ ಪ್ರೋತ್ಸಾಹ ಮತ್ತು ಸಿಬ್ಬಂದಿಗಳ ನಿರಂತರ ಪರಿಶ್ರಮ ಕಾರಣ ಎಂದರು.

ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ಜೊಲ್ಲೆ ಮನೆತನ ಸಮಾಜ ಕಾರ್ಯ ಮಾಡುತ್ತಾ ಬಂದಿದೆ. ಬೀರೇಶ್ವರ ಸಂಸ್ಥೆಯ ಮೂಲಕ ಸಮಾಜ ಕಾರ್ಯ ಮಾಡಲು ಪ್ರೇರಣೆ ಸಿಕ್ಕಿದೆ. ಸಿಬ್ಬಂದಿಗಳ ಸಹಕಾರ. ಸದಸ್ಯರ ಪ್ರೋತ್ಸಾಹ ಸಂಸ್ಥೆಯು ಕೆಲಸ ಕಾರ್ಯ ಮಾಡುತ್ತದೆ.

ಬೀರೇಶ್ವರ ಸಹಕಾರಿ ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಹೇಬ ಜೊಲ್ಲೆ, ಉಪಾಧ್ಯಕ್ಷ ಆನಂದ ಪಾಟೀಲ, ಜ್ಯೋತಿ ಸಂಸ್ಥೆಯ ಅಧ್ಯಕ್ಷ ಬಾಬುರಾವ ಮಾಳಿ, ಉಪಾಧ್ಯಕ್ಷ ವಿಶ್ವನಾಥ ಪೇಟಕರ, ಯಕ್ಸಂಬಾ ಮಹಿಳಾ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಮಂಗಲ ಜೊಲ್ಲೆ, ಉಪಾಧ್ಯಕ್ಷ ಆರತಿ ಪೋತದಾರ, ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘದ ಅಧ್ಯಕ್ಷ ಲಕ್ಷ್ಮಣ ಕಬಾಡೆ, ಉಪಾಧ್ಯಕ್ಷ ಸದಾಶಿವ ಕೋಕಣೆ, ಮಹೇಶ ಭಾತೆ, ಈಶ್ವರ ಕತ್ತಿ, ರಾಜೇಂದ್ರ ಪಾಟೀಲ, ಚಂದ್ರಶೇಖರ್ ಕವಟಗಿ, ಮತ್ತು ಪ್ರಧಾನ ವ್ಯವಸ್ಥಾಪಕ ಬಿ.ಎ.ಗುರವ, ಉಪ ಪ್ರಧಾನ ವ್ಯವಸ್ಥಾಪಕರಾದ ಎಂ.ಕೆ.ಮಂಗಾವತೆ, ಆರ್.ಜಿ.ಕುಂಬಾರ, ಎಸ್.ಕೆ.ಮಾನೆ, ಶಿವು ಡಬ್ಬನ್ನವರ, ಶೇಖರ ಪಾಟೀಲ, ಸಂತೋಷ ಪಾಟೀಲ, ಎಂ.ಎಂ.ಪಾಟೀಲ ಮುಂತಾದವರು ಇದ್ದರು.

ಜೊಲ್ಲೆ ಗ್ರುಪ್ ಉಪಾಧ್ಯಕ್ಷ ಬಸವಪ್ರಸಾದ ಜೊಲ್ಲೆ ಸ್ವಾಗತಿಸಿದರು.

ಐಎಫ್‌ಎಸ್ ಪರೀಕ್ಷೆಯಲ್ಲಿ ಬಸವರಾಜ ದೇಶಕ್ಕೆ ಪ್ರಥಮ

ಅಥಣಿ: ತಾಲೂಕಿನ ಸವದಿ ಗ್ರಾಮದ ರೈತ ಕುಟುಂಬದ ಬಸವರಾಜ ಕೆಂಪವಾಡ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್ಸಿ) ಪ್ರಕಟಿಸಿರುವ ಭಾರತೀಯ ಅರಣ್ಯ ಸೇವೆ (ಐಎಫ್ ಎಸ್) ಪರೀಕ್ಷೆಯ ಫಲಿತಾಂಶದಲ್ಲಿ ದೇಶಕ್ಕೆ ಮೊದಲ ಸ್ಥಾನ ಪಡೆದು ಸವದಿ ಗ್ರಾಮದ ಕೀರ್ತಿ ಹೆಚ್ಚಿಸಿದ್ದಾರೆ.



ಸಾಮಾನ್ಯ ರೈತನ ಮಗನಾದ ಬಸವರಾಜ ಕೆಂಪವಾಡ 2024 ರಿಂದಲೂ ಯುಪಿಎಸ್ಸಿಯ ಪರೀಕ್ಷೆಯ ಅಧ್ಯಯನದಲ್ಲಿ ತೊಡಗಿ ಮೊದಲ ಪ್ರಯತ್ನದಲ್ಲಿ ಸಫಲತೆ ಕಾಣದಿದ್ದರೂ ಈಗ ಪ್ರಕಟವಾದ ಐಎಫ್‌ಎಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿ ವಿಶೇಷ ಸಾಧನೆ ಮಾಡಿ ಸಾಧಿಸುವ ಆಕಾಂಕ್ಷಿಗಳಿಗೆ ಸ್ಫೂರ್ತಿಯಾಗಿದ್ದಾರೆ.

ಅಪ್ಪಟ ಗ್ರಾಮೀಣ ಪ್ರತಿಭೆಯಾಗಿರುವ ಬಸವರಾಜ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸವದಿ ಗ್ರಾಮದಲ್ಲಿ 1ರಿಂದ 5ನೇ ತರಗತಿ ಓದಿ, ರಾಯಬಾಗ ತಾಲೂಕಿನ ಅಳಗವಾಡಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 6 ರಿಂದ 10ನೇ ತರಗತಿವರೆಗೆ ಅಧ್ಯಯನ ಮಾಡಿದ್ದಾರೆ. ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿ ಎಲ್ಲರ ಗಮನ ಸೆಳೆದಿದ್ದರು. ಜಮಖಂಡಿ ತಾಲೂಕಿನ ಯಲ್ಲಟ್ಟಿ ಗ್ರಾಮದ ಕೊಣ್ಣೂರ ಖಾಸಗಿ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಪೂರ್ಣಗೊಳಿಸಿದ ನಂತರ 2023ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಬಿ.ಎಸ್ಸಿ (ಅರಣ್ಯ) ಪದವಿ ಪಡೆದುಕೊಂಡಿದ್ದಾರೆ.

> ಸವದಿ ಗ್ರಾಮದ ಶ್ರೀ ಸಂಗನಬಸವ ಮಠದ ಸದ್ಭಕ್ತರಾದ ಧರೆಪ್ಪ ಕೆಂಪವಾಡ ಅವರು ಕೃಷಿ ಮೂಲಕ ಕಾಯಕ ದಾಸೋಹ ಜೀವಿಗಳಾಗಿದ್ದು, ಅವರ ಪುತ್ರ ಬಸವರಾಜ ಅವರು ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದು ವಿಶೇಷ ಸಾಧನೆ ಮಾಡಿ ದೇಶದ ಗಮನ ಸೆಳೆದದ್ದು ತುಂಬಾ ಸಂತಸ ತಂದಿದೆ. ಬಸವ ತತ್ವಗಳ ತಳ ಹದಿಯ ಮೇಲೆ ಅವರ ಮುಂದಿನ ಸೇವೆ ಮುಂದುವರಿಯಲೆಂದು ಅವರಿಗೆ ಅಭಿನಂದಿಸುತ್ತೇವೆ.
> ■ **ಶ್ರೀ ಗುರು ಮಹಾಂತ ಸ್ವಾಮೀಜಿ**

ಇವರ ಹಿರಿಯ ಸಹೋದರ ಸಿದ್ದು ಕೆಂಪವಾಡ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಫಲಿತಾಂಶದ ಸಾಧನೆ ತಿಳಿದು ಅವರ ಕುಟುಂಬ ಸದಸ್ಯರು, ಸವದಿ ಗ್ರಾಮಸ್ಥರು ಸಂಭ್ರಮ ಪಡುತ್ತಿದ್ದಾರೆ.

1 ಲಕ್ಷ ರೂ. ನಗದು ಕಳ್ಳತನ: ಆರೋಪಿ ಬಂಧನ

ಚನ್ನಮ್ಮನ ಕಿತ್ತೂರು: ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ 1 ಲಕ್ಷ ನಗದು ಹಣ ಕಳ್ಳತನ ಮಾಡಿದ್ದ ಆರೋಪಿ ಹುಬ್ಬಳ್ಳಿಯ ಅವಿನಾಶ ನಾಗೇಶ ಬೆಸ್ತರ (31) ಎಂಬಾತನನ್ನು ಬಂಧಿಸಿ ಆತನಿಂದ 1 ಲಕ್ಷ ರೂ. ನಗದು ಹಣವನ್ನು ಜಪ್ತಿ ಮಾಡುವಲ್ಲಿ ಕಿತ್ತೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ನಿಂಗಾಪೂರ ಗ್ರಾಮದ ವಿದ್ಯಾಶ್ರೀ ಶಿವಾನಂದ ಸಂಗೊಳ್ಳಿ ಇವರು ಕಿತ್ತೂರಿನಲ್ಲಿರುವ ಕೆವಿಜಿ ಬ್ಯಾಂಕಿನಿಂದ ರೂ 1 ಲಕ್ಷ ಹಣವನ್ನು ಡ್ರಾ ಮಾಡಿಕೊಂಡು ಬಸ್ ನಿಲ್ದಾಣದಲ್ಲಿ ಕಿತ್ತೂರು ಅಳ್ನಾವರ ಬಸ್‌ನ್ನು ಹತ್ತುವ ಸಂದರ್ಭದಲ್ಲಿ ವ್ಯಾನಿಟಿ ಬ್ಯಾಗ್‌ನ್ನು ಕತ್ತರಿಸಿ ಅದರಲ್ಲಿದ್ದ ರೂ 99000.00 ನಗದು ಹಣವನ್ನು ಮತ್ತೊಂದು ಪ್ರಕರಣದಲ್ಲಿ ರೂ 63000.00 ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ ಈ ಪೈಕಿ ಪೊಲೀಸರು ರೂ 1 ಲಕ್ಷ ನಗದು ಹಣವನ್ನು ಜಪ್ತಿ ಮಾಡಿ ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ, ಡಿಎಸ್‌ಪಿ ಡಾ. ವೀರಯ್ಯ ಹಿರೇಮಠ, ಸಿಪಿಐ ಶಿವಾನಂದ ಗುಡಗನಟ್ಟಿ ಇವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಜಿ.ಜಿ. ಹಂಪಣ್ಣವರ ಸಿಬ್ಬಂದಿಗಳಾದ ಸುನೀಲ್ ಮುರಗೋಡ, ಎಸ್.ಎ. ದಫೇದಾರ, ನಾಗರಾಜ ಕಡಗಣ್ಣವರ, ಎ.ಎಂ. ಚಿಕ್ಕೇರಿ, ಶಾಂತಿನಾಥ ಪಾಟೀಲ, ಮಂಜುನಾಥ ಹಳ್ಳಿ, ಜಿ.ಎಸ್. ಸಾಲಿಮಠ, ಎಂ.ಜಿ. ಕಂಬಾರ ಮುಂತಾದ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

> ಸಾರ್ವಜನಿಕರು ಬಸ್ಸನ್ನು ಹತ್ತುವಾಗ ಕಳ್ಳರು ಗದ್ದಲವನ್ನು ಸೃಷ್ಟಿ ಮಾಡಿ ಹಣ, ಬಂಗಾರ ದೋಚಲು ಪ್ರಯತ್ನಿಸುತ್ತಾರೆ ಅದರ ಬಗ್ಗೆ ಗಮನ ಹರಿಸಬೇಕು, ಸರತಿ ಸಾಲಿನಲ್ಲಿಯೇ ನಿಂತು ಬಸ್ಸನ್ನು ಹತ್ತಬೇಕು. ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸ್ ಸಿಬ್ಬಂದಿಗಳಿಗೆ ಅಭಿನಂದನೆಗಳು ಮತ್ತು ಇನ್ನೂ ಹೆಚ್ಚಿನ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಬೇಕು.
> ■ **ಡಾ. ವೀರಯ್ಯ ಹಿರೇಮಠ. ಡಿಎಸ್‌ಪಿ ಬೈಲಹೊಂಗಲ**



ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ



ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಚರಿಸಲಾಯಿತು.

ತಹಶೀಲ್ದಾರ್ ಎಂ. ವ್ಹಿ. ಗುಂಡಪ್ಪಗೋಳ ಅವರು ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಪಪಂ ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಪಶು ವೈದ್ಯಾಧಿಕಾರಿ ಎಂ.ವ್ಹಿ. ಪಾಟೀಲ, ಎಎಸ್‌ಐ ಬಿ.ಕೆ. ರಂಗಣ್ಣವರ, ಎಪಿಎಂಸಿ ಅಧ್ಯಕ್ಷ ನೀಲಕಂಠ ಶಿದ್ದಬಸನವರ, ಪಪಂ. ಸದಸ್ಯ ನಿಖಿಲ ಪಾಟೀಲ, ವಿಠ್ಠಲಗೌಡ ದೇವರಡ್ಡಿ, ಎಚ್.ಎಲ್. ವಜ್ರಮಟ್ಟಿ, ಎನ್.ಕೆ. ಹುಚ್ಚರಡ್ಡಿ, ಶಿವಾನಂದ ಮಿಕಲಿ, ಸಿದ್ದುಗೌಡ ದೇವರಡ್ಡಿ, ಸಿದ್ದಪ್ಪ ಮೆಟಗುಟ್ಟ, ವರುಣ ಮಿಕಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶ್ರವಣದೋಷವುಳ್ಳ ಮಕ್ಕಳಿಗೆ ಪ್ರವೇಶಾತಿ ಪ್ರಾರಂಭ

ಬೆಳಗಾವಿ: ಕರ್ನಾಟಕ ಸರ್ಕಾರದ ವತಿಯಿಂದ 2026–27ನೇ ಶೈಕ್ಷಣಿಕ ಸಾಲಿನ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಬೆಳಗಾವಿಯ ವಿದ್ಯಾಗಿರಿ ಆಜಂ ನಗರದಲ್ಲಿರುವ ಶ್ರವಣದೋಷವುಳ್ಳ ಮಕ್ಕಳ ಸರ್ಕಾರಿ ವಸತಿ ಶಾಲೆಯಲ್ಲಿ 1 ರಿಂದ 10ನೆಯ ತರಗತಿಗಳಲ್ಲಿ ಪ್ರವೇಶಗಳು ಪ್ರಾರಂಭವಾಗಿವೆ.

ಶಾಲೆಯು ಶ್ರವಣದೋಷವುಳ್ಳ ಬಾಲಕಿಯರಿಗಾಗಿ ರಾಜ್ಯದಲ್ಲಿ ಇರುವ ಏಕೈಕ ವಿಶೇಷ ಶಾಲೆಯಾಗಿದೆ, 5.10 ವರ್ಷದಿಂದ 18 ವರ್ಷ ವಯೋಮಿತಿಯ ಶ್ರವಣದೋಷವುಳ್ಳ ಬಾಲಕಿಯರು ಪ್ರವೇಶ ಪಡೆಯಬಹುದಾಗಿದೆ. ವಸತಿಯುತ ಶಾಲೆಯಾಗಿದು, ಉಚಿತ ವಸತಿ ಮತ್ತು ಊಟ ಉಪಹಾರದ ವ್ಯವಸ್ಥೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0831-2472250, 6361366212 ಗಳನ್ನು ಸಂಪರ್ಕಿಸಬಹುದೆಂದು ಶಾಲೆಯ ಅಧೀಕ್ಷಕರಾದ ಶಂಕರಗೌಡ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಯವ ಗೊಬ್ಬರ ಬಳಸಿ: ನಾಯ್ಕರ

ಹುಕ್ಕೇರಿ: ರಾಸಾಯನಿಕ ಗೊಬ್ಬರ ಜಾಸ್ತಿ ಹಾಕಿದ್ರೆ ಮಣ್ಣು ಹಾಳಾಗುತ್ತೆ. ಮಣ್ಣು ಹಾಳಾದರೆ ಬೆಳೆ ಕಡಿಮೆ ಬರುತ್ತೆ. ಅದಕ್ಕೆ ಸಾವಯವ ಗೊಬ್ಬರ ಬಳಸಿ ಎಂದು ಸಹಾಯಕ ಕೃಷಿ ನಿರ್ದೇಶಕರಾದ ಆರ್.ಬಿ.ನಾಯ್ಕರ ರೈತರಿಗೆ ಸಲಹೆ ನೀಡಿದರು.

ತಾಲೂಕಿನ ಸಾರಾಪುರ ಗ್ರಾಮದಲ್ಲಿ ಭೂಮಿ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆ, ಬೀಜೋಪಚಾರ ಆಂದೋಲನ ಮತ್ತು ಕೀಟನಾಶಕ ಕುರಿತು ಆಯೋಜಿಸಿದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ವರ್ಷಗಳೂ ಗತಿದಷ್ಟು ಮಣ್ಣಿನ ಶಕ್ತಿ ಕಡಿಮೆ ಆಗಿದೆ. ಪ್ರತಿ ವರ್ಷ ರಾಸಾಯನಿಕ ಗೊಬ್ಬರ ಉಪಯೋಗಿಸಿ ಮಣ್ಣಿನ ಸತ್ವ ಕಳೆದು ಕೊಂಡಿದೆ. ರೈತರು ನೀರಿಕ್ಷೆ ಮಾಡಿದಷ್ಟು ಬೆಳೆಯ ಇಳುವರಿ ಬರುತ್ತಿಲ್ಲ. ಕೊಟ್ಟಿಗೆ ಗೊಬ್ಬರ, ಸೊಪ್ಪು-ಸದೆ ಗೊಬ್ಬರ,ಎರೆಹುಳು ಗೊಬ್ಬರ ಹಾಕಿ. ಇದರಿಂದ ಮಣ್ಣು ಮೆತ್ತಗಾಗುತ್ತೆ.ನೀರು ಹಿಡಿದಿಟ್ಟುಕೊಳ್ಳುತ್ತೆ. ಬೆಳೆ ಚೆನ್ನಾಗಿ ಬರುತ್ತೆ. ಖರ್ಚು ಕಡಿಮೆಯಾಗುತ್ತದೆ. ರಾಸಾಯನಿಕ ಗೊಬ್ಬರಕ್ಕೆ ಒಂದು ಎಕರೆಗೆ 8 ಸಾವಿರ ರೂಪಾಯಿ ಖರ್ಚಾದರೆ, ಸಾವಯವಕ್ಕೆ 2-3 ಸಾವಿರ ಸಾಕು. ದುಡ್ಡು ಉಳಿಯುತ್ತೆ. ಹಸಿರೆಲೆ ಗೊಬ್ಬರ ಮಾಡಿ ಮಳೆಗಾಲದ ಮೊದಲು ಡಯಂಚಾ ಸೆಣಬು ಬಿತ್ತಿ. 40 ದಿನಕ್ಕೆ ಉಳುಮೆ ಮಾಡಿ. ಇದರಿಂದ ಮಣ್ಣಿಗೆ ಶಕ್ತಿ ಬರುತ್ತೆ. ಬಿತ್ತಿದ ಬೆಳೆಯ ಇಳುವರಿಗೆ ಹೆಚ್ಚಾಗುತ್ತದೆ. ಎಂದು ರೈತರಿಗೆ ಸಲಹೆ ನೀಡಿದರು.

ಕೃಷಿ ಅಧಿಕಾರಿ ಶಿವಾನಂದ ಕಮತ ಅವರು ಮಾತನಾಡಿದರು. ಆತ್ಮ ಯೋಜನೆ ಅಧಿಕಾರಿ ಸಮೀರ್ ಲೋಕಾಪುರ ಅವರು ಕಡಿಮೆ ಭೂಮಿಯಲ್ಲಿ ಹೆಚ್ಚಿನ ಆದಾಯ ನೀಡುವ ಬೆಳೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಪಂ ಅಭಿವೃದ್ಧಿ ಅಧಿಕಾರಿ ಅಮೃತಾ ಶಿರಹಟ್ಟಿ, ಗ್ರಾ.ಪಂ ಸದ್ಯರು, ಸಂಜೀವಿನಿ ಒಕ್ಕೂಟದ ಸಿಬ್ಬಂದಿ, ರೈತರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



2027ರಲ್ಲಿ ಸಂಕೇಶ್ವರ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ

ಸಂಕೇಶ್ವರ: 11 ವರ್ಷಗಳಿಗೊಮ್ಮೆ ಜರಗುವ ಐತಿಹಾಸಿಕ ಪ್ರಸಿದ್ಧ ಲಕ್ಷ್ಮೀದೇವಿ ಜಾತ್ರೆಯು ಮುಂದಿನ ವರ್ಷ 2027ರಲ್ಲಿ ನಡೆಯುವ ಜಾತ್ರೆಯ ಧಾರ್ಮಿಕ ಕಾರ್ಯಕ್ರಮಗಳ ದಿನಾಂಕಗಳ ಬಗ್ಗೆ ಶ್ರೀ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವ ಕಮಿಟಿಯವರು ತಿಳಿಸಿದರು.



ಪಟ್ಟಣದ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಲಕ್ಷ್ಮೀ ದೇವಿ ಜಾತ್ರಾ ಉತ್ಸವ ಕಮಿಟಿಯ ಹಕ್ಕುದಾರರಾದ ಕುನಾಲ ಪಾಟೀಲ ಮಾತನಾಡಿ, ಲಕ್ಷ್ಮೀದೇವಿ ಜಾತ್ರೆಯು 5 ದಿನಗಳ ಕಾಲ ಜಾತ್ರೆಯು ಧಾರ್ಮಿಕ ವಿಧಿ-ವಿಧಾನಗಳಂತೆ ನಡೆಯಲಿದ್ದು, 2027ರ ಮೇ 4 ರಂದು ಧ್ವಜಾರೋಹಣ ಕಾರ್ಯಕ್ರಮ,ಹಾಲಕಂಬನಿಲ್ಲಿಸುವುದು,ಸೀಮೆಯಿಂದ ಲಕ್ಷ್ಮೀದೇವಿ ತರುವುದು, ಅಕ್ಕಿ ಬಿಳುವ ಕಾರ್ಯಕ್ರಮ ಜರುಗಲಿದೆ.

2027ರ ಮೇ 11ರಂದು ಮುಖ್ಯ ಅತಿಥಿಗಳಿಂದ ದೇವಿಗೆ ಪೂಜೆ, ಹಕ್ಕುದಾರರ ಮನೆಗಳಿಗೆ ತೆರಳಿ ಉಡಿ ತುಂಬಿಸಿಕೊಳ್ಳುವ ಕಾರ್ಯಕ್ರಮ, 2027ರ ಮೇ 12ರಂದು ಲಕ್ಷ್ಮೀದೇವಿ ಪ್ರತಿಷ್ಠಾಪನೆ ಮಾಡುವುದು, 13 ಮತ್ತು 14 ರಂದು ಸಾರ್ವಜನಿಕರಿಂದ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ. 2027ರ ಮೇ 15ರಂದು ಲಕ್ಷ್ಮೀದೇವಿಯ ಭವ್ಯ ಮೆರವಣಿಗೆ ನಡೆದು ಸೀಮೆಗೆ ಕಳಿಸುವ ಕಾರ್ಯಕ್ರಮ ಜರುಗುವುದು ಎಂದರು.

ಜಾತ್ರೆಗೆ ಮೊದಲು ಪಟ್ಟಣದಲ್ಲಿ ತಗ್ಗು ಬಿದ್ದ ರಸ್ತೆ ಸೇರಿದಂತೆ ಮೂಲ ಸೌಕರ್ಯಗಳ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ಜಾತ್ರೆಯ ಸಂಬಂಧವಾಗಿ ಪಟ್ಟಣದಲ್ಲಿ ಮೂಲ ಸೌಕರ್ಯಗಳಿಗಾಗಿ ಈಗಾಗಲೇ ಶಾಸಕ ನಿಖಿಲ ಕತ್ತಿ ಅವರ ಗಮನಕ್ಕೆ ತರಲಾಗಿದ್ದು, ಅಗತ್ಯ ನೆರವಿನ ಭರವಸೆ ನೀಡಿದ್ದಾರೆ. ಸಂಸದರ ನಿಧಿಯಿಂದಲೂ ಜಾತ್ರೆಯ ಸೌಕರ್ಯಗಳಿಗಾಗಿ ಹಣ ನೀಡಲು ವಿನಂತಿಸಲಾಗುವುದು ಜಾತ್ರಾ ಕಮಿಟಿಯ ಪದಾಧಿಕಾರಿಗಳು ತಿಳಿಸಿದರು.

ಈ ಸಂಧರ್ಭದಲ್ಲಿ ಲಕ್ಷ್ಮೀ ದೇವಿ ಜಾತ್ರಾ ಕಮಿಟಿಯ ಅಧ್ಯಕ್ಷ ಅಪ್ಪಾಸಾಹೇಬ್ ಶಿರಕೋಳಿ, ಪದಾಧಿಕಾರಿಗಳಾದ ಸುನೀಲ ಪರ್ವತರಾವ, ಬಸನಗೌಡ ಪಾಟೀಲ, ಹಕ್ಕುದಾರರಾದ ಅಪ್ಪಾಸಾಹೇಬ ಶೆಟ್ಟಿಮನಿ, ಗಿರೀಶ ಕುಲಕರ್ಣಿ, ಸಂತೋಷ ಹವಾಲ್ದಾರ, ಬಾಳಕೃಷ್ಣ ಕುಲಕರ್ಣಿ,ದೀಪಕ ಅಸೋದೆ ಇದ್ದರು.

ಸಂಭ್ರಮದ ಶ್ರೀ ಲಕ್ಷ್ಮೀದೇವಿ ಜಾತ್ರೆ

ಯಮಕನಮರಡಿ: ಸಮೀಪದ ಗಡಿ ಭಾಗದ ಗ್ರಾಮವಾದ ಕವಳಿಕಟ್ಟಿ ಗ್ರಾಮದಲ್ಲಿ ದಿನಾಂಕ ಮೇ 5ರಿಂದ ಮೇ 9ರವರೆಗೆ ಶ್ರೀ ಗ್ರಾಮ ದೇವತೆ ಲಕ್ಷ್ಮೀದೇವಿ ಜಾತ್ರೆಯು ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಬಹುತೇಕ 75ರಷ್ಟು ಕುಟುಂಬಗಳು ಮಹಾರಾಷ್ಟ್ರದ ಮುಂಬೈನಲ್ಲಿ ತಮ್ಮ ನೌಕರಿ ಕೆಲಸ ಮಾಡುತ್ತಾ ಇದ್ದು ಪ್ರತಿ ಐದು ವರ್ಷಕ್ಕೊಮ್ಮೆ ಗ್ರಾಮದೇವತೆಯ ಜಾತ್ರೆಗೆ ಬಂದು ಭಕ್ತಿ ಪೂರ್ವಕ ಜಾತ್ರೆಯನ್ನು ಆಚರಿಸುತ್ತಾ ಬಂದಿರುವುದೊಂದು ಗ್ರಾಮದ ಪ್ರತೀತಿ ಆದರಂತೆ ಈ ವರ್ಷವೂ ಸಹಿತ ವಿಜೃಂಭಣೆ ಜಾತ್ರೆಯನ್ನು ಆಚರಿಸುವಲ್ಲಿ ಯಶಸ್ವಿಯಾದರು.

ಗ್ರಾಮವು ಗಡಿ ಭಾಗದಲ್ಲಿದ್ದರೂ ಸಹಿತ ಕರ್ನಾಟಕಕ್ಕೆ ಸಂಪರ್ಕದಲ್ಲಿರುವ ಒಂದು ಗ್ರಾಮ ಈ ಗ್ರಾಮದಲ್ಲಿ ನೂರಕ್ಕೆ 80ರಷ್ಟು ಕುಟುಂಬಗಳು ಕನ್ನಡ ಮಾತನಾಡುವ ಕುಟುಂಬಗಳು ಇರುತ್ತವೆ. ಕಾರಣ ಜನರಿಗೆ ಯಾವುದೇ ತರದ ಗಡಿಭಾಗದ ಭೇದ ಭಾವನೆ ಇರುವುದಿಲ್ಲ ಇದರಿಂದಾಗಿ ಗಡಿ ಭಾಗದ ಜನರ ಭಕ್ತಿ ವಿಶ್ವಾಸ ಕನ್ನಡಿಗರ ಮೇಲೆ ಇರುತ್ತದೆ. ಅಲ್ಲದೆ ಸಮೀಪದ ಹತ್ತರಗಿ ಯಮಕನಮರಡಿ ಮನಗುತ್ತಿ ಸೇರಿದಂತೆ ಅನೇಕ ಗ್ರಾಮಗಳ ಜನರು ಶ್ರೀ ಲಕ್ಷ್ಮಿ ದೇವಿಯ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತ ಬಂದಿರುವುದನ್ನು ಸಂಪ್ರದಾಯ.



ಶಿಕ್ಷಣಕ್ಕೆ ರೈತರ ಪ್ರೋತ್ಸಾಹ ಎಲ್ಲರಿಗೂ ಮಾದರಿ



ಚನ್ನಮ್ಮನ ಕಿತ್ತೂರು: ಕನ್ನಡ ಭಾಷೆ ಮತ್ತು ಬೆಳವಣಿಗೆಯಲ್ಲಿ ಗ್ರಾಮೀಣ ರೈತರ ಮಕ್ಕಳ ಕೊಡುಗೆ ಅಪಾರವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಗುಲಾಬಸಾಬ್ ಬಾಳೇಕುಂದ್ರಿ ಹೇಳಿದರು.

ಅವರು ಸಮೀಪದ ಮೂಕಬಸವನಗರದಲ್ಲಿ ಈಚೆಗೆ ನಡೆದ 44 ನೇ ಅನುಭಾವ ಬೆಳದಿಂಗಳ ಹಾಗೂ ಎಸ್ ಎಸ್ ಎಲ್ ಸಿ ಕನ್ನಡ ಮಾಧ್ಯಮದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ ಹಲವು ಮೂಲಭೂತ ಸೌಲಭ್ಯಗಳ ಕೊರತೆಯ ಮಧ್ಯೆಯೂ ವಿವಿಧೆಡೆ ಕೃಷಿ ಜಮೀನಿನಲ್ಲಿಯೇ ಮನೆ ಮಾಡಿಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣದ ನೀಡುವಲ್ಲಿ ಪಾಲಕರು ನೀಡುತ್ತಿರುವ ಆಸಕ್ತಿ ಇತರರಿಗೆ ಮಾದರಿಯಾಗಿದೆ ಎಂದರು.

ಮುಖ್ಯಾಧ್ಯಾಪಕ ಷಣ್ಮುಖ ಗಣಾಚಾರಿ ಮಾತನಾಡಿ ಬಾಲ್ಯದಲ್ಲಿಯೇ ಮಕ್ಕಳನ್ನು ಆಧ್ಯಾತ್ಮ ಮತ್ತು ಉತ್ತಮ ಸಂಸ್ಕಾರದಲ್ಲಿ ಬೆಳೆಸಿದರೆ ಮುಂದೆ ಅವರು ಉತ್ತಮ ನಾಗರೀಕರಾಗುತ್ತಾರೆ ಎನ್ನುವುದಕ್ಕೆ ಇಲ್ಲಿ ನಿರಂತರವಾಗಿ ನಡೆಯುತ್ತಿರುವ ಅನುಭಾವ ಬೆಳದಿಂಗಳ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

ಮುಖ್ಯಾಧ್ಯಾಪಕ ವೈ.ಕೆ. ನಾಗಣ್ಣವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಾದ ತೇಜಶ್ರೀ ಕೆದಾರ್ಜಿ, ಗೌರಮ್ಮ ಮಾತಾರಿ, ಲಕ್ಷ್ಮೀ ಮಾತಾರಿ, ಅಭಿಷೇಕ ಅರಳಿಮರದ, ಬಸವರಾಜ ರಾಮಜಿ ಅವರನ್ನು ಸತ್ಕರಿಸಲಾಯಿತು. ಅಡವಿಸಿದ್ದೇಶ್ವರ ಸ್ವಾಮೀಜಿ, ರಾಜೇಂದ್ರ ಇನಾಮದಾರ, ಮಯೂರ ಗಿರಿಯಾಲ, ಕಾಶೀಮಸಾಬ್ ನೇಸರಗಿ, ನವೀನ ರಾಮಜಿ, ರುದ್ರಯ್ಯ ಕರಡಿ, ಶ್ರೀನಿವಾಸ ಕೇದಾರ್ಜಿ, ಹಾಗೂ ಇತರರು ಇದ್ದರು. ಮಂಜು ಅಂಕಲಗಿ ಸ್ವಾಗತಿಸಿ ನಿರೂಪಿಸಿದರು.

ಕಿರುಸುದ್ದಿ

ಭಗೀರಥ ಆದರ್ಶ ಪಾಲಿಸಿ: ಉಪ್ಪಾರ

ಬೆಳಗಾವಿ: ಶ್ರಮಪಟ್ಟರೆ ಜಯ ನಿಶ್ಚಿತ. ಮಹರ್ಷಿಗಳ ಶ್ರಮ ಸಂಸ್ಕೃತಿಯನ್ನು ಸಮಾಜ ಅಳವಡಿಸಿಕೊಳ್ಳಬೇಕು ಎಂದು ಉಮಾ ಉಪ್ಪಾರ ಅವರು ಸಲಹೆ ನೀಡಿದರು.

ಭಾನುವಾರ ನಗರದ ಕುಮಾರಗಂಧರ್ವ ಕಲಾ ಮಂದಿರದಲ್ಲಿ ಬೆಳಗಾವಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ಭಗೀರಥರ ಜಯಂತಿಯನ್ನು ಸಾಂಕೇತಿಕವಾಗಿ ಆಚರಿಸಲಾಯಿತು. ಹೊಸದುರ್ಗದ ಭಗೀರಥಪೀಠದ ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮೀಜಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬೆಂಗಳೂರಿನ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ ಅವರು ಉದ್ಘಾಟನಾಪರ ನುಡಿಗಳನ್ನಾಡಿದರು. ವೇದಿಕೆಯ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ವಿದ್ಯಾವತಿ ಭಜಂತ್ರಿ ಸೇರಿದಂತೆ ಇನ್ನುಳಿದ ಗಣ್ಯರು ಉಪಸ್ಥಿತರಿದ್ದರು.

ಈ ವೇಳೆ ಉಪನ್ಯಾಸವನ್ನು ನೀಡಿದ ಉಮಾ ಉಪ್ಪಾರ ಅವರು, ಭಗೀರಥರ ಹೆಸರು ಕೇಳಿ ಬರುತ್ತಲೇ ಉಪ್ಪಾರ ಸಮಾಜ ಎಲ್ಲರಿಗೂ ನೆನಪಾಗುವಂತಹ ಕಾರ್ಯವನ್ನು ಮಾಡಬೇಕು. ಭಗೀರಥ ಮುನಿಗಳ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಭಗೀರಥರ ಉಲ್ಲೇಖವನ್ನು ರಾಮಾಯಣದಲ್ಲಿಯೂ ಇದೆ. ಶ್ರಮಪಟ್ಟಾಗ ಜಯ ಸಿಗುತ್ತದೆ ಎಂಬ ಸಂದೇಶವನ್ನು ಅವರು ನೀಡಿದ್ದಾರೆ ಎಂದರು.

ಕಾರ್ಯಕ್ರಮದ ಮೊದಲಿಗೆ ಭಾನುವಾರ ನಿಧನರಾದ ಸಚಿವ ಡಿ. ಸುಧಾಕರ್ ಅವರಿಗೆ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಇದೇ ವೇಳೆ ಪ್ರತಿಭಾ ಪುರಸ್ಕಾರ ಕೂಡ ನಡೆಯಿತು. ಎಚ್.ಬಿ. ಹುಲ್ಲೊಳ್ಳಿ ಮತ್ತು ಜಿ.ಕೆ. ಉಪ್ಪಾರ ಅವರು ನಿರೂಪಿಸಿದರು. ಸ್ವಾತಿ ಕಿಡದಾಳ ಅವರು ಮೊದಲಿಗೆ ಪ್ರಾರ್ಥನೆ ಸಲ್ಲಿಸಿದರು. ಉಪನ್ಯಾಸಕರಾದ ಬಸವರಾಜ್ ತುಳಸಿಗೇರಿ ಅವರು ಗಣ್ಯರು ಸ್ವಾಗತಿಸಿದರು. ಈ ವೇಳೆ ಉಪ್ಪಾರ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ಕೆಎಲ್‌ಇಯಲ್ಲಿ ವಿಶ್ವ ರೆಡ್ ಕ್ರಾಸ್ ದಿನಾಚರಣೆ

ಬೆಳಗಾವಿ: ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಇವರ ಯುವ ರೆಡ್ ಕ್ರಾಸ್ ಘಟಕವು ಐಕ್ಯೂಎಸಿ ಸಹಯೋಗದಲ್ಲಿ "ಮಾನವೀಯತೆಯಲ್ಲಿ ಏಕತೆ" ಎಂಬ ವಿಷಯದಡಿ ವಿಶ್ವ ರೆಡ್ ಕ್ರಾಸ್ ದಿನಾಚರಣೆಯನ್ನು ಸರ್ ಸಿ.ವಿ. ರಾಮನ್ ಸಭಾಂಗಣದಲ್ಲಿ ಆಯೋಜಿಸಿತು.

ಈ ಕಾರ್ಯಕ್ರಮದ ಉದ್ದೇಶ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳು, ಕರುಣೆ ಹಾಗೂ ಸಾಮಾಜಿಕ ಜವಾಬ್ದಾರಿಗಳ ಕುರಿತು ಜಾಗೃತಿ ಮೂಡಿಸುವುದಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಿಸ್ ಎಂ. ಎಸ್. ಬಾಗಿ, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಲ್ಲಭ ನಿಮಾಯಿ ದಾಸ್, ಮಂಕ್, ಇಸ್ಕಾನ್ ದೇವಸ್ಥಾನ, ಬೆಳಗಾವಿ ಅವರು ಮಾನವೀಯತೆ, ದಯೆ ಹಾಗೂ ನಿಸ್ವಾರ್ಥ ಸೇವೆಯ ಮಹತ್ವದ ಕುರಿತು ಪ್ರೇರಣಾದಾಯಕ ಉಪನ್ಯಾಸ ನೀಡಿದರು.ಪವಿತ್ರಾ ಜೆ. ಸಮಾಜೆ, ಯುವ ರೆಡ್ ಕ್ರಾಸ್ ಸಂಯೋಜಕ ಅವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ನಾಗರಾಜ ಮರಿಹಾಳ, ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಮಿಸ್ ಅಮೃತಾ ಮತ್ತು ಸಿಮ್ರನ್, ಬಿ.ಎಸ್ಸಿ. ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿನಿಯರು ನಿರೂಪಿಸಿದರು.

ಎಲ್ಲಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವೃಂದದ ಸದಸ್ಯರು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅದನ್ನು ಮಾಹಿತಿಪೂರ್ಣ, ಅರ್ಥಪೂರ್ಣ ಮತ್ತು ಪ್ರೇರಣಾದಾಯಕ ಕಾರ್ಯಕ್ರಮವನ್ನಾಗಿ ಮಾಡಿದರು.

ಕಾರು ಮರಕ್ಕೆ ಡಿಕ್ಕಿ: ಇಬ್ಬರಿಗೆ ಗಾಯ

ಬನವಾಸಿ: ಚಾಲಕನ ನಿಯಂತ್ರಣ ತಪ್ಪಿ ಕಾರು ಮರಕ್ಕೆ ಡಿಕ್ಕಿಯಾಗಿ ಇಬ್ಬರಿಗೆ ಗಂಭೀರ ಗಾಯವಾಗಿ, ಚಾಲಕನಿಗೆ ಸಣ್ಣಪುಟ್ಟ ಗಾಯವಾದ ಘಟನೆ ಶಿರಸಿ-ಬನವಾಸಿ ರಸ್ತೆಯ ಕಾಂಗ್ರೆಸ್ ಕಛೇರಿಯ ಬಳಿ ಭಾನುವಾರ ಸಂಜೆ ನಡೆದಿದೆ.

ಬನವಾಸಿ ಕಡೆಯಿಂದ ಶಿರಸಿ ಕಡೆಗೆ ಹೋಗುತ್ತಿದ್ದ ಮೂವರು ಪ್ರಯಾಣಿಸುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ. ಈ ಘಟನೆಯಲ್ಲಿ ಕಾರಿನಲ್ಲಿದ್ದ ಇಬ್ಬರಿಗೆ ಗಂಭೀರ ಸ್ವರೂಪದ ಗಾಯವಾಗಿದೆ. ಚಾಲಕನಿಗೆ ಸಣ್ಣ ಪ್ರಮಾಣದ ಗಾಯವಾಗಿದ್ದು ಗಾಯಗೊಂಡವರನ್ನು ತಕ್ಷಣವೇ ಸ್ಥಳೀಯರು 108 ಕರೆ ಮಾಡಿ ಅಂಬುಲೆನ್ಸ್‌ನಲ್ಲಿ ಕಳುಹಿಸುವ ಮೂಲಕ ಶಿರಸಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.ಗಂಭೀರವಾಗಿ ಗಾಯಗೊಂಡವರು ಶಿರಸಿ ನಗರದ ಗುಡ್ಡದಮನೆ ನಿವಾಸಿಗಳಾಗಿದ್ದು ಭಾಸ್ಕರ ಪಿ.(63) ಹಾಗೂ ಮಹೇಶ್ ಗುಡ್ಡದಮನೆ(54) ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಭೇಟಿ ನೀಡಿ ಪರಿಶೀಲನೆ ನಡೆಸಿ ದೂರು ದಾಖಲಿಸಿಕೊಂಡಿದ್ದಾರೆ.



ಸಿದ್ದಾಪುರ: ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯ ಶನೇಶ್ವರ ದೇವಸ್ಥಾನ ಟ್ರಸ್ಟ್ ಇವರಿಂದ ಶನೇಶ್ವರ ದೇವರ ಸನ್ನಿಧಿಯಲ್ಲಿ ಸಂಪ್ರೋಕ್ಷಣ್ಯ ಕಾರ್ಯಕ್ರಮದ ಪ್ರಯುಕ್ತ ನಡೆದ ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮ ಕಲಾಸಕ್ತರ ಮನತಣಿಸಿತು.

ಶಾನಬಾಳೆಗದ್ದೆಯಲ್ಲಿ ಮನಗೆದ್ದ ಗಾನಸಂಪ್ರೋಕ್ಷಣ್ಯ

ಸಿದ್ದಾಪುರ: ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯ ಶನೇಶ್ವರ ದೇವಸ್ಥಾನ ಟ್ರಸ್ಟ್ ಇವರಿಂದ ಶನೇಶ್ವರ ದೇವರ ಸನ್ನಿಧಿಯಲ್ಲಿ ಸಂಪ್ರೋಕ್ಷಣ್ಯ ಕಾರ್ಯಕ್ರಮದ ಪ್ರಯುಕ್ತ ನಡೆದ ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮ ಕಲಾಸಕ್ತರ ಮನತಣಿಸಿತು.

ಗಾನಸಂಪ್ರೋಕ್ಷಣ್ಯ ಕಾರ್ಯಕ್ರಮದಲ್ಲಿ ಪಂಚವಟಿ, ರಾಮನಿರ್ಯಾಣ, ವಿಶ್ವಾಮಿತ್ರಮೇನಕೆ, ಭೀಷ್ಮವಿಜಯ, ಚಕ್ರಚಂಡಿಕೆ, ಪಾಪಣ್ಣ ವಿಜಯ, ಚಂದ್ರಹಾಸ, ದ್ರೌಪದಿಪ್ರತಾಪ, ಮಾಯಾಮೃಗಾವತಿ, ರಾಣಿಶಶಿಪ್ರಭೆ, ಕವಿರತ್ನಕಾಳಿದಾಸ, ಬಬ್ರುವಾಹನ, ರತ್ನಾವತಿ ಕಲ್ಯಾಣ, ಶನೀಶ್ವರ ಮಹಾತ್ಮೆ ಸೇರಿದಂತೆ ಯಕ್ಷಗಾನದ ಹಲವು ಪೌರಾಣಿಕ ಪ್ರಸಂಗಗಳ ಅಪರೂಪದ ಪದ್ಯಗಳನ್ನು ರಾಘವೇಂದ್ರ ಆಚಾರ್ಯ ಜನ್ಸಾಲೆ, ರಾಮಕೃಷ್ಣ ಹೆಗಡೆ ಹಿಲ್ಲೂರು ಉತ್ತಮವಾಗಿ ಹಾಡಿ ರಂಜಿಸಿದರು. ಮದ್ದಳೆಯಲ್ಲಿ ಶಶಾಂಕ ಆಚಾರ್ಯ ಕಿರುಮಂಜೇಶ್ವರ, ಶ್ರೀವತ್ಸ ಗುಡ್ಡೆದಿಂಬ, ಚಂಡೆಯಲ್ಲಿ ವಿಘ್ನೇಶ್ವರ ಗೌಡ ಕೆಸರಕೊಪ್ಪ, ಪ್ರಜ್ವಲ್ ಮುಂಡಾಡಿ ಉತ್ತಮವಾಗಿ ಸಾಥ್ ನೀಡಿ ಮೆಚ್ಚುಗೆಗಳಿಸಿದರು.ದೇವಾಲಯದ ನಿರ್ಮಾಣದಲ್ಲಿ ಸಹಕಾರ ನೀಡಿದ ಊರಿನ ಗಣ್ಯರಾದ ಶಂಕರ ಭಟ್ಟ ಎಲೆಸರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಪಿ.ವಿ.ಹೆಗಡೆ ಹೊಸಗದ್ದೆ, ಗೋಪಾಲ ಹೆಗಡೆ ಹುಲಿಮನೆ, ಸಂಘಟಕರಾದ ಮಂಜುನಾಥ ಹಾಗೂ ಅಣ್ಣಪ್ಪ ಶಾನಬಾಳೆಗದ್ದೆ ಉಪಸ್ಥಿತರಿದ್ದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹಾರ್ಸಿಮನೆ ಕಾರ್ಯಕ್ರಮ ನಿರೂಪಿಸಿದರು.



ಸಿದ್ದಾಪುರ; ತಾಲೂಕಿನ ನೆಲ್ಲಿಕೊಪ್ಪ ಗ್ರಾಮದ 75 ವರ್ಷದ ವಯೋವೃದ್ಧ ಮಹಿಳೆ ಚೌಡಮ್ಮ ಜಟ್ಯಾ ಮಡಿವಾಳ ಅವರು ಮೇ 3 ರಂದು 4.5 ಲಕ್ಷ ರೂ. ಬೆಲೆಬಾಳುವ 38 ಗ್ರಾಂ ತೂಕದ ಬಂಗಾರದ ಸರವನ್ನು ಕಳೆದುಕೊಂಡಿದ್ದರು. ಈ ಕುರಿತು ಹಿರಿಯ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿಗಳು, ಸಿಬ್ಬಂದಿ ಕಳೆದುಕೊಂಡಿದ್ದ ಬಂಗಾರದ ಸರವನ್ನು ಹುಡುಕಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಅಥಣಿ ಶಾಸಕ ಲಕ್ಷ್ಮಣ ಸವದಿ ಭರವಸೆ
ಆಲಮಟ್ಟಿ ಜಲಾಶಯ ಮಟ್ಟ ಹೆಚ್ಚಿಸಲು ಪ್ರಯತ್ನ

ತೆಲಸಂಗ: ಆಲಮಟ್ಟಿ ಜಲಾಶಯದ ಮಟ್ಟವನ್ನು 524 ಮೀಟರ್‌ಗೆ ಹೆಚ್ಚಿಸಲು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ. ಇದರಿಂದ ರೈತರಿಗೆ ಬಹಳಷ್ಟು ಜಮೀನಿಗೆ ನೀರು ದೊರೆಯಲಿದ್ದು, ಅಮ್ಮಾಜೇಶ್ವರಿ ಮತ್ತು ಕರಿಮಸೂತಿ ಯೋಜನೆಗಳು ವರ್ಷದ 9 ತಿಂಗಳು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಗ್ರಾಮದಲ್ಲಿಗ್ರಾಮದಲ್ಲಿ ಕೆಪಿಟಿಸಿಎಲ್ ವತಿಯಿಂದ 28 ಕೋಟಿ ರೂಪಾಯಿ ವೆಚ್ಚದಲ್ಲಿ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ, ಅಮ್ಮಾಜೇಶ್ವರಿ ಕೊಟ್ಟಲಗಿ ಏತ ನೀರಾವರಿ ಯೋಜನೆ ಅಡಿಯಲ್ಲಿ 67 ಎಕರೆ 28 ಗುಂಟೆ ವಿಸ್ತೀರ್ಣದಲ್ಲಿ ನೂತನ ಕೆರೆ, 75 ಲಕ್ಷ ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ, ಕಂಬಿಮಲ್ಲಯ್ಯ ಸಮುದಾಯ ಭವನ, ಬಾಬು ಜಗಜೀವನರಾಮ ಸಮುದಾಯ ಭವನ ಉದ್ಘಾಟನೆ, ತೆಲಸಂಗದಿಂದ ಐಗಳಿ ಗ್ರಾಮದವರೆಗೆ ಸುಧಾರಣೆ ಕಾಮಗಾರಿಯ ಭೂಮಿ ಪೂಜೆ ಹೀಗೆ 30 ಕೋಟಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿ, ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಅವಧಿಯಲ್ಲಿ ಪೂರ್ಣಗೊಂಡು ಯಶಸ್ವಿಯಾಗಿರುವುದು ಅಮ್ಮಾಜೇಶ್ವರಿ ಕೊಟ್ಟಲಗಿ ಏತ ನೀರಾವರಿ ಯೋಜನೆ. ಈ ಭಾಗದ 9 ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ವೃದ್ಧಿಗೆ ಆದ್ಯತೆ ನೀಡಲಾಗಿದೆ. ಮುಂಬರುವ 20 ವರ್ಷಗಳ ಕಾಲ ರೈತರಿಗೆ ವಿದ್ಯುತ್ ಸಮಸ್ಯೆಯಾಗದಂತೆ 300 ಎಕರೆಯಲ್ಲಿ ಸೋಲಾರ್ ಪಾರ್ಕ್ ನಿರ್ಮಾಣ ಹಾಗೂ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲಾಗುತ್ತಿದೆ. ರೈತರ ಮಕ್ಕಳು ಗುಣಮಟ್ಟದ ಶಿಕ್ಷಣಕ್ಕಾಗಿ ಪಟ್ಟಣಗಳಿಗೆ ಅಲೆಯಬಾರದು ಎಂಬ ಉದ್ದೇಶದಿಂದ ಹಳ್ಳಿಗಳಲ್ಲೇ ಶೈಕ್ಷಣಿಕ ಸೌಲಭ್ಯ ಒದಗಿಸಲಾಗಿದೆ. ಕನ್ನಡ ನಮ್ಮ ಉಸಿರು, ಆದರೆ ಬದುಕಿನ ಆಸರೆಗಾಗಿ ಇಂಗ್ಲಿಷ್ ಭಾಷೆಯನ್ನೂ ನಮ್ಮ ಮಕ್ಕಳು ಕಲಿಯಬೇಕು ಎಂದು ಕರೆ ನೀಡಿದರು.



» 67 ಎಕರೆ 28 ಗುಂಟೆ ವಿಸ್ತೀರ್ಣದಲ್ಲಿ ನೂತನ ಕೆರೆ, 75 ಲಕ್ಷ ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ, ಕಂಬಿಮಲ್ಲಯ್ಯ ಸಮುದಾಯ ಭವನ, ಬಾಬು ಜಗಜೀವನರಾಮ ಸಮುದಾಯ ಭವನ ಉದ್ಘಾಟನೆ, ತೆಲಸಂಗದಿಂದ ಐಗಳಿ ಗ್ರಾಮದವರೆಗೆ ಸುಧಾರಣೆ ಕಾಮಗಾರಿಯ ಭೂಮಿಪೂಜೆ

ಕ್ಷೇತ್ರದ ಬಹುದಿನಗಳ ಕನಸಾದ ಕೇಂದ್ರೀಯ ವಿದ್ಯಾಲಯ ಈ ವರ್ಷದಿಂದ ಕಾರ್ಯಾರಂಭ ಮಾಡಿರುವುದು ಹೆಮ್ಮೆಯ ವಿಷಯ. ಆರೋಗ್ಯ ಕ್ಷೇತ್ರದಲ್ಲಿ ತಾಲೂಕಿಗೆ ಹೊಸದಾಗಿ 11 ಆರೋಗ್ಯ ಕೇಂದ್ರಗಳನ್ನು ತಂದಿದ್ದು, ಶೀನಾಳತಂಗಡಿ ಗ್ರಾಮದಲ್ಲಿ 3.70 ಲಕ್ಷ ವೆಚ್ಚದ ಹೊಸ ಕೇಂದ್ರ ಸ್ಥಾಪಿಸಲಾಗುತ್ತಿದೆ. ತೆಲಸಂಗ, ಐಗಳಿ ಮತ್ತು ಕೊಕಟನೂರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಅಥಣಿಯಲ್ಲಿ 100 ಹಾಸಿಗೆಗಳ ತಾಯಿ-ಮಕ್ಕಳ ಆಸ್ಪತ್ರೆ ನಿರ್ಮಾಣವಾಗುತ್ತಿದೆ. ಅಥಣಿ ತಾಲೂಕು ಅತಿ ಹೆಚ್ಚು ಕಬ್ಬು ಬೆಳೆಯುವ ನಾಡು. ಇಲ್ಲಿನ ಸಕ್ಕರೆ ಕಾರ್ಖಾನೆ ಮಾಲೀಕರು ತೂಕದಲ್ಲಿ ಮೋಸ ಮಾಡುತ್ತಿರುವುದು ಸರಿಯಲ್ಲ. ಅಂತಹವರಿಗೆ ರೈತರ ಶಾಪ ತಟ್ಟದೆ ಇರದು. ತೂಕದಲ್ಲಿ ಮೋಸ ಮಾಡುವುದರ ವಿರುದ್ಧ ಹೋರಾಟ ಮಾಡುತ್ತೇನೆ. ಕಾರ್ಯಾಂಗ ಮತ್ತು ಶಾಸಕಾಂಗ ಎರಡೂ ಒಂದಾಗಿ ಕೆಲಸ ಮಾಡಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ. ಪ್ರಾಮಾಣಿಕ ಅಧಿಕಾರಿಗಳು ಮನಸ್ಸು ಮಾಡಿದರೆ ಯಾವುದೇ ಕೆಲಸ ಅಸಾಧ್ಯವಲ್ಲ. ಮಾನವೀಯ ಮೌಲ್ಯಗಳೊಂದಿಗೆ ಕಾನೂನು ಪಾಲಿಸುವ ಅಧಿಕಾರಿಗಳು ಸಮಾಜಕ್ಕೆ ಅಗತ್ಯ ಎಂದು ಹೇಳಿದರು.

ಹಿರಿಯರಾದ ಶೇಖರ ನೇಮಗೌಡ, ಸಿದರಾಯ ಯಲ್ಲಡಗಿ, ಶಿವು ಗುಡ್ಡಾಪೂರ, ಗುರು ದಾಶ್ಯಾಳ, ಅರವಿಂದ ಉಂಡೋಡಿ, ಅಧಿಕಾರಿಗಳಾದ ಜಿ.ವಿ.ಸಂಪನ್ನವರ, ಪ್ರವೀಣ ಹುಣಸಿಕಟ್ಟಿ, ಈರಣ್ಣ ವಾಲಿ, ಭರತೇಶ ನಂದೇಶ್ವರ, ಮಲ್ಲಿಕಾರ್ಜುನ ಮುಗದುಮ್ ಸೇರಿದಂತೆ ಅನೇಕರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕುಡಚಿ: ಕುಡಚಿ ಮತಕ್ಷೇತ್ರದ ಗುಂಡವಾಡ, ಯಲ್ಪಾರಟ್ಟಿ, ಶಿರಗೂರ, ಕಟಕಭಾವಿ ಹಾಗೂ ಹಂದಿಗುಂದ ಗ್ರಾಮಗಳಲ್ಲಿ ರಸ್ತೆ ಡಾಂಬರೀಕರಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಚಾಲನೆ ನೀಡಿದರು.

ಮತಕ್ಷೇತ್ರದ ಯಲ್ಪಾರಟ್ಟಿ, ಪರಮಾನಂದವಾಡಿ, ಶಿರುಗೂರ ಗುಂಡವಾಡ, ಕುಡಚಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರೂ. 3.75 ಕೋಟಿ ಅನುದಾನದಲ್ಲಿ ರಸ್ತೆ ಡಾಂಬರಿಕರಣ ಕಾಮಗಾರಿ, ಶಿರಗೂರ ಗ್ರಾಮದಿಂದ ಕುಡಚಿ ಪಟ್ಟಣ, ಶಿರಗೂರ, ಹಾಲಶಿರಗೂರ, ಚಿಂಚಲಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿ, ಶಿರಗೂರ ಗ್ರಾಮದ ಸೇತುವೆ ನಿರ್ಮಾಣ ಮತ್ತು ಅಲಖನೂರ ವಾಯಾ ರಸ್ತೆ ಅಭಿವೃದ್ಧಿಗೆ 1.02ಕೋಟಿ ಅನುದಾನದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ, ಕಟಕಬಾವಿ ಗ್ರಾಮದಲ್ಲಿ 2.70ಕೋಟಿ ರೂ ಅನುದಾನದಡಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಮತಕ್ಷೇತ್ರದ ಕೊನೆಯ ಗ್ರಾಮ ಹಂದಿಗುಂದ- ಸುಲ್ತಾನಪುರ ಮುಖ್ಯ ರಸ್ತೆಯಿಂದ ಕೆನಾಲ್ ಮೇಲೆ ಹಂದಿಗುಂದ ಕಪ್ಪಲಗುದ್ದಿ ಮುಖ್ಯ ರಸ್ತೆಗೆ ರೂ.01ಕೋಟಿ ಅನುದಾನದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಸೇರಿದಂತೆ ಒಟ್ಟು 8.47ಕೋಟಿ ರೂಪಾಯಿ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಭೂಮಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕುಡಚಿ ಬ್ಲಾಕ್ ಅಧ್ಯಕ್ಷ ಪ್ರದೀಪ್ ಹಾಲಗುಣಿ, ಸುಕುಮಾರ ಪಾಟೀಲ, ಗೀರಿಗೌಡ ಪಾಟೀಲ, ಮಹಾದೇವ ಮಗದುಮ, ಬಾಹುಬಲಿ ಬ್ಯಾಡಗಿ, ಬಾಳಸಾಹೇಬ ಪಾಟೀಲ, ರಾವಸಾಬ ಪಾಟೀಲ, ಪ್ರಮೋದ ಪಾಟೀಲ, ಅನೀಲ ಉಗಾರೆ, ಈಶ್ವರ ಮೊರಡೆ, ಮಹಾದೇವ ಮಗದುಮ, ಈಶ್ವರ ಕುಂಬಾರ, ರಮೇಶ ದಳವಾಯಿ, ಅಶೋಕ ಮಗದುಮ್ಮ, ಸಂಜೀವ ಚೌಗಲಾ, ನೀಲಪ್ಪಾ ಕಾಂಬಳೆ, ಶಾಂತಿನಾಥ ಪಾಟೀಲ, ಇಸಾಕ್ ತಾಂಬೋಳಿ, ಶ್ರೀಮಂತ ಪೂಜಾರಿ, ಬಸಪ್ಪ ಹುಕ್ಕೇರಿ, ನಾಗಪ್ಪ ಪೂಜಾರಿ, ರವಿ ಗಸ್ತಿ, ಹನುಮಂತ ಘಂಟಿ, ಅಶೋಕ ಗುಡ್ಡದಮನಿ, ಧರೆಪ್ಪ ಬಿರಾಜ, ಆನಂದ ಬನಾಜ, ಲಕ್ಷ್ಮಣ ಕರಿಗಾರ, ಮಲ್ಲಪ್ಪ ಪೂಜಾರಿ, ಸಹಾಯಕ ಅಭಿಯಂತರ ಜಿ. ಎಂ.ಗೂಳಪ್ಪನವರ, ಕೆ.ಕೆ. ಕಾಂಬಳೆ, ವಿವಿಧ ಗ್ರಾಮಗಳ ಕಾರ್ಯಕರ್ತರು ಮುಖಂಡರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.



ಮೆಳ್ಳಿಕೇರಿ ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ

ಯರಗಟ್ಟಿ: ತಾಲೂಕಿನ ಮೆಳ್ಳಿಕೇರಿ ಗ್ರಾಮದ ಅಭಿವೃದ್ಧಿಗೆ ಮತ್ತಷ್ಟು ವೇಗ ನೀಡುವ ನಿಟ್ಟಿನಲ್ಲಿ ಮೆಳ್ಳಿಕೇರಿ ಗ್ರಾಮದ 0.550 ಕಿಮೀ ರಸ್ತೆ ಸುಧಾರಣೆ ಕಾಮಗಾರಿಗೆ ಅಂದಾಜು ?1.40 ಕೋಟಿ ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ಶಾಸಕ ವಿಶ್ವಾಸ ವೈದ್ಯರವರ ಆಪ್ತರು ಹಾಗೂ ಬೇಮುಲ ನಿರ್ದೇಶಕರಾದ ಶಂಕರ ಇಟ್ನಾಳ ಮತ್ತು ಮಲಿಕಸಾಬ್ ಬಾಗವಾನ ಜಂಟಿಯಾಗಿ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ವಿಶ್ವಾಸ ವೈದ್ಯರವರ ಆಪ್ತರು ಹಾಗೂ ಬೇಮುಲ ನಿರ್ದೇಶಕರಾದ ಶಂಕರ ಇಟ್ನಾಳ, ಗ್ರಾಮೀಣ ಭಾಗಗಳ ರಸ್ತೆ ಅಭಿವೃದ್ಧಿ ಸರ್ಕಾರದ ಆದ್ಯತೆಯಾಗಿದೆ. ಉತ್ತಮ ರಸ್ತೆ ನಿರ್ಮಾಣದಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಶಾಸಕ ವಿಶ್ವಾಸ ವೈದ್ಯ ಅವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದು, ಜನರ ನಿರೀಕ್ಷೆಗಳಿಗೆ ತಕ್ಕಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ಹೇಳಿದರು.

ನಂತರ ಮಲಿಕಸಾಬ್ ಬಾಗವಾನ ಮಾತನಾಡಿ, ಮೆಳ್ಳಿಕೇರಿ ಗ್ರಾಮದ ರಸ್ತೆ ಅಭಿವೃದ್ಧಿ ಬಹುಕಾಲದ ಬೇಡಿಕೆಯಾಗಿತ್ತು. ಇದೀಗ 1.40 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ಆರಂಭಗೊಂಡಿರುವುದು ಸಂತಸದ ವಿಷಯ. ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಂಡು ಗ್ರಾಮಸ್ಥರಿಗೆ ಉತ್ತಮ ಸೌಲಭ್ಯ ದೊರೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಯರಗಟ್ಟಿ ತಾಲೂಕಾ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಗೋಪಾಲ ದಳವಾಯಿ, ಸವದತ್ತಿ ಎಇ ಎಫ್.ಎ. ಪಾಟೀಲ, ಗುತ್ತಿಗೆದಾರ ಶಿವಾನಂದ ಎಸ್. ಕಾಗರ್ತಿಕರ, ಗೂಳಪ್ಪ ಭಾವಿಕಟ್ಟಿ, ಲಕ್ಕಪ್ಪ ಪೂಜೇರಿ, ಲಕ್ಕಪ್ಪ ಸಂಗಟಿ, ಯಲ್ಲಪ್ಪ ಭಾವಿಕಟ್ಟಿ, ಲಕ್ಷ್ಮಣ ಇಟ್ನಾಳ, ಭೀಮಶಿ ಕುಲಗೂಡ, ಲಕ್ಕಪ್ಪ ಮುಧೋಳ, ಸುರೇಶ ಬಡಿಗೇರ, ಸುಭಾಸ ಐದುಡ್ಡಿ ಸೇರಿದಂತೆ ಅನೇಕ ಗ್ರಾಮಸ್ಥರು ಹಾಗೂ ಮುಖಂಡರು ಭಾಗವಹಿಸಿದ್ದರು.



ಕರ್ನಾಟಕದಲ್ಲಿ ರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ನಿಗಮ ಸ್ಥಾಪನೆಯಾಗಲಿ

ಬೆಳಗಾವಿ: ದೇಶದ ಎಲ್ಲ ವಲಯದ ವ್ಯಾಪಾರಸ್ಥರ ಅನುಕೂಲಕ್ಕಾಗಿ ಸ್ಥಾಪಿಸಲಾದ ರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ನಿಗಮ ಕರ್ನಾಟಕದಲ್ಲಿಯೂ ಸ್ಥಾಪನೆ ಮಾಡುವ ಅಗತ್ಯವಿದೆ ಎಂದು ರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುನಿಲ ಶಿಂಘಿ ಹೇಳಿದರು.



ಶನಿವಾರ ಜೈನ ಇಂಟರ್ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ಜಿತೋ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ಹರ್ಷೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ನಿಗಮದ ಮೂಲಕ ಈಗಾಗಲೇ ಎಲ್ಲ ರಾಜ್ಯಗಳಲ್ಲಿ ರಾಜ್ಯಮಟ್ಟದ ವ್ಯಾಪಾರಿ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿಯೂ ಸಹ ವ್ಯಾಪಾರ ಅಭಿವೃದ್ಧಿ ನಿಗಮ ಸ್ಥಾಪನೆಯಾಗಬೇಕಾಗಿದೆ. ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ವ್ಯಾಪಾರಸ್ಥರ ಉನ್ನತಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಈ ಮೂಲಕ ದೇಶದ ಎಲ್ಲ ರಾಜ್ಯಗಳನ್ನು ಒಂದೆ ವೇದಿಕೆಯಡಿ ತರುವ ಯೋಜನೆಯೊಂದನ್ನು ರೂಪಿಸಲಾಗಿದೆ. ಕೇಂದ್ರ ಸರಕಾರದ ವರ್ಷದ ವಿದೇಶಿ ವ್ಯಾಪಾರ ನೀತಿಯಿಂದ ಇಂದು ಇಡಿ ವಿಶ್ವದ ಬಹುತೇಕ ರಾಷ್ಟಗಳು ಭಾರತ ದೇಶದೊಂದಿಗೆ ವ್ಯಾಪಾರ ಮಾಡುತ್ತಿವೆ ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಶಾಸಕ ಅಭಯ ಪಾಟೀಲ ಮಾತನಾಡಿ, ಬೆಳಗಾವಿಯಲ್ಲಿ ಅನೇಕ ದೊಡ್ಡ ಮತ್ತು ಮಧ್ಯಮ ವರ್ಗದ ಉದ್ದಿಮೆಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಉದ್ದಿಮೆಗಳಿಗೆ ಹೊಸ ಆಯಾಮ ಮತ್ತು ಹೊಸ ಮಾರುಕಟ್ಟೆ ಸವಲತ್ತುಗಳನ್ನು ನೀಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಬೆಳಗಾವಿಯ ಉದ್ದಿಮೆದಾರ ನಿಯೋಗ ಶೀಘ್ರದಲ್ಲೇ ರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷರೊಂದಿಗೆ ಸಭೆ ನಡೆಸಿ ಬೆಳಗಾವಿಯ ಉದ್ದಿಮೆದಾರರ ಉನ್ನತಿಗಾಗಿ ಯೋಜನೆಗಳನ್ನು ರೂಪಿಸಲಾಗುವುದು ಎಂದರು.

ಸಮಾರಂಭದಲ್ಲಿ ಜಿತೊ ಕೆಕೆಜಿ ವಲಯದ ಅಧ್ಯಕ್ಷ ಪ್ರವೀಣ ಬಾಫನಾ, ಪ್ರಧಾನ ಕಾರ್ಯದರ್ಶಿ ದಿಲೀಪ ಜೈನ, ಜಿತೋ ಅಪೆಕ್ಸ್ ಅಲ್ಪಸಂಖ್ಯಾತ ವಿಭಾಗದ ನಿರ್ದೇಶಕ ಪುಷ್ಪಕ ಹನಮಣ್ಣವರ, ನಿರ್ದೇಶಕ ನರೇಂದ್ರಸಿಗ್ ಸಾಮರ, ಕಾರ್ಯದರ್ಶಿ ಶ್ರೀಪಾಲ ಬಚಾಚತ, ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಜಿತೋ ಬೆಳಗಾವಿ ವಿಭಾಗದ ಅಧ್ಯಕ್ಷ ಹರ್ಷವರ್ಧನ ಇಂಚಲ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕ ವಿಕ್ರಮ ಜೈನ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಅಭಯ ಆದಿಮನಿ ವಂದಿಸಿದರು.

ಯೋಧ ನಾಗರಾಜಗೆ ಅದ್ದೂರಿ ಸ್ವಾಗತ


ಕುಮಟಾ: ಭಾರತೀಯ ಸೇನೆಯಲ್ಲಿ ಸುಧೀರ್ಘ 30 ವರ್ಷಗಳ ಕಾಲ ರಾಂಕ್ ಸುಬೇದಾರ್ ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ಕುಮಟಾಕ್ಕೆ ಆಗಮಿಸಿದ ನಾಗರಾಜ ಹೊಸಬಯ್ಯ ಗುನಗಾ ಅವರನ್ನು ಕುಮಟಾದ -ನಾಗರಿಕರು ಅದ್ದೂರಿಯಾಗಿ ಸ್ವಾಗತಿಸಿ, ಗೌರವಿಸಿದರು.ಪಟ್ಟಣದ ಮಾಸ್ತಿಕಟ್ಟೆಯಲ್ಲಿ ಜಮಾಯಿಸಿದ ಕುಮಟಾ ನಾಗರಿಕರು ಮಾಜಿ ಸೈನಿಕರಾದ ನಾಗರಾಜ್ ಅವರನ್ನು ಬರಮಾಡಿಕೊಂಡರು. ಮಾಸ್ತಿಕಟ್ಟೆ ಸರ್ಕಲ್‌ನಿಂದ ಹಳಕಾರದ ಗುನಗನಕೊಪ್ಪದ ವರೆಗೂ ಅದ್ದೂರಿ ಮೆರವಣಿಗೆಯೊಂದಿಗೆ ಅವರನ್ನು ಕರೆದುಕೊಂಡು ಹೋಗಿ ಮನೆಗೆ ಬಿಡುವ ಮೂಲಕ ದೇಶ ಪ್ರೇಮ ಮೆರೆದರು. ಜೆಡಿಎಸ್ ಜಿಲ್ಲಾಧ್ಯಕ್ಷ ಸೂರಜ್ ನಾಯ್ಕ ಸೋನಿ ಮಾತನಾಡಿದರು.ನಿವೃತ್ತ ಯೋಧರು, ವಕೀಲರಾದ ವಿನಾಯಕ ಪಟಗಾರ, ಹಳಕಾರ ಊರಿನ ಪ್ರಮುಖರು, ಗುನಗಾ ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಶಾಲಾ ಆವರಣದಲ್ಲಿ ಹನುಮಂತನ ಮೂರ್ತಿ ಸ್ಥಾಪನೆ

ಗೋಕಾಕ: ನಿತ್ಯ ಶಾಲೆಯಲ್ಲಿ ಹನುಮಂತ ದೇವರ ದರ್ಶನ. ಇಲ್ಲಿಯ ಪ್ರೌಢ ಶಾಲೆಯ ಮಕ್ಕಳಿಗೆ ದೊರೆತ ಭಾಗ್ಯ! ಇದೇನು..? ಎಲ್ಲಿ ಅನ್ನುತ್ತೀರಾ... ಇದು ತಾಲೂಕಿನ ಬೆಟಗೇರಿ ಗ್ರಾಮದ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಇತ್ತೀಚೆಗೆ ವೀರಾಂಜನೇಯ ನೂತನ ಮೂರ್ತಿ ನಿರ್ಮಿಸಲಾಗಿದೆ. ಹೀಗಾಗಿ ನಿತ್ಯ ಈ ಶಾಲೆಯ ಮಕ್ಕಳಿಗೆ, ಶಿಕ್ಷಕರಿಗೆ ಹನುಮಂತ ದರ್ಶನ ಭಾಗ್ಯ ನೀಡುತ್ತಿದ್ದಾನೆ.

ಪ್ರಾಣ ತ್ಯಾಗ ಮಾಡಿದ ಮಂಗ: ಬೆಟಗೇರಿ ಗ್ರಾಮದ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಮುಂದೆ ಇರುವ ಗಿಡಗಳ ಮೇಲೆ ಕುಳಿತ ಮಂಗಗಳಲ್ಲಿ ಒಂದು ಮಂಗ ಯಾವುದೇ ಅವಘಡ ನಡೆಯದೆ ಆಕಸ್ಮಿಕ ಪ್ರಾಣ ತ್ಯಾಗ ಮಾಡಿದ ಪ್ರಸಂಗ ನಡೆದಿದ್ದು ಒಂದು ವಿಶೇಷವಾಗಿದೆ. ಈ ಮಂಗನ ಪಾರ್ಥಿವ ಶರೀರ ಅಂತ್ಯ ಸಂಸ್ಕಾರ ಮಾಡಿದ ಸ್ಥಳದಲ್ಲಿ ನೂತನ ಹನುಮನ ಮೂರ್ತಿ ನಿರ್ಮಿಸಿ, ಪ್ರಾಣ ಪ್ರತಿಷ್ಠಾಪನೆ ಮಾಡಲಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಯ ರಮೇಶ ಅಳಗುಂಡಿ ತಿಳಿಸಿದ್ದಾರೆ.



ಮೂರ್ತಿ ಕೊಡುಗೆ: ಮೂಡಲಗಿ ಶೈಕ್ಷಣಿಕ ವಲಯ ವ್ಯಾಪ್ತಿಯ ಬೆಟಗೇರಿ ಗ್ರಾಮದ ವಿ.ವಿ.ದೇಯಣ್ಣವರ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಶಾಲೆಯ ಮುಖ್ಯೋಪಾಧ್ಯಯ ರಮೇಶ ಅಳಗುಂಡಿ ಅವರ ಸುಪುತ್ರ ದಿ.ಕಿರಣ ರಮೇಶ ಅಳಗುಂಡಿ ಸ್ಮರಣಾರ್ಥ ಇವರ ಸಹೋದರ ಚೇತನ ರಮೇಶ ಅಳಗುಂಡಿ ಅವರು ಸುಮಾರು 50 ಸಾವಿರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿ ಶ್ರೀವೀರಾಂಜನೇಯ ನೂತನ ಮೂರ್ತಿ ಶಾಲೆಗೆ ಕೊಡುಗೆಯಾಗಿ ಸಮರ್ಪಿಸಿದ್ದಾರೆ.

ಶಿಕ್ಷಣಪ್ರೇಮಿ ಚೇತನ ಅಳಗುಂಡಿ ಅವರು ನಮ್ಮೂರಿನ ವಿವಿಡಿ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಈ ವೀರಾಂಜನೇಯ ನೂತನ ಮೂರ್ತಿ ನಿರ್ಮಿಸಿದ ಕಾರ್ಯಕ್ಕೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಮಣ್ಣ ನೀಲಣ್ಣವರ, ಸದಸ್ಯರು, ಮುಖ್ಯೋಪಾಧ್ಯಯ ರಮೇಶ ಅಳಗುಂಡಿ, ಶಾಲೆಯ ಸಹಶಿಕ್ಷಕರು, ಅತಿಥಿಶಿಕ್ಷಕರು, ಶಿಕ್ಷಣಪ್ರೇಮಿಗಳು, ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

> ಹನುಮನು ಇಂದಿನ ಯುವಕರಿಗೆ ಆದರ್ಶಪ್ರಾಯ. ಶ್ರೀರಾಮನ ಮೇಲೆ ಇದ್ದ ಹನುಮನ ಭಕ್ತಿ, ತತ್ವ ಸಿದ್ಧಾಂತದ ಸ್ಫೂರ್ತಿ ಈ ಶಾಲೆಯ ಮಕ್ಕಳಲ್ಲಿ ಬೆಳೆಯಲಿ ಎಂಬ ಉದ್ದೇಶದಿಂದ ಹನುಮಂತನ ಮೂರ್ತಿ ಈ ಶಾಲೆಯಲ್ಲಿ ನನ್ನ ಸಹೋದರನ ಸ್ಮರಣಾರ್ಥ ನಿರ್ಮಿಸಿ ಕೊಟ್ಟಿದ್ದೇನೆ.
>
> ■ ಚೇತನ ರಮೇಶ ಅಳಗುಂಡಿ ಬೆಟಗೇರಿ, ತಾ.ಗೋಕಾಕ

ಕನ್ನಡ ಸಾಹಿತ್ಯ-ಸಂಸ್ಕೃತಿ ಜಗತ್ತಿನ ಯಾವ ಭಾಷೆಗೂ ಕಡಿಮೆ ಇಲ್ಲ

ಬೆಳಗಾವಿ: ಕನ್ನಡ ಸಾಹಿತ್ಯಕ್ಕೆ ಹಿರಿದಾದ ಇತಿಹಾಸವಿದೆ. ನಮ್ಮ ಸಂಸ್ಕೃತಿಯ ಸಾರ ಜನಪದ ಕಾವ್ಯದಲ್ಲಿದೆ. ಜಾನಪದವು ನಮ್ಮ ಬದುಕಿನ ಮೂಲ ಧಾತು. ಜಾಗತಿಕ ಭರಾಟೆಯಲ್ಲಿ ನಮ್ಮ ಜನಪದ ಸಂಸ್ಕೃತಿಯು ಅಳಿವಿನಂಚಿನಲ್ಲಿದೆ. ಅದನ್ನು ಉಳಿಸಿ ಮುಂದಿನ ಜನಾಂಗಕ್ಕೆ ವರ್ಗಾಯಿಸುವ ಬಹು ದೊಡ್ಡ ಜವಾಬ್ದಾರಿ ನಮ್ಮ ಇಂದಿನ ಪೀಳಿಗೆ ಮೇಲಿದೆ ಎಂದು ಸಾಹಿತಿ ಡಾ. ಬಸವರಾಜ ಜಗಜಂಪಿ ಹೇಳಿದರು.

ನಗರದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಕನ್ನಡ ಬಳಗದಿಂದ ಶನಿವಾರ 'ಕನ್ನಡ ಸೌರಭ' ಎಂಬ ಪರಿಕಲ್ಪನೆಯಡಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕನ್ನಡ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾಷೆಗೆ ಶಕ್ತಿ ತುಂಬ ಬೇಕು. ಭಾಷೆ ಬಳಸದೇ ಇದ್ದರೆ ಭಾಷೆ ಬೆಳೆಯಲು ಸಾಧ್ಯವಿಲ್ಲ. ನಾವು ಎಷ್ಟು ಭಾಷೆಯನ್ನಾದರೂ ಕಲಿಯೋಣ. ಆದರೆ ನಮ್ಮ ಮನೆಯಲ್ಲಿ, ನಮ್ಮ ನಾಡಿನಲ್ಲಿ ಕನ್ನಡ ವಾತಾವರಣ ಸದಾ ಹಚ್ಚ ಹಸುರಾಗಿರಬೇಕು. ಅದು ನಮ್ಮ ಆತ್ಮಗೌರವದ ಸಂಕೇತ. ಅದಕ್ಕೆ ಧಕ್ಕೆ ಆದರೆ ನಮ್ಮ ಆತ್ಮ ಗೌರವಕ್ಕೆ ಧಕ್ಕೆಯಾಗದಂತೆ.



» ಸಾಹಿತಿ ಡಾ. ಬಸವರಾಜ ಜಗಜಂಪಿ ಅಭಿಮತ

» 'ಕನ್ನಡ ಸೌರಭ' ಎಂಬ ಪರಿಕಲ್ಪನೆಯಡಿಯಲ್ಲಿ ಕನ್ನಡ ಹಬ್ಬ ಉದ್ಘಾಟನೆ

ನಮ್ಮ ಹಿರಿಯರು ಭಾಷೆಯ ಮೂಲಕ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಕೊಟ್ಟಿದ್ದಾರೆ. ಅದನ್ನು ಜೋಪಾನವಾಗಿ ಸಂರಕ್ಷಿಸೋಣ. ನಮ್ಮಿಂದ ಕನ್ನಡಕ್ಕೆ ಏನೂ ಆಗುವುದಿಲ್ಲ, ಆದರೆ ಕನ್ನಡದಿಂದ ನಮ್ಮ ಗೌರವ ಹೆಚ್ಚುತ್ತದೆ. ಗಡಿಭಾಗದಲ್ಲಿ ಇಂಥ ಕಾರ್ಯಕ್ರಮಗಳು ಕನ್ನಡದ ಬೇರುಗಳನ್ನು ಗಟ್ಟಿಗೊಳಿಸುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ಅರ್ಜುನ ಜಂಬಗಿ ಕನ್ನಡ ನಾಡು, ನುಡಿ ಸಂಸ್ಕೃತಿ ಬೆಳೆಸಬೇಕು. ಅದರಿಂದ ನಮ್ಮ ತನ ಉಳಿಯುತ್ತದೆ. ಕನ್ನಡ ಸಾಹಿತ್ಯದ ಸೌರಭ ಜಗತ್ತಿನ ಎಲ್ಲೆಡೆ ಪಸರಿಸಿದೆ. ಕನ್ನಡ ಉಳಿಸಿದರೆ ಕನ್ನಡ ನಮ್ಮನ್ನು ಉಳಿಸುತ್ತದೆ. ಕನ್ನಡದ ಕಾರ್ಯಕ್ರಮಕ್ಕೆ ನಮ್ಮ ಮಹಾವಿದ್ಯಾಲಯ ಸದಾ ಪ್ರೋತ್ಸಾಹಿಸುತ್ತದೆ. ನಿರಂತರವಾಗಿ ನಮ್ಮ ವಿದ್ಯಾರ್ಥಿಗಳು ಕನ್ನಡವನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಅದು ವಿದ್ಯಾರ್ಥಿಗಳೇ ಸ್ವ-ಇಚ್ಛೆಯಿಂದ ಈ ಕಾರ್ಯಕ್ರಮ ಮಾಡಿರುವುದರಿಂದ ಅವರಲ್ಲಿರುವ ಕನ್ನಡ ಪ್ರೇಮ ಇನ್ನಷ್ಟು ಜಾಗೃತವಾಗಿದೆ. ಗಡಿ ಭಾಗದಲ್ಲಿ ಇಂತಹ ಕನ್ನಡ ಕಾರ್ಯಕ್ರಮದ ಅವಶ್ಯಕತೆಯಿದೆ ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಪಿ. ನಾಗರಾಜ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕಾಲೇಜಿನ ಐಕ್ಯೂಎಸಿ ಸಂಯೋಜಕ ಡಾ. ಮುಕುಂದ ಮುಂಡರಗಿ, ವಿದ್ಯಾರ್ಥಿಗಳ ಪ್ರತಿನಿಧಿಗಳಾದ ನಾಗಲಿಂಗ ಕಂಬಾರ, ಮೇಘ ಪಾಟೀಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಕನ್ನಡ ಹಾಡುಗಳನ್ನು ಹಾಡಿ ನೃತ್ಯ ಮಾಡಿ ಸಂಭ್ರಮಿಸಿದರು. ಜಾನಪದದ ವಿವಿಧ ಪ್ರಾಕಾರಗಳ ಕುಣಿತ, ಯಕ್ಷಗಾನ, ಜಾನಪದ ಗೀತೆಗಳನ್ನು ಹಾಡುವುದರ ಮೂಲಕ ಕನ್ನಡ ವಾತಾವರಣ ಸೃಷ್ಟಿಸಿದರು.

ವಿದ್ಯಾರ್ಥಿನಿಯರಾದ ಸೃಷ್ಟಿ ಬಸ್ತವಾಡ ಸ್ವಾಗತಿಸಿದರು, ಪ್ರಿಯಾಂಕ ತಿಲಗಾರ ಪ್ರಾರ್ಥಿಸಿದರು, ಸುನಿತಾ ಕೊಳವಿ ನಿರೂಪಿಸಿದರು, ಹರ್ಷಿತಾ ಮರಳಿ ವಂದಿಸಿದರು, ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೯
ಬಾಗಲಕೋಟೆ
ಗರಿಷ್ಠ 36° ಕನಿಷ್ಠ 26°
ಸೋಮವಾರ
11 ಮೇ 2026
ಹುಬ್ಬಳ್ಳಿ

ಕಿರುಸುದ್ದಿ

ಇಂದು ಜೆಡಿಎಸ್ ನೂತನ ಕಾರ್ಯಾಲಯ ಉದ್ಘಾಟನೆ

ಬಾದಾಮಿ: ಮತ ಕ್ಷೇತ್ರದ ಜೆಡಿಎಸ್ ನೂತನ ಕಾರ್ಯಾಲಯದ ಉದ್ಘಾಟನಾ ಸಮಾರಂಭವನ್ನು ಮೇ 11ರಂದು ಬೆಳಗ್ಗೆ 10ಕ್ಕೆ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಮತ ಕ್ಷೇತ್ರದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತಾಲೂಕಾ ಜೆಡಿಎಸ್ ಅಧ್ಯಕ್ಷ ಹುಚ್ಚಪ್ಪ ಹದ್ದನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸರ್ಕಾರಿ ಕಾಲೇಜ್ ಕಾಮಗಾರಿಗೆ ಭೂಮಿಪೂಜೆ

ಬಾದಾಮಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೂ.160.51 ಲಕ್ಷ ಅನುದಾನದ ವೆಚ್ಚದಡಿ ಎರಡನೇ ಮಹಡಿಯ ಭೂಮಿಪೂಜಾ ಕಾರ್ಯಕ್ರಮವನ್ನು ಮೇ 11ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ.



ಬಾದಾಮಿ ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಶಾಸಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಮಂಜುನಾಥಗೆ ಪಿಎಚ್‌ಡಿ ಪ್ರದಾನ

ರಬಕವಿ-ಬನಹಟ್ಟಿ: ತಾಲೂಕಿನ ಬಂಡಿಗಣಿ ಗ್ರಾಮದ ಮಂಜುನಾಥ ಹಾದಿಮನಿ ಅವರಿಗೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. ಸದ್ಯ ಬಾಗಲಕೋಟ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಉಪ ಗ್ರಂಥಪಾಲರಾಗಿ ಸೇವೆಯಲ್ಲಿರುವ ಮಂಜುನಾಥ



ನಿವೃತ್ತ ಪ್ರಾಧ್ಯಾಪಕ ಡಾ.ವಿನಾಯಕ ಎಂ.ಬಂಕಾಪುರ ಸಂಶೋಧನಾ ಮಾರ್ಗದರ್ಶನದಲ್ಲಿ ''ಯೂಸ್ ಆಫ್ ಇ-ರಿಸೋರ್ಸ್‌ಸ ಬಾಯ್ ದಿ ಫ್ಯಾಕಲ್ಟಿ ಆ್ಯಂಡ್ ಸ್ಟುಡೆಂಟ್ಸ್ ಆಫ್ ಹಾರ್ಟಿಕಲ್ಚರಲ್ ಯುನಿವರ್ಸಿಟಿ ಲೈಬ್ರರೀಸ್ ಇನ್ ಕರ್ನಾಟಕ ಎ ಸರ್ವೇ'' ವಿಷಯದ ಮೇಲೆ ಮಂಡಿಸಿದ್ದ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪ್ರಾಪ್ತವಾಗಿದೆ.

ಬೀಳಗಿಯಲ್ಲಿ ಶಿವಶರಣೆ ಮಲ್ಲಮ್ಮ ಜಯಂತಿ



ಬೀಳಗಿ: ತಹಶೀಲ್ದಾರ್ ಕಾರ್ಯಾಲಯದ ಸಭಾಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತಿ, ಪಟ್ಟಣ ಪಂಚಾಯತಿ ಬೀಳಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವದಲ್ಲಿ ಶಾಸಕ ಜೆ. ಟಿ. ಪಾಟೀಲ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ತಹಶೀಲ್ದಾರ್ ವಿನೋದ ಹತ್ತಳ್ಳಿ, ಪಂಚಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ರಾಮನಗೌಡ ಜಕ್ಕನಗೌಡ್ರ, ಸಿಪಿಐ ಹನುಮಂತ ಸಣಮನಿ, ಡಾ. ಹೇಮರೆಡ್ಡಿ ನೀಲಗುಂದ ಸೇರಿದಂತೆ ಮತ್ತಿತರ ಗಣ್ಯರು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ವಿಜಯಪುರ: 2026-27ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್ ಮೂಲಕ ದಾಖಲಾತಿ ಪಡೆಯುವ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿ ಶೈಕ್ಷಣಿಕ ಸಾಲಕ್ಕಾಗಿ ಅಲ್ಪಸಂಖ್ಯಾತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ 30 ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಬೆಂಗಳೂರಿನ ಕೆಎಂಡಿಸಿ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಜಿಲ್ಲಾ ವ್ಯವಸ್ಥಾಪಕರನ್ನು ಅಥವಾ ದೂ: 08352 278344, 8277944209 ಗೆ ಸಂಪರ್ಕಿಸಬಹುದಾಗಿದೆ.



ಗಲಗಲಿ: ಸಮೀಪದ ಹೊಸೂರು ಗ್ರಾಮದಲ್ಲಿ ಅಂಕುರ ಪರಿವಾರದ ವತಿಯಿಂದ ಅಂಕುರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿ ನಿಮಿತ್ತ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಿಹಿ ಹಂಚುವ ಮೂಲಕ ಜಯಂತಿಯನ್ನು ಆಚರಿಸಲಾಯಿತು. ಸುಮೇಧಾ ರಾಮಕೃಷ್ಣ ಓಂಕಾರ, ಅಂಜನಾ ಬಾರಡ್ಡಿ, ವೀಣಾ ಬಿರಾದಾರ, ತೇಜಸ್ವಿನಿ ಪಾಟೀಲ, ರೇಖಾ ಬಿರಾದಾರ, ಸುಶಿಲಾ ಯರಗಟ್ಟಿ, ಶ್ರೀದೇವಿ ಯರಗಟ್ಟಿ, ಭಾರತಿ ಯರಗಟ್ಟಿ ಮುಂತಾದವರಿದ್ದರು.

ತಾಯಮ್ಮದೇವಿ ಜಾತ್ರೆ ಇಂದಿನಿಂದ

ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮದಲ್ಲಿ ಮೇ 11ರಿಂದ 17ರವರೆಗೆ ಗ್ರಾಮ ದೇವತೆ ತಾಯಮ್ಮದೇವಿ ಜಾತ್ರೆ ನಿಮಿತ್ತ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಕ್ರೀಡೆಗಳು, ಉಡಿ ತುಂಬುವ ಹಾಗೂ ರಥೋತ್ಸವ ಕಾರ್ಯಕ್ರಮ ಜರುಗಲಿದೆ.

ಮೇ 11 ಸಂಜೆ 5ಕ್ಕೆ ಶ್ರೀ ಮಳೆಪ್ಪಯ್ಯ ಸ್ವಾಮಿ ಪೂಜಾ ಕಾರ್ಯಕ್ರಮ ರಾತ್ರಿ ಅನ್ನ ಪ್ರಸಾದ ಜರುಗುವುದು. ಮೇ 12ರಂದು ಬೆಳಗ್ಗೆ 10ಕ್ಕೆ ಡೊಳ್ಳಿನ ವಾಲಗ ಹಾಗೂ ಸಂಜೆ 5ಕ್ಕೆ ಗ್ರಾಮದೇವಿಗೆ ಉಡಿ ತುಂಬುವುದು, ರಾತ್ರಿ 10ಕ್ಕೆ ಡೊಳ್ಳಿನ ಪದಗಳು ನಡೆಯಲಿವೆ.

ಮೇ 13ರಂದು ಬೆಳಗ್ಗೆ 5ಕ್ಕೆ ಹೋಮ, ಹವನ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ಸಂಜೆ ರಥೋತ್ಸವ ಜರುಗಲಿದೆ. ರಾತ್ರಿ 10ಗಂಟೆಗೆ ರಣರಂಗದಲ್ಲಿ ರಣಹದ್ದುಗಳ ಹಾರಾಟ ಎಂಬ ಸುಂದರ ಸಾಮಾಜಿಕ ನಾಟಕ ನಡೆಯಲಿದೆ. ಮೇ 14ರಂದು ಬೆಳಗ್ಗೆ 9ಕ್ಕೆ ರಂಗೋಲಿ ಸ್ಪರ್ಧೆ ಮದ್ಯಾಹ್ನ 12ಕ್ಕೆ ಜಿದ್ದಾ ಜಿದ್ದಿನ ಟಗರಿನ ಕಾಳಗ ಇರುತ್ತದೆ.

ಮೇ15ರಂದು ಸಂಜೆ5ಕ್ಕೆ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆ ರಾತ್ರಿ 8ಕ್ಕೆ ಹಾಸ್ಯ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮೇ 16ರಂದು ಮದ್ಯಾಹ್ನ ಜೋಡೆತ್ತಿನ ಸುತಬಂಡಿ ಸ್ಪರ್ಧೆ ಹಾಗೂ ಸಂಜೆ 5ಕ್ಕೆ ಕಬಡ್ಡಿ ಪಂದ್ಯಾವಳಿಗಳು ನಡೆಯಲಿವೆ. ಮೇ 17 ಬೆಳಿಗ್ಗೆ 10ಕ್ಕೆ ಕಳಸ ಇಳಿಸುವ ಕಾರ್ಯಕ್ರಮ ನಡೆಯಲಿದೆ ಎಂದು ಜಾತ್ರಾ ಸಮೀತಿಯವರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಯರಗಟ್ಟಿ: ತಾಲೂಕಿನ ಕೋ.ಶಿವಾಪೂರ ಗ್ರಾಮದ ಹಿರೇಮಠದ ಜಡೆತೆಲೆ ಮರುಳಸಿದ್ಧ ಶಿವಾಚಾರ್ಯ ಶ್ರೀಗಳ 5ನೇ ದಿನದ ಅಡ್ಡಪಲ್ಲಕಿ, ಲಿಂಗದೀಕ್ಷೆ ಹಾಗೂ ಅಯ್ಯಾಚಾರ, ಜಾತ್ರಾ ಮಹೋತ್ಸವವು ಬುಧವಾರ ಸಂಭ್ರಮದಿಂದ ನೆರವೇರಿತು.

ಕಥೆಗಾರನಿಗೆ ಸಮಷ್ಟಿ ಪ್ರಜ್ಞೆ ಅಗತ್ಯ: ಲಕ್ಷ್ಮಣ

ಬಾಗಲಕೋಟೆ: ಕಥೆ ಕಟ್ಟುವವನಿಗೆ ಭಾಷೆ, ಭಾವ, ವಾಸ್ತವ, ಸಾಮಾಜಿಕ ಹಾಗೂ ಪರಿಸರದ ಪ್ರಜ್ಞೆ ಇರಬೇಕು. ಜೊತೆಗೆ ಸಮಷ್ಟಿ ಪ್ರಜ್ಞೆ ಅಗತ್ಯ. ಅಂದಾಗ ಮಾತ್ರ ಅವು ಓದುಗರನ್ನು ತಲುಪಿ ಜನ ಮಾನಸದಲ್ಲಿ ಉಳಿಯಲು ಸಾಧ್ಯ ಎಂದು ಕಥೆಗಾರ ಲಕ್ಷ್ಮಣ ಬಾದಾಮಿ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯ ಕನ್ನಡ, ಇಂಗ್ಲಿಷ್ ಸ್ನಾತಕೋತ್ತರ ವಿಭಾಗಗಳು, ಕನ್ನಡ ನುಡಿ ವೇದಿಕೆ ಹಾಗೂ ಐಕ್ಯೂಎಸ್‌ಸಿ ಸಹಯೋಗದಲ್ಲಿ ಜರುಗಿದ ಕಥಾ ಕಮ್ಮಟವನ್ನು ಉದ್ಘಾಟಿಸಿ, ಮಾತನಾಡಿದ ಅವರು, ಕಥೆಗಳು ಮನುಷ್ಯನ ಎಲ್ಲ ಬಗೆಯ ಸಮಸ್ಯೆಗಳಿಗೆ ಪರಿಹಾರ ನೀಡುವ ಮಾಧ್ಯಮಗಳಾಗಿದ್ದು, ವಿದ್ಯಾರ್ಥಿಗಳು ಈ ಬಗೆಯ ಕಮ್ಮಟಗಳಲ್ಲಿ ಪಾಲ್ಗೊಳ್ಳುವುದರಿಂದ ಕಥನ ಕೌಶಲ್ಯ ಹೆಚ್ಚುತ್ತದೆ ಎಂದರು.

ಪ್ರಾಚಾರ್ಯ ಪ್ರೊ.ಎಸ್.ಆರ್. ಮುಗನೂರಮಠ ಮಾತನಾಡಿ, ಕಥನ ಕಟ್ಟವಲ್ಲಿ ಮನೋವೈಜ್ಞಾನಿಕ ಪ್ರಭಾವದ ಕುರಿತು ಹೇಳುವ



ಕಾರ್ಯವಾಗಬೇಕಿದೆ. ಇಂತಹ ಕಮ್ಮಟಗಳನ್ನು ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳ ಮನೂವಿಕಾಸ ಹಾಗೂ ಕಥೆ ಬರೆಯುವ ಕೌಶಲ್ಯ ವೃದ್ದಿಸುತ್ತದೆ ಎಂದರು.

ಕಥೆಗಾರ ಮಲ್ಲಿಕಾರ್ಜುನ ಸಜ್ಜನ, ಕಥೆಗಾರ್ತಿ ಮುರ್ತುಜಾ ಬೇಗಂ, ಕೊಡಗಲಿ ಹಾಗೂ ಕಥೆಗಾರ ಹಾಗೂ ನಾಟಕಕಾರ ಹಣಮಂತ ಹಾಲಗೇರಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ವಿದ್ಯಾರ್ಥಿಗಳ ಕಥೆ ವಾಚನ ಆಲಿಸಿ ಸಂವಾದ ನಡೆಸಿದರು.

ಅನೀಲ ಗುನ್ನಾಪುರ, ಮುತ್ತು ಬಳ್ಳಾ, ಡಾ.ಎಸ್ .ಡಿ.ಕೆಂಗಲಗುತ್ತಿ, ಪ್ರೊ.ಕೆ.ವಿ.ಮಠ, ಶ್ರೀಹರಿ ಧೂಪದ ಇದ್ದರು.

ಡಾ.ಬಸವರಾಜ ಕುಂಬಾರ ಸ್ವಾಗತಿಸಿ, ಪ್ರಸ್ತಾವಿಕ ಮಾತನಾಡಿದರು. ನಂದಿನಿ ಅಂಕದ ಹಾಗೂ ಗಾಯತ್ರಿ ಪಾಟೀಲ ನಿರೂಪಿಸಿದರು. ಪಾರ್ವತಿ ಗಡಗಿ ಪ್ರಾರ್ಥಿಸಿದರು. ಡಾ.ವೀಣಾ ಕಲ್ಮಠ ವಂದಿಸಿದರು.

ಮುಳುಗಡೆ ಸಂತ್ರಸ್ತರ ಬೇಡಿಕೆ ಈಡೇರಿಸಲು ಆಗ್ರಹಿಸಿ ಧರಣಿ

ಹುನಗುಂದ: ನಾರಾಯಣಪುರ ಜಲಾಶಯದ ಹಿನ್ನೀರು ಹಾಗೂ ಮಲಪ್ರಭಾ ಪ್ರವಾಹದಿಂದ2009-10ರಲ್ಲಿಬಾಧಿತಗೊಂಡ ತಾಲೂಕಿನ ಇದ್ದಲಗಿ ಗ್ರಾಮದ ಸಂತ್ರಸ್ತರು ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಗ್ರಾಮದಲ್ಲಿರುವ ತಾತ್ಕಾಲಿಕ ಶೆಡ್‌ಗಳ ಮುಂದೆ ಬುಧವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

ಧರಣಿನಿರತ ಸಂತ್ರಸ್ತರು 2009ರಲ್ಲಿಯೇ ನಾವು ವಾಸಿಸುತ್ತಿರುವ ಶೆಡ್‌ಗಳನ್ನು ನಿರ್ಮಾಣ ಮಾಡಿ ಸುಮಾರು 16ರಿಂದ 18 ವರ್ಷಗಳಾಗಿದ್ದು, ಸದ್ಯ ಶಿಥಿಲಾವಸ್ಥೆಗೊಂಡಿವೆ. ಕೂಡಲೇ ದುರಸ್ಥಿ ಅಥವಾ ಹೊಸ ಶೆಡ್ ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕು. ತಾತ್ಕಾಲಿಕ ಪುರ್ವಸತಿ ಕೇಂದ್ರದ ಮಾಲೀಕರಿಗೆ ತಕ್ಷಣ ಭೂ ಬಾಡಿಗೆ ನೀಡುವುದು. ಪುನರ್ವಸತಿ ಕೇಂದ್ರದಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆ ಒಳಗೊಂಡ ಮನವಿಯನ್ನು ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ ಅವರಿಗೆ ಸಲ್ಲಿಸಿದರು.

ಸಂತ್ರಸ್ತರ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಭೇಟಿ ಸಂತ್ರಸ್ತರ ಸಮಸ್ಯೆ ಆಲಿಸಿ ಜಿಲ್ಲಾ ಆಡಳಿತ ಹಾಗೂ ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಧರಣಿ ನೇತೃತ್ವ ವಹಿಸಿದ ಹಸನಸಾಬ ಪಿಂಜಾರ ಮಾತನಾಡಿ, ಸಂತ್ರಸ್ತರಿಗೆ ಪ್ರಸ್ತುತ ಅನುಸರಿಸುತ್ತಿರುವ ನಿಯಮಾವಳಿಗೆ ಅವಶ್ಯ ತಿದ್ದುಪಡಿ ತಂದು ಒಂದು ಗುಂಟೆಯ ಬದಲಿಗೆ ನಾಲ್ಕು ಗುಂಟೆಯ ನಿವೇಶನಗಳ ಮರು ಹಂಚಿಕೆ ಮಾಡಬೇಕು. ಹಕ್ಕು ಪತ್ರ ನೀಡುವವರೆಗೂ ಒಕ್ಕಲೆಬ್ಬಿಸದಂತೆ ಅಧಿಕಾರಿಗಳಿಗೆ ಸೂಚಿಸಬೇಕು. ಎಲ್ಲ ಖಾಯಂ ರಹವಾಸಿ ಕುಟುಂಬದ ಸದಸ್ಯರಿಗೂ ನಿವೇಶನ ನೀಡಬೇಕು ಎಂದರು.

ಮುಖಂಡರಾದ ಹಸನ್ ಪಿಂಜಾರ, ಭೀಮಣ್ಣ ಅಡಿಹಾಳ, ಕಲ್ಲಪ್ಪ ಆನೆಹೊಸೂರ, ಮಲ್ಲಮ್ಮ ಗಡ್ಡಿಮಠ, ಮುತ್ತವ್ವ ಬೇನಾಳ, ಮಹಾದೇವಿ ತೋಟಗೇರಿ, ನೀಲಮ್ಮ ಮಾಗಿ, ಬಸವರಾಜ ಮುಳ್ಳೂರ, ಈರಪ್ಪ ಅಂಗಡಿ, ಭೀಮವ್ವ ಬೇನಾಳ. ಶರಣಪ್ಪ ಮುಳ್ಳೂರ, ನೀಲವ್ವ ಸುಂಕದ, ಸಂಗವ್ವ ಹಾವರಗಿ ಸೇರಿದಂತೆ ಇತರರಿದ್ದರು.



ಸರ್ಕಾರಿ ಶಾಲಾ ಪ್ರವೇಶಕ್ಕೆ ದಾಖಲಾತಿ ಆಂದೋಲನ



ಬಾದಾಮಿ: ತಾಲೂಕಿನ ಚೊಳಚಗುಡ್ಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೊಸದಾಗಿ 2026-27 ನೇ ಸಾಲಿಗೆ ಒಂದನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ ರೂ.10 ಸಾವಿರ ಠೇವಣಿ ಇಡಲಾಗುವುದು ಎಂದು ಆರಾಧ್ಯ ಗ್ರೂಪ್ ವತಿಯಿಂದ ನೀಡಲಾಗುವುದು ಎಂದು ಶಾಲೆಯ ಮುಖ್ಯ ಶಿಕ್ಷಕಿ ಎಸ್.ಎಸ್.ಕಲಾದಗಿ ತಿಳಿಸಿದರು. ಅವರು ತಾಲೂಕಿನ ಚೊಳಚಗುಡ್ಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ ಶಾಲಾ ದಾಖಲಾತಿ ಆಂದೋಲನದಲ್ಲಿ ಮಾತನಾಡಿ, ಪ್ರತಿ ಮಗುವಿಗೆ ಠೇವಣಿ ಹಣ ಮತ್ತು ಮಕ್ಕಳ ಕಲಿಕೆಗೆ 10 ಗಣಕಯಂತ್ರಗಳನ್ನು ಶಾಲೆಗೆ ದೇಣಿಗೆ ನೀಡಲಾಗುವುದು ಎಂದು ಆರಾಧ್ಯ ಗ್ರೂಪನ ಪದಾಽಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಸಹಶಿಕ್ಷಕರು, ಊರಿನ ಹಿರಿಯರು ಉಪಸ್ಥಿತರಿದ್ದರು.

ಸಮೃದ್ಧ ಶೈಕ್ಷಣಿಕ ವಾತಾವರಣ ನಿರ್ಮಾಣ ಸಾಧ್ಯ

ರಬಕವಿ-ಬನಹಟ್ಟಿ: ವಿಚಾರ ಸಂಕಿರಣಗಳಿಂದ ಸಮೃದ್ಧ ಶೈಕ್ಷಣಿಕ ವಾತಾವರಣವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ವಿಚಾರ ಸಂಕಿರಣಗಳಿಂದ ಸಂಸ್ಥೆಗಳ ಮತ್ತು ಮೇಧಾವಿಗಳ ಗೌರವ ಹೆಚ್ಚಾಗುತ್ತದೆ. ಇದು ವಿದ್ಯಾರ್ಥಿಗಳಿಗೂ ಪ್ರೇರಣೆಯಾತ್ತದೆ ಎಂದು ಬಾಗಲಕೋಟ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಚಿದಾನಂದ ಧವಳೇಶ್ವರ ತಿಳಿಸಿದರು.

ಇಲ್ಲಿನ ಎಸ್‌ಟಿಸಿ ಕಾಲೇಜಿನಲ್ಲಿ ಇತ್ತೀಚಿಗೆ ನಡೆದ ಒಂದು ರಾಷ್ಟ ಒಂದು ತೆರಿಗೆ ಕುರಿತು ಹಮ್ಮಿಕೊಂಡ ರಾಷ್ಟ್ರಮಟ್ಟದ ವಿಚಾರ ಸಂಕಿರಣದಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಚಾರ್ಯ ಜಿ.ಆರ್.ಜುನ್ನಾಯ್ಕರ್ ಮಾತನಾಡಿ, ಇಂಥ ಕಾರ್ಯಕ್ರಮಗಳಿಂದ ಹಲವಾರು ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವಿಚಾರ ಸಂಕಿರಣದಲ್ಲಿ ಬೆಳಗಾವಿ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದ ವಾಣಿಜ್ಯ ವಿಭಾಗದ ಹಿರಿಯ ಉಪನ್ಯಾಸಕರಾದ ಎಸ್ .ಬಿ.ಆಕಾಶ, ವಿಶೇಷ ಅಧಿಕಾರಿ ಬಿ.ಎಸ್.ನಾವಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯವಹಾರ ನಿರ್ವಹಣಾ ಶಾಸ್ತ್ರದ ಪ್ರಾಧ್ಯಾಪಕ ಎಂ.ಮುನ್ನಿ, ಬೆಂಗಳೂರಿನ ಲೆಕ್ಕಪರಿಶೋಧಕ ಶಂಕರ ಕೌಜಲಗಿ, ಮಹೇಂದ್ರ ಹೊರಗಿಮನಿ, ಉಪನ್ಯಾಸಕ ಶಂಕರ ಹಳಿಂಗಳಿ, ಶಂಕರ ಸೊಪಡ್ಲ, ಚೇತನ ಡಾಗಾ, ರವಿಕುಮಾರ ಕುರನಾಲ, ತೆರಿಗೆ ಸಲಹೆಗಾರ ಶಂಕ್ರಯ್ಯ ಮಠಪತಿ, ಸೇರಿದಂತೆ ವಿವಿಧ ಕಾಲೇಜುಗಳ ಉಪನ್ಯಾಸಕರು ಪ್ರಬಂಧ ಮಂಡಿಸಿದರು.

ಸಂಶೋಧನಾ ವಿದ್ಯಾರ್ಥಿನಿ ಕ್ಷಿತಿಜಾ ಕಣಗಲೆ, ತನುಜಾ ಹೊಸೂರ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಮನೋಹರ ಶಿರಹಟ್ಟಿ, ವಿಜಯಲಕ್ಷ್ಮೀ ಮಾಚಕನೂರ, ಶ್ವೇತಾ ಮಠದ, ರಶ್ಮಿ ಮುನ್ನೊಳ್ಳಿ ಮಾತನಾಡಿದರು.

ಜೆಎಸ್‌ಎಸ್ ಸಂಘದ ನಿರ್ದೇಶಕ ಪಂಡಿತ ಹನಗಂಡಿ, ಮಂಜುನಾಥ ಬೆನ್ನೂರ, ಕಾರ್ಯಕ್ರಮದ ಸಂಯೋಜಕರಾದ ಪ್ರಕಾಶ ಕೆಂಗನಾಳ, ಗೀತಾ ಸಜ್ಜನ, ರೇಶ್ಮಾ ಗಜಾಕೋಶ, ಸುರೇಶ ನಡೋಣಿ, ಎಸ್ .ಬಿ.ಉಕ್ಕಲಿ, ರಮೇಶ ಮಾಗುರಿ, ರಶ್ಮಿ ಕೊಕಟನೂರ, ಎನ್.ಬಿ.ಹೊಸಪೇಟಿ, ಶಿವು ಇಟ್ನಾಳ, ವಿ.ವೈ.ಪಾಟೀಲ, ಅವಿನಾಶ ಹಟ್ಟಿ ಸೇರಿದಂತೆ ಅನೇಕರು ಇದ್ದರು.



ಬಿಸಿಲಿನ ತಾಪಮಾನ: ಆರೋಗ್ಯ ಶಿಕ್ಷಣ ಜಾಗೃತಿ

ಬಾಗಲಕೋಟೆ: ಜನತೆಗೆ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಕಾರಣ ಬೆಸಿಗೆ ದಿನಗಳಲ್ಲಿ ನಾವು ಆರೋಗ್ಯ ಕಾಪಾಡಿಕೋಳ್ಳಲು ಅನುಸರಿಸಬೇಕಾದ ಕ್ರಮಗಳ ಕುರಿತು ಸಮುದಾಯ ಆರೋಗ್ಯ ವಿಭಾಗದ ಡಾ.ಪೂಜಾ ಕೊಪ್ಪಾ ವಿವರಿಸಿದರು.



ನಗರದ ಪ್ರತಿಷ್ಠಿತ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆ, ಸಮುದಾಯ ಆರೋಗ್ಯ ವಿಭಾಗ ಮತ್ತು ಶಿರೂರಿನ ಶಿವಗಂಗಾ ಗ್ರಾಮೀಣ ಆರೋಗ್ಯ ತರಬೇತಿ ಕೇಂದ್ರ ಸಹಯೋಗದಲ್ಲಿ ಶಿರೂರ ಗ್ರಾಮದಲ್ಲಿ ಬಿಸಿಲಿನ ತಾಪ 'ಮಾನ ಹೆಚ್ಚುತ್ತಿರುವ ಕುರಿತು ಜಾಗೃತಿ ಕಾರ್ಯಕ್ರಮ ಮಾತನಾಡಿದರು.

ಸಮುದಾಯ ಆರೋಗ್ಯ ವಿಭಾಗದ ತರಬೇತಿ ನಿರತ ವೈದ್ಯ ಡಾ.ಯಶೋಧಾ.ವಿ.ಡಿ, ಮಾತನಾಡಿ, ಬಿಸಿಲಿನ ತಾಪಮಾನದಿಂದ ವೃದ್ಧರು ಮತ್ತು ಮಕ್ಕಳು ಹೆಚ್ಚು ಬಳಲುತ್ತಾರೆ. ಕಾರಣ ಮನೆಯಲ್ಲಿ ತಯಾರಿಸು ತಂಪು ಪಾನೀಯಗಳು ಹಣ್ಣುಗಳನ್ನು ಸೇವಿಸಬೇಕು. ಅತೀಸಾರ ಬೇದಿಯಿಂದ ಬಳಲುವ ಸಾಧ್ಯತೆ ಹೆಚ್ಚಾಗಿರುತ್ತದೆ ಕಾರಣ ಓಆರ್‌ಎಸ್ ಉಪಯೋಗಿಸಬೇಕು. ಬೇಸಿಗೆಯಲ್ಲಿ ದೈನಂದಿನ ಕಾರ್ಯ ಚಟುವಟಿಕೆಗಳ ಕುರಿತು ತಾಯಂದಿರಗೆ ಮಾಹಿತಿ ನೀಡಿದರು. ಡಾ.ವರ್ಧಮಾನ ಮಾತನಾಡಿದರು. ಆರೋಗ್ಯ ಶಿಕ್ಷಣ ಕಾರ್ಯಕ್ರಮದಲ್ಲಿ ಶಿರೂರ ಗ್ರಾಮದ 25 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ



ಬಾಗಲಕೋಟೆ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಕಾರಿಗಳ ಸಭಾಂಗಣದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಸಮುದಾಯದ ಮುಖಂಡರು ಹೇಮರೆಡ್ಡಿ ಮಲ್ಲಮ್ಮರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಗೌರವ ನಮನ ಸಲ್ಲಿಸಿದರು. ಜಿಲ್ಲಾ ಮಟ್ಟದ ವಿವಿಧ ಅಕಾರಿಗಳು ಹಾಗೂ ಸಮುದಾಯದ ಮುಖಂಡರು ಇದ್ದರು.

ಗ್ರಾಪಂನಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ

ರಬಕವಿ-ಬನಹಟ್ಟಿ: ತಾಲೂಕಿನ ನಾವಲಗಿ ಗ್ರಾಮ ಪಂಚಾ ಯಿತಿ ಕಾರ್ಯಾಲಯದಲ್ಲಿ ನಡೆದ ಹೇಮರೆಡ್ಡಿ ಮಲ್ಲಮ್ಮಳ ಜಯಂತಿ ಆಚರಿಸಲಾಯಿತು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸುಭಾಸ ಕಾಂತಿ, ಬಸವರಾಜ ದಾವಣ್ಣವರ, ವಿಠ್ಠಲ ಪಾಟೀಲ, ಸದಾಶಿವ ಲೆಂಡಿ, ಗುರು ಕಾಂತಿ, ಬಾಲು ಯಲಗುದ್ರಿ, ಹಣಮಂತ ನಾಯಕ, ಶ್ರೀಶೈಲ ತಳವಾರ ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಽಕಾರಿ ಪ್ರವೀಣ ಶಿರಬೂರ, ಶಿವಪ್ಪ ಬುರಲಟ್ಟಿ, ಸೇರಿದಂತೆ ಕಾರ್ಯಾಲಯದ ಸಿಬ್ಬಂದಿ ವರ್ಗದವರು ಇದ್ದರು.



ಶಿಷ್ಯರು ಉನ್ನತ ಸ್ಥಾನ ತಲುಪಿದಾಗ ಗುರುಗಳಿಗೆ ತೃಪ್ತಿ: ನಾರಾ

ಗುಳೇದಗುಡ್ಡ: ವಿದ್ಯಾರ್ಥಿಗಳು ಕಲಿಸಿದ ಗುರುಗಳನ್ನು ಮೀರಿಸಿ ಉನ್ನತ ಸ್ಥಾನ ತಲುಪಿದಾಗ ಮಾತ್ರ ಕಲಿಸಿದ ಗುರುಗಳಿಗೆ ತೃಪ್ತಿಯಾಗುತ್ತದೆ. ತಂದೆ ತಾಯಿಗಳಿಗೆ, ಗುರುಗಳಿಗೆ ಗೌರವ ಕೊಡುವಂತಹ ಸಂಸ್ಕಾರ, ಸಂಸ್ಕೃತಿ ಮಕ್ಕಳಿಗೆ ಕಲಿಸಬೇಕು ಎಂದು ನಿವೃತ್ತ ಶಿಕ್ಷಕ ಎಸ್.ಎಸ್.ನಾರಾ ಹೇಳಿದರು.



ಅವರು ಭಾನುವಾರ ಪಟ್ಟಣದ ಸೈಂಟ್ ಝೇವಿಯರ್ಸ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ 1990-91 ಮತ್ತು 1996-97ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಗುರುವಂದನೆ ಸ್ವೀಕರಿಸಿ ಮಾತನಾಡಿದ ಅವರು, ಗುರುಶಿಷ್ಯರ ಪರಂಪರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅತ್ಯಂತ ಮಹತ್ವದ್ದಾಗಿದೆ. ನೀವು ಕಲಿತು ಎಷ್ಟೇ ದೂರ ಹೋದರೂ, ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಗುರುಶಿಷ್ಯರ ಸಂಬಂಧ ಹೀಗೆ ಮುಂದುರಿಯಬೇಕು ಎಂದರು.

ಶಾಲೆ ಸಂಚಾಲಕ ಫಾ.ಹ್ಯಾರಿ ರಾಬರ್ಟ್ ಮಾತನಾಡಿ, ಹಳೆ ವಿದ್ಯಾರ್ಥಿಗಳು ಇಂದು ಒಬ್ಬ ಜವಾಬ್ದಾರಿಯುತ ವ್ಯಕ್ತಿಗಳಾಗಿ ಹಿಂದಿನ ಆ ಶಾಲಾ ದಿನಗಳನ್ನು ನೆನಪಿಸಿಕೊಂಡು ಮತ್ತೆ ಎಲ್ಲರೂ ಒಟ್ಟಾಗಿ ಸೇರಿ, ಅಕ್ಷರ ಕಲಿಸಿದ ಜೀವನದ ದಾರಿ ತೋರಿಸಿದ ಶಿಕ್ಷಕರನ್ನು ಗೌರವಿಸಿ, ಗುರುವಂದನೆ ಅರ್ಪಿಸುತ್ತಿರುವುದು ಶ್ಲಾಘನೀಯ ಎಂದರು.

ಈ ವೇಳೆ ಫಾದರ್ ಹ್ಯಾರಿ ರಾಬರ್ಟ್, ಶಾಲೆ ಮುಖ್ಯೋಪಾಧ್ಯಾಯ ಬಿ.ಆರ್ .ದೊಡ್ಡಿಹಾಳ, ನಿವೃತ್ತ ಶಿಕ್ಷಕರಾದ ಎಸ್. ಎಸ್. ನಾರಾ, ಬಿ.ಎಮ್. ಕೆಂಚಣ್ಣವರ, ಜೆ.ಆರ್. ಪಾಟೀಲ, ಸಿ.ಎ.ಮೇಟಿ, ಜಯಪ್ರಕಾಶ ಕಳ್ಳಿಗುಡ್ಡ, ಶಾಲೆಯ ಸಿಸ್ಟರ್ ತೇರೆಜಾ, ಸಿಸ್ಟರ್ ವಿದ್ಯಾ ಅವರಿಗೆ ಗುರುವಂದನೆ ಸಲ್ಲಿಸಿ ಗೌರವಿಸಲಾಯಿತು.

ಹಳೆ ವಿದ್ಯಾರ್ಥಿಗಳಾದ ಮನೋಹರ ಪಟಾಣಿಕರ, ಶಿವಾನಂದ ಆಲೂರ, ಹುಚ್ಚೇಶ ದೊಡಮನಿ, ಪ್ರಸನ್ ಭಾವಿಕಟ್ಟಿ, ಮಹೇಶ ಆಲದಿ, ಸೋಮನಾಥ ತಾಂಡೂರ, ದೇವೇಂದ್ರಪ್ಪ ಕೆರೂರ, ಸಂಗನಬಸು ರೊಡಗ್ಯೆ, ಡೆನಿಸ್ ಜೋಸೆಫ್, ಮಹಾಂತೇಶ ಗುಡದಾರಿ, ರಾಘವೇಂದ್ರ ಹಾಸಿಲಕರ, ವೆಂಕಟೇಶ ಪವಾರ, ಪ್ರವೀಣ ರಾಜನಾಳ, ಪುಂಡಲೀಕ ರಾಜಾಪುರ, ಜಗದೀಶ ಬೆಳಗಲ್, ವಿರೇಶ ಮುದೇನೂರ, ಶಾರದಾ ನಾಯಕ, ನಂದಾ ಪವಾರ, ಶಿವಲೀಲಾ ಚಂದಾಪೂರ, ಚಂದ್ರಕಲಾ ಹೆಗಡೆ, ಕವಿತಾ ಹುನಗುಂದ, ಮಂಜುಳಾ ಒಣರೊಟ್ಟಿ, ಪ್ರಭಾವತಿ ಬೆನಕನಾಳ, ಸರೋಜಾ ಗುರಂ, ಆರತಿ ಗುರುಂ, ಸುಧಾ ಡಮ್, ಜಯಶ್ರೀ ರಂಜನಗಿ, ಗಾಯತ್ರಿ ಹಾಸಿಲಕರ, ಸಲ್ಮಾ ಸವರಾಜ, ಸೇರಿದಂತೆ ಹಳೆವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬರಗುಡಿ, ಪಡನೂರ ಗ್ರಾಮದಲ್ಲಿ ಸರಣಿ ಕಳ್ಳತನ

ಇಂಡಿ: ತಾಲೂಕಿನ ಬರಗುಡಿ ಹಾಗೂ ಪಡನೂರ ಗ್ರಾಮದ ತೋಟದ ಮನೆಗಳಲ್ಲಿ ಸರಣಿ ಕಳ್ಳತನ ನಡೆದಿರುವ ಬಗ್ಗೆ ತಡವಾಗಿ ಬೆಳಕಿಗೆ ಬಂದಿದೆ.

ಬರಗುಡಿ ಗ್ರಾಮದ ಸಂಜೀವ ಶರಣಪ್ಪ ಕೆಳಗಿನಮನಿ ತೋಟದ ಮನೆಯಲ್ಲಿ 2ತೊಲೆ ಬಂಗಾರ, 60 ಸಾವಿರ ರೂ. ಹಣ, ಇದೇ ಗ್ರಾಮದ ಸುಭಾಸ ಕ್ಷತ್ರಿ ಮನೆಗೆ ಕನ್ನ ಹಾಕಿದ ಕಳ್ಳರು 3 ತೊಲೆ ಬಂಗಾರ ದೊಚ್ಚಿದ್ದಾರೆ. ಪಡನೂರನ ಬಿಳೇಣಿಸಿದ್ದ ಕೊಣುರೆ ಮನೆ ಬೀಗ ಮುರಿದು 3ತೊಲೆ ಚಿನ್ನ ಕಳ್ಳತನ ಮಾಡಿದ್ದಾರೆ. ಮೇತ್ರಿ ಮನೆ ಬೀಗ ಮುರಿದು ಅರ್ಧ ತೊಲೆ ಚಿನ್ನ ಕದ್ದು ಕಳ್ಳರು ಪರಾರಿಯಾಗಿದ್ದಾರೆ.

ಈ ಘಟನೆ ಮೇ 3ರ ಮಧ್ಯಾಹ್ನದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಈ ಘಟನೆ ಜನರಲ್ಲಿ ಆತಂಕ ಮನೆ ಮಾಡಿದೆ.

ಒಂದು ತಿಂಗಳ ಹಿಂದೆಯೇ ಅಮಸಿದ್ದ ಓಗೆಪ್ಪ ಒಡೆಯರಗೆ ಸೇರಿದ್ದ 1 ಎಮ್ಮೆ 3 ಹಸು ಕಳ್ಳರು ರಾತ್ರೋರಾತ್ರಿ ಹೊತ್ತೊಯ್ದಿದ್ದರು. ಆದರೆ ಆಗ ಪೊಲೀಸರು ಮುತುವರ್ಜಿ ವಹಿಸಿ ಕಳ್ಳರ ಹೆಡೆಮುರಿ ಕಟ್ಟಿದ್ದರು. ಈಗ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಜನರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮಲ್ಲಮ್ಮನ ಆದರ್ಶ ಅಳವಡಿಸಿಕೊಳ್ಳಿ



ರಬಕವಿ-ಬನಹಟ್ಟಿ: ಹೇಮರೆಡ್ಡಿ ಮಲ್ಲಮ್ಮ ಮಹಾನ್ ಶಿವಭಕ್ತೆ. ಮಲ್ಲಮ್ಮನ ಭಕ್ತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಭಾನುವಾರ ರಬಕವಿ ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಸಮಾಜದ ಮುಖಂಡ ವೆಂಕಟೇಶ ನಿಂಗಸಾನಿ ಮಾತನಾಡಿ, ಭಕ್ತಿಯಲ್ಲಿ ಮಹಾನ್ ಶಕ್ತಿ ಅಡಗಿದೆ ಎಂದು ಸಮಾಜಕ್ಕೆ ತೋರಿಸಿದವಳು ಮಲ್ಲಮ್ಮ. ತಾನು ಶರಣೆಯಾಗುವುದರ ಜೊತೆಗೆ ದುಶ್ಚಟಗಳ ದಾಸನಾಗಿದ್ದ ವೇಮನನ್ನು ಮಹಾಯೋಗಿಯನ್ನಾಗಿ ಮಾಡಿದವಳು ಮಲ್ಲಮ್ಮ. ಭಕ್ತಿಯಿಂದ ಎಲ್ಲವನ್ನು ಪಡೆದುಕೊಳ್ಳಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವಳು ಮಲ್ಲಮ್ಮ. ಅಂಥವಳ ಆದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ರಬಕವಿ-ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ, ಶಿರಸ್ತೇದಾರ ರಾಜಶೇಖರ ಸಾತಿಹಾಳ, ಕೃಷ್ಣಾ ಲೆಂಡಿ, ಸಿದ್ದಪ್ಪ ಮೇಣಿ, ಕೃಷ್ಣಾ ಜಕನೂರ, ಸುರೇಶ ಮೋಪಗಾರ, ಸದಾಶಿವ ಲೆಂಡಿ, ಬಸವರಾಜ, ಗುರು ಕಾಂತಿ, ಸುಭಾಸ, ಕಾಂತು ಸೇರಿದಂತೆ ಅನೇಕರು ಇದ್ದರು.

ಕಿರುಸುದ್ದಿ

ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಯಶಸ್ವಿ

ವಿಜಯಪುರ: ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಸಂಪೂರ್ಣವಾಗಿ ಯಶಸ್ವಿಯಾಗಿ ಅಭಿಮಾದನ ಶಕ್ತಿ ಸ್ವರೂಪವಾಗಿ ಗೋಚರಿಸಿದೆ. ಇದರ ಹಿಂದೆ ಪ್ರೇರಣಾ ಶಕ್ತಿಯಾಗಿ ಕೆಲಸ ಮಾಡಿದ್ದು, ನಮ್ಮ ನೆಲದ ಹೆಮ್ಮೆಯ ನಾಯಕ ಗೋವಿಂದ ಕಾರಜೋಳರು ಎಂಬುದು ಸಹ



ಅಭಿಮಾನದ ಸಂಗತಿ ಎಂದು ಬಿಜೆಪಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ರಾಘವ ಅಣ್ಣಿಗೇರಿ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ಕಟ್ಟಲು ಸೈಕಲ್ ಮೂಲಕ ಸಂಚರಿಸಿ ದಕ್ಷಿಣ ಭಾರತದಲ್ಲಿಯೇ ಪ್ರಥಮ ಬಾರಿಗೆ ಆಡಳಿತ ಹೆಬ್ಬಾಗಿಲು ತೆರೆದ ಶ್ರೇಯಸ್ಸು ಯಡಿಯೂರಪ್ಪ ಅವರಿಗೆ ಸಲ್ಲಬೇಕು. ಅವರಿಗೆ ಅಭೂತಪೂರ್ವವಾಗಿ ಗೌರವಿಸಬೇಕು ಎಂಬ ವಿಚಾರ ಮೊದಲು ಮೊಳಕೆಯೊಡೆದದ್ದೇ ಗೋವಿಂದ ಕಾರಜೋಳರಲ್ಲಿ, ಈ ಅದ್ಭುತ ವಿಚಾರ ಅನುಷ್ಠಾನಕ್ಕೆ ತಂದು ಕಾರ್ಯಕ್ರಮ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತೆ ಮಾಡುವಲ್ಲಿ ಅವರ ಪಾತ್ರ ಅನನ್ಯ ಎಂದರು.ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗಿಯಾದ ಅಮಿತ್ ಶಾ ಅವರು ಅಲ್ಲಿಂದ ನೇರವಾಗಿ ಈ ಕಾರ್ಯಕ್ರಮಕ್ಕೆ ಬಂದಿರುವುದು ಕಾರ್ಯಕ್ರಮದ ಮಹತ್ವವನ್ನು ತೋರಿಸಿ ಕೊಡುತ್ತದೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಮಾರ್ಮಿಕ, ಹೃದಯಸ್ಪರ್ಶಿ ಮಾತುಗಳು ಕೂಡ ಯುವಕರನ್ನು ಹುರಿದುಂಬಿಸಿವೆ ಎಂದು ಅಣ್ಣಿಗೇರಿ ಹೇಳಿದ್ದಾರೆ.

ಹೇಮರೆಡ್ಡಿ ಮಲ್ಲಮ್ಮ ಧರ್ಮನಿಷ್ಠೆಯ ಪ್ರತೀಕ: ಶಂಕರಗೌಡ



ಬಸವನಬಾಗೇವಾಡಿ: ಹೇಮರೆಡ್ಡಿ ಮಲ್ಲಮ್ಮನವರು ಅಪ್ಪಟ ಶಿವಭಕ್ತೆಯಾಗಿ, ತಾಳ್ಮೆ, ಸದ್ಗುಣ ಹಾಗೂ ಧರ್ಮನಿಷ್ಠೆಯ ಪ್ರತೀಕವಾಗಿದ್ದರು ಎಂದು ರಾಷ್ಟ್ರೀಯ ಬಸವ ಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಹೇಳಿದರು. ಪಟ್ಟಣದ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ರಾಷ್ಟ್ರೀಯ ಬಸವ ಸೈನ್ಯ ಸಂಘಟನೆ ನೇತೃತ್ವದಲ್ಲಿ ಆಯೋಜಿಸಿದ ಹೇಮರೆಡ್ಡಿ ಮಲ್ಲಮ್ಮ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಗೌರವ ಸಲ್ಲಿಸಿ ಮಾತನಾಡಿದ ಅವರು, ಸಂಸಾರದಲ್ಲೇ ಇದ್ದುಕೊಂಡು ಪರಮಾತ್ಮನನ್ನು ಕಾಣಬಹುದು ಎಂಬುದನ್ನು ಹೇಮರೆಡ್ಡಿ ಮಲ್ಲಮ್ಮನವರು ತಮ್ಮ ಜೀವನದ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಅವರ ಜೀವನಾದರ್ಶಗಳು ಮತ್ತು ಶರಣ ಸಂಸ್ಕೃತಿ ತತ್ವಗಳು ಇಂದಿನ ಸಮಾಜಕ್ಕೆ ಅವಶ್ಯಕವಾಗಿವೆ ಎಂದರು. ಶ್ರೀಕಾಂತ ಕೊಟ್ರಶೆಟ್ಟಿ, ಮನ್ನಾನ ಶಾಬಾದಿ, ಜಟ್ಟಿಂಗರಾಯ ಮಾಲಗಾರ, ಮಣಿಕಂಠ ಕಲ್ಲೂರ, ಸಂಗಣ್ಣ ಹುಜರತಿ, ಸಂಗಮೇಶ ಮೈಲೇಶ್ವರ, ವಿಜಯರೆಡ್ಡಿ ಬಿಂಜಲಬಾವಿ, ಶಂಕರ ರಜಪೂತ, ಸಂತೋಷ ಕುಳಗೇರಿ, ವಿಠ್ಠಲ ಲಮಾಣಿ, ರಮೇಶ ಪೆಂಟೇದ, ಸಂಗಮೇಶ ಜಾಲಗೇರಿ, ಅಶೋಕ ಹುಂಡೇಕಾರ, ಸಂತೋಷ ಲಮಾಣಿ ಸೇರಿದಂತೆ ಇತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ವಿಜಯಪುರ: ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಮೇ 25 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. https://powermedia.info ಸಂಘವು ನಿಗದಿಪಡಿಸಿರುವ ನಮೂನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲೆ, ತಾಲೂಕು, ಯೋಜನಾ ಶಾಖೆ ಅಧ್ಯಕ್ಷರು ಮತ್ತು ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರಿಂದ ದೃಢೀಕರಿಸಿ ಆನ್‌ಲೈನ್‌ನಲ್ಲಿ ಅಪಲೋಡ್ ಮಾಡುವುದು. ಆನ್‌ಲೈನ್ ಅರ್ಜಿಯಲ್ಲಿ ಕೇಳಲಾಗಿರುವ ಎಲ್ಲಾ ಮಾಹಿತಿಗಳನ್ನು ಪೂರ್ಣವಾಗಿ ಭರ್ತಿ ಮಾಡತಕ್ಕದ್ದು ಎಂದು ವಿಜಯಪುರ ಜಿಲ್ಲೆಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶಡಶ್ಯಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಜಯಪುರ: ನಗರದ ಶಶಿಧಾಮ ವೃದ್ಧಾಶ್ರಮದಲ್ಲಿ ಬಿಎಲ್‌ಡಿಇ ಸಂಸ್ಥೆಯ ಬಂಗಾರಮ್ಮ ಸಜ್ಜನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಿಳಾ ಮಹಾವಿದ್ಯಾಲಯದ ಐಕ್ಯೂಎಸಿ ಮತ್ತು ಯೂತ್ ರೆಡ್ ಕ್ರಾಸ್ ಘಟಕದ ಆಶ್ರಯದಲ್ಲಿ ವಿಶ್ವ ರೆಡ್ ಕ್ರಾಸ್ ದಿನ ಹಮ್ಮಿಕೊಳ್ಳಲಾಯಿತು. ಪ್ರಾಂಶುಪಾಲರಾದ ಡಾ.ವೈ.ತಮ್ಮಣ್ಣ, ಯೂತ್ ರೆಡ್ ಕ್ರಾಸ್ ಘಟಕ ಸಂಯೋಜನಾಧಿಕಾರಿ ಡಾ.ಶಕುಂತಲಾ ಪಾಟೀಲ, ಐಕ್ಯೂಎಸಿ ಸಂಯೋಜಕ ಡಾ.ಭಕ್ತಿ ಮಹೀಂದ್ರಕರ, ಎಚ್.ಎಸ್.ದೇಸಾಯಿ, ಶ್ವೇತಾ ತಡವಲಗಿ, ಚಂದ್ರಕಲಾ ದೊಡಮನಿ, ಸೋಮಶೇಖರ ತುಪ್ಪದ ಇದ್ದರು.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಬಸವನಬಾಗೇವಾಡಿ: ಹೇಮರೆಡ್ಡಿ ಮಲ್ಲಮ್ಮ ರಾಜಮನೆತನದಲ್ಲಿ ಜನಿಸಿದರು ಸಹ ಹಸುಗಳನ್ನು ಸಾಕಿ ಕೃಷಿಯನ್ನು ಮಾಡಿದರು. ಅವರು ಧಾರ್ಮಿಕ ಕಾರ್ಯಗಳನ್ನು ಮಾಡುವುದರ ಮೂಲಕ ಉತ್ತುಂಗದ ಜೀವನ ನಡೆಸಿದರು ಎಂದು ರೆಡ್ಡಿ ಸಮಾಜದ ಮುಖಂಡ ವಿಜಯಕುಮಾರ ರೆಡ್ಡಿ ಹೇಳಿದರು.

ಪಟ್ಟಣದ ಮಿನಿವಿಧಾನ ಸೌಧದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ ನಿಮಿತ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಮಾಜ ಸುಧಾರಕರನ್ನು, ದೇಶ ಭಕ್ತರನ್ನು ಒಂದು ಜಾತಿಗೆ ಸೀಮಿತ ಮಾಡಬಾರದು ಎಂದು ಹೇಳಿದರು. ಆದರ್ಶ ವಿದ್ಯಾಲಯದ ಶಿಕ್ಷಕ ಪ್ರಭು ಪಾಟೀಲ ಮಾತನಾಡಿ, ಹೇಮರೆಡ್ಡಿ ಮಲ್ಲಮ್ಮ ಚಿಕ್ಕನಿಂದಲೇ ಶಿವನನ್ನು ನನೆಸಿಕೊಂಡು ಆತನಸ್ಮರಣೆಯಲ್ಲಿ ಇರುತ್ತಿದ್ದರು. ಅಷ್ಟೆಲ್ಲದೆ ಬಸವಣ್ಣನವರ ವಚನಗಳಿಂದ ದೈವಭಕ್ತಳಾಗಿದ್ದಳು. ಅಂತಃ ಮಹಾಶರಣೆಯ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಇಂದಿನಾ ದಿನ ನಾವು ದುಡ್ಡಿನ ಹಿಂದೆ ಬೆನ್ನು ಹತ್ತಿ ಧರ್ಮ ಒಡೆಯುತ್ತಿದ್ದೇವೆ. ನಮಗೆ ದುಡ್ಡೆ ಜೀವನವಲ್ಲ ಎಂದರು. ಶಿರಸ್ತೇದಾರ ಎ.ಎಚ್.ಬೋರಮ್ಮ ಪೊಲೀಶಿ, ಎ.ಎಚ್. ಬಳೋರಗಿ, ಬಸವರಾಜ ದಾನಿ, ಸಬ್ ರಜಿಸ್ಟಾರ್ ಕಚೇರಿ ಸಿಬ್ಬಂದಿ ಬಸನಗೌಡ ಪಾಟೀಲ, ಮುಖಂಡರಾದ ಸಂಗಮೇಶ ಹುಜರತಿ, ಮಣಿಕಂಠ ಕಲ್ಲೂರ, ಸಂತೋಷ ಕುಳಗೇರಿ, ಮಲ್ಲು ಅಂಬಳನೂರ, ಸಿಬ್ಬಂದಿ ಅಶೋಕ ರೆಡ್ಡಿ, ಕಲ್ಲನಗೌಡ ಬಿರಾದಾರ, ಶಶಿಕಾಂತ ಸ್ಥಾವರಮಠ ಸಿಬ್ಬಂದಿಗಳಾದ ನಿರ್ಮಲಾ ಪೂಜಾರಿ, ಸುಧಾ ಪಟ್ಟಣದ, ರಾಮಚಂದ್ರ ಫಾಟಗೆ ಸೇರಿದಂತೆ ಇತರರಿದ್ದರು.



ಬಸವನಬಾಗೇವಾಡಿ: ಪಟ್ಟಣದ ಮಿನಿವಿಧಾನ ಸೌಧದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ ನಿಮಿತ್ತ ಹೇಮರೆಡ್ಡಿ ಮಲ್ಲಮ್ಮ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ರೆಡ್ಡಿ ಸಮಾಜದ ಮುಖಂಡ ವಿಜಯಕುಮಾರ ರೆಡ್ಡಿ ಅವರು ಮಾತನಾಡಿದರು.

ಸಾಂಸ್ಕೃತಿಕ, ಕ್ರೀಡಾ ಸಮಾರೋಪ | ಕೊಕ್ಕನವರ ಅಭಿಮತ

ಆತ್ಮವಿಶ್ವಾಸದಿಂದ ಯಶಸ್ಸು ಸಾಧ್ಯ

ವಿಜಯಪುರ: ಆತ್ಮವಿಶ್ವಾಸ ಹಾಗೂ ನಿರಂತರ ಪರಿಶ್ರಮದ ಅಧ್ಯಯನದಿಂದ ಮಾತ್ರ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಲು ಸಾಧ್ಯ ಎಂದು ಎಂದು ಜಮಖಂಡಿಯ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಕೇಂದ್ರ, ಕನ್ನಡ ವಿಭಾಗದ ಸಂಯೋಜಕ ಡಾ.ವೈ.ವೈ. ಕೊಕ್ಕನವರ ಹೇಳಿದರು.



ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಆಶ್ರಯದಲ್ಲಿ ಹಮ್ಮಿಕೊಂಡ 2025-26 ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟವಟಿಕೆಗಳ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ,

ವಿದ್ಯಾರ್ಥಿಗಳಲ್ಲಿ ಮೌಲ್ಯಗಳ ಪಸರಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳು ಓದುವ ವಯಸ್ಸಿನಲ್ಲಿ ಓದಿ ಉನ್ನತ ಹುದ್ದೆಗೆ ತಲುಪಬೇಕು. ವಿದ್ಯಾರ್ಥಿಗಳು ಸೋಲೇ ಗೆಲುವಿನ ಸೋಪಾನ ಆ ನಿಟ್ಟಿನಲ್ಲಿ ಸೋತೆ ಎಂದು ಎಂದೆಂದಿಗೂ ಆತ್ಮ ವಿಶ್ವಾಸ ಕಳೆದುಕೊಳ್ಳಬಾರದು ಎಂದರು.

ವಿದ್ಯಾರ್ಥಿಗಳ ಜೀವನದದಲ್ಲಿ ನಿರ್ಧಿಷ್ಟ ಗುರಿ ಮುಖ್ಯ ಆದರಂತೆ ವಿದ್ಯಾರ್ಥಿಗಳು ಸಮಯದ ಸದುಪಯೋಗ ಪಡೆದುಕೊಂಡು ಸಾಧಕನಾಗಬೇಕು. ನಿಮ್ಮ ತಂದೆ ತಾಯಿಗಳು ಕಂಡಂತಹ ಕನಸನ್ನು ಸಾಕಾರಗೊಳಿಸುವಲ್ಲಿ ನಿರಂತರ ಪ್ರಯತ್ನ ನಿಮ್ಮದಾಗಿರಲಿ ನಿಮಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿದ ಅವರಿಗೆ ನಿಮ್ಮ ಕೊಡುಗೆಯೇ ಸಾಧನೆ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಒಂದೊಂದು ಕಲೆ ಇರುತ್ತದೆ ಅದನ್ನು ಹೊರ ತರುವ ಪ್ರಯತ್ನ ಮಾಡಬೇಕು. ವಿದ್ಯಾರ್ಥಿಗಳು ನಿರಂತರ ಮೊಬೈಲ್ ಗೀಳು ಮತ್ತು ಟೀವಿ ನೋಡುವುದನ್ನು ಬಿಟ್ಟು ಅಗತ್ಯಗನುಗುಣವಾಗಿ ಬಳಸಿಕೊಂಡು ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕು ಎಂದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಅನೀಲ ನಾಯಕ ಮಾತನಾಡಿ, ವಿದ್ಯಾರ್ಥಿಗಳು ಪಡೆದುಕೊಂಡ ಪ್ರಶಸ್ತಿ ಕೇವಲ ಹಣದ ರೂಪದ ಬಹುಮಾನವಲ್ಲ ಇದು ಶ್ರೇಷ್ಠತೆಗೆ ಸಿಕ್ಕ ಮನ್ನಣೆ, ನಿಮ್ಮ ಜವಾಬ್ದಾರಿ ಹೆಚ್ಚಿಸುವ ಗೌರವ. ವಿದ್ಯಾರ್ಥಿಗಳಿಗೆ ಸೋಲು ಗೆಲುವು ಅಂತ್ಯವಲ್ಲ, ಆದರೆ ಭಾಗವಹಿಸುವುದೇ ದೊಡ್ಡ ಗೆಲವು. ಆದರಂತೆ ಬಹುಮಾನ ಸಿಗದೆ ಇದ್ದ ವಿದ್ಯಾರ್ಥಿಗಳು ನಿರಾಶೆರಾಗದೆ ನಿಮ್ಮ ಪ್ರಯತ್ನ ನಿರಂತವಾಗಿರಲಿ. ಎಲ್ಲ ವಿದ್ಯಾರ್ಥಿಗಳು ನಮ್ಮ ಮಹಾವಿದ್ಯಾಲಯದ ಕೀರ್ತಿ ಪತಾಕೆ ಹಾರುವಂತೆ ಬೆಳೆಯಬೇಕೆಂದು ಹೇಳಿದರು.

ಮಹಾವಿದ್ಯಾಲಯದ ವಿವಿಧ ಸ್ನಾತಕ, ಸ್ನಾತೋತ್ತರ, ಸಂಶೋಧನ, ಕ್ರೀಡಾ, ಸಾಂಸ್ಕೃತಿಕ ಮತ್ತು ಸೈಕ್ಷಣಿಕ ಕ್ಷೇತ್ರದಲ್ಲಿ ಸಾಧಿಸಿದ ಸಾಧಕರನ್ನು ಸನ್ಮಾಸಿಲಾಯಿತು.

ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್. ಪಾಟೀಲ, ನ್ಯಾಕ್ ಸಂಯೋಜಕ ಡಾ.ಮಹೇಶಕುಮಾರ ಕೆ., ದೈಹಿಕ ನಿರ್ದೇಶಕ ಎಸ್.ಕೆ. ಪಾಟೀಲ, ಸಾಂಸ್ಕೃತಿಕ ವಿಭಾಗದ ಕಾಯಾಧ್ಯಕ್ಷೆ ಡಾ.ರೇಣುಕಾದೇವಿ ಕಮತರ, ವಿದ್ಯಾರ್ಥಿ ಪ್ರತಿನಿಧಿ ಶ್ರೀಧರ ಚಲವಾದಿ, ನೇಹಾ ಬಾಲಗಾಂವ ಇದ್ದರು.

ಸ್ವಪ್ನಾ ಸಂಗಡಿಗರು ಪ್ರಾರ್ಥಿಸಿದರು. ಡಾ.ಉಷಾದೇವಿ ಹಿರೇಮಠ ಪರಿಚಯಿಸಿದರು. ಪ್ರೊ.ಶ್ವೇತಾ ಸವನೂರ, ಪ್ರೊ.ಸ್ವಾತಿ ಪಾಟೀಲ ನಿರೂಪಿಸಿದರು. ಪ್ರೊ.ರೂಪಾ ಮೋಟಗಿ ವಂದಿಸಿದರು.

ಶಿಕ್ಷಣಕ್ಕೆ ನನ್ನ ಮೊದಲ ಆದ್ಯತೆ

ಇಂಡಿ: ತಾಲೂಕು ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು ಎಂಬ ಉದ್ದೇಶದಿಂದ ಇಂದು ಹಡಲಸಂಗ, ಶಿರಾಶ್ಯಾಡ, ಬಸನಾಳ ಗ್ರಾಮಗಳ ಪ್ರೌಢ ಶಾಲೆಗಳನ್ನು ಉನ್ನತಿಕರಿಸಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಇದರಿಂದ ನಮ್ಮ ಭಾಗದ ಗ್ರಾಮೀಣ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಬೇರೆಡೆಯಿಂದ ಪದವಿ ಪೂರ್ವ ಕಾಲೇಜುಗಳನ್ನು ಸ್ಥಳಾಂತರಿಸಿ ಪ್ರೌಢ ಶಾಲೆಗಳನ್ನು ಉನ್ನತಿಕರಿಸಲು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಈ ಕಾಲೇಜುಗಳು ಒಂದೇ ದಿನ ಮೂರು ಕಾಲೇಜುಗಳನ್ನು ಸ್ಥಳಾಂತರ ಮಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳನ್ನು ಅಭಿನಂದಿಸುವುದಾಗಿ ಶಾಸಕ ಯಶವಂತರಾಯಗೌಡ ಪಾಟೀಲ ಅವರು ಹೇಳಿದರು.



ಅವರು ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇಂಡಿ ಮತಕ್ಷೇತ್ರ ಎಲ್ಲ ವಿಧದಲ್ಲೂ ಪ್ರಗತಿ ಹೊಂದಬೇಕು ಎಂಬ ಸದಾಶಯ ನನ್ನದು. ಆ ನಿಟ್ಟಿನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದೇನೆ. ಶೈಕ್ಷಣಿಕವಾಗಿ ಪ್ರಗತಿ ಹೊಂದಿದಲ್ಲಿ ಆರ್ಥಿಕವಾಗಿ ಸದೃಢರಾಗಲು ಸಹಕಾರಿಯಾಗಲಿರುವುದರಿಂದ ಶಿಕ್ಷಣಕ್ಕೆ ನನ್ನ ಮೊದಲನೇ ಆದ್ಯತೆಯಾಗಿದೆ ಎಂದರು.

ಕುಡಿಯುವ ನೀರಿನ ಸಮಸ್ಯೆಯಾಗಬಾರದು ಎಂಬ ಉದ್ದೇಶದಿಂದ ನಮ್ಮ ಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ಕುಡಿಯುವ ನೀರಿಗಾಗಿ ಉಜನಿ ಜಲಾಶಯದಿಂದ ಭೀಮಾನದಿಗೆ ನೀರು ಹರಿಸುವಂತೆ ಮನವಿ ಸಲ್ಲಿಸಿತ್ತು. ನಮ್ಮ ಬೇಡಿಕೆಗೆ ಸ್ಪಂದಿಸಿದ ಮಹಾರಾಷ್ಟ್ರ ಸರ್ಕಾರ 16 ಸಾವಿರ ಕ್ಯೂಸೆಕ್ ನೀರು ಹರಿಬಿಟ್ಟಿದ್ದು, ಮಹಾರಾಷ್ಟ್ರ ಸರ್ಕಾರಕ್ಕೆ ಹಾಗೂ ಜಿಲ್ಲಾಧಿಕಾರಿಗಳು ತಾಲೂಕಾಡಳಿತದ ಅಧಿಕಾರಿಗಳು ಬೇಸಿಗೆ ನಿರ್ವಹಿಸಲು ಕಟ್ಟುನಿಟ್ಟಿನ ಕ್ರಮ ಕಯಗೊಂಡಿದ್ದಾರೆ. ಇಂಡಿ-ಚಡಚಣ ತಾಲೂಕಿನ 24 ಕೆರೆ ತುಂಬಿಸಿದ್ದಾರೆ. ಹೀಗಾಗಿ ಅವರಿಗೂ ಅಭಿನಂದಿಸುವುದಾಗಿ ತಿಳಿಸಿದರು.

ಈ ಭಾಗದ ನೀರಾವರಿಗಾಗಿ ಕೆರೆ ತುಂಬುವ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಮುಖಾಂತರ ತಾಲೂಕನ್ನು ನೀರಾವರಿಗೆ ಒಳಪಡಿಸಲಾಗಿದೆ. ಆಲಮಟ್ಟಿ ಹಿನ್ನೀರಿನಿಂದ ಜಲಧಾರೆ ಯೋಜನೆ ಮುಖಾಂತರ ವಿಜಯಪುರ, ರಾಯಚೂರು ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಮಾಡಲಾಗುತ್ತಿದ್ದು, ಆ ಯೋಜನೆ ಪೂರ್ಣಗೊಂಡರೆ ಇಡೀ ಜಿಲ್ಲೆಯಲ್ಲಿ ಎಲ್ಲೂ ಕುಡಿಯುವ ನೀರಿನ ತೊಂದರೆ ಉದ್ಭವಿಸಲ್ಲ ಎಂದ ಅವರು ತಾಲೂಕಿನ ಹಲವೆಡೆ ರಸ್ತೆ ಹಾಳಾಗಿದ್ದು ಪುನರ್ ನಿರ್ಮಾಣಕ್ಕೆ ಕ್ರಮ ವಹಿಸಲಾಗುತ್ತಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಮಕ್ಕಳಿಗೆ ತಾಯಿ ನೈತಿಕ ಶಕ್ತಿ: ಸಂತೋಷ

ವಿಜಯಪುರ: ತಾಯಿ ಮಕ್ಕಳಿಗೆ ಒಂದು ನೈತಿಕ ಶಕ್ತಿ. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳು ದಾರಿ ತಪ್ಪದಂತೆ, ಸಂಸ್ಕೃತಿ ಮತ್ತು ಆಧುನಿಕತೆಯ ನಡುವೆ ಸಮತೋಲನ ಕಾಪಾಡಲು ತಾಯಿ ಪಾತ್ರ ಅನನ್ಯವಾಗಿದ್ದು, ಅವಳು ಜೀವನದ ಕಷ್ಟಗಳಲ್ಲಿ ಬೆನ್ನೆಲುಬಾಗಿ ನಿಲ್ಲುವ ಅಕ್ಷಯ ಪಾತ್ರೆ ಇದ್ದಂತೆ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಭಾನುವಾರ ಹಮ್ಮಿಕೊಂಡ ವಿಶ್ವ ತಾಯಂದಿರ ದಿನದ ಕಾರ್ಯಕ್ರಮದಲ್ಲಿ 'ಆಧುನಿಕ ಜಗತ್ತಿನಲ್ಲಿ ತಾಯಿಯ ಪಾತ್ರ' ಕುರಿತು ಮಾತನಾಡಿ, ತಾಯಿ ಎಂಬ ಪದದಲ್ಲಿ ಇಡೀ ವಿಶ್ವವೇ ಅಡಗಿದೆ. ತಾಯಿ, ಜಗತ್ತಿನಲ್ಲಿ ದೇವರ ಮತ್ತೊಂದು ರೂಪ, ನಮ್ಮ ದುಃಖ ತಗೊಂಡು ಪ್ರೀತಿ ಹಂಚುವವಳೇ ತಾಯಿ. ಸಮಾಜ ಮತ್ತು ಕುಟುಂಬದಲ್ಲಿ ತಾಯಿ ಬಹಳ ಮುಖ್ಯ. ಮಗುವಿನ ಸಮತೋಲಿತ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿ ಪಾತ್ರ ಬಹಳ ಮುಖ್ಯ ಎಂದರು.

ಇಂಡಿ ಎಸ್‌ಬಿಐ ಬ್ಯಾಂಕ್ ಫೀಲ್ಡ್ ಆಫೀಸರ್ ಪ್ರಕಾಶ ಗುಜ್ಜಲವರ ಮಾತನಾಡಿ, ತಾಯಿಯು ಪ್ರೀತಿ, ತ್ಯಾಗ, ಕಾಳಜಿ ಮತ್ತು ಮಾರ್ಗದರ್ಶನದ ಸಾಕಾರಮೂರ್ತಿ. ಅವಳು ಮಗುವಿನ ಮೊದಲ ಗುರು, ಸ್ನೇಹಿತೆ, ದೇವತೆಯಾಗಿ ಜೀವನಪೂರ್ತಿ ಬೆನ್ನೆಲುಬಾಗಿದ್ದಾಳೆ. ತಾಯಿಯು ಮಗುವಿನ ಭಾವನಾತ್ಮಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುತ್ತಾಳೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎನ್ನುವ ಮಾತಿದೆ. ಅಂದರೆ ಹೆತ್ತ ತಾಯಿ ಹೊತ್ತ ಭೂಮಿ ಸ್ವರ್ಗಕ್ಕಿಂತಲೂ ಮಿಗಿಲು. ತಾಯಿಯ ತ್ಯಾಗ, ಆಕೆಯ ಪರಿಶುದ್ಧ, ನಿಶ್ಕಲ್ಮಶ ಪ್ರೀತಿಗೆ ಬೆಲೆ ಕಟ್ಟಲು ಅಸಾಧ್ಯ. ತಾಯಿ ಮಗುವಿನ ವ್ಯಕ್ತಿತ್ವ ರೂಪಿಸುವ ಅಡಿಪಾಯ ಎಂದರು.

ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ರೇಣುಕಾ ಭಜಂತ್ರಿ, ವೀರೇಶ ಹುಣಶ್ಯಾಳ ಹಾಗೂ ಪಾಲಕರು, ಮಕ್ಕಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಮಕ್ಕಳು ತಾಯಿಯ ಮಹತ್ವ ಕುರಿತು ಬಿತ್ತಿ ಚಿತ್ರ ಪ್ರದರ್ಶಿಸಿದರು.

ತಾಯಿಯು ಒಳ್ಳೆಯ ವಿಚಾರಗಳ ಬೀಜವನ್ನು ಬಿತ್ತುವ ಮೂಲಕ ಮಕ್ಕಳ ವ್ಯಕ್ತಿತ್ವವನ್ನು ರೂಪಿಸಬೇಕು. ಜವಾಬ್ದಾರಿಯುತ, ಆತ್ಮವಿಶ್ವಾಸದ ಮತ್ತು ಮಾನವೀಯ ಗುಣವುಳ್ಳ ಹೊಸ ಪೀಳಿಗೆಯನ್ನು ಸೃಷ್ಟಿಸುವ ಶಿಲ್ಪಿಯೇ ತಾಯಿ.



ಸಮಾಜದ ಅಭಿವೃದ್ಧಿಗೆ ನಾವೆಲ್ಲರೂ ಶ್ರಮಿಸೋಣ: ಬಸವರಡ್ಡಿ

ದೇವರಹಿಪ್ಪರಗಿ: ಮಲ್ಲಮ್ಮನ ಜೀವನದ ಆದರ್ಶ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ನಾವೆಲ್ಲರೂ ಶ್ರಮಿಸೋಣ ಎಂದು ಶಸಾಪ ತಾಲೂಕು ಘಟಕ ಅಧ್ಯಕ್ಷ ಎಸ್.ಎನ್. ಬಸವರಡ್ಡಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ತಾಲೂಕು ಆಡಳಿತ ಹಾಗೂ ಸಮುದಾಯದ ವತಿಯಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆಯಲ್ಲಿ ಉಪನ್ಯಾಸ ನೀಡಿದರು.

ತಾಲೂಕಿನ ಮಾಜಿ ಕಸಾಪ ಅಧ್ಯಕ್ಷ ಜಿ.ಪಿ.ಬಿರಾದಾರ ಮಾತನಾಡಿ, ಹೇಮರೆಡ್ಡಿ ಮಲ್ಲಮ್ಮ ಸೇರಿದಂತೆ ಅನೇಕ ಮಹನೀಯರ ಜಯಂತಿ ಸರ್ಕಾರದ ವತಿಯಿಂದ ಆಯೋಜಿಸಲಾಗುತ್ತಿದೆ.ಆದರೆ ಅವರ ಆದರ್ಶಗಳನ್ನು ಪಾಲಿಸುವ ಹಾಗೂ ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಮಲ್ಲಮ್ಮನವರು ಕಷ್ಟಗಳನ್ನು ಎದುರಿಸಿದ ರೀತಿ, ಸೊಸೆಯಾಗಿ ಗಂಡನ ಮನೆಯಲ್ಲಿ ಇರಬೇಕಾದ ರೀತಿ, ದಾನ ಧರ್ಮಗಳನ್ನು ಮಾಡುವ ಬಗ್ಗೆ, ದೈವಭಕ್ತಿ ಎಲ್ಲರೂ ತಿಳಿದುಕೊಂಡು ನಡೆದಾಗ ಮಾತ್ರ ಜಯಂತಿ ಆಚರಣೆ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎಂದರು.

ರೈತ ಸಂಘದ ರಾಜ್ಯ ಯುವ ಸಂಚಾಲಕ ಸಿದ್ದನಗೌಡ ಪಾಟೀಲ ಹಾಗೂ ರೆಡ್ಡಿ ಸಮಾಜದ ತಾಲೂಕು ಅಧ್ಯಕ್ಷ ಶಿವಶರಣರಡ್ಡಿ ಅವರಾ ಮಾತನಾಡಿದರು.



ಮುಖಂಡರುಗಳಾದ ಸಂಗಾರೆಡ್ಡಿ ತೆಗ್ಗಿನಮನಿ, ಭೀಮನಗೌಡ ಬಿರಾದಾರ, ಮಹೇಶ ಸ್ಥಾವರಮಠ, ಸುರೇಶ ಕೊಣ್ಣೂರ, ಸಂಗಣ್ಣ ದೇವೂರ, ಶಿವು ಮಲ್ಲಾಬಾದಿ, ಜಗದೀಶ ನೀರಲಗಿ, ಗ್ರಾಮ ಆಡಳಿತ ಅಧಿಕಾರಿಗಳಾದ ರಮಾನಾಥ ಚಕ್ಕಡಿ, ಚನ್ನಬಸು ಹೊಸಮನಿ, ಸಂತೋಷ ತಳವಾರ, ಶ್ರೀಶೈಲ ಜಮಾದಾರ, ಸುರೇಶ ಮಣ್ಣೂರ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಕಂದಾಯ ಇಲಾಖೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಕಂದಾಯ ಇಲಾಖೆ ಶಿರಸ್ತೇದಾರ ಸುರೇಶ ಮ್ಯಾಗೇರಿ ನಿರೂಪಿಸಿ, ವಂದಿಸಿದರು.

ಓದುವ ಸಂಸ್ಕೃತಿ ಬೆಳೆಸಿಕೊಳ್ಳಿ: ಬರಗೂರ

ವಿಜಯಪುರ: ಪುಸ್ತಕಗಳಿಂದ ಮನೆ ಶೃಂಗಾರಗೊಂಡರೆ ಮಕ್ಕಳ ಮನಸ್ಸು ಜ್ಞಾನದಿಂದ ಶೃಂಗಾರವಾಗುತ್ತದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಡಾ.ಕುಶಾಲ ಬರಗೂರ ಹೇಳಿದರು.

ನಗರದ ಸ್ವಾತಂತ್ರ್ಯಯೋಧರ ಕಾಲೋನಿಯ ಸಾಹಿತಿ ಸಂಗಮೇಶ ಬದಾಮಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇವರ ಮನೆಯಲ್ಲಿ ದೇವರು ಕಾಣುವ ಹಾಗೆ ಮನೆ ಪ್ರವೇಶಿಸಿದೊಡನೆ ಗ್ರಂಥಗಳು ಕಾಣಬೇಕು. ಅಂದಾಗ ಓದುವ ಸಂಸ್ಕೃತಿ ಬೆಳೆಯುತ್ತದೆ. ಮೊಬೈಲ್ ಬಳಕೆ ಕಡಿಮೆಯಾಗಿ ಓದುವ ಆಸಕ್ತಿ ಹೆಚ್ಚುತ್ತದೆ ಎಂದರು.

ಜಿಲ್ಲಾ ಸಮಿತಿ ಸಂಚಾಲಕ ಶಂಕರ ಬೈಚಬಾಳ ಮಾತನಾಡಿ, ಹನ್ನೆರಡನೇ ಶತಮಾನದಲ್ಲಿ ವಚನಕ್ರಾಂತಿಗೆ ನಾಂದಿ ಹಾಡಿದ ಬಾಗೇವಾಡಿಯ ಬಸವಣ್ಣನವರ ವಚನಗಳು ನಮಗೆ ದಾರಿದೀಪ. ಅಂಥ ವಚನ, ಗ್ರಂಥಗಳನ್ನು ಓದಿದರೆ ವ್ಯಕ್ತಿತ್ವ ವಿಕಸನವಾಗಬಲ್ಲದು ಎಂದರು.

ಸಾಹಿತಿ ಸಂಗಮೇಶ ಬದಾಮಿ ಮಾತನಾಡಿ, ಮನೆಯಲ್ಲಿ ಪುಸ್ತಕಗಳಿದ್ದರೆ



ಸಾಲದು. ಇಷ್ಟಪಟ್ಟು ಓದಬೇಕು. ಆಗ ಪುಸ್ತಕ ಸಂಸ್ಕೃತಿ ಉಳಿಯುತ್ತದೆ. ಅಂತರ್ಜಾಲದ ಹಾವಳಿಯಲ್ಲಿ ಓದನ್ನು ನಿರ್ಲಕ್ಷಿಸದೆ, ಓದು ನಮ್ಮ ಗುರಿಯಾಗಬೇಕು ಎಂದರು.

ಮಲ್ಲಿಕಾರ್ಜುನ ಅಮರಣ್ಣವರ ಅಧ್ಯಕ್ಷತೆ ವಹಿಸಿದ್ದರು. ಸಿದ್ದು ಯರನಾಳ, ಸಾಕ್ಷಿ ಚವ್ಹಾಣ, ಬಸವರಾಜ ಒಂಟಗೋಡಿ, ಹರ್ಷ ಮಲಘಾಣ, ಅಂಬಾದಾಸ ಚವ್ಹಾಣ, ವಿದ್ಯಾಲಕ್ಷ್ಮೀ ಬದಾಮಿ ಇದ್ದರು.

ಪ್ರಾಧಿಕಾರದ ಸದಸ್ಯ ಬಸವರಾಜ ಸಾಲವಾಡಗಿ ಸ್ವಾಗತಿಸಿದರು. ಮುರುಗೇಶ ಸಂಗಮ ನಿರೂಪಿಸಿದರು. ಎಸ್.ಡಿ.ಜೋಶಿ ವಂದಿಸಿದರು.

ನಾಳೆಯಿಂದ ಜಾತ್ರಾ ಮಹೋತ್ಸವ

ಮುದ್ದೇಬಿಹಾಳ: ತಾಲೂಕಿನ ಚವನಭಾವಿ ಗ್ರಾಮದಲ್ಲಿ ಮೇ 12ರಿಂದ 16ರವರೆಗೆ ಶ್ರೀ ಗದ್ದೆಮ್ಮದೇವಿ ಹಾಗೂ ಶ್ರೀ ದ್ಯಾಮವ್ವ ದೇವಿಯ ಜಾತ್ರಾಮಹೋತ್ಸವ ನಡೆಯಲಿದೆ.

ಮೇ 12ರಂದು ಸಂಜೆ 6ಕ್ಕೆ ದೇವರ ಗುಡ್ಡಿಯಿಂದ ಗದ್ದೆಮ್ಮದೇವಿ ಮತ್ತು ಅಡವಿ ಹುಲಗಬಾಳಗಳಿಂದ ದ್ಯಾಮವ್ವ ದೇವಿಯನ್ನು ಸಕಲ ವಾದ್ಯ ವೈಭವಗಳೊಂದಿಗೆ ಗ್ರಾಮಕ್ಕೆ ಬರಮಾಡಿಕೊಳ್ಳಲಾಗುವುದು. ನಂತರ ಗಂಗಸ್ಥಳದಿಂದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ.

ಮೇ 13ರಂದು ಬೆಳಗ್ಗೆ ದೇವಿಯರನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ, ಕುಂಭ ಮೇಳ ಜರುಗುವುದು. ಮಧ್ಯಾಹ್ನ ಉಡಿ ತುಂಬುವ ಕಾರ್ಯಕ್ರಮ. ರಾತ್ರಿ 9.30ಕ್ಕೆ ರೋಚಕ 'ವಾದಿ ಪ್ರತಿವಾದಿ ಡೊಳ್ಳಿನ ಪದಗಳ' ಸ್ಪರ್ಧೆ ಜರುಗಲಿದೆ. ಸಾಹಸ ಕ್ರೀಡೆಗಳು ಮತ್ತು ನಾಟಕ ಪ್ರದರ್ಶನ ನಡೆಯಲಿದೆ.

ಮೇ 14ರಂದು ವಿವಿಧ ಸಾಹಸ ಸ್ಪರ್ಧೆಗಳು. ಬೆಳಗ್ಗೆ 11ಕ್ಕೆ ಕಲ್ಲು ಎಳೆಯುವುದು, ಮಧ್ಯಾಹ್ನ 12ಕ್ಕೆ ಸಂಗ್ರಾಣಿ ಕಲ್ಲು ಎತ್ತುವುದು, ರಾತ್ರಿ 10ಕ್ಕೆ ಚಿಲ್ಲಾಳ ಗುಂಡಿಯ ಅಂಜನಿಪುತ್ರ ನಾಟ್ಯ ಸಂಘದಿಂದ ವಿಠ್ಠಲ ಚಿಲ್ಲಾಳಗುಂಡಿ ಅವರ ಹಾಸ್ಯ ನಟನೆಯೊಂದಿಗೆ 'ಮಗ ಹೋದರೂ ಮಾಂಗಲ್ಯ ಬೇಕು' ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಮೇ 15ರಂದು ಭಾರಿ ತೇರಬಂಡಿ ಸ್ಪರ್ಧೆ ಮತ್ತು ಟಗರಿನ ಕಾಳಗ ಜರುಗಲಿದೆ. ಮೇ 16ರಂದು ಕ್ರಿಕೆಟ್ ಪಂದ್ಯಾವಳಿ. ಬೆಳಗ್ಗೆ 10ರಿಂದ ಓಪನ್ ಟೆನ್ನಿಸ್ ಬಾಲ್, ಕ್ರಿಕೆಟ್ ಟೂರ್ನಮೆಂಟ್ ಆಯೋಜಿಸಲಾಗಿದೆ. ಭಕ್ತಾದಿಗಳು ಮತ್ತು ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಕೋರಿದ್ದಾರೆ.

ಹೇಮರೆಡ್ಡಿ ಮಲ್ಲಮ್ಮರ ಚಿಂತನೆಗಳು ಸಾರ್ವಕಾಲಿಕ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಿಸಲಾಯಿತು.

ಜಯಂತಿ ಕಾರ್ಯಕ್ರಮದ ಅಂಗವಾಗಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಭಕ್ತಿಯ ವಿಚಾರ ಹಾಗೂ ಅಧ್ಯಾತ್ಮಿಕ ಶ್ರೇಷ್ಠತೆಯನ್ನು ಸಾರಿದ ಹೇಮರೆಡ್ಡಿ ಮಲ್ಲಮ್ಮ ಅವರ ಆದರ್ಶ, ಚಿಂತನೆಗಳು ಸಾರ್ವಕಾಲಿಕವಾಗಿವೆ, ಅವರು ತೋರಿದ ಮಾರ್ಗದಲ್ಲಿ ಸಾಗುವ ಮೂಲಕ ನಾವು ಉತ್ತಮವಾದ ಬದುಕು ಕಟ್ಟಿಕೊಳ್ಳಬೇಕು, ಹೆಮರೆಡ್ಡಿ ಮಲ್ಲಮ್ಮ ಅವರ ಶ್ರೇಷ್ಠ ಭಕ್ತಿ ತತ್ವಗಳನ್ನು ಜೀವನದ ಪ್ರತಿ ಹಂತದಲ್ಲಿಯೂ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಅತಿಥಿ ಗಣ್ಯರು ವಿಚಾರ ಹಂಚಿಕೊಂಡರು.

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ನಿರ್ಮಿತಿ ಕೇಂದ್ರದ ಯೋಜನೆ ನಿರ್ದೇಶಕ ಆಕಾಶ ತಿಮಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಸುರೇಶ ದೇಸಾಯಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಲ್.ಎಚ್.ಬಿದರಿ, ವಿದ್ಯಾವತಿ ಅಂಕಲಗಿ ಸೇರಿದಂತೆ ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.



ಬೀದಿ ನಾಯಿ ಉಪಟಳ ನಿಯಂತ್ರಿಸಿ

ವಿಜಯಪುರ: ಬೀದಿ ನಾಯಿ ಉಪಟಳ ಸಂಪೂರ್ಣವಾಗಿ ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಪಾಲಿಕೆ ಅಧಿಕಾರಿಗಳು ಗಂಭೀರ ಸ್ವರೂಪದ ಕ್ರಮ ಕೈಗೊಳ್ಳಬೇಕು. ಈ ವಿಷಯದಲ್ಲಿ ವಿಳಂಬ ನೀತಿ ಅನುಸರಿಸದೇ ನಿಯಂತ್ರಣ ಕ್ರಮಕ್ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ ಒತ್ತಾಯಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಬೀದಿ ನಾಯಿಗಳ ಹಾವಳಿ ಭೀಕರ ಸ್ವರೂಪ ತಲುಪಿದೆ, ಚಿಕ್ಕ ಮಗುವನ್ನು ಬೀದಿ ನಾಯಿಗಳು ದಾಳಿ ನಡೆಸಿವೆ. ಆ ಮಗು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ, ಮಗುವಿನ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಮಗುವಿಗೆ ಇನ್ನೂ ಉನ್ನತ ಮಟ್ಟದ ಚಿಕಿತ್ಸೆ ಅಗತ್ಯವಿದ್ದರೆ ಅದನ್ನು ಕೂಡ ಸರ್ಕಾರ ಮುಂದಾಳತ್ವ ವಹಿಸಿ ಅದನ್ನು ದೊರಕಿಸಬೇಕು. ಬೀದಿ ನಾಯಿಗಳ ಉಪಟಳ ಜನರನ್ನು ಭಯಭೀತರನ್ನಾಗಿಸಿದೆ. ಚಿಕ್ಕ ಮಕ್ಕಳನ್ನು ಹೊರಗೆ ಬಿಡಲು ಹೆದರುವಂತಾಗಿದೆ. ದೊಡ್ಡವರು ಸಹ ಹೊರಗಡೆ ಸಂಚರಿಸಲು ಭಯ ಪಡುವ ಪರಿಸ್ಥಿತಿ ಇದೆ ಎಂದು ಅನೇಕರು ನನಗೆ ದೂರಿದ್ದಾರೆ. ಇದು ಆತಂಕಕಾರಿ ವಿಷಯ, ಈ ನಿಟ್ಟಿನಲ್ಲಿ ಪಾಲಿಕೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆ ಸಾಧಿಸಿ ಬೀದಿ ನಾಯಿಗಳ ಉಪಟಳ ನಿಯಂತ್ರಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ಸಿಸಿಟಿವಿ ಮರು ಅಳವಡಿಸಲು ಮನವಿ

ನಾಲತವಾಡ: ಜನರ ರಕ್ಷಣೆ, ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ಪಟ್ಟಣದ ಭದ್ರತಾ ಹಿತದೃಷ್ಟಿಯಿಂದ ತಕ್ಷಣವೇ ನಾಲತವಾಡ ಪಟ್ಟಣದ ಪ್ರಮುಖ ಸ್ಥಳಗಳ ಸಿಸಿಟಿವಿಗಳನ್ನು ಮರು ಅಳವಡಿಸಲು ಶಿವಾನಂದ್ ವಾಲಿ ಮತ್ತು ರಫೀಕ ತಗ್ಗಿನ್ಮನಿ ಮನವಿ ಸಲ್ಲಿಸಿದರು.



ಪಟ್ಟಣದಲ್ಲಿ ಯುವಜನ ಸೇನಾ ರಾಜ್ಯಾಧ್ಯಕ್ಷ ಶಿವಾನಂದ ವಾಲಿ ಪಿಎಸ್‌ಐ ಸಂಜಯ ತಿಪ್ಪಾರೆಡ್ಡಿ ಅಧಿಕಾರಿಗಳಿಗೆ ಈ ಹಿಂದೆ ಪೊಲೀಸ್ ಇಲಾಖೆ, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರ ಸಹಕಾರದೊಂದಿಗೆ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿತ್ತು. ಆದರೆ ಕಳೆದ ವರ್ಷ ದುರಸ್ತಿಗಾಗಿ ತೆರವುಗೊಳಿಸಲಾದ ಸಿಸಿಟಿವಿ ಇಂದಿಗೂ ಮರು ಅಳವಡಿಕೆಯಾಗದೇ ಇರುವುದರಿಂದ ಸಾರ್ವಜನಿಕರ ಆತಂಕದ ವಾತಾವರಣ ನಿರ್ಮಾಣವಾಗಿದೆ.

ನಾಲತವಾಡ ಪಟ್ಟಣವು ವಾಣಿಜ್ಯ, ಶಿಕ್ಷಣ ಹಾಗೂ ವ್ಯಾಪಾರ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿದ್ದು, ಸುತ್ತಮುತ್ತಲಿ ಜಿಲ್ಲೆಗಳಾದ ಯಾದಗಿರಿ, ರಾಯಚೂರು ಸೇರಿದಂತೆ ವಿವಿಧ ಭಾಗಗಳಿಂದ ಜನರು ವ್ಯಾಪಾರ ಶಿಕ್ಷಣ ಹಾಗೂ ಇತರೆ ಅಗತ್ಯಗಳಿಗಾಗಿ ಇಲ್ಲಿಗೆ ಆಗಮಿಸುತ್ತಾರೆ. ವಿಶೇಷವಾಗಿ ಸೋಮವಾ ಸಂತೆ ದಿನ ಜನಸಂದಣಿ ಹೆಚ್ಚಿರುವ ಹಿನ್ನೆಲೆ, ಸಿಸಿಟಿವಿ ವ್ಯವಸ್ಥೆ ಕೊರತೆಯಿಂದ ಕಳ್ಳತನ ಪ್ರಕರಣ ಹೆಚ್ಚಾಗುತ್ತಿದ್ದು, ಶೀಘ್ರವೇ ಸಿಸಿಟಿವಿ ಮರು ಅಳವಡಿಸಿ ಎಂದರು.

ಕಿರುಸುದ್ದಿ

ಜಬ್ಬಲಗುಡ್ಡದಲ್ಲಿ ಗಂಡುಗಲಿ ಕುಮಾರರಾಮನ ಜಾತ್ರೆ

ಮುನಿರಾಬಾದ್: ಜಬ್ಬಲಗುಡ್ಡ ಸೀಮೆಗೆ ಹೊಂದಿಕೊಂಡಿರುವಂತಹ ಕುಮ್ಮಟದುರ್ಗದಲ್ಲಿ ಭಾನುವಾರ ಗಂಡುಗಲಿ ಕುಮಾರರಾಮ ಜಾತ್ರೆ ಅದ್ದೂರಿಯಾಗಿ ಜರುಗಿತು. ಇತಿಹಾಸಗಳ ಪ್ರಕಾರ ಇಡಿ ಭಾರತವನ್ನು ಸಾವಿರಾರು ವರ್ಷಗಳ ಕಾಲ ಸಾವಿರಾರು ರಾಜ ಮಹಾರಾಜರುಗಳು ಆಳ್ವಿಕೆ ಮಾಡಿದರು. ಆದರೆ ಯಾವೊಬ್ಬ ರಾಜನು ಕೂಡ ದೈವಿ ಪುರುಷನಂತೆ ಜನಮನ್ನಣೆಯನ್ನು ಪಡೆಯಲಿಲ್ಲ. 12 ಮತ್ತು 13ನೇ ಶತಮಾನದ ಅಂತ್ಯದಲ್ಲಿ ಮುಸ್ಲಿಂ ದಕ್ಷಿಣದದಂಡಯಾತ್ರೆಗೆ ತಡೆಗೋಡೆಯಾಗಿ ಮೊದಲ ಬಾರಿಗೆ ನಿಂತವನು ಕುಮಾರರಾಮ.

ಹೊಯ್ಸಳರು, ಕಾಕತೀಯರು, ಯಾದವರು, ಪಾಂಡ್ಯರು ಗುತ್ತಿಯ ವರು ಉಧೋ ಎಂದು ಮುಸ್ಲಿಂರಿಗೆ ತಲೆಬಾಗಿ ನಿಂತಾಗ ಅವರ ಎದುರಾಳಿಯಾಗಿ ನಿಂತವನು ಗಂಡುಗಲಿ ಕುಮಾರರಾಮ. ಜಾತ್ರೆಯ ಪ್ರಯುಕ್ತ ಮಧ್ಯಾಹ್ನ ಕುಮಾರರಾಮ ಯುವಕ ಮಂಡಳಿ ಜಬ್ಬಲಗುಡ್ಡ ಇವರ ವತಿಯಿಂದ ಅನ್ನ ಸಂತರ್ಪಣೆ ಹಾಗೂ ಹಳೆ ಕುಮ್ಮಟ ಗ್ರಾಮಸ್ಥರಿಂದ ಒಂದು ಕ್ವಿಂಟಾಲ್ ಅಕ್ಕಿಯ ಪಲಾವ್ ದೇವಸ್ಥಾನಕ್ಕೆ ಬಂದಂತ ಭಕ್ತಾದಿಗಳಿಗೆ ದಾಸೋಹ ಮಾಡಲಾಯಿತು. ಇಂದ್ರೇಶ್ ಸುಣಗಾರ ಗ್ರಾಪಂ ಸದಸ್ಯರು ಜಾತ್ರೆಯ ಮುಖ್ಯ ನಿರ್ವಾಹಕರಾಗಿ 20 ಸಾವಿರ ಅಧಿಕ ಮೊತ್ತ ದೇಣಿಗೆಯಾಗಿ ನೀಡಿದರು. ಜಬ್ಬಲಗುಡ್ಡ, ಇಂದರಗಿ, ಮುಕ್ಕುಂಪಿ, ಬೂದಗುಂಪಾ, ನಾಗೇಶನಹಳ್ಳಿ, ಹಳೇಕುಮ್ಮಟ, ಬಿಳೇಭಾವಿ, ಚಂದ್ರಗಿರಿ, ಇಂದ್ರಾನಗರ, ಚಿಕ್ಕಬೆಣಕಲ್, ಲಿಂಗದಹಳ್ಳಿ ಹಾಗೂ ಸುತ್ತ-ಮುತ್ತಲಿನ ಗ್ರಾಮಗಳ ಗುರು-ಹಿರಿಯರು, ಗಂಡುಗಲಿ ಕುಮಾರರಾಮನ ಸಕಲ ಸದ್ಭಕ್ತರು ಹಾಗೂ ಜಬ್ಬಲಗುಡ್ಡ ಗ್ರಾಮದ ಗ್ರಾಪಂ ಸದಸ್ಯರು ಉಪಸ್ಥಿತರಿದ್ದರು.

ಸ್ವಸಹಾಯ ಸಂಘಗಳ ಬಲವರ್ಧನೆಗೆ ಮುಂದಾಗಿ

ಯಲಬುರ್ಗಾ: ಗ್ರಾಮೀಣ ಭಾಗದ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬುವ ಮೂಲಕ ಸ್ವಸಹಾಯ ಸಂಘಗಳ ಒಕ್ಕೂಟದ ಮುಖ್ಯ ಲೆಕ್ಕ ಪುಸ್ತಕ ಬರಹಗಾರರು ಹಾಗೂ ಸಹ ಸ್ವಸಹಾಯ ಸಂಘಗಳ ಒಕ್ಕೂಟದ ಮುಖ್ಯ ಪುಸ್ತಕ, ಬರಹಗಾರರು ಸ್ವಸಹಾಯ ಸಂಘಗಳ ಬಲವರ್ಧನೆಗೆ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಗ್ರಾಪಂ ಮಟ್ಟದ ಮುಖ್ಯ ಪುಸ್ತಕ ಬರಹಗಾರರು ಎಂಬಿಕೆ ಮತ್ತು ಸ್ಥಳಿಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಎಲ್‌ಸಿಆರ್‌ಪಿ ಸಖಿಯರ ಮಹಾ ಒಕ್ಕೂಟದ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಹೇಮಾ ಬಸವರಾಜ ದಳವಾಯಿ ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸ್ವಸಹಾಯ ಸಂಘಗಳ ಒಕ್ಕೂಟಗಳಲ್ಲಿ ದಿನ ನಿತ್ಯ ಹಣಕಾಸಿನ ಅವ್ಯವಹಾರಗಳು ಬೆಳಕಿಗೆ ಬರುತ್ತಿವೆ ಇದರಲ್ಲಿ ಮುಖ್ಯ ಪುಸ್ತಕ ಬರಹಗಾರರು ಭಾಗಿಯಾಗಿರುವುದು ಕಂಡು ಬರುತ್ತಿದೆ ಇದನ್ನು ಗಮನಿಸಿದಾಗ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಕಾನೂನಿನ ಅರಿವು ಇಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ ಎಂದಿದ್ದಾರೆ. ಒಕ್ಕೂಟದ ಹಣ ಅವ್ಯವಹಾರ ಮಾಡಿಕೊಂಡು ಕಳಂಕ ತಂದುಕೊಳ್ಳದೇ ಮುಖ್ಯ ಪುಸ್ತಕ ಬರಹಗಾರರು ಹಾಗೂ ಸ್ಥಳಿಯ ಸಮುದಾಯ ವ್ಯಕ್ತಿಗಳು.ನಾವೆಲ್ಲ ಸ್ವಸಹಾಯ ಸಂಘಗಳ ಮಹಿಳೆಯರ ಘನತೆ ಗೌರವಗಳನ್ನು ಎತ್ತಿ ಹಿಡಿಯುವ ಕಾರ್ಯ ಮಾಡಲು ಎಲ್ಲರ ಸಹಕಾರ ಅಗತ್ಯವಾಗಿದೆ.ಯಾವುದೇ ಕಾರಣಕ್ಕೂ ಅವ್ಯವಹಾರಕ್ಕೆ ಆಸ್ಪದ ನೀಡಬಾರದು ಎಂದು ಹೇಳಿದ್ದಾರೆ.



ಮಲ್ಲಮ್ಮನ ತತ್ವಾದರ್ಶ ಅಳವಡಿಸಿಕೊಳ್ಳಿ

ಮಸ್ಕಿ: ಹೇಮರೆಡ್ಡಿ ಮಲ್ಲಮ್ಮ ಅವರು ಸೂರ್ಯ-ಚಂದ್ರ ಇರುವವರೆಗೂ ಸಮಾಜಕ್ಕೆ ಅನ್ನದ ಕೊರತೆ ಬರಬಾರದು ಎಂದು ಶಿವನಿಂದ ವರ ಪಡೆದ ಮಹಾಮಾತೆ. ಅವರ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಬೇಕು ಕಿರಣಕುಮಾರ ಸಾನಬಾಳ ರವರು ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ರವಿವಾರ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ತಾಲೂಕಿನ್ಯಾಂದತ ಕಾಟಚಾರದ ಜಯಂತಿಯನ್ನು ಆಚರಣೆ ಮಾಡಿದ್ದಾರೆ, ಇದು ಒಂದು ಜಯಂತಿ ಸಮಸ್ಯೆ ಅಲ್ಲ ವಿವಿಧ ಜಯಂತಿಗಳನ್ನು ಕೂಡ ಬೇಕಾ ಬಿಟ್ಟು ಯಾಗಿ ಆಚರಣೆ ಮಾಡುತ್ತಾರೆ ಹಾಗೂ ಆಚರಣೆ ಸಂದರ್ಭದಲ್ಲಿ ಯಾವುದೇ ಇಲಾಖೆಯ ಅಧಿಕಾರಿಗಳು ಇರುವುದಿಲ್ಲ ಇದು ವಿವಿಧ ಜಯಂತಿಗಳ ಮಹಾಪುರುಷರಗೆ ಮಾಡುವ ಅಪಮಾನವಾಗಿದೆ. ಈ ವೇಳೆ,ರಡ್ಡಿ ಸಮುದಾಯದ ಪ್ರಮುಖ ಮುಖಂಡರು, ಹಾಗೂ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಅನುಯಾಯಿಗಳು ಇದ್ದರು.



ಮುನಿರಾಬಾದ್: ಜಬ್ಬಲಗುಡ್ಡ ಸೀಮೆಗೆ ಹೊಂದಿಕೊಂಡಿರುವಂತಹ ಕುಮ್ಮಟದುರ್ಗದಲ್ಲಿ ಭಾನುವಾರ ಗಂಡುಗಲಿ ಕುಮಾರರಾಮ ಜಾತ್ರೆ, ಅದ್ದೂರಿಯಾಗಿ ಜರುಗಿತು.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಕಲಬುರಗಿ: ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಭಾನುವಾರ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೂ ಮುನ್ನ ಶೋಕಾಚರಣೆ ನಡೆಸಲಾಯಿತು. ದುಃಖದ ಈ ಸಂದರ್ಭದಲ್ಲಿ ಪೂರ್ವನಿಗದಿಯಾಗಿದ್ದ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಸರಳ ರೀತಿಯಲ್ಲಿ ಆಚರಿಸಿ, ಗಣ್ಯರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಕನ್ನಡ ಸಂಸ್ಕೃತಿಗೆ ಇಲಾಖೆ ಉಪನಿರ್ದೇಶಕ್ಕೆ ಜಗದೀಶ್ವರಿ ಎ.ನಾಸಿ, ರೆಡ್ಡಿ ಸಮಾಜದ ಅಧ್ಯಕ್ಷರಾದ ಡಾ.ಎಸ್.ಬಿ.ಕಾಮರೆಡ್ಡಿ, ಹೊಸಪೇಟೆ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರುಗಳಾದ ಶೇಖರ ಗಿರಡ್ಡಿ ಇಳಕಲ್ ಸೇರಿದಂತೆ ಸಮಾಜದ ಮುಖಂಡರಾದ ಡಾ.ವಿಶ್ವನಾಥ್ ರೆಡ್ಡಿ, ಚನ್ನಾರೆಡ್ಡಿ ಪಾಟೀಲ್, ಡಾ.ವೀರಭದ್ರಪ್ಪ ರೆಡ್ಡಿ, ಸಿದ್ದರಾಮರೆಡ್ಡಿ ಬಲ್ಲಲ್, ಬಸು ಸೂಗೂರ, ಮಹೇಶ್ ರೆಡ್ಡಿ, ಅನೂಪ ರೆಡ್ಡಿ, ವೈಭವ ರೆಡ್ಡಿ, ವೆಂಕಟ್ ರೆಡ್ಡಿ, ಮಹೇಶ ಹೊಸೂರಕರ್, ಜಿ.ಜಿ.ವಣಿಕ್ಯಾಳ, ಶೇಖರ ರೆಡ್ಡಿ ಉಪಸ್ಥಿತರಿದ್ದರು.



ಕಲಬುರಗಿ: ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಭಾನುವಾರ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿಕೆ

ಹುಲಿಗೆಮ್ಮ ದೇವಿ ಜಾತ್ರೆಗೆ ಸಕಲ ಸಿದ್ಧತೆ

ಮುನಿರಾಬಾದ್: ಮೇ 11ರಿಂದ ಮೇ 14ರವರೆಗೆ ನಡೆಯಲಿರುವ ಶ್ರೀಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಕೊಪ್ಪಳ ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಹೇಳಿದರು.

2026ರ ಶ್ರೀಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳ ಕಛೇರಿ ಸಭಾಂಗಣದಲ್ಲಿ ಭಾನುವಾರ ಕರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಈ ವರ್ಷದ ಶ್ರೀಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಜಾತ್ರೆಯು ನಮ್ಮ ಭಾಗದ ಅತ್ಯಂತ ಪ್ರಸಿದ್ಧ ಧಾರ್ಮಿಕ ಉತ್ಸವವಾಗಿದ್ದು, ಈ ಸಲ ಜಾತ್ರೆಯ 15 ದಿನಗಳ ಅವಧಿಯಲ್ಲಿ ಸುಮಾರು 35 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಮಹಾರಥೋತ್ಸವದ ದಿನ ಸುಮಾರು 3 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸುಸಜ್ಜಿತವಾದ ಮೂಲ ಸೌಕರ್ಯಗಳನ್ನು ಒದಗಿಸಲು ಎಲ್ಲ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಸರ್ಕಾರದ ಶಿಷ್ಟಾಚಾರದಂತೆ ನಡೆಯುವ ಕಾರ್ಯಕ್ರಮಕ್ಕೆ ಮುಜರಾಯಿ ಇಲಾಖೆ ಸಚಿವರಾದ ರಾಮಲಿಂಗರೆಡ್ಡಿ ಅವರು ಉದ್ಘಾಟನೆ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಅಧಿಕಾರಿಗಳು ಹಾಗೂ ಜಿಲ್ಲೆಯ ಇತರೆ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜಾತ್ರೆಯ ಅಂಗವಾಗಿ ನಡೆಯುವ ಮಹಾ ದಾಸೋಹ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಲಾಗಿದ್ದು, ದಿನಂಪ್ರತಿ ಸಾವಿರಾರು ಭಕ್ತರಿಗೆ ಉಚಿತ ಅನ್ನದಾನ ವ್ಯವಸ್ಥೆ ಕಲ್ಪಿಸಲಾಗಿದೆ. ಭಕ್ತರಿಗೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ದೇವಸ್ಥಾನದ ಸುತ್ತಮುತ್ತ ವಿದ್ಯುತ್ ಅಲಂಕಾರ, ರಸ್ತೆ ದುರಸ್ತಿ, ವಾಹನ ನಿಲುಗಡೆ ವ್ಯವಸ್ಥೆ ಸೇರಿದಂತೆ ಸಮಗ್ರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಭದ್ರತಾ ದೃಷ್ಟಿಯಿಂದ ಪೊಲೀಸ್ ಸಿಬ್ಬಂದಿ ನಿಯೋಜನೆ, ಸಿಸಿಟಿವಿ ನಿಗಾ ವ್ಯವಸ್ಥೆ ಮತ್ತು ನಿಯಂತ್ರಣ ಕೊಠಡಿ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಹೆಚ್ಚುವರಿಯಾಗಿ ಆರೋಗ್ಯ ಇಲಾಖೆಯ ವತಿಯಿಂದ ತಾತ್ಕಾಲಿಕ ವೈದ್ಯಕೀಯ ಶಿಬಿರಗಳು, ತುರ್ತು ಸೇವೆಗಳಿಗಾಗಿ ಅಂಬ್ಯುಲೆನ್ಸ್ ವ್ಯವಸ್ಥೆ ಹಾಗೂ ಅಗ್ನಿಶಾಮಕ ದಳದ ಸಿದ್ಧತೆ ಕೈಗೊಳ್ಳಲಾಗಿದೆ. ಮಹಿಳೆಯರು, ಹಿರಿಯ ನಾಗರಿಕರು ಮತ್ತು ಮಕ್ಕಳಿಗಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ. ಭಕ್ತಾದಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಾತ್ರೆಯನ್ನು ಯಶಸ್ವಿಗೊಳಿಸಬೇಕು. ಇದರ ಜೊತೆಗೆ, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಳ್ಳಲು ಹಾಗೂ ಜಿಲ್ಲಾಡಳಿತ ಮತ್ತು ದೇವಸ್ಥಾನದ ಸೂಚನೆಗಳನ್ನು ಎಲ್ಲರೂ ಪಾಲಿಸಬೇಕು ಎಂದು ಸಂಸದರು ಮನವಿ ಮಾಡಿದರು.

ಶ್ರೀಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಹೆಚ್.ಪ್ರಕಾಶ್ ರಾವ್,ಮುಖಂಡರಾದಪ್ರಾಧಿಕಾರದ ಪಾಲಾಕ್ಷಪ್ಪ ಗುಂಗಾಡಿ, ಈರಣ್ಣ ಇಳಿಗೇರ್, ಶರಣಗೌಡ ಪಾಟೀಲ್ ವೆಂಕಟೇಶ್ ವಿ., ಪಂಪಾಪತಿ ರಾಟಿ, ವಿಜಯ್ ಕುಮಾರ್ ಶೆಟ್ಟಿ, ಚಂದನ್ ಶಿವು ದಳಪತಿ, ಹನುಮಂತಪ್ಪ, ಶರಣಪ್ಪ ಉಪಸ್ಥಿತರಿದ್ದರು.



ಮಹಾದಾಸೋಹಕೆ ಚಾಲನೆ

ಶ್ರೀಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಆಯೋಜಿಸಲಾದ ಮಹಾದಾಸೋಹ ಕಾರ್ಯಕ್ರಮಕ್ಕೆ ಸಂಸದರು ಚಾಲನೆ ನೀಡಿದರು. ಇದೇ ವೇಳೆ ಭಕ್ತರಿಗೆ ಪ್ರಸಾದ ಸೇವೆ ಮಾಡಿದರು. ಭಕ್ತರು ಭಕ್ತಿಭಾವದಿಂದ ಮಹಾದಾಸೋಹದಲ್ಲಿ ಪಾಲ್ಗೊಂಡು, ಪ್ರಸಾದವನ್ನು ಸ್ವೀಕರಿಸಿದರು. ಜಾತ್ರೆಯ ದಿನಗಳಲ್ಲಿ ಪ್ರತಿದಿನವೂ ಉಚಿತ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ.

ಸನ್ಮಾನ ಕಾರ್ಯಕ್ರಮಕ್ಕೆ ಕೈಜೋಡಿಸಿ

ಕುಷ್ಟಗಿ: ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಮಾಡಲಾಗುತ್ತದೆ ಎಂದು ಕಸಾಪ ತಾಲೂಕು ಅಧ್ಯಕ್ಷ ಲೆಂಕಪ್ಪ ವಾಲಿಕಾರ ಹೇಳಿದರು.

ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಹಾಗೂ ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಕಾರ್ಯಕ್ರಮದ ರೂಪರೇಷದ ಕುರಿತು ಭಾನುವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅರ್ಥಪೂರ್ಣವಾಗಿ ಸಮಾರಂಭ ಮಾಡಲು ತಾವೆಲ್ಲರೂ ಕೈ ಜೊಡಿಸಬೇಕು ಎಂದರು.

ಕಸಾಪ ಜಿಲ್ಲಾ ಅಧ್ಯಕ್ಷ ಶರಣಗೌಡ ಪಾಟೀಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲಾ ಕಸಾಪ ಸಮ್ಮೇಳನವನ್ನು ಆದಷ್ಟು ಬೇಗನೆ ಮಾಡಬೇಕಿದೆ. ಕಸಾಪ ಸಂಸ್ಥಾಪನಾ ದಿನಾಚರಣೆಯನ್ನು ಇನ್ನೂ ಕೆಲವೇ ದಿನಗಳಲ್ಲಿ ಮಾಡಲಾಗುತ್ತದೆ. ತದನಂತರ ಜಿಲ್ಲಾ ಸಮ್ಮೇಳವನ್ನು ಮಾಡಲು ಸ್ಥಳವನ್ನು ಗುರುತಿಸುವ ಕಾರ್ಯ ಚುರುಕುಗೊಳ್ಳಬೇಕು. ಜಿಲ್ಲಾ ಸಮ್ಮೇಳವನ್ನು ಆದಷ್ಟು ಬೇಗ ಮುಗಿಸಬೇಕು ಎಂದರು.

ಸಭೆಯಲ್ಲಿ ಕಸಾಪ ಕೋಶಾಧ್ಯಕ್ಷ ರಮೇಶ ಕುಲಕರ್ಣಿ, ಸಹ ಸಹಕಾರ್ಯದರ್ಶಿ ಮಹೇಶ, ತಾಲೂಕಾ ಮಾಜಿ ಅಧ್ಯಕ್ಷರಾದ ಹನಮೇಶ ಗುಮಗೇರಾ, ಶರಣಪ್ಪ ವಡಗೇರಿ, ಉಮೇಶ ಹಿರೇಮಠ, ಹ.ಯ ಈಟಿಯವರ, ಅಮರೇಗೌಡ ಪಾಟೀಲ್ ಜಾಲಿಹಾಳ, ರವಿಂದ್ರ ಬಾಕಳೆ, ಆರ್. ಕೆ. ಸುಬೇದಾರ,ವಿ ಎಸ್ ಕಾರಡಗಿಮಠ ಶಿವಾನಂದ ಹಿರೇಮಠ ಲಲಿತಮ್ಮ ಹಿರೇಮಠ, ವಿದ್ಯಾ ಕಂಪಾಪೂರಮಠ, ಎಸ್.ಜಿ.ಕಡೆಮನಿ, ಶ್ರೀನಿವಾಸ ಕಂಟ್ಲಿ, ಚನ್ನಪ್ಪ ಭಾವಿಮನಿ, ನಿಂಗಪ್ಪ ಸಜ್ಜನ್, ಸಂತೋಷ ತೋಟದ, ಹನಮೇಶ ಶಾಖಾಪೂರು, ದೇವರಾಜ, ವಿಶ್ವಕರ್ಮ ದೊಡ್ಡಪ್ಪ ಕೈಲವಾಡಗಿ, ಸೇರಿದಂತೆ ಇನ್ನಿತರರಿದ್ದರು. ಇದಕ್ಕೂ ಮುನ್ನ ಕಿತ್ತೂರರಾಣಿ ಚನ್ನಮ್ಮ ಪ್ರಶಸ್ತಿ ವಿಜೇತೆ ಲಲಿತಮ್ಮ ಹಿರೇಮಠ ರವರಿಗೆ ಕಸಾಪ ವತಿಯಿಂದ ಸನ್ಮಾನಿಸಲಾಯಿತು. ಶರಣಪ್ಪ ಲೈನದ್ ನಿರ್ವಹಿಸಿ, ವಂದಿಸಿದರು.



ಅಧಿಕಾರಿಗಳ ನಿರ್ಲಕ್ಷ್ಯ: ರಸ್ತೆ ಮೇಲೆ ಡ್ರೈನೇಜ್ ನೀರು

ಸಿಂಧನೂರು: ನಗರದ ಹೃದಯ ಭಾಗದಲ್ಲಿರುವ ಗಾಂಧಿ ಸರ್ಕಲ್‌ನಲ್ಲಿ ಕಳೆದ ಹಲವು ದಿನಗಳಿಂದ ಉಂಟಾಗಿರುವ ಡ್ರೈನೇಜ್ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದ್ದು, ಸಾರ್ವಜನಿಕ ಜೀವನವೇ ದುಸ್ತರವಾಗಿರುವುದು ಸ್ಪಷ್ಟವಾಗಿದೆ.

ಮುಖ್ಯ ರಸ್ತೆಯ ಪಕ್ಕದಲ್ಲಿರುವ ಒಳಚರಂಡಿ ಸಂಪೂರ್ಣವಾಗಿ ಬ್ಲಾಕ್ ಆಗಿರುವ ಪರಿಣಾಮ, ಮಲಿನ ನೀರು ರಸ್ತೆ ತುಂಬ ಹರಿದು ಕೆಸರುಗದ್ದೆಯಂತಾಗಿ ಮಾರ್ಪಟ್ಟಿದೆ. ಈ ನೀರಿನಿಂದ ಹೊರ ಹೊಮ್ಮುತ್ತಿರುವ ದುರ್ವಾಸನೆ ಸುತ್ತಮುತ್ತಲಿನ ವ್ಯಾಪಾರಸ್ಥರು. ಕಚೇರಿ ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ತಾಳಲಾರದ ಮಟ್ಟಿಗೆ ತೊಂದರೆ ಉಂಟು ಮಾಡುತ್ತಿದೆ.

ಈ ಪ್ರದೇಶವು ತಾಲೂಕು ಕಚೇರಿ, ನ್ಯಾಯಾಲಯ ಸೇರಿದಂತೆ ಹಲವು ಪ್ರಮುಖ ಸರ್ಕಾರಿ ಕಚೇರಿಗಳಿರುವ ಸಂವೇದನಾಶೀಲ ವಲಯ,ಪ್ರತಿದಿನವೂ ಹಳ್ಳಿಗಳಿಂದ ಸಾವಿರಾರು ಜನರು ವಿವಿಧ ಕೆಲಸಗಳ ನಿಮಿತ್ತ ಇಲ್ಲಿ ಆಗಮಿಸುತ್ತಾರೆ. ಆದರೆ, ಇಂತಹ ದುಸ್ಥಿತಿಯಲ್ಲಿ ಜನರು ಮೂಗು ಮುಚ್ಚಿಕೊಂಡೇ ನಡೆಯುವಂತಾಗಿದ್ದು,ವಾಹನ ಸವಾರರು ಗಲೀಜ್ ನೀರಿನಲ್ಲೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ನಗರದ ಪ್ರತಿಷ್ಠೆಗೆ ಧಕ್ಕೆಯುಂಟು ಮಾಡುವಂತಹ ಈ ಘಟನೆಗೆ ತಕ್ಷಣ ಸ್ಪಂದಿಸಿ, ಡ್ರೈನೇಜ್ ವ್ಯವಸ್ಥೆಯನ್ನು ಶಾಶ್ವತವಾಗಿ ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ, ಜನರು ಬೀದಿಗಿಳಿದು ಪ್ರತಿಭಟನೆ ನಡೆಸುವ ಸಾಧ್ಯತೆಯೂ ಇದೆ ಎಂದು ಎಚ್ಚರಿಸಿದ್ದಾರೆ.

ಅದು ಏನೇ ಇರಲಿ ಜನರ ಮೂಲ ಸೌಕರ್ಯಗಳನ್ನು ಕಾಪಾಡುವುದು ಆಡಳಿತದ ಜವಾಬ್ದಾರಿ, ಜನರ ಆರೋಗ್ಯದೊಂದಿಗೆ ಆಟವಾಡದೇ ತಕ್ಷಣ ಕ್ರಮ ಕೈಗೊಳ್ಳುತ್ತಾರೆಯೇ ಕಾದುನೋಡಬೇಕಾಗಿದೆ.



ಬಿಎಸ್‌ವೈಗೆ ಬೆಳ್ಳಿ ವಿಘ್ನೇಶ್ವರ ಮೂರ್ತಿ ನೀಡಿ ಸನ್ಮಾನ

ಗಂಗಾವತಿ: ರೈತನಾಯಕ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಗಂಗಾವತಿಯ ನಿಕಟಪೂರ್ವ ಶಾಸಕ ಪರಣ್ಣ ಮುನವಳ್ಳಿ ಅವರು ಹಾಗೂ ಅವರ ಅಭಿಮಾನ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿಗಳು ರೈತನಾಯಕ ಬಿ.ಎಸ್.ಯಡಿಯೂರಪ್ಪನವರಿಗೆ ಬೆಳ್ಳಿಯ ವಿಘ್ನೇಶ್ವರ ಮೂರ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಅವರು, ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 50 ವರ್ಷಗಳಿಂದ ನಾಡಿನ ಜನರ ಸೇವೆಗೆ ಜೀವನವನ್ನೇ ಸಮರ್ಪಣೆ ಮಾಡಿಕೊಂಡು ಜನರ ಸೇವೆಯೇ ಜನಾರ್ದನ ಸೇವೆ ಮಾಡುತ್ತಾ ಬಂದಿದ್ದಾರೆ ಎಂದರು.

ಮಾಜಿ ಸಂಸದ ಎಸ್.ಶಿವರಾಮ್ ಗೌಡ್ರು, ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ, ಮುಖಂಡ ವೀರಭದ್ರಪ್ಪ ನಾಯಕ್, ಚನ್ನಪ್ಪ ಮಳಗಿ ವಕೀಲರು, ರಾಘವೇಂದ್ರ ಶೆಟ್ರು, ಮಹಾಲಿಂಗಪ್ಪ ಬನ್ನಿಕೊಪ್ಪ, ಮಲ್ಲೇಶಪ್ಪ ಹೊಸಮಲಿ, ಹನುಮಂತಪ್ಪ ಚೌಡಕಿ, ಯಂಕಪ್ಪ ಕಟ್ಟಿಮನಿ, ಪರಶುರಾಮ ಮಡ್ಡೆರ್, ರಾಚಪ್ಪ ಸಿದ್ದಾಪುರ, ದೇವಾನಂದ ದಾಸನಾಳ್, ನವೀನ್ ಮಾಲಿಪಾಟೀಲ, ಶಿವಕುಮಾರ್ ಹರಿಕೇರಿ ನೀಲಕಂಠ ಕಟ್ಟಿಮನಿ, ಶರಬೋಜಿ ಗಾಯಕ್ವಾಡ್, ಅಭಿಷೇಕ್ ಸಿರಿಗೇರಿ, ರವಿ ಪವಡಶೆಟ್ಟಿ, ಸಂಗಯ್ಯ ಸ್ವಾಮಿ, ಚಂದ್ರಶೇಖರ್ ಭತ್ತದ, ಶ್ರೀನಿವಾಸ್ ಧೂಳ್, ದುರ್ಗಪ್ಪ ದೊಡ್ಮನಿ, ಚನಬಸವಸ್ವಾಮಿ ಕಲ್ಮಠ, ಬಸವ ಪ್ರಭು, ಪರಶುರಾಮ್ ನಾಯಕ್, ವಿಟ್ಟಪ್ಪ, ಮಾರ್ಕಂಡಯ್ಯ, ಚಿದಾನಂದ ನಾಯಕ, ಮಹೇಶ್ ಜವಳಿ, ಸಚಿನ್ ಜೈನ್, ರಾಕೇಶ್ ಹಿರೇಮಠ್, ಚನ್ನು ಅಕ್ಕಿ ಇನ್ನು ಮುಂತಾದವರು ಉಪಸ್ಥಿತರಿದ್ದರು.



ರೈತರು ಜಾನುವಾರುಗಳಿಗೆ ಲಸಿಕೆ ಹಾಕಿಸಲಿ: ಡಾ.ಪ್ರಕಾಶ ಚೂರಿ

ಯಲಬುರ್ಗಾ: ರೈತರು ತಮ್ಮ ಜಾನುವಾರುಗಳಿಗೆ ಕಾಲುಬಾಯಿ ಬೇನೆಯ ಲಸಿಕೆ ಹಾಕಿಸಿ ಅವುಗಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಮೂಲಕ ತಾಲೂಕಿನ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಯಲಬುರ್ಗಾ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಪ್ರಕಾಶ ಚೂರಿ ಹೇಳಿದರು.

ತಾಲೂಕಿನ ಹೊಸೂರು ಗ್ರಾಮದಲ್ಲಿ ಪಶುಪಾಲನಾ ಇಲಾಖೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ನಡೆದ ಉಚಿತ ಕಾಲುಬಾಯಿ ರೋಗ ನಿರೋಧಕ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ದೇಶದ ಕೃಷಿ ಪ್ರಗತಿಯಲ್ಲಿ ಪಶುಗಳಿಗೆ ಮಹತ್ವವಿದೆ ಎಂದರು.

ಪಶುಗಳನ್ನು ಮಾನವರಂತೆ ಕಾಳಜಿ ವಹಿಸುವುದು ಅವಶ್ಯಕ. ಕಾಲುಬಾಯಿ ರೋಗ ನಿರೋಧಕ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಬೇಕು. ತಾಲೂಕಿನಾದ್ಯಂತ 14 ಲಸಿಕಾ ತಂಡಗಳನ್ನು ರಚಿಸಿ 29 ಸಾವಿರಕ್ಕೂ ಹೆಚ್ಚು ಜಾನುವಾರುಗಳು ಇದ್ದು, ತಾಲೂಕಿನ ಆಯಾ ಕೇಂದ್ರಗಳಲ್ಲಿ ಲಸಿಕಾ ತಂಡಗಳ ಮೂಲಕ ಲಸಿಕೆ ನೀಡಲಾಗುತ್ತಿದ್ದು ಕಾಲುಬಾಯಿ ಕಾಯಿಲೆಯು ವೈರಾಣುವಿನಿಂದ ಬರುವ ರೋಗವಾಗಿದೆ ಎಂದು ಹೇಲಿದರು.

ರೋಗ ಪೀಡಿತ ಜಾನುವಾರುಗಳಿಗೆ ವಿಪರೀತ ಜ್ವರ, ಬಾಯಲ್ಲಿ ಹುಣ್ಣು, ಜೊಲ್ಲು ಸೋರುವಿಕೆ ಮತ್ತು ಕಾಲುಗಳಲ್ಲಿ ಹುಣ್ಣಾಗುತ್ತದೆ. ಇದರಿಂದ ಹಾಲು ಉತ್ಪಾದನೆ ಕಡಿಮೆಯಾಗುತ್ತದೆ, ಅವುಗಳು ಶಕ್ತಿಹೀನ ವಾಗುತ್ತವೆ. ಇವು ರೋಗದ ಲಕ್ಷಣವಾಗಿದೆ. ರೋಗ ಬರದಂತೆ ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕಿಸುವುದು ಅವಶ್ಯವಾಗಿದೆ ಎಂದರು.



ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ: ಮೆರವಣಿಗೆ

ಕುಕನೂರು: ತಾಲೂಕಿನ ಶಿರೂರು ಗ್ರಾಮದಲ್ಲಿ ಶ್ರೀಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತ್ಯುತ್ಸವದ ನಿಮಿತ್ತ ನೂತನ ವೃತ್ತದ ಉದ್ಘಾಟನೆ ಹಾಗೂ ದಾನಿ ಗಳಿಗೆ ಸನ್ಮಾನ ಕಾರ್ಯಕ್ರಮವು ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿತು.

ಆರಂಭದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. 51 ಜೋಡಿ ಸುಮಂಗಲೆಯರು ಕುಂಭ ಹೊತ್ತು ಮೆರವಣಿಗೆಗೆ ಶೋಭೆ ತಂದರು. ಡೊಳ್ಳು ಹಾಗೂ ಕಂಸಾಳೆ ಸೇರಿದಂತೆ ವಿವಿಧ ವಾದ್ಯಮೇಳಗಳ ಲಯಬದ್ಧ ನಾದಕ್ಕೆ ಯುವಕರು ಹೆಜ್ಜೆ ಹಾಕಿದರು. ಗ್ರಾಮದ ತುಂಬೆಲ್ಲ ಭಕ್ತಿಯ ವಾತಾವರಣ ಮನೆ ಮಾಡಿತ್ತು.

ಮೆರವಣಿಗೆಯು ಗ್ರಾಮದ ಆಯ್ದ ಬೀದಿಗಳ ಮೂಲಕ ಸಂಚರಿಸಿ ನೂತನವಾಗಿ ನಿರ್ಮಿಸಲಾದ ಹೇಮರೆಡ್ಡಿ ಮಲ್ಲಮ್ಮ ವೃತ್ತವನ್ನು ತಲುಪಿತು. ಗಣ್ಯರ ಸಮ್ಮುಖದಲ್ಲಿ ನೂತನ ವೃತ್ತ ಹಾಗೂ ನಾಮಫಲಕವನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಯಿತು.

ಗಣ್ಯರ ಆಶೀರ್ವಚನ ಹಾಗೂ ಭಾಷಣಗಳು ಉದ್ಘಾಟನೆಯ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಕುಕನೂರಿನ ಅನ್ನದಾನೇಶ್ವರ ಶಾಖಾ ಮಠದ ಡಾ.ಮಾದೇವ ಮಹಾ ಸ್ವಾಮೀಜಿಯವರು ಆಶೀರ್ವಚನ ನೀಡಿ, ಹೇಮರೆಡ್ಡಿ ಮಲ್ಲಮ್ಮ ಕೇವಲ ಒಂದು ಜಾತಿಗೆ ಸೀಮಿತವಾಗಬಾರದು. ಅವರು ತೋರಿದ ಅಹಿಂಸೆ, ತಾಳ್ಮೆ ಮತ್ತು ಭಕ್ತಿಯ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು. ಸಮಾಜದ ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವ ಗುಣವನ್ನು ಮಲ್ಲಮ್ಮನವರಿಂದ ಕಲಿಯಬೇಕು ಎಂದು ಹಿತವಚನ ನುಡಿದರು. ರೆಡ್ಡಿ ಸಮಾಜದ ಮುಖಂಡರಾದ ಡಾ.ದಾನರೆಡ್ಡಿ ಮಾತನಾಡಿ, ಸತಿ-ಪತಿಗಳು ಸಂಸಾರದಲ್ಲಿ ಹೇಗೆ ಆದರ್ಶವಾಗಿ ಬಾಳಬೇಕೆಂದು ಮಲ್ಲಮ್ಮನವರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಅಂತಹ ಮಹಾನ್ ತಾಯಿಯ ತತ್ವಗಳನ್ನು ಇಂದಿನ ಹೆಣ್ಣುಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಮಾಜದ ಹಿರಿಯರಾದ ಶಿವಣ್ಣ ರಾಯರೆಡ್ಡಿ ಮಾತನಾಡಿದರು.

ಹೇಮರೆಡ್ಡಿ ಮಲ್ಲಮ್ಮನವರ ವೃತ್ತ ನಿರ್ಮಾಣಕ್ಕೆ ಉದಾರವಾಗಿ ಜಾಗವನ್ನು ನೀಡಿದ ದಾನಿಗಳು ಕೆಂಚ ರೆಡ್ಡಿ ಅರಿಕೇರಿ, ವೀರನಗೌಡ ಹಾಳಕೇರಿ, ಪ್ರಕಾಶ್ ಗೌಡ ಆಳಕೇರಿ ಅವರಿಗೆ ಸಮಾಜದ ವತಿಯಿಂದ ವಿಶೇಷವಾಗಿ ಸನ್ಮಾನಿಸಲಾಯಿತು.

ಪ್ರತಿಭಾನ್ವಿತ ವಿದ್ಯಾರ್ಥಿನಿ ಸಂಧ್ಯಾ ಆನಂದ ಗೌಡ ಆಳ್ಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದು ಗ್ರಾಮಕ್ಕೆ ಕೀರ್ತಿ ತಂದ ವಿದ್ಯಾರ್ಥಿನಿಯನ್ನು ಸನ್ಮಾನಿಸಲಾಯಿತು.

ರೆಡ್ಡಿ ಸಮಾಜದ ತಾಲೂಕು ಅಧ್ಯಕ್ಷ ಸಂಗಪ್ಪ ವಕಾಳದ, ಯುವ ಘಟಕದ ಯಲಬುರ್ಗಾ ತಾಲೂಕು ಅಧ್ಯಕ್ಷ ರವಿ ಗುರೆಡ್ಡಿ, ಶಿರೂರು ಗ್ರಾಮ ಘಟಕದ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಹಾಗೂ ಸರ್ವ ಸದಸ್ಯರು ಇತರರು ಉಪಸ್ಥಿತರಿದ್ದರು.



ಹೆದ್ದಾರಿಗಳಲ್ಲಿ ಅನಿಯಮಿತ ಹಂಪ್ಸ್: ಸಂಚಾರಕ್ಕೆ ತೊಂದರೆ

ವಾಗೀಶ ವೀ.ಪಾಟೀಲ

ರಾಯಚೂರು: ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳೂ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ವೇಗನಿಯಂತ್ರಕಗಳು ಇರಬಾರದೆಂಬ ನಿಯಮವಿದ್ದರೂ ಪ್ರಸ್ತ ಜಿಲ್ಲೆಯ ಬಹುತೇಕ ರಸ್ತೆಗಳಲ್ಲಿ ಅನಿಯಮಿತವಾಗಿ ವೇಗನಿಯಂತ್ರಕಗಳನ್ನು (ಹಂಪ್) ಹಾಕಿರುವುದರಿಂದ ವಾಹನ ಚಾಲನೆಗೆ ಬಹಳ ಸಮಸ್ಯೆಗಳನ್ನುಂಟು ಮಾಡುತ್ತಿದೆ.

ಹಂಪ್ಸ್‌ಗಳನ್ನು ಹಾಕುವುದು ವಾಹನಗಳ ನಿಯಂತ್ರಣ ಮಾಡಿ ಅಪಘಾತಗಳನ್ನು ತಪ್ಪಿಸುವುದಕ್ಕಾಗಿ. ಆದರೆ ಜಿಲ್ಲೆಯಲ್ಲಿ ಅವೈಜ್ಞಾನಿಕವಾಗಿ ಹಾಕಿರುವ ಹಂಪ್ಸ್‌ಗಳಿಂದಾಗಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿವೆ. ಹಂಪ್ಸ್ ಇದೆ ಎಂದು ವಾಹನ ಚಾಲಕರನ್ನು ಎಚ್ಚರಿಸುವುದಕ್ಕೆ ಬೇಕಾದ ಬಣ್ಣ ಹಚ್ಚುವುದು. ರಿಫ್ಲೆಕ್ಟರ್ ಅಳವಡಿಸುವುದು, ಫಲಕಗಳನ್ನು ಅಳವಡಿಸುವ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದೇ ಇರುವುದುರಿಂದ ಅಪಘಾತಗಳಂತಹ ಅವಘಡಗಳ ಹೆಚ್ಚೆಚ್ಚು ಸಂಭವಿಸುತ್ತಿವೆ.

ರಾಷ್ಟ್ರೀಯ ಹಾಗೂ ರಾಜ್ಯ, ಜಿಲ್ಲಾ ಹಾಗೂ ನಗರದಲ್ಲಿನ ರಸ್ತೆಗಳಲ್ಲಿ ಹಂಪ್ಸ್‌ಗಳ ಅಳವಡಿಕೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಆರ್‌ಸಿ) ನಿಯಮಗಳ ಪ್ರಕಾರ ಅಳವಡಿಸಬೇಕೆಂದು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳು ನಿರ್ದೇಶನ ನೀಡಿವೆ. ಈ ಆದೇಶದ ಪಾಲನೆಯನ್ನು ರಾಜ್ಯ ಲೋಕೋಪಯೋಗಿ ಇಲಾಖೆ ಪಾಲನೆಯನ್ನೇ ಮಾಡದಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ಜಿಲ್ಲಾ ಕೇಂದ್ರ ರಾಯಚೂರು ಹಾಗೂ ಶಕ್ತಿನಗರದ ಮಧ್ಯ ಕೇವಲ 16 ಕಿಮೀ ದೂರವಿದೆ ಈ ವಾರ್ಗದಲ್ಲಿ 45ಕ್ಕೂ ಹೆಚ್ಚು ಹಂಪ್ಸ್‌ಗಳನ್ನು ಹಾಕಲಾಗಿದೆ. ಈ ಮಾರ್ಗದಲ್ಲಿ ಸಂಚರಿಸಿದರೆ ಕನಿಷ್ಠ 200 ಕಿಮೀ ದೂರವನ್ನು ಕ್ರಮಿಸುವುದಕ್ಕೆ ಬೇಕಾಗುವ ಸಮಯ ಮತ್ತು ಇಂಧನ ಬೇಕಾಗುತ್ತದೆ ಎಂದು ಬಸ್ ಹಾಗೂ ವಾಹನ ಚಾಲಕರು ಬೇಸರದಿಂದ ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ.

ಈ ಮಾರ್ಗದಲ್ಲಿ ಹಾಕಲಾಗಿರುವ ಹಂಪ್ಸ್‌ಗಳಿಂದ ವಾಹನ ಚಾಲನೆ ಮಾಡುವುದಕ್ಕೆ ಬೇಸರದೊಂದಿಗೆ ನಮಗೆ ಹೈರಾಣಾಗುತ್ತದೆ ಎನ್ನುತ್ತಾರೆ ಹುಬ್ಬಳ್ಳಿಯಿಂದ ಹೈದರಾಬಾದಿಗೆ ನಿತ್ಯ ಸಂಚರಿಸುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಚಾಲಕರೋರ್ವರು. ನಿತ್ಯ ಸಂಚರಿಸುವವರಿಗೆನೆ ಹಂಪ್ಸ್ ಎಲ್ಲಿವೆ ಎನ್ನುವುದು ತಿಳಿಯುವುದಿಲ್ಲ, ಇನ್ನು ಹೊಸದಾಗಿ ಈ ರಸ್ತೆಯಲ್ಲಿ ಸಂಚರಿವುವವರ ಸ್ಥಿತಿ ಬಹಳ ಗಂಭೀರವಾಗುತ್ತದೆ. ಇದರಿಂದ ರಾತ್ರಿ ಸಮಯದಲ್ಲಿ ಅಪಘಾತಗಳ ಸಂಖ್ಯೆಯೂ ಹೆಚ್ಚಾಗುವುದನ್ನು ಕಾಣಬಹುದು ಎನ್ನುತ್ತಾರೆ.



> **ಅಪಘಾತ ಸಂಭವಿಸುವುದನ್ನು ತಪ್ಪಿಸುವುದಕ್ಕಾಗಿ ಹಂಪ್‌ಗಳನ್ನು ಹಾಕಬೇಕು. ಆದರೆ, ಅವೈಜ್ಞಾನಿಕವಾಗಿ ಹಾಕಲಾಗಿರುವ ಹಂಪ್ಸ್‌ಗಳಿಂದಾಗಿ ಮುಂದಿನ ವಾಹನಗಳು ಹಂಪ್ಸ್ ಬಂದಕೂಡಲೇ ಬ್ರೆಕ್ ಹಾಕುವುದರಿಂದಾಗಿ ಹಿಂಬದಿಯ ವಾಹನ ಬಂದು ಗುದ್ದುವ ಮೂಲಕ ಹೆಚ್ಚೆಚ್ಚು ಅಪಘಾತಗಳು ಸಂಭವಿಸುವುದನ್ನು ಕಾಣಬಹುದು.**
>
> ■ ಹೆಸರು ಹೇಳಲಿಚ್ಛಿಸದ ಪೊಲೀಸ್ ಸಿಬ್ಬಂದಿ

ಕಿರುಸುದ್ದಿ

ಕೆಸರು ಗದ್ದೆಯಂತಾದ ರಸ್ತೆ: ಸಂಚಾರಕ್ಕೆ ತೊಂದರೆ



◆ **ಸಿರುಗುಪ್ಪ:** ನಗರದ ಕಂದಾಯ ಇಲಾಖೆಯ ವಸತಿ ಗೃಹಕ್ಕೆ ತೆರಳುವ ರಸ್ತೆಯಲ್ಲಿ ನೀರು ನಿಂತು ಕೆಸರಿನ ಗದ್ದೆಯಂತಾಗಿದ್ದು, ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಎದುರಾಗಿದೆ. ನಿತ್ಯ ಇದೇ ರಸ್ತೆಯಲ್ಲೇ ನೂರಾರು ವಾಹನ ಸಂಚರಿಸುತ್ತಿವೆ, ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಪಾದಚಾರಿಗಳಿಗೂ ಸಾಕಷ್ಟು ತೊಂದರೆ ಎದುರಾಗಿದ್ದು ನಿತ್ಯ ಅಡಚಣೆ ವ್ಯವಸ್ಥೆಯಲ್ಲಿ ಹಿಡಿಶಾಪ ಹಾಕುವಂತೆ ಸಂಚರಿಸುವುದು ಸಾಮಾನ್ಯವಾಗಿದೆ. ರಾತ್ರಿ ವೇಳೆ ಸುಮಾರು ವಾಹನ ಸವಾರರು ಆಯಾ ತಪ್ಪಿ ಬಿದ್ದು, ಅನಾಹುತ ಮಾಡಿಕೊಂಡಿದ್ದಾರೆ. ಈ ಕುರಿತು ಸ್ಥಳೀಯರು ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳ ಗಮನಕ್ಕೆ ತಂದರು ಇಲ್ಲಿವರೆಗೂ ಕ್ರಮವಿಲ್ಲದಂತಾಗಿದೆ. ಇದರಿಂದ ಸೊಳ್ಳೆಗಳ ಉಪಟಳ ಮಿತಿಮೀರಿದ್ದು ನಾನಾ ರೋಗಗಳು ಹರಡುವ ಭೀತಿ ಎದುರಾಗಿದೆ. ಕೂಡಲೇ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆ **ಹುಣಸಗಿ:** ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಉತ್ತೀರ್ಣರಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕ ಅಧ್ಯಕ್ಷ ಅಂಬ್ರೇಶ ಮಾಲಗತ್ತಿ ತಿಳಿಸಿದ್ದಾರೆ. 2026ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಮೊದಲನೇ ಹಂತದಲ್ಲಿ ಉತ್ತೀರ್ಣರಾಗಿ ಶೇ 90% ಕ್ಕಿಂತ ಹೆಚ್ಚು ಅಂಕ ಪಡೆದವರು ಆನ್‌ಲೈನ್ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಮೇ 25 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಸಂಘದ ವೆಬ್ ಸೈಟ್ http://powemedia.info ಲಿಂಕ್ ಮುಖಾಂತರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.9741115999 ಸಂಪರ್ಕಿಸಲು ಕೋರಲಾಗಿದೆ.



ಹೊಳಗುಂದಿಯಲ್ಲಿ ಜೋಡೆತ್ತು ಕಳವು

◆ **ಹೂವಿನಹಡಗಲಿ:** ತಾಲೂಕಿನ ಹೊಳಗುಂದಿ ಗ್ರಾಮದಲ್ಲಿ ಹಿತ್ತಲಿನಲ್ಲಿ ಕಟ್ಟಿ ಹಾಕಿದ್ದ ಉಳುಮೆ ಮಾಡುವ ಒಂದು ಜೊತೆ ಎತ್ತುಗಳನ್ನು ಶನಿವಾರ ತಡರಾತ್ರಿ ಕಳವು ಮಾಡಿರುವ ಘಟನೆ ನಡೆದಿದೆ. ತಾಲೂಕಿನ ಹೊಳಗುಂದಿ ಗ್ರಾಮದ ಕೆ.ಎಂ. ಶಿವಕುಮಾರ ಎತ್ತುಗಳನ್ನು ಕಳೆದುಕೊಂಡಿರುವ ರೈತ. ಶನಿವಾರ ಬೆಳಗ್ಗಿನಿಂದ ರಂಟೆ ಹೊಡೆದು ಸಂಜೆ ಸಮಯದಲ್ಲಿ ಎಂದಿನಂತೆ ತಮ್ಮ ಹಿತ್ತಲಲ್ಲಿ ಎರಡು ಎತ್ತುಗಳಿಗೆ ಹುಲ್ಲು/ಮೇವು ಹಾಕಿ ಕಟ್ಟಿದ್ದಾರೆ. ತಡರಾತ್ರಿ 1 ಗಂಟೆ ಅಥವಾ ಎರಡು ಗಂಟೆ ಸಮಯದಲ್ಲಿ ಯಾರು ದುಷ್ಕರ್ಮಿಗಳು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. 1.5 ಲಕ್ಷ ರೂ. ಮೌಲ್ಯದ ಎತ್ತುಗಳಾಗಿದ್ದು, ಹುಡುಕಿಕೊಡುವಂತೆ ಬಡ ರೈತ ಶಿವಕುಮಾರ್ ಅವರು ಹೂವಿನಹಡಗಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣದ ಪೊಲೀಸರು ತನಿಖೆ ಮುಂದಾಗಿದ್ದಾರೆ.

ಸಚಿವ ಡಿ.ಸುಧಾಕರ್ ನಿಧನಕ್ಕೆ ನಾಗೇಂದ್ರ, ಸಂತಾಪ

◆ **ಬಳ್ಳಾರಿ:** ರಾಜ್ಯ ಸರ್ಕಾರದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಹಾಗೂ ಸ್ನೇಹಿತ ಡಿ.ಸುಧಾಕರ್ ಅವರ ಅಕಾಲಿಕ ನಿಧನದ ಸುದ್ದಿ ತಿಳಿದು, ಅತ್ಯಂತ ನೋವನ್ನುಂಟು ಮಾಡಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೆಮ್ಮದಿ ನೀಡಲಿ, ಅವರ ಕುಟುಂಬದ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಬಿ.ನಾಗೇಂದ್ರ ಅವರು ಕಂಬನಿ ಮಿಡಿದಿದ್ದಾರೆ. ಸಚಿವ ಸುಧಾಕರ್ ಅವರು, ಈ ಹಿಂದೆ ಎರಡು ಭಾರಿ ಸಂಪುಟ ಸಚಿವರಾಗಿದ್ದರು, ಹಿಷಾರ ಕ್ಷೇತ್ರ, ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿ ರಾಜ್ಯದ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಅತ್ಯಂತ ಯಶಸ್ವಿಯಾದರು ಸಚಿವರಾಗಿದ್ದರು. ಇದೀಗ ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿ ಇಡೀ ರಾಜ್ಯದ ಎಲ್ಲ ಜಿಲ್ಲೆಯ ಶಾಸಕರನ್ನು ವಿಶ್ವಾಸ ಪಡೆದು ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಿದ್ದರು. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಆ ದೇವರು ಕುಟುಂಬದ ಸದಸ್ಯರು, ಬಂಧು-ಬಳಗ, ಸ್ನೇಹಿತರು ಹಾಗೂ ಅಭಿಮಾನಿಗಳಿಗೆ ನೀಡಲಿ. ಹೃದಯದ ಗೆಳೆಯನಿಗೆ ಹೃತ್ಪೂರ್ವಕ ಸಂತಾಪಗಳನ್ನು ತಿಳಿಸುವೆ ಎಂದು ತಿಳಿಸಿದ್ದಾರೆ.





ಕುಷ್ಟಗಿ: ಪಟ್ಟಣದ ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಹೇಮರಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಿಸಲಾಯಿತು. ಗ್ರೇಡ್-2 ತಹಶೀಲ್ದಾರ್ ರಜನಿಕಾಂತ ಕೆಂಗೇರಿ, ಕಂದಾಯ ನಿರೀಕ್ಷಕ ಅಬ್ದುಲ್ ರಜಾಕ್, ಜಾಗತಿಕ ಲಿಂಗಾಯತ ಮಹಾಸಭಾದ ತಾಲೂಕ ಅಧ್ಯಕ್ಷ ಟಿ.ಬಸವರಾಜ, ಬಸವ ಸಮಿತಿ ಅಧ್ಯಕ್ಷ ಶಿವಾನಂದ ಬಿಜಕಲ್, ಜಿ.ಶರಣಪ್ಪ, ಮಹಾದೇವಪ್ಪ ಮಹಾಲಿಂಗಪೂರು, ಕಂದಾಯ ಇಲಾಖೆಯ ಸಿಬ್ಬಂದಿಗಳಾದ ಸುಂದರರಾಜ, ಚಂದ್ರು ಪೂಜಾರ ಇತರರಿದ್ದರು.

ಹೇಮರೆಡ್ಡಿ ಮಲ್ಲಮ್ಮನ ಆದರ್ಶ ಅನುಕರಣೀಯ

◆ **ಹಗರಿಬೊಮ್ಮನಹಳ್ಳಿ:** ಹೇಮರೆಡ್ಡಿ ಮಲ್ಲಮ್ಮ ಅವರು ಚಿಕ್ಕ ವಯಸ್ಸಿನಲ್ಲಿಯೇ ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡಿದ್ದವರು ಪತಿಯೇ ಪರದೈವ ಎಂದು ನಂಬಿದವರಾಗಿದ್ದವರು ಒಬ್ಬ ಆದರ್ಶ ಗೃಹಿಣಿಯಾಗಿ ಕುಟುಂಬದ ಮಹತ್ವವನ್ನು ಸಾರಿದ ಹೇಮರೆಡ್ಡಿ ಮಲ್ಲಮ್ಮನವರ ವ್ಯಕ್ತಿತ್ವ ಚಿಂತನೆಗಳು ಆದರ್ಶ ಗುಣಗಳು ಅನುಕರಣೀಯ ಎಂದು ಪುರಸಭೆ ಮಾಜಿ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು.

ಪುರಸಭೆಯಲ್ಲಿ ಭಾನುವಾರ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪುಷ್ಪ ನಮನ ಅರ್ಪಿಸಿ ಬಳಿಕ ಮಾತನಾಡಿದರು.

ರೆಡ್ಡಿ ಸಮಾಜದ ಅಧ್ಯಕ್ಷ ಬಸವರೆಡ್ಡಿ ಭರಮರೆಡ್ಡಿ ಅವರನ್ನು ವಿವಾಹವಾಗಿ ಕುಟುಂಬದಲ್ಲಿ ಅತ್ತೆ ಮಾವ ಮೈದುನರಿಂದ ಹಲವು ನೋವು ಅವಮಾನಗಳನ್ನು ಸಹಿಸಿಕೊಂಡು ಕುಟುಂಬ ವರ್ಗದವರ ಸಮಸ್ಯೆಯಲ್ಲಿ ಸಿಲುಕಿದಾಗ ಕುಟುಂಬದವರ ಒಳಿತಿಗಾಗಿ ಚೆನ್ನ ಮಲ್ಲಿಕಾರ್ಜುನ ದೇವರ ಮೊರೆ ಹೋಗಿ ಕುಟುಂಬದವರ ಮನ ಪರಿವರ್ತನೆ ಆಗಿದ್ದು ಮಲ್ಲಮ್ಮನವರ ತಾಳ್ಮೆ ತ್ಯಾಗ ಅಧ್ಯಾತ್ಮಿಕ ಮನೋಭಾವನೆ ಯನ್ನು ಅಳವಡಿಸಿಕೊಂಡು ಮುನ್ನಡೆದರೆ ಜೀವನ ಸಾರ್ಥಕ ಎಂದರು. ನಾ.ನಿ.ಸದಸ್ಯರಾದ ಬಾಳಪ್ಪ, ಕೊಟ್ರೇಶ್, ಮತ್ತು ಮುಖಂಡರಾದ ಸಿಕಂದರ್, ಕೃಷ್ಣ ನಾಯ್ಕ್, ಎಚ್.ಎಂ.ವಿಜಯಕುಮಾರ್, ರೆಡ್ಡಿ ಸಮಾಜದ ಮುಖಂಡರು ಯುವಕರು ಸಿಬ್ಬಂದಿ ಇದ್ದರು.



ಹಗರಿಬೊಮ್ಮನಹಳ್ಳಿ: ಪುರಸಭೆಯಲ್ಲಿ ಭಾನುವಾರ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪುರಸಭೆ ಮಾಜಿ ಅಧ್ಯಕ್ಷ ಎಂ.ಮರಿರಾಮಣ್ಣ ನಾ.ನಿ.ಸದಸ್ಯರಾದ ಬಾಳಪ್ಪ, ಕೊಟ್ರೇಶ್, ಮತ್ತು ಮುಖಂಡರಾದ ಸಿಕಂದರ್, ಕೃಷ್ಣ ನಾಯ್ಕ್, ಎಚ್.ಎಂ.ವಿಜಯಕುಮಾರ್, ರೆಡ್ಡಿ ಸಮಾಜದ ಮುಖಂಡರು ಯುವಕರು ಸಿಬ್ಬಂದಿ ಇದ್ದರು.

ವಿದ್ಯುತ್ ಉಪ ಕೇಂದ್ರಗಳಿಗೆ ಚಾಲನೆ | ಶಾಸಕ ಗವಿಯಪ್ಪ ಭರವಸೆ

ಸಕ್ಕರೆ ಕಾರ್ಖಾನೆ ಪುನಶ್ಚೇತನ

◆ **ವಿಜಯನಗರ:** ಜಿಲ್ಲೆಯ ದೀರ್ಘಕಾಲದ ವಿದ್ಯುತ್ ಸಮಸ್ಯೆಗೆ ಶಾಶ್ವತವಾಗಿ ಸಮಸ್ಯೆ ನೀಗಿಸಲು ಸುಮಾರು 50 ಕೋಟಿ ಅಧಿಕ ವೆಚ್ಚದ ವಿದ್ಯುತ್ ಉಪಕೇಂದ್ರ ಹಾಗೂ ರೈತರ ಆಶೋತ್ತರವಾದ ಸಕ್ಕರೆ ಕಾರ್ಖಾನೆಯ ಪುನಶ್ಚೇತನಗೊಳಿಸಲಾಗುವುದು ಎಂದು ಶಾಸಕ ಎಚ್.ಆರ್.ಗವಿಯಪ್ಪ ತಿಳಿಸಿದರು.

ಹೊಸಪೇಟೆ ಸಮೀಪದ ನಾಗೇನಹಳ್ಳಿಯಲ್ಲಿ ಸುಮಾರು 50ಕೋಟಿ ಮೊತ್ತದ 2 ವಿದ್ಯುತ್ ಉಪಕೇಂದ್ರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಪದೇ ಪದೇ ಉಂಟಾಗುತ್ತಿರುವ ವಿದ್ಯುತ್ ವ್ಯತ್ಯಯಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಎರಡು ಬೃಹತ್ ಸಬ್ ಸ್ಟೇಷನ್‌ಗಳ ಸ್ಥಾಪನೆಗೆ ಚಾಲನೆ ನೀಡಲಾಗಿದೆ. ನಾಗನಹಳ್ಳಿ ಸಬ್‌ಸ್ಟೇಷನ್ ರೂ.23.26 ಕೋಟಿ ವೆಚ್ಚದಲ್ಲಿ ಹಾಗೂ ಜಿಲ್ಲಾಧಿಕಾರಿ ಕಚೇರಿ ಆವರಣ ನಗರ ಪ್ರದೇಶದ ಬೇಡಿಕೆಯನ್ನು ಪೂರೈಸಲು ರೂ. 27 ಕೋಟಿ ವೆಚ್ಚದಲ್ಲಿ ಮತ್ತೊಂದು ಸಬ್‌ಸ್ಟೇಷನ್ ಸೇರಿ ಒಟ್ಟು 50ಕೋಟಿ ಮೊತ್ತದ ನೂತನ ವಿದ್ಯುತ್ ಉಪಕೇಂದ್ರ ಸ್ಥಾಪಿಸಲಾಗುವುದು.

ಅಲ್ಲದೇ ರಾಯರಕೆರೆಯ ಹಳೆಯ ಸಬ್‌ಸ್ಟೇಷನ್ ಅನ್ನು 2 20 ಎಂವಿಎ ಸಾಮರ್ಥ್ಯಕ್ಕೆ ಏರಿಸಲಾಗುತ್ತಿದ್ದು, ಇದರಿಂದ ಈ ಭಾಗದ ಜನತೆಗೆ 247 ವಿದ್ಯುತ್ ದೊರೆಯಲಿದೆ. ಈ ಯೋಜನೆಗಳು 2027ರ ಸೆಪ್ಟೆಂಬರ್ ವೇಳೆಗೆ ಪೂರ್ಣಗೊಂಡು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿವೆ. ಕಾಮಗಾರಿ ಪೂರ್ಣಗೊಂಡ ನಂತರ ತೋರಣಗಲ್ಲು ಮತ್ತು ಮುನಿರಾಬಾದ್ ಲೈನ್‌ಗಳ ಮೇಲಿನ ಅವಲಂಬನೆ ಕಡಿಮೆಯಾಗಲಿದ್ದು, ಸ್ಥಳೀಯವಾಗಿ ವಿದ್ಯುತ್ ನಿರ್ವಹಣೆ ಸುಲಭವಾಗಲಿದೆ ಎಂದು ಶಾಸಕ ಹೆಚ್ ಆರ್ ಗವಿಯಪ್ಪ ಮಾಹಿತಿ ನೀಡಿದರು.



ಶೀಘ್ರದಲ್ಲೇ ಜಿಲ್ಲಾಸ್ಪತ್ರೆ ಉದ್ಘಾಟನೆ

ಜಿಲ್ಲೆಯ ಜನತೆಯ ಬಹುದಿನದ ಕನಸಾದ ಸುಸಜ್ಜಿತ ಜಿಲ್ಲಾ ಆಸ್ಪತ್ರೆ ಲೋಕಾರ್ಪಣೆಗೆ ಕ್ಷಣಗಣನೆ ಆರಂಭವಾಗಿದೆ. ಶೇ.90 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿ ಮತ್ತು ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ. . ಮುಂದಿನ 15 ರಿಂದ 20 ದಿನಗಳಲ್ಲಿ ಭವ್ಯವಾದ ಆಸ್ಪತ್ರೆಯ ಉದ್ಘಾಟನೆ ದಿನದ ಕುರಿತು ಮಾಹಿತಿ ನೀಡಲಾಗುವುದು ಎಂದು ಶಾಸಕ ಎಚ್.ಆರ್.ಗವಿಯಪ್ಪ ಹೇಳಿದರು.

ಸಕ್ಕರೆ ಕಾರ್ಖಾನೆ ಪುನರಾರಂಭ: ದಶಕಗಳಿಂದ ಸ್ಥಗಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕೆ ರೈತರ ಆಶಯದಂತೆ ಸರ್ಕಾರವು ಸಹ ಅಂತಿಮವಾಗಿ ಸಕಾರಾತ್ಮಕವಾಗಿ ಸ್ಪಂದಿಸಿದೆ. ತಮಿಳುನಾಡು ಮಾದರಿಯನ್ನು ಅನುಸರಿಸಿ, ಖಾಸಗಿ ಸಹಭಾಗಿತ್ವದಲ್ಲಿ ಕಾರ್ಖಾನೆ ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಇದರಿಂದ ರೈತರಿಗೆ ಕಬ್ಬಿನ ಸರಿಯಾದ ಬೆಲೆ ಸಿಗುವುದಲ್ಲದೆ, ಸಕಾಲಕ್ಕೆ ಕಟಾವು ಪ್ರಕ್ರಿಯೆಯೂ ಸುಗಮವಾಗಲಿದೆ ಎಂದರು.

ಈ ವೇಳೆ ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಶಿವಮೂರ್ತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ, ಡಿವೈಎಸ್ಪಿ ಡಾ.ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಅಭಿಯಂತರ ಎಚ್ ಎಂ ನಟರಾಜ, ತಹಶೀಲ್ದಾರ್ ಶೃತಿ ಎಂ, ತಾಲೂಕು ಪಂಚಾಯತ್ ಮುಖ್ಯಕಾರ್ಯನಿರ್ವಹ ಅಧಿಕಾರಿ ಆಲಂ ಭಾಷಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಭೋಗಾ ರೆಡ್ಡಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿ

◆ **ಬಳ್ಳಾರಿ:** 'ಛಲವಿದ್ದರೆ ಬರಡು ಭೂಮಿಯನ್ನೂ ಬಂಗಾರಮಾಡಬಹುದು' ಎಂಬುದನ್ನು ಬಳ್ಳಾರಿ ತಾಲೂಕಿನ ಮೋಕಾ ಹೋಬಳಿಯ ಕೆ.ವೀರಾಪುರ ಗ್ರಾಮದ ಪ್ರಗತಿಪರ ರೈತ ಭೋಗಾ ರೆಡ್ಡಿ ಅವರು ಸಾಬೀತುಪಡಿಸಿದ್ದಾರೆ.

ಮಳೆ ಕೊರತೆಯಿಂದ ಕೃಷಿಯೇ ಅಸಾಧ್ಯವೆನ್ನಲಾಗುವ ಈ ಭಾಗದಲ್ಲಿ, ತಮ್ಮ 3.5 ಎಕರೆ ಒಣಭೂಮಿಯಲ್ಲಿ ಅವರು ಕಂಡುಕೊಂಡ ಕೃಷಿ ಲಾಭ ಇಂದು ಜಿಲ್ಲಾದ್ಯಂತ ಗಮನ ಸೆಳೆದಿದೆ. ಅಪ್ಪಟ ಪರಿಶ್ರಮ ಮತ್ತು ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಕೃಷಿ ಕೈಗೊಂಡಿರುವ ಭೋಗಾ ರೆಡ್ಡಿ ಅವರಿಗೆ, ಕೃಷಿ ಇಲಾಖೆಯ ವತಿಯಿಂದ 'ತಾಲೂಕು ಮಟ್ಟದ ಶ್ರೇಷ್ಠ ಕೃಷಿ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಬಹುಬೆಳೆ ಪದ್ಧತಿಯೇ ಯಶಸ್ಸಿನ ಸೂತ್ರ: ಕೇವಲ ಒಂದು ಬೆಳೆಗೆ ಸೀಮಿತವಾಗದೆ, ಅರಣ್ಯ ಕೃಷಿ ಹಾಗೂ ತೋಟಗಾರಿಕೆಯನ್ನು ಮೇಳೈಸುವ ಮೂಲಕ ಇವರು ಅಚ್ಚರಿ ಮೂಡಿಸಿದ್ದಾರೆ. ಇವರ ಜಮೀನಿನಲ್ಲಿ ಪ್ರಸ್ತುತ 650 ಮಹಾಗನಿ, 140 ಸಾಗುವಾಣಿ (ಟೀಕ್), 100 ಹೆಬ್ಬೇವು ಹಾಗೂ 18 ಶ್ರೀಗಂಧದ ಗಿಡಗಳಿವೆ. ತೋಟಗಾರಿಕೆ ಬೆಳೆಗಳಾಗಿ 150 ಸಪೋಟಾ, 50 ನಿಂಬೆ, 20 ತೆಂಗು, 4 ಮಾವು ಹಾಗೂ 20 ಕರಿಬೇವು ಗಿಡಗಳನ್ನು ಯಶಸ್ವಿಯಾಗಿ ಬೆಳೆಸುತ್ತಿದ್ದಾರೆ. ಇದರೊಂದಿಗೆ ವಾರ್ಷಿಕ ಬೆಳೆಗಳು ಹಾಗೂ ಹೈನುಗಾರಿಕೆಯನ್ನೂ (ಡೈರಿ) ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಆಧುನಿಕತೆ ಮತ್ತು ಸಂಪ್ರದಾಯದ ಸಂಗಮ: ನೀರಿನ ಕೊರತೆಯನ್ನು ನೀಗಿಸಲು ಜಮೀನಿನಲ್ಲಿ ಎರಡು ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡಿದ್ದು, ಸಮರ್ಪಕ ನೀರಾವರಿ ವ್ಯವಸ್ಥೆ ಅಳವಡಿಸಿದ್ದಾರೆ. ವಿದ್ಯುತ್ ಉಳಿತಾಯ ಹಾಗೂ ಪರಿಸರ ಸ್ನೇಹಿ ಕೃಷಿಗಾಗಿ ಸೌರ ಪಂಪ್‌ಸೆಟ್ ಬಳಸುತ್ತಿರುವುದು ವಿಶೇಷ. ಮಣ್ಣಿನ ಆರೋಗ್ಯ ಕಾಪಾಡಲು ಇವರು ಯಾವುದೇ ರಾಸಾಯನಿಕ ಗೊಬ್ಬರದ ಮೊರೆ ಹೋಗದೆ, ಹೊಲದಲ್ಲಿ ಬಿದ್ದ ಎಲೆಗಳಿಂದಲೇ ಸ್ವಯಂ ಕಾಂಪೋಸ್ಟ್ ಗೊಬ್ಬರ ತಯಾರಿಸಿ ಗಿಡಗಳಿಗೆ ಬಳಸುತ್ತಿದ್ದಾರೆ. ಪ್ರಾಚೀನ ಪದ್ಧತಿ ಹಾಗೂ ಸರ್ಕಾರದ ಇಲಾಖೆಗಳ ತಜ್ಞರ ಸಲಹೆಯನ್ನು ಸರಿಯಾದ ಸಮಯದಲ್ಲಿ ಅಳವಡಿಸಿಕೊಂಡಿರುವುದೇ ಇವರ ಈ ಸಾಧನೆಯ ಗುಟ್ಟು.



ಮಕ್ಕಳಿಗೆ ಸಂಸ್ಕಾರ ಬಹುಮುಖ್ಯ: ಡಾ.ಮಂಜುನಾಥ್

◆ **ಹೂವಿನಹಡಗಲಿ:** ತಂದೆ, ತಾಯಿಗಳು ಶಿಕ್ಷಕರು ಮಕ್ಕಳಿಗೆ ಮೊದಲು ಸಂಸ್ಕಾರ, ಸಂಸ್ಕೃತಿ, ಶಿಸ್ತನ್ನು ಕಲಿಸಬೇಕು. ಮಕ್ಕಳು ಹಾಗೂ ಯುವಕರು ಪುಸ್ತಕಗಳನ್ನು ಕೊಂಡುಕೊಂಡು ಓದುವ ಗೀಳನ್ನು ಅಳವಡಿಸಿಕೊಳ್ಳಬೇಕು. ಕನ್ನಡ ಸಾಹಿತ್ಯದ ಬಗ್ಗೆ ಅರಿವು ಜಾಗೃತಿಯನ್ನು ಬೆಳೆಸಿಕೊಳ್ಳಬೇಕು ಎಂದು ಡಾ.ಎಂಪಿಎಂ ಮಂಜುನಾಥ ಹಾಲಸ್ವಾಮೀಜಿ ಹೇಳಿದರು.

ತಾಲೂಕಿನ ನವಲಿ ಗ್ರಾಮದಲ್ಲಿ ರುದ್ರಾಂಬ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ಎಸ್ಎಸ್ ಘಟಕ ಹಮ್ಮಿಕೊಂಡಿರುವ ವಾರ್ಷಿಕ ವಿಶೇಷ ಸೇವಾ ಶಿಬಿರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದೊಂದಿಗೆ 'ಪುಸ್ತಕ ಸಂವಾದ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಗ್ನಿಶಾಮಕ ಠಾಣೆ-ಹೂವಿನಹಡಗಲಿ ವತಿಯಿಂದ ಅಗ್ನಿ ಅವಘಡಗಳು ನಂದಿಸುವ ಜಾಗೃತಿ ಅಭಿಯಾನ ಮತ್ತು ಪ್ರಾತ್ಯಕ್ಷಿಕೆ ಅಧಿಕಾರಿಗಳು ನರಸಪ್ಪ, ಅಗ್ನಿಶಾಮಕ ಠಾಣಾಧಿಕಾರಿಗಳು ಮುತ್ತುರಾಜ್, ಪ್ರಮುಖ ಅಗ್ನಿಶಾಮಕ ದಳ ಇವರು ವಿದ್ಯಾರ್ಥಿಗಳಿಗೆ ಜಾಗೃತಿ ಅಭಿಯಾನ ನಿರ್ವಹಿಸಿದರು.

ವೇದಿಕೆ ಅಧ್ಯಕ್ಷತೆಯನ್ನು ಕನ್ನಡ ಉಪನ್ಯಾಸಕಿ ಪಿ.ಶೈಲಜಾ ವಹಿಸಿದ್ದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹರಪನಹಳ್ಳಿ ಪ್ರಾಂಶುಪಾಲರಾದ ಡಾ.ಕೆ. ಸತೀಶ್ ಅವರು ಸಂವಾದಕರಾಗಿ ಭಾಗವಹಿಸಿ ಕೆಲ ಸಮಯ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಟಿ.ವೀರೇಂದ್ರ ಪಾಟೀಲ್, 'ಜಿರಾಫೆ ಕತ್ತಿನ ಅವ್ವ' ಪುಸ್ತಕದ ಲೇಖಕರಾದ ರಾಮಪ್ಪಕೋಟಿಹಾಳ್, ಶಿಬಿರಾಧಿಕಾರಿಗಳಾದ ಸುರೇಶ್ ಬೂದನೂರು, ಜಿಪಿಜಿ ಕಾಲೇಜಿನ ಪ್ರಾಚಾರ್ಯರಾದ ಕೋರಿ ಹಾಲೇಶ್, ಹಿರಿಯ ಉಪನ್ಯಾಸಕ ಶಂಕರ್ ಬೆಟಗೇರಿ, ನಿವೃತ್ತ ಸಿಟಿಓ ಎಚ್.ಎಂ.ಚಂದ್ರಶೇಖರಯ್ಯ, ಸುಧಾಕರ ಗೌಡ್ರು, ಜೆ.ಮುದುಕಪ್ಪ,

ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ತಾಲೂಕು ಗೌರವಾಧ್ಯಕ್ಷ ವೀರೇಶ್ ಕಲ್ಮಠ, ತಾಲೂಕು ಅಧ್ಯಕ್ಷ ಎಂ.ರಾಜಪ್ಪ, ಎಸ್‌ಡಿಎಂಸಿ ಸದಸ್ಯ ಟಿ.ವೀರಣ್ಣ, ಹಾಗೂ ನವಲಿ ಗ್ರಾಮದ ಮುಖಂಡರು, ಗ್ರಾಮಸ್ಥರು, ವಿದ್ಯಾರ್ಥಿಗಳು ಇತರರಿದ್ದರು. ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ಅಧಿಕಾರಿಗಳ ದಾಳಿ: ಹಾನಿಕಾರಕ ಪದಾರ್ಥಗಳ ವಶ

◆ **ಕೊಟ್ಟೂರು:** ಪಟ್ಟಣದಲ್ಲಿನ ಹೋಟೆಲ್, ಪಾನಿಪುರಿ, ಎಗ್‌ರೈಸ್ ಹಾಗೂ ಜ್ಯೂಸ್ ಅಂಗಡಿಗಳ ಮೇಲೆ ಕೂಡ್ಲಿಗಿ ತಾಲೂಕು ಆಹಾರ ಸುರಕ್ಷತಾಧಿಕಾರಿ ಉದಯ ಮುದ್ದೇಬಿಹಾಳ ದಾಳಿ ನಡೆಸಿ ವ್ಯಾಪಾರಸ್ಥರಿಂದ ಕೆಲ ಹಾನಿಕಾರಕ ಪದಾರ್ಥಗಳನ್ನು ವಶಕ್ಕೆ ಪಡಿಸಿಕೊಂಡರು.

ಇತ್ತೀಚೆಗೆ ದಿಢೀರ್ ದಾಳಿ ಕೈಗೊಂಡ ಆಹಾರ ಇಲಾಖೆ ಉದಯ ಎಗ್‌ರೈಸ್ ಅಂಗಡಿಗಳಲ್ಲಿದ್ದಂತ ಆರೋಗ್ಯಕ್ಕೆ ಹಾನಿಕಾರಕ ಟೆಸ್ಟಿಂಗ್ ಪೌಡರ್ ಹಾಗೂ ಜ್ಯೂಸ್ ಅಂಗಡಿಗಳಲ್ಲಿನ ಕಲರ್ ಪೌಡರ್ ವಶಕ್ಕೆ ಪಡೆದು ನೋಟೀಸ್ ಜಾರಿ ಮಾಡಿದರು.

ಪಾನಿಪೂರಿ ಅಂಗಡಿಗಳು, ಹೋಟೆಲ್‌ಗಳಲ್ಲಿ ಶುದ್ಧ ನೀರು ಬಳಸುವಂತೆ ಮತ್ತು ಆಹಾರ ಉತ್ಪಾದನೆಯಲ್ಲಿ ಗುಣಮಟ್ಟ ಹಾಗೂ ಸ್ವಚ್ಛತೆ, ನೈರ್ಮಲ್ಯ ಕಾಯ್ದುಕೊಳ್ಳುವಂತೆ ಜಾಗೃತಿ ಮೂಡಿಸಿದರು. ಗೋಬಿ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ಕೈಗೊಂಡು ಕಳಪೆ ಟೊಮೇಟೊ ಸಾಸ್, ಚಿಲ್ಲಿ ಸಾಸ್ ಹಾಗೂ ಟೆಸ್ಟಿಂಗ್ ಬಳಸದಂತೆ ಎಚ್ಚರಿಕೆ ನೀಡಿದರು.

ಕೂಡ್ಲಿಗಿ ತಾಲೂಕು ಆಹಾರ ಸುರಕ್ಷತಾ ಅಧಿಕಾರಿ ಉದಯ ಮುದ್ದೇಬಿಹಾಳ ಕೊಟ್ಟೂರು ಪಟ್ಟಣದಲ್ಲಿ ದಾಳಿ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕೊಟ್ಟೂರು ಪಟ್ಟಣದಲ್ಲಿ ಎಗ್‌ರೈಸ್, ಪಾನಿಪೂರಿ, ಗೋಬಿ ಸೆಂಟರ್‌ನಲ್ಲಿ ತಯಾರಿಸುವ ಆಹಾರದಲ್ಲಿ ಹೆಚ್ಚಿನ ಟೆಸ್ಟಿಂಗ್ ಪೌಡರ್ ಬಳಕೆ ಹಾಗೂ ಸ್ವಚ್ಛತೆ ಇಲ್ಲದೆ ವ್ಯಾಪಾರಿಗಳು ಮಾರಾಟದಲ್ಲಿ ತೊಡಗಿಕೊಂಡಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆ ಈ ದಾಳಿ ಕೈಗೊಂಡಿರುವುದಾಗಿ ತಿಳಿಸಿದರು. ಇಲ್ಲಿನ ಆಹಾರ ಉತ್ಪಾದನಾ 20 ಅಂಗಡಿಗಳ ಮೇಲೆ ದಾಳಿ ನಡೆಸಿದ ವೇಳೆ ಟೆಸ್ಟಿಂಗ್ ಪೌಡರ್ ಬಳಕೆ, ವಿಷಕಾರಿ ಬಣ್ಣ ದೊರೆತಿದ್ದು, ಅಂತಹವರಿಗೆ ಸೂಕ್ತ ಕ್ರಮವಹಿಸಿ ನೋಟಿಸ್ ನೀಡಿರುವುದಾಗಿ ತಿಳಿಸಿದರು.



ಕಲ್ಯಾಣ ಕರ್ನಾಟಕ ಭಾಗದಲ್ಲಿ ನೇಮಕಾತಿಗೆ ಒತ್ತಾಯ

◆ **ಕುರುಗೋಡು:** ಕಂಪ್ಲಿ ಕ್ಷೇತ್ರದ ತಾಲೂಕಿನ ಶಾಸಕರ ಕಚೇರಿಯಲ್ಲಿ ಪಿಎಸ್‌ಟಿಆರ್ ಹಿರಿಯ ಪ್ರಾಥಮಿಕ ವಿಭಾಗ ಹುದ್ದೆಗಳ ಆಕಾಂಕ್ಷಿಗಳಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ನೇಮಕಾತಿ ಕೈಗೊಳ್ಳುವಂತೆ ಶಾಸಕ ಜೆ.ಎನ್.ಗಣೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಶಿಕ್ಷಕ ಹುದ್ದೆಯ ಆಕಾಂಕ್ಷಿಗಳಾದ ಎಸ್.ರಾಮಪ್ಪ ಮತ್ತು ಲಿಂಗ ರೆಡ್ಡಿ ಮಾತನಾಡಿ, ಕಲ್ಯಾಣ ಕರ್ನಾಟಕದ ಭಾಗಕ್ಕೆ ಈಗಾಗಲೇ 5,267 ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತಿದ್ದು, ವಿಳಂಬ ಮಾಡದೆ ಶೀಘ್ರವಾಗಿ ಅಧಿಸೂಚನೆ ಹೊರಡಿಸಬೇಕು. ಅಲ್ಲದೆ ಆ ಹುದ್ದೆಗಳನ್ನು ಯಾವುದೇ ಕಾರಣಕ್ಕೂ ಜಿಪಿಟಿ ಮತ್ತು ಪ್ರೌಢಶಾಲಾ ವಿಭಾಗಕ್ಕೆ ವರ್ಗಾಯಿಸದೆ ಕಲ್ಯಾಣ ಕರ್ನಾಟಕ ಭಾಗದ ಡಿಇಡಿ ಮತ್ತು ಟಿಇಟಿ ಪ್ರಮಾಣ ಪತ್ರ ಪಡೆದುಕೊಂಡು ಉದ್ಯೋಗಕ್ಕಾಗಿ ಚಾತಕ ಪಕ್ಷಗಳಿಂದ ಕಾಯುತ್ತಿದ್ದಾರೆ ಆ ನಿಟ್ಟಿನಲ್ಲಿ ಕೂಡಲೆ ನೇಮಕಾತಿಯ ಸೂಚನೆ ಹೊರಡಿಸಿ ಹುದ್ದೆಗಳ ಆಕಾಂಕ್ಷಿಗಳಿಗೆ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಶಾಸಕರು ಶಿಕ್ಷಣ ಇಲಾಖೆ ಆಯುಕ್ತರು ಕಲ್ಯಾಣ ಕರ್ನಾಟಕ ಭಾಗದ ಪ್ರಿಯಾಂಕ ಖರ್ಗೆ ಸಚಿವರ ಗಮನಕ್ಕೆ ತಂದು ನ್ಯಾಯ ಕೊಡಬೇಕೆಂದು ಒತ್ತಾಯಿಸಿದರು.



ಶಾಸಕ ಜೆ.ಎನ್.ಗಣೇಶ್ ಪ್ರತಿಕ್ರಿಯಿಸಿ, ಮಾಹಿತಿ ಗಮನಕ್ಕೆ ಬಂದಿದ್ದು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸಚಿವರಿಗೆ ಗಮನಕ್ಕೆ ತಂದು ನ್ಯಾಯ ಒದಗಿಸುವ ಭರವಸೆಯನ್ನು ನೀಡಿದರು ಪ್ರಮುಖರಾದ ಗೋಪಾಲ ಎಸ್. ರಾಮು ಮುದುಕಪ್ಪ, ಶರಣ ಆಂಜನೇಯ, ಮೋದಿನ ಸಾಬ್, ರಾಮಚಂದ್ರ, ಮೌನೇಶ ಇದ್ದರು.

ದೇವಸ್ಥಾನಕ್ಕೆ 1 ಲಕ್ಷ ರೂ. ಧನಸಹಾಯ



◆ **ಬಳ್ಳಾರಿ:** ತಾಲೂಕಿನ ಚರಕುಂಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀಎರಿತಾತ ದೇವಸ್ಥಾನದ ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ ವೀರೇಂದ್ರ ಹೆಗ್ಗಡೆ ಯವರು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ 1 ಲಕ್ಷ ರೂ. ಸಹಾಯಧನ ನೀಡಿದ್ದಾರೆ. ಸಂಸ್ಥೆಯಿಂದ ನೀಡಲಾದ ಡಿಡಿಯನ್ನು ಬಳ್ಳಾರಿ ತಾಲೂಕಿನ ನಂಬರ್ 2 ಕಚೇರಿಯ ಯೋಜನಾಧಿಕಾರಿ ಸತೀಶ್ ಜಿ ಅವರು, ಎರಿತಾತ ಸೇವಾ ಟ್ರಸ್ಟ್‌ನ ಅಧ್ಯಕ್ಷ ಪ್ರಕಾಶ್ ಮತ್ತು ಕಾರ್ಯದರ್ಶಿ ಕೃಷ್ಣ ಸೇರಿದಂತೆ ಗ್ರಾಮದ ಗಣ್ಯರ, ಭಕ್ತರ ಸಮ್ಮುಖದಲ್ಲಿ ವಿತರಿಸಿದರು.

ಟ್ರಸ್ಟಿನ ಸದಸ್ಯರಾದ ಹೋಟೆಲ್ ಹನುಮಂತ, ಎರ್ರಿಸ್ವಾಮಿ, ರಂಗಪ್ಪ, ಸಣ್ಣ ಹನುಮಂತಪ್ಪನವರ ನಾಗರಾಜ, ತಿಮ್ಮಪ್ಪ, ಮಾರಣ್ಣ, ಕೆಂಚಪ್ಪ, ಬೈಲೂರು ಹನುಮಂತಪ್ಪ, ಸಂಘದ ಸದಸ್ಯರಾದ ಲಕ್ಷ್ಮೀ ರತ್ನಮ್ಮ, ಗ್ರಾಮದ ಕೆ ಹನುಮಂತ ಸೇರಿದಂತೆ ಟ್ರಸ್ಟ್‌ನ ವಿವಿಧ ಸದಸ್ಯರು ಹಾಗೂ ವಲಯದ ಮೇಲ್ವಿಚಾರಕರಾದ ಎ.ನಂದೀಶ್, ಸೇವಪ್ರತಿನಿಧಿ ಅನ್ನಪೂರ್ಣ ಮತ್ತು ಸಂಘದ ಸದಸ್ಯರು ಉಪಸ್ಥಿತರಿದ್ದರು.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

◆ **ಹಗರಿಬೊಮ್ಮನಹಳ್ಳಿ:** ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಆದರ್ಶ ಜೀವನಕ್ಕೆ ಸ್ಪೂರ್ತಿದಾಯಕವಾಗಿದೆ ಎಂದು ಪ್ರಥಮ ದರ್ಜೆ ಗುತ್ತಿಗೆದಾರರು ರೆಡ್ಡಿ ಸಮಾಜದ ಹಿರಿಯ ಮುಖಂಡರಾದ ಕೇಶವರೆಡ್ಡಿ ತಿಳಿಸಿದರು.

ಭಾನುವಾರ ಪಟ್ಟಣದ ಆಡಳಿತ ಸೌಧದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 604ನೇ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನವನ್ನು ಅರ್ಪಿಸಿ ಮಾತನಾಡಿದರು.

ಹೇಮರೆಡ್ಡಿ ಮಲ್ಲಮ್ಮ ತಾಳ್ಮೆ ತ್ಯಾಗದಿಂದ ಕುಟುಂಬದವರ ಕಿರುಕುಳವನ್ನು ಸಹಿಸಿಕೊಂಡು ದುಶ್ಚಟಕ್ಕೆದಾಸನ್ನಾಗಿದ್ದ ಮೈದುನ ವೇಮನ ಮನ ಪರಿವರ್ತನೆ ಮಾಡಿದ ಮಲ್ಲಮ್ಮ ತಮ್ಮ ಅಧ್ಯಾತ್ಮಿಕ ಮನೋಭಾವದಿಂದ ಪರಿಶುದ್ಧವಾದ ಭಕ್ತಿಯಿಂದ ಚೆನ್ನ ಮಲ್ಲಿಕಾರ್ಜುನ ದೇವರನ್ನು ಒಲಿಸಿಕೊಂಡು ಜೀವನದ ಹಲವು ಸಮಸ್ಯೆ ಎದುರಿಸಿದ ಮಲ್ಲಮ್ಮನವರ ಜೀವನ ಮೌಲ್ಯಗಳನ್ನು ಅಳವಡಿಕೊಳ್ಳಿ ಎಂದರು. ರೆಡ್ಡಿ ಸಮಾಜದ ಅಧ್ಯಕ್ಷ ಬಸವರೆಡ್ಡಿ, ಮುಖಂಡರಾದ ಬನ್ನಿಗೋಳು ವೆಂಕಣ್ಣ, ಹೇಮರೆಡ್ಡಿ, ತಾಲೂಕಿನ ವಿವಿಧ ಊರುಗಳಿಂದ ಬಂದ ರೆಡ್ಡಿ ಸಮಾಜದ ಮುಖಂಡರು ಹಿರಿಯರು ಯುವಕರು ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.



ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ



◆ **ಸಿರುಗುಪ್ಪ:** ನಗರದ ಸಿಡಿಪಿಓ ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ, ನಗರಸಭೆ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ 604ನೇ ಜಯಂತಿಯನ್ನು ಭಾನುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಗಣ್ಯರು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಸಲ್ಲಿಸಿದರು. ಶಾಂತಿನಿಕೇತನ ಪಿಯು ಕಾಲೇಜ್ ಉಪನ್ಯಾಸಕ ಜಡೇಯಪ್ಪ ಅವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ತಾಲೂಕು ಆಡಳಿತ ಅಧಿಕಾರಿ ಮಹಾಂತೇಶ, ಬಿಸಿಎಂ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಮಲ್ಲಿಕಾರ್ಜುನ, ಆರೋಗ್ಯ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನ ರೆಡ್ಡಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಮಾರುತಿ ವರಪ್ರಸಾದ್ ರೆಡ್ಡಿ, ಸರ್ವಧರ್ಮೀಯ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಕೊಡ್ಲೆ ಮಲ್ಲಿಕಾರ್ಜುನ, ಬೋವಿ ಸಂಘದ ಅಧ್ಯಕ್ಷ ಮೇಸ್ತ್ರಿ ಗಾಳೆಪ್ಪ, ವಕೀಲ ಶಿವನಗೌಡ, ಉಪನ್ಯಾಸಕ ವಿಜಯರಂಗರೆಡ್ಡಿ, ಮುಖಂಡರಾದ ಪ್ರಭಾಕರ ರೆಡ್ಡಿ, ಸೋಡಾ ಮಲ್ಲಿಕಾರ್ಜುನ ರೆಡ್ಡಿ ಸೇರಿದಂತೆ ಇತರರು ಭಾಗವಹಿಸಿದ್ದರು.

ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ

◆ **ಸಿರುಗುಪ್ಪ:** ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಆರ್.ರಂಗಪ್ಪ ಅವರ 22ನೇ ವರ್ಷದ ಪುಣ್ಯಸ್ಮರಣಾರ್ಥ ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ಮತ್ತು ಶ್ರೀವಿಶ್ವಗುರು ಬಸವೇಶ್ವರ ವೃದ್ಧಾಶ್ರಮದ ವೃದ್ಧರಿಗೆ ಹೊಸ ವಸ್ತ್ರಗಳನ್ನು ಎಸ್.ಆರ್.ವಿಕ್ರಮ ಅವರು ವಿತರಿಸಿ ತಂದೆಯ ಜನಪರ ಕಾರ್ಯಗಳನ್ನು ಸ್ಮರಿಸಿದರು.

ನಂತರ ಮಾತನಾಡಿದ ಅವರು, ತಂದೆ ಎಸ್.ಆರ್. ರಂಗಪ್ಪ ಅವರು, ಯಾವಾಗಲೂ ಬಡವರ, ಕಾರ್ಮಿಕರ ಹಾಗೂ ದೇಶಕ್ಕೆ ಅನ್ನ ನೀಡುವ ರೈತರ ಪರ ಕಾಳಜಿ ಹೊಂದಿದ್ದರು. ಎಪಿಎಂಸಿ ಅಧ್ಯಕ್ಷರಾಗಿದ್ದಾಗ ರೈತರಿಗಾಗಿ ಸಾಕಷ್ಟು ಅನುಕೂಲಗಳನ್ನು ಮಾಡಿ ಇತರರಿಗೆ ಮಾದರಿಯಾಗಿದ್ದರು. ಅಂಧ, ಅನಾಥರ ಬಾಳಿಗೆ ಬೆಳಕಾಗಿ ಅನೇಕ ಸಮಾಜ ಸೇವೆಗಳನ್ನು ಮಾಡಿದ್ದರು. ತಂದೆ ಅವರ ಆದರ್ಶ ನನಗೆ ಸ್ಫೂರ್ತಿ ಎಂದು ಸ್ಮರಿಸಿದರು. ವಿವಿಧ ಪ್ರಮುಖರು, ಗಣ್ಯರು ಉಪಸ್ಥಿತರಿದ್ದರು.

